ಗುರುವಾರ, ಜೂನ್ 8, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 158 | ಪುಟ 20

• www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ ಆರ್‌ಆರ್‌ಬಿಗಳಲ್ಲಿ ನೇಮಕಾತಿ ಶುರು; ಅರ್ಜಿ ಸಲ್ಲಿಕೆ ವಿವರಗಳು ಇಲ್ಲಿವೆ.

ಆಳ-ಅಗಲ ಉಚಿತ ವಿದ್ಯುತ್: ಎಲ್ಲೆಡೆ ಚರ್ಚೆ

ಕೊಲ್ಹಾಪುರದಲ್ಲಿ ಕಲ್ಲು ತೂರಾಟ, ಲಾಠಿ ಪ್ರಹಾರ 9

ಬಾಡಿಗೆದಾರರ ಅನುಕೂಲಕ್ಕೆ ಸರಳ ದಾಖಲೆ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
63,142	18,726	₹61,880 (ಬೆಂಗಳೂರು)	₹73,700 (ಬೆಂಗಳೂರು)	82.55

ರೈತ ಮುಖಂಡರ ಜತೆ ಚರ್ಚೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸುಳಿವು

ಕೃಷಿ ಕಾಯ್ದೆಗಳು ವಾಪಸ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರವು ರೂಪಿಸಿ ಬಳಿಕ ರದ್ದುಪಡಿಸಿದ್ದ ರೈತ ವಿರೋಧಿ ಕಾಯ್ದೆಗಳು ಎಂದು ಆರೋಪಿಸಲಾಗಿದ್ದ ಮೂರು ಕೃಷಿ ಕಾಯ್ದೆಗಳನ್ನು ರಾಜ್ಯ ಸರ್ಕಾರ ವಾಪಸ್ ಪಡೆಯುವ ಸಾಧ್ಯತೆ ಇದೆ. ರೈತ ಸಂಘಟನೆಗಳು ನಡೆಸಿದ ಸುದೀರ್ಘ ಹೋರಾಟಕ್ಕೆ ಮಣಿದ ಕೇಂದ್ರ ಸರ್ಕಾರವು ಕಾಯ್ದೆಗಳನ್ನು ವಾಪಸ್ ಪಡೆದಿತ್ತು. ಆದರೆ, ರಾಜ್ಯದಲ್ಲಿ ಈ ಕಾಯ್ದೆಗಳು ಮುಂದುವರಿದಿವೆ.

ತಮ್ಮನ್ನು ಬುಧವಾರ ಭೇಟಿ ಮಾಡಿದ ವಿವಿಧ ರೈತ ಸಂಘಟನೆಗಳ ಒಕ್ಕೂಟ 'ಸಂಯುಕ್ತ ಹೋರಾಟ-ಕರ್ನಾಟಕ' ಮುಖಂಡರ ಜತೆ ಮಾತುಕತೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಸುಳಿವು ನೀಡಿದ್ದಾರೆ.

ಭೂ ಸುಧಾರಣಾ ಕಾಯ್ದೆ, ಎಪಿಎಂಸಿ ಕಾಯ್ದೆಗಳಿಗೆ ತಂದಿದ್ದ ತಿದ್ದುಪಡಿ ರೈತ ಸಂಕುಲಕ್ಕೆ ಹಾಗೂ ಕೃಷಿ ಬೆಳವಣಿಗೆಗೆ ಮಾರಕವಾಗಿವೆ ಎಂದು ರೈತ ಮುಖಂಡರು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವರಿಕೆ ಮಾಡಿದರು. ರಾಜ್ಯದಲ್ಲಿದ್ದ ಬಿಜೆಪಿ ಸರ್ಕಾರ ಜಾರಿಗೊಳಿಸಿದ್ದ ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆಯಿಂದಾಗಿ (ಗೋಹತ್ಯೆ ನಿಷೇಧ) ಜಾನುವಾರು ಸಾಕುವವರಿಗೆ ಆಗಿರುವ ಸಮಸ್ಯೆಯನ್ನೂ ರೈತ ನಾಯಕರು ವಿವರಿಸಿದರು.

9ನೇ ಪುಟ ನೋಡಿ

> **ಕೃಷಿ ಸಂಬಂಧಿ ಸಮಸ್ಯೆಗಳನ್ನು ಬಗೆಹರಿಸಲು ಪ್ರತ್ಯೇಕ ಸಭೆ ಆಯೋಜಿಸಲಾಗುವುದು. ಮೂರು ಕಾಯ್ದೆಗಳನ್ನು ವಾಪಸ್ ಪಡೆಯುವ ಬಗ್ಗೆ ಪರಿಶೀಲಿಸಲಾಗುವುದು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ವಿವಾದಿತ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವ ಅಗತ್ಯವನ್ನು ಮನವರಿಕೆ ಮಾಡಲಾಗಿದೆ. ಶೀಘ್ರ ಸಭೆ ಕರೆದು ಸೂಕ್ತ ತೀರ್ಮಾನ ತೆಗೆದುಕೊಳ್ಳುವ ಭರವಸೆ ನೀಡಿದ್ದಾರೆ**
> **ಎಚ್.ಆರ್.ಬಸವರಾಜಪ್ಪ**
> ಅಧ್ಯಕ್ಷ, ಕರ್ನಾಟಕ ರಾಜ್ಯ ರೈತ ಸಂಘ.

ವಿವಾದಿತ ಕಾಯ್ದೆಗಳು ಯಾವುವು?

ಭೂ ಸುಧಾರಣಾ ಕಾಯ್ದೆ: ಕೇಂದ್ರದ ಕಾಯ್ದೆಗೆ ಪೂರಕವಾಗಿ ರಾಜ್ಯದಲ್ಲೂ ಹಿಂದಿನ ಬಿಜೆಪಿ ಸರ್ಕಾರ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತಂದು ರೈತರಲ್ಲದವರಿಗೂ ಕೃಷಿ ಭೂಮಿ ಖರೀದಿಸುವ ಅವಕಾಶ ನೀಡಿತ್ತು. ಕೃಷಿ ಭೂಮಿ ಖರೀದಿಗೆ ಇದ್ದ ಕೃಷಿಯೇತರ ಆದಾಯದ ಮಿತಿಯನ್ನೂ ತೆಗೆದುಹಾಕಿತ್ತು. ಇದರಿಂದಾಗಿ, ನಗರ ಪ್ರದೇಶದಲ್ಲಿ ವಾಸಿಸುವ ಹಣವಂತರು ಕೃಷಿಭೂಮಿ ಖರೀದಿಸುತ್ತಾರೆ. ನಿಜವಾದ ರೈತರಿಗೆ ಇದರಿಂದ ತೊಂದರೆಯಾಗಲಿದೆ ಎಂದು ಕೃಷಿಕರು ವಾದಿಸಿದ್ದರು.

ಎಪಿಎಂಸಿ ಕಾಯ್ದೆ: ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತಂದಿದ್ದರಿಂದ ಮಾರುಕಟ್ಟೆ ಹೊರಗೂ ರೈತರ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶವಾಗಿತ್ತು. ಖಾಸಗಿ ಹಾಗೂ ಹೊರರಾಜ್ಯದ ವ್ಯಾಪಾರಸ್ಥರು ಮಾರುಕಟ್ಟೆ ಮೇಲೆ ಹಿಡಿತ ಸಾಧಿಸಲು ಅವಕಾಶವಾಗಿತ್ತು. ಇದರಿಂದಾಗಿ, ಸರ್ಕಾರದ ಹಿಡಿತ ತಪ್ಪಿ, ಕೃಷಿ ಉತ್ಪನ್ನಗಳಿಗೆ ಇದ್ದ ಕಾನೂನಾತ್ಮಕ ರಕ್ಷಣೆಗೆ ಪೆಟ್ಟುಬಿದ್ದಿತ್ತು. ಮಾರುಕಟ್ಟೆಯ ಹೊರಗಿನ ವಹಿವಾಟಿನಿಂದ ವ್ಯಾಪಾರದ ವಿಶ್ವಾಸಾರ್ಹತೆಗೆ ಪೆಟ್ಟು ಬಿದ್ದಿದೆ. ತೆರಿಗೆ ವಂಚನೆಗೆ ಅವಕಾಶವಾಗಿದೆ ಎಂದು ರೈತರು ದೂರಿದ್ದರು.

ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆ: ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆಯಿಂದಾಗಿ ಮುದಿ ಜಾನುವಾರು, ಗೊಡ್ಡು ಹಸುಗಳು, ಗಂಡುಕರುಗಳನ್ನು ಸಾಕಲಾಗದೇ ಅತ್ತ ಮಾರಲೂ ಆಗದೇ ರೈತರಿಗೆ ಹೊರೆಯಾಗಿತ್ತು. ಹಸು ಸಾಗಾಟಕ್ಕೆ ಹಲವು ನಿರ್ಬಂಧ ವಿಧಿಸಿದ್ದರಿಂದಾಗಿ ರೈತರು, ಮಾರಲು ಕಷ್ಟಪಡಬೇಕಾಗಿತ್ತು. ಗೊಡ್ಡು ಹಸುಗಳನ್ನು ಕಾಡಿಗೆ ಅಟ್ಟಿದ್ದರಿಂದಾಗಿ, ಅದು ಸಮಸ್ಯೆಯಾಗಿ ಕಾಡಿತ್ತು.

ಮುಸ್ಲಿಮರಿಗೆ ಮತ್ತೆ ಮೀಸಲಾತಿ?

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಧ್ಯಂತರ ವರದಿಯನ್ನು ಆಧರಿಸಿ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿಯನ್ನು ಮರಳಿ ನೀಡಲು ರಾಜ್ಯ ಸರ್ಕಾರ ಗಂಭೀರ ಚಿಂತನೆ ನಡೆಸಿದೆ.

ಒಕ್ಕಲಿಗರು ಮತ್ತು ಲಿಂಗಾಯತರ ಮೀಸಲಾತಿ ಪ್ರಮಾಣ ಹೆಚ್ಚಿಸುವ ತೀರ್ಮಾನ ಕೈಗೊಂಡಿದ್ದ ಬಿಜೆಪಿ ಸರ್ಕಾರ, ಧರ್ಮದ ಆಧಾರದಲ್ಲಿ ಮೀಸಲಾತಿ ನೀಡಿರುವುದು ಸಂವಿಧಾನಬಾಹಿರ ಎಂದು ಹೇಳಿ ಮುಸ್ಲಿಮರಿಗೆ ನೀಡಿದ್ದ ಶೇ 4ರಷ್ಟು ಮೀಸಲಾತಿ ರದ್ದು ಮಾಡಿತ್ತು. ಈ ಮೀಸಲಾತಿಯನ್ನು ತಲಾ ಶೇ 2ರಂತೆ ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯಗಳಿಗೆ ಹಂಚಿಕೆ ಮಾಡಿತ್ತು.

ಆಯೋಗ ಅಂತಿಮ ವರದಿ ನೀಡಿದ ಬಳಿಕ ಮುಸ್ಲಿಮರಿಗೆ ಮೀಸಲಾತಿ ನೀಡುವ ಸಂಬಂಧ ಕ್ರಮ ತೆಗೆದುಕೊಳ್ಳಬಹುದು ಎಂದೂ ಮಧ್ಯಂತರ ವರದಿ ತಿಳಿಸಿದೆ.

ಮುಸ್ಲಿಮರಿಗೆ ಮತ್ತೆ ಮೀಸಲಾತಿ ನೀಡುವ ಸಂಬಂಧ ನಿರ್ಣಯ ತೆಗೆದುಕೊಳ್ಳಲು ಸುಪ್ರೀಂ ಕೋರ್ಟ್ ನಿರ್ದೇಶನಕ್ಕಾಗಿ ಕಾಯಲಾಗುತ್ತಿದೆ. ಸುಪ್ರೀಂ ಕೋರ್ಟ್‌ನಲ್ಲಿ ಮುಂದಿನ ವಿಚಾರಣೆ ಜುಲೈ ಕೊನೆಯ ವಾರದಲ್ಲಿ ನಡೆಯಲಿದ್ದು, ಆಗ ಸ್ಪಷ್ಟ ಚಿತ್ರಣ ಸಿಗಲಿದೆ. ನಂತರ ನಾವು ಏನು ಮಾಡಬೇಕು ಎಂಬ ಬಗ್ಗೆ ಚಿಂತನೆ ನಡೆಸಲಾಗುವುದು ಮೂಲಗಳು ಹೇಳಿವೆ. 'ಯಾವುದೇ ಸಮುದಾಯಕ್ಕೆ ಅನ್ಯಾಯ ಆಗಿದ್ದರೆ ನ್ಯಾಯವನ್ನು ಒದಗಿಸಲು ಸರ್ಕಾರ ಸಿದ್ಧವಿದೆ' ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಹೇಳಿದ್ದಾರೆ.



ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರ ನವದೆಹಲಿಯಲ್ಲಿರುವ ನಿವಾಸದಲ್ಲಿ, ಕುಸ್ತಿಪಟುಗಳಾದ ಬಜರಂಗ್ ಪೂನಿಯಾ, ಸಾಕ್ಷಿ ಮಲಿಕ್ ಮತ್ತು ಅವರ ಪತಿ ಸತ್ಯವ್ರತ ಕಾದಿಯಾನ್ —ಪಿಟಿಐ ಚಿತ್ರ

ಕುಸ್ತಿಪಟುಗಳ ಹೋರಾಟ • ಸರ್ಕಾರದ ಸಂಧಾನಕ್ಕೆ ಮನ್ನಣೆ

15ರವರೆಗೆ ಪ್ರತಿಭಟನೆ ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರತಿಭಟನೆ ಆರಂಭಿಸಿ 45 ದಿನಗಳ ಬಳಿಕ ಕುಸ್ತಿಪಟುಗಳು ಮತ್ತು ಸರ್ಕಾರದ ನಡುವಣ ಮಾತುಕತೆ ಬುಧವಾರ ಫಲಪ್ರದವಾಗಿದೆ. ಭಾರತೀಯ ಕುಸ್ತಿ ಫೆಡರೇಷನ್‌ನ ಅಧ್ಯಕ್ಷ ಬ್ರಿಜ್ ಭೂಷಣ್ ಮೇಲೆ ಇರುವ ಲೈಂಗಿಕ ಕಿರುಕುಳ ಆರೋಪದ ಕುರಿತು 15 ದಿನಗಳೊಳಗೆ ಆರೋಪ ಪಟ್ಟಿ ಸಲ್ಲಿಸಲಾಗುವುದು ಎಂದು ಸರ್ಕಾರ ಭರವಸೆ ಕೊಟ್ಟಿದೆ. ಹೀಗಾಗಿ ಜೂನ್ 15ರವರೆಗೆ ಪ್ರತಿಭಟನೆ ಮಾಡದಿರಲು ಕುಸ್ತಿಪಟುಗಳು ನಿರ್ಧರಿಸಿದ್ದಾರೆ.

ಕ್ರೀಡಾ ಸಚಿವ ಅನುರಾಗ್ ಠಾಕೂರ್ ಪ್ರತಿಭಟನೆ ನಡೆಸುತ್ತಿರುವ ಕುಸ್ತಿಪಟುಗಳೊಂದಿಗೆ ತಮ್ಮ ನಿವಾಸದಲ್ಲಿ ಸುದೀರ್ಘ ಆರು ತಾಸು ಸಭೆ ನಡೆಸಿದರು. ಬಳಿಕ ಸುದ್ದಿಗೋಷ್ಠಿಯಲ್ಲಿ ಈ ವಿಷಯವನ್ನು ಅವರು ತಿಳಿಸಿದರು. ಫೆಡರೇಷನ್‌ಗೆ ಜೂನ್ 30ರೊಳಗೆ ಚುನಾವಣೆ ನಡೆಸಲಾಗುವುದು ಎಂದರು.

'ದೂರುಗಳ ವಿಚಾರಣೆಗಾಗಿ ಮಹಿಳೆಯೊಬ್ಬರ ನೇತೃತ್ವದಲ್ಲಿ ಆಂತರಿಕ ಸಮಿತಿ ರಚನೆಗೆ ಒಪ್ಪಿಗೆ ನೀಡಲಾಗಿದೆ' ಎಂದು ಹೇಳಿದರು.

'ವಿವಿಧ ತರಬೇತಿ ಸಂಸ್ಥೆಗಳು, ಕ್ರೀಡಾಪಟುಗಳ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ಹಿಂದಕ್ಕೆ ಪಡೆಯಬೇಕು ಎಂಬುದು ಕುಸ್ತಿ ಪಟುಗಳ ಬೇಡಿಕೆ. ಬ್ರಿಜ್‌ಭೂಷಣ್ ಸಿಂಗ್ ಹಾಗೂ ಅವರ ಆಪ್ತರಿಗೆ ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಬಾರದು ಎಂಬ ಬೇಡಿಕೆಯನ್ನೂ ಇಟ್ಟಿದ್ದರು. ಈ ಎಲ್ಲ ಬೇಡಿಕೆಗಳಿಗೆ ಸಮ್ಮತಿಸಲಾಗಿದೆ' ಎಂದು ಸಚಿವ ಠಾಕೂರ್ ಅವರು ಹೇಳಿದರು.

'ಮತ್ತೆ ಹೋರಾಟ': ಸುದ್ದಿಗಾರರೊಂದಿಗೆ ಪ್ರತ್ಯೇಕವಾಗಿ ಮಾತನಾಡಿದ ಕುಸ್ತಿಪಟು ಸಾಕ್ಷಿ ಮಲಿಕ್, 'ಜೂನ್ 15ರ ವರೆಗೆ ನಮ್ಮ ಪ್ರತಿಭಟನೆಯನ್ನು ಸ್ಥಗಿತಗೊಳಿಸಲಾಗುವುದು. ಅಷ್ಟರೊಳಗೆ ನಮ್ಮ ಬೇಡಿಕೆಗಳು ಈಡೇರದಿದ್ದಲ್ಲಿ ಹೋರಾಟವನ್ನು ಮತ್ತೆ ಆರಂಭಿಸಲಾಗುವುದು' ಎಂದು ಸ್ಪಷ್ಟಪಡಿಸಿದರು.

ಪ್ರಮುಖ ಅಂಶಗಳು

- ಬಜರಂಗ್ ಪೂನಿಯಾ, ಸಾಕ್ಷಿ ಮಲಿಕ್ ಪತಿ ಸತ್ಯವ್ರತ ಕಾದಿಯಾನ್, ಜಿತೇಂದ್ರ ಕಿನ್ಹ ಭಾಗಿ. ವಿನೇಶಾ ಫೋಗಟ್ ಗೈರು
- ಸರ್ಕಾರ ಮತ್ತು ಕುಸ್ತಿಪಟುಗಳ ನಡುವಣ ಎರಡನೇ ಸಭೆ ಇದು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕಳೆದ ಶನಿವಾರ ಸಭೆ ನಡೆಸಿದ್ದರು
- ಕುಸ್ತಿಪಟುಗಳ ವಿರುದ್ಧ ಮೇ 28ರಂದು ದೆಹಲಿ ಪೊಲೀಸರು ದಾಖಲಿಸಿರುವ ಎಫ್‌ಐಆರ್‌ಗಳನ್ನು ಕೂಡ ಹಿಂಪಡೆಯುವ ಭರವಸೆಯನ್ನು ಕೊಡಲಾಗಿದೆ

ತೀವ್ರಗೊಂಡ 'ಬಿಪೊರ್‌ಜಾಯ್' ಚಂಡಮಾರುತ

ನವದೆಹಲಿ (ಪಿಟಿಐ): 'ಬಿಪೊರ್‌ಜಾಯ್' ಚಂಡಮಾರುತವು ತನ್ನ ತೀವ್ರತೆ ಹೆಚ್ಚಿಸಿಕೊಂಡಿದೆ. ಹೀಗಾಗಿ ಕೇರಳದಲ್ಲಿ ಮುಂಗಾರು ಮಳೆಯ ಆರಂಭವು ಮಂದ ಸ್ವರೂಪದಲ್ಲಿ ಇರಲಿದೆ ಎಂದು ಹವಾಮಾನ ತಜ್ಞರು ಬುಧವಾರ ಹೇಳಿದ್ದಾರೆ.

ಅರಬ್ಬಿ ಸಮುದ್ರದಲ್ಲಿ ಈ ವರ್ಷ ಬೀಸುತ್ತಿರುವ ಮೊದಲ ಚಂಡಮಾರುತ ಇದು. ಚಂಡಮಾರುತದ ಪರಿಣಾಮವಾಗಿ ಮುಂಗಾರು ಮಾರುತಗಳು ದಕ್ಷಿಣ ಭಾರತದಿಂದ ಮುಂದಕ್ಕೆ ಸಾಗುವುದು ನಿಧಾನವಾಗಬಹುದು ಎಂದು ಭಾರತೀಯ ಹವಾಮಾನ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

'ಅರಬ್ಬಿ ಸಮುದ್ರದ ಪೂರ್ವಮಧ್ಯ ಭಾಗ ಹಾಗೂ ಆಗ್ನೇಯ ದಿಕ್ಕಿನಲ್ಲಿ ಸೃಷ್ಟಿಯಾಗಿರುವ ಈ ಮಾರುತ ಗಂಟೆಗೆ ಗರಿಷ್ಠ 130 ಕಿ.ಮೀ. ವೇಗದಲ್ಲಿ ಬೀಸುತ್ತಿದ್ದು ಉತ್ತರ ದಿಕ್ಕಿನತ್ತ ಸಾಗುತ್ತಿದೆ. ನಂತರ, ವಾಯವ್ಯ ದಿಕ್ಕಿನತ್ತ ಸಾಗಲಿದೆ' ಎಂದು ಮುನ್ಸೂಚನೆ ನೀಡಿದ್ದಾರೆ. ಗುರುವಾರದ ನಂತರ ಮಾರುತವು ಇನ್ನೂ ಹೆಚ್ಚಿನ ವೇಗ ಪಡೆದುಕೊಳ್ಳಬಹುದು ಎಂದು ಅಂದಾಜಿಸಲಾಗಿದೆ.

ಭಾರತ, ಒಮಾನ್, ಇರಾನ್ ಹಾಗೂ ಪಾಕಿಸ್ತಾನದ ಮೇಲೆ ಈ ಚಂಡಮಾರುತ ದೊಡ್ಡ ಪರಿಣಾಮ ಬೀರುವುದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಭತ್ತದ ಎಂಎಸ್‌ಪಿ ₹143 ಹೆಚ್ಚಳ

ಮುಂಗಾರು ಬೆಳೆಗಳ ಬೆಂಬಲ ಬೆಲೆ ಹೆಚ್ಚಳಕ್ಕೆ ಕೇಂದ್ರ ಸಂಪುಟ ಒಪ್ಪಿಗೆ

ನವದೆಹಲಿ (ಪಿಟಿಐ): ಭತ್ತದ ಮೇಲಿನ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) 2023-24ನೇ ಬೆಳೆ ವರ್ಷಕ್ಕೆ (ಜುಲೈ-ಜೂನ್) ಪ್ರತಿ ಕ್ವಿಂಟಲ್‌ಗೆ ₹143ರಷ್ಟು ಹೆಚ್ಚಿಸಲಾಗಿದೆ. ಇದರಿಂದಾಗಿ ಭತ್ತದ ಎಂಎಸ್‌ಪಿ ಪ್ರತಿ ಕ್ವಿಂಟಲ್‌ಗೆ ₹2,183ಕ್ಕೆ ತಲುಪಿದೆ.

ಈ ಏರಿಕೆಯು ಒಂದು ದಶಕದ ಅವಧಿಯಲ್ಲಿ ಆಗಿರುವ ಎರಡನೆಯ ಅತಿಹೆಚ್ಚಿನ ಏರಿಕೆ. ಈ ಹಿಂದೆ 2018-19ರಲ್ಲಿ ಕ್ವಿಂಟಲ್‌ಗೆ ಎಂಎಸ್‌ಪಿಯನ್ನು ₹200ರಷ್ಟು ಹೆಚ್ಚಿಸಲಾಗಿತ್ತು. ರೈತರು ಭತ್ತವನ್ನು ಹೆಚ್ಚಿನ ಪ್ರದೇಶದಲ್ಲಿ ಬೆಳೆಯುವಂತೆ ಉತ್ತೇಜನ ನೀಡಲು ಮತ್ತು ರೈತರ ಆದಾಯ ಹೆಚ್ಚಿಸುವ ಉದ್ದೇಶದಿಂದ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

2023-24ನೇ ಮುಂಗಾರು ಬೆಳೆಗಳಿಗೆ ಎಂಎಸ್‌ಪಿಯನ್ನು ಶೇ 5.3ರಿಂದ ಶೇ 10.35ರ ವರೆಗೆ ಹೆಚ್ಚಿಸಲಾಗಿದೆ. ಬೆಲೆಯ ಲೆಕ್ಕದಲ್ಲಿ ಕ್ವಿಂಟಲ್‌ಗೆ ₹128ರಿಂದ ₹805ರವರೆಗೆ ಏರಿಕೆ ಮಾಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದ ಸಂಪುಟ ಸಮಿತಿಯು ಎಂಎಸ್‌ಪಿ ಹೆಚ್ಚಿಸಲು ಒಪ್ಪಿಗೆ ನೀಡಿದೆ.

8ನೇ ಪುಟ ನೋಡಿ

ಎಂಎಸ್‌ಪಿ ವಿವರ (₹ ಕ್ವಿಂಟಲ್‌ಗೆ)

ಬೆಳೆ	2022-23	2023-24	ಏರಿಕೆ
ಭತ್ತ	2,040	2,183	143
ಭತ್ತ ಎ ಗ್ರೇಡ್	2,060	2,203	143
ಜೋಳ (ಹೈಬ್ರಿಡ್)	2,970	3,180	210
ಮಾಲದಂಡಿ ಜೋಳ	2,990	3,225	235
ರಾಗಿ	3,578	3,846	268
ಮೆಕ್ಕೆಜೋಳ	1,962	2,090	128
ತೊಗರಿ	6,600	7,000	400
ಹೆಸರುಕಾಳು	7,755	8,558	803
ಉದ್ದು	6,600	6,950	350
ಶೇಂಗಾ	5,850	6,377	527
ಸೂರ್ಯಕಾಂತಿ ಬೀಜ	6,400	6,760	360
ಸೋಯಾ ಬೀನ್ (ಹಳದಿ)	4,300	4,600	300
ಎಳ್ಳು	7,830	8,635	805
ಹುಚ್ಚೆಳ್ಳು	7,287	7,734	447
ಹತ್ತಿ (ಮಧ್ಯಮ)	6,080	6,620	540
ಹತ್ತಿ (ಉದ್ದ)	6,380	7,020	640

ಬಿಎಸ್‌ಎನ್‌ಎಲ್‌ಗೆ ₹89 ಸಾವಿರ ಕೋಟಿ ನೆರವು

ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್ ಕಂಪನಿಯ ಪುನಶ್ಚೇತನಕ್ಕೆ ಕೇಂದ್ರ ಸಚಿವ ಸಂಪುಟವು ₹89,047 ಕೋಟಿ ಮೊತ್ತದ ಮೂರನೆಯ ಆರ್ಥಿಕ ಪ್ಯಾಕೇಜ್‌ಗೆ ಬುಧವಾರ ಒಪ್ಪಿಗೆ ಸೂಚಿಸಿದೆ.

ಬಿಎಸ್‌ಎನ್‌ಎಲ್ ಕಂಪನಿಗೆ 4ಜಿ ಮತ್ತು 5ಜಿ ತರಂಗಾಂತರ ಹಂಚಿಕೆ ಕೂಡ ಪ್ಯಾಕೇಜ್‌ನ ಒಂದು ಭಾಗ ಎಂದು ಪ್ರಕಟಣೆ ತಿಳಿಸಿದೆ. ತರಂಗಾಂತರ ಹಂಚಿಕೆಯು ಬಿಎಸ್‌ಎನ್‌ಎಲ್‌ಗೆ 4ಜಿ ಹಾಗೂ 5ಜಿ ಸೇವೆಗಳನ್ನು ದೇಶದಾದ್ಯಂತ ಆರಂಭಿಸಲು, ಮೊಬೈಲ್ ಸಂಪರ್ಕ ಇಲ್ಲದ ಹಳ್ಳಿಗಳಲ್ಲಿ 4ಜಿ ಸೇವೆ ಆರಂಭಿಸಲು ನೆರವಾಗುತ್ತದೆ. ಕೇಂದ್ರ ಸರ್ಕಾರವು ಬಿಎಸ್‌ಎನ್‌ಎಲ್ ಕಂಪನಿಯ ಪುನಶ್ಚೇತನಕ್ಕೆ ಈ ಹಿಂದೆಯೂ ಪ್ಯಾಕೇಜ್ ನೀಡಿತ್ತು. 2019ರಲ್ಲಿ ಬಿಎಸ್‌ಎನ್‌ಎಲ್ ಮತ್ತು ಎಂಟಿಎನ್‌ಎಲ್ ಪುನಶ್ಚೇತನಕ್ಕೆ ₹69 ಸಾವಿರ ಕೋಟಿ ನೀಡಲಾಗಿತ್ತು. 2022ರಲ್ಲಿ ₹1.64 ಲಕ್ಷ ಕೋಟಿ ಮೊತ್ತದ ಪ್ಯಾಕೇಜ್ ಘೋಷಿಸಲಾಗಿತ್ತು.

ಬಂಡವಾಳ ವೆಚ್ಚಕ್ಕೆ, ಸಾಲದ ಹೊರೆ ತಗ್ಗಿಸಿಕೊಳ್ಳಲು, ಹೊಂದಾಣಿಕೆ ಮಾಡಿದ ಒಟ್ಟು ವರಮಾನದ ಬಾಕಿ ಪಾವತಿಗೆ, ಬಿಬಿಎನ್‌ಎಲ್ ಮತ್ತು ಬಿಎಸ್‌ಎನ್‌ಎಲ್ ವಿಲೀನಕ್ಕೆ ಈ ಹಣಕಾಸಿನ ನೆರವುಗಳನ್ನು ಬಳಸಿಕೊಳ್ಳಲಾಗಿತ್ತು.

ಸಂಪುಟ ದರ್ಜೆ, ರಾಜ್ಯ ಸಚಿವರ ದರ್ಜೆ ಹೊಂದಿದವರಿಗೆ ಜಾಕ್‌ಪಾಟ್

'ಸ್ಥಾನಮಾನ'ಕ್ಕೆ ಭರಪೂರ ಸವಲತ್ತು!

• ರಾಜೇಶ್ ರೈ ಚಟ್ಲ

ಬೆಂಗಳೂರು: ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ, ಸಲಹೆಗಾರ, ನಿಗಮ-ಮಂಡಳಿಯ ಅಧ್ಯಕ್ಷ ಸ್ಥಾನಗಳಿಗೆ ನೇಮಕಗೊಂಡು ಸಂಪುಟ ದರ್ಜೆಯ ಸಚಿವರ ಸ್ಥಾನಮಾನ ಸಹಿತ ಎಲ್ಲ ಸೌಲಭ್ಯಗಳಿಗೆ ಅರ್ಹರಾದವರಿಗೆ ತಿಂಗಳಿಗೆ ₹60,000 ವೇತನ, ₹1.50 ಲಕ್ಷ ಮನೆಬಾಡಿಗೆ ಹಾಗೂ ವಾರ್ಷಿಕ ಆತಿಥ್ಯ ಭತ್ಯೆ ₹4.50 ಲಕ್ಷ ಸಿಗಲಿದೆ!

ರಾಜ್ಯದಲ್ಲಿ ಪ್ರವಾಸಕ್ಕೆ ಪ್ರತಿದಿನಕ್ಕೆ ₹2,500, ಹೊರರಾಜ್ಯದಲ್ಲಿ ಪ್ರವಾಸಕ್ಕೆ ₹3,000, ಇಂಧನ ಭತ್ಯೆ, ಪ್ರಯಾಣ ಭತ್ಯೆ, ವಾಹನ ಸೌಕರ್ಯ, ದೂರವಾಣಿ ಸೌಲಭ್ಯವೂ ಸೇರಿ ಭರಪೂರ ಸವಲತ್ತುಗಳು ದೊರಕಲಿವೆ.

ಸಿದ್ದರಾಮಯ್ಯ ನೇತೃತ್ವದ ನೂತನ ಸರ್ಕಾರದಲ್ಲಿ ಈಗಾಗಲೇ ಮುಖ್ಯಮಂತ್ರಿಯ ಮುಖ್ಯ ಸಲಹೆಗಾರರಾಗಿ ಸುನೀಲ್ ಕನುಗೋಲು, ಮಾಧ್ಯಮ ಸಲಹೆಗಾರರಾಗಿ ಕೆ.ವಿ. ಪ್ರಭಾಕರ, ರಾಜಕೀಯ ಕಾರ್ಯದರ್ಶಿಗಳಾಗಿ ವಿಧಾನ ಪರಿಷತ್ ಸದಸ್ಯರಾದ ಕೆ. ಗೋವಿಂದರಾಜ್ ಮತ್ತು ನಜೀರ್ ಅಹ್ಮದ್ ನೇಮಕಗೊಂಡಿದ್ದಾರೆ. ಮುಖ್ಯಮಂತ್ರಿಯ ನಿರ್ದೇಶನದಂತೆ ಈ ನಾಲ್ವರಿಗೂ ಸಂಪುಟ ದರ್ಜೆಯ ಸಚಿವರ ಸ್ಥಾನಮಾನದೊಂದಿಗೆ ಲಭ್ಯವಿರುವ ಎಲ್ಲ ಸೌಲಭ್ಯಗಳನ್ನು ನೀಡಲಾಗಿದೆ.

5ನೇ ಪುಟ ನೋಡಿ

ಸಂಪುಟ ದರ್ಜೆ-ರಾಜ್ಯ ಸಚಿವ ದರ್ಜೆ: ಸೌಲಭ್ಯಗಳು ಏನೇನು?

ಸೌಲಭ್ಯ	ಸಂಪುಟ ದರ್ಜೆ ಸಹಿತ ಎಲ್ಲ ಸೌಲಭ್ಯ	ರಾಜ್ಯ ಸಚಿವ ದರ್ಜೆ ಸಹಿತ ಎಲ್ಲ ಸೌಲಭ್ಯ
ವೇತನ	₹60 ಸಾವಿರ	₹50 ಸಾವಿರ
ಆತಿಥ್ಯ ಭತ್ಯೆ (ವಾರ್ಷಿಕ)	₹4.50 ಲಕ್ಷ	₹3 ಲಕ್ಷ
ಮನೆ ಬಾಡಿಗೆ	₹1.50 ಲಕ್ಷ	₹1.50 ಲಕ್ಷ
ಇಂಧನ ಭತ್ಯೆ	2,000 ಲೀಟರ್	1,500 ಲೀಟರ್
ಪ್ರಯಾಣ ಭತ್ಯೆ	ಕಿ.ಮೀಗೆ ₹40	ಕಿ.ಮೀಗೆ ₹40

ಬಿಜೆಪಿ ಅವಧಿ- 72 'ಸ್ಥಾನಮಾನ'

ಬಿಜೆಪಿ ಸರ್ಕಾರದ ಅವಧಿಯಲ್ಲಿ (ಬಿ.ಎಸ್. ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ) ಒಟ್ಟು 72 ಮಂದಿಗೆ ವಿವಿಧ 'ಸ್ಥಾನಮಾನ' ನೀಡಲಾಗಿತ್ತು. ಈ ಪೈಕಿ, 15 ಮಂದಿಗೆ ಸಂಪುಟ ದರ್ಜೆ ಸಹಿತ ಎಲ್ಲ ಸವಲತ್ತು 18 ಮಂದಿಗೆ ಸಂಪುಟ ದರ್ಜೆ ಸ್ಥಾನಮಾನ, 8 ಮಂದಿಗೆ ರಾಜ್ಯ ಸಚಿವ ದರ್ಜೆಯ ಸಹಿತ ಎಲ್ಲ ಸವಲತ್ತು, 31 ಮಂದಿಗೆ ರಾಜ್ಯ ಸಚಿವ ದರ್ಜೆಯ ಸ್ಥಾನಮಾನ ನೀಡಲಾಗಿತ್ತು.

ಇತರೆ ಸೌಲಭ್ಯಗಳು

- ಸರ್ಕಾರಿ ಬಂಗಲೆ ಪಡೆದರೆ ಮನೆ ಬಾಡಿಗೆ ಭತ್ಯೆ ಇರುವುದಿಲ್ಲ. ಸ್ವಂತ ಅಥವಾ ಬಾಡಿಗೆ ಮನೆಯಲ್ಲಿದ್ದರೆ ₹1.50 ಲಕ್ಷ ಸಿಗಲಿದೆ
- ನೀರಿನ ವಿದ್ಯುತ್ ಬಿಲ್ ಸೌಲಭ್ಯವಾಗಿ ಕೇವಲ ₹200 ಅನ್ನು ವೇತನದಿಂದ ಕಟಾಯಿಸಿ, ಉಳಿದ ಎಲ್ಲ ಬಿಲ್‌ಗಳನ್ನು ಆಪ್ತ ಶಾಖೆಯ ಮೂಲಕ ಸರ್ಕಾರ ಪಾವತಿಸುತ್ತದೆ
- ₹10 ಲಕ್ಷದ ಮಿತಿಯಲ್ಲಿ ಗೃಹೋಪಯೋಗಿ ವಸ್ತುಗಳು ಹಾಗೂ ಪೀಠೋಪಕರಣಗಳನ್ನು ಖರೀದಿಸಬಹುದು
- ₹26 ಲಕ್ಷದ ಮಿತಿಯಲ್ಲಿ ವಾಹನ ಖರೀದಿಸಬಹುದು
- 12 ಸಿಬ್ಬಂದಿ ಹೊಂದಲು ಅವಕಾಶವಿದೆ
- ಮನೆ, ಕಚೇರಿಗೆ ಉಚಿತ ದೂರವಾಣಿ ಸೌಲಭ್ಯ
- ವೈದ್ಯಕೀಯ ವೆಚ್ಚ ಮರುಪಾವತಿ

ದಲಿತರಿಗೆ ಪ್ರವೇಶ ನಿರಾಕರಿಸಿದ ಪ್ರಕರಣ: ದೇಗುಲಕ್ಕೆ ಬೀಗ

ಪ್ರಜಾವಾಣಿ ವಾರ್ತೆ

ಚೆನ್ನೈ: ದಲಿತರ ಪ್ರವೇಶಕ್ಕೆ ನಿರಾಕರಿಸಿದ ತಮಿಳುನಾಡಿನ ವಿಲ್ಲುಪುರಂ ಜಿಲ್ಲೆಯ ಮೇಲ್ಪತಿ ಗ್ರಾಮದ ಶ್ರೀಧರ್ಮರಾಜ ದ್ರೌಪದಿ ಅಮ್ಮನ್ ದೇವಾಲಯಕ್ಕೆ ಸರ್ಕಾರ ಬುಧವಾರ ಬೀಗ ಮುದ್ರೆ ಹಾಕಿದೆ.

ಗ್ರಾಮದಲ್ಲಿ ವಣ್ಣಿಯಾರ್ ಸಮುದಾಯದ ಪ್ರಾಬಲ್ಯ ಹೆಚ್ಚಿದೆ. ಈ ದೇಗುಲವು ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆಯ ವ್ಯಾಪ್ತಿಗೆ ಸೇರಿದ್ದು, ಏಪ್ರಿಲ್‌ನಲ್ಲಿ ನಡೆದ ಹಬ್ಬದ ಸಂದರ್ಭದಲ್ಲಿ ದಲಿತರು ಪೂಜೆ ಸಲ್ಲಿಸಲು ತೆರಳಿದ್ದಾಗ ವಣ್ಣಿಯಾರ್ ಮುಖಂಡರು ಅಡ್ಡಿಪಡಿಸಿದ್ದರಿಂದ ಘರ್ಷಣೆ ಸಂಭವಿಸಿತ್ತು.

ದಲಿತರ ಮನವಿ ಮೇರೆಗೆ ಜಿಲ್ಲಾಡಳಿತವು ಎರಡು ಸಮುದಾಯಗಳ ನಡುವೆ ಹಲವು ಸುತ್ತಿನ ಶಾಂತಿ ಸಭೆ ನಡೆಸಿದರೂ ಫಲಕಾರಿಯಾಗಿರಲಿಲ್ಲ. ದೇಗುಲದೊಳಗೆ ಪೂಜೆ ಸಲ್ಲಿಸಲು ಅವಕಾಶ ನೀಡುವುದಿಲ್ಲ. ಹೊರ ಭಾಗದಲ್ಲಿ ಸಲ್ಲಿಸಿದರೆ ನಮ್ಮ ಅಭ್ಯಂತರ ಇಲ್ಲ ಎಂದು ವಣ್ಣಿಯಾರ್ ಮುಖಂಡರು ಪಟ್ಟು ಹಿಡಿದಿದ್ದರು.

ಮೇ ತಿಂಗಳಿನಲ್ಲಿ ನಡೆದ ಕೊನೆಯ ಸಭೆಯೂ ಸುಖಾಂತ್ಯ ಕಂಡಿರಲಿಲ್ಲ. ಹಾಗಾಗಿ, ಬೆಳಿಗ್ಗೆ ವಿಲ್ಲುಪುರಂ ಕಂದಾಯ ವಿಭಾಗದ ಅಧಿಕಾರಿ ಎಸ್. ರವಿಚಂದ್ರನ್ ನೇತೃತ್ವದಲ್ಲಿ ಆಗಮಿಸಿದ ಹಿರಿಯ ಅಧಿಕಾರಿಗಳು ದೇಗುಲದ ಬಾಗಿಲು ಮುಚ್ಚಿ ಮೊಹರು ಹಾಕಿದರು.

'ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಮುಂಜಾಗ್ರತೆಯಾಗಿ ದೇವಾಲಯಕ್ಕೆ ಬೀಗಮುದ್ರೆ ಹಾಕಲಾಗಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ವಿಲ್ಲುಪುರಂ ಸಂಸದ ಡಿ. ರವಿಕುಮಾರ್ ಮಾತನಾಡಿ, 'ದೇಗುಲದಲ್ಲಿ ಪೂಜೆ ಸಲ್ಲಿಸಲು ಎಲ್ಲಾ ಸಮುದಾಯದವರಿಗೂ ಸರ್ಕಾರ ಅವಕಾಶ ಕಲ್ಪಿಸಬೇಕು' ಎಂದು ಒತ್ತಾಯಿಸಿದರು.

ರೂಪುರೇಷೆ ಸಿದ್ಧಪಡಿಸಲು ಗೃಹ ಮಂಡಳಿಗೆ ಸಚಿವ ಜಮೀರ್ ಅಹಮದ್ ಸೂಚನೆ

5 ಉಪನಗರ, 4 ವಿಲ್ಲಾ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯ ಹೊರ ವಲಯದ ಐದು ಸ್ಥಳಗಳಲ್ಲಿ ಅತ್ಯಾಧುನಿಕ ಉಪನಗರ ಹಾಗೂ ನಾಲ್ಕು ಕಡೆಗಳಲ್ಲಿ ಐಷಾರಾಮಿ ವಿಲ್ಲಾ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ರೂಪುರೇಷೆ ಸಿದ್ಧಪಡಿಸುವಂತೆ ಕರ್ನಾಟಕ ಗೃಹ ಮಂಡಳಿ ಅಧಿಕಾರಿಗಳಿಗೆ ವಸತಿ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ಬುಧವಾರ ಸೂಚನೆ ನೀಡಿದ್ದಾರೆ.

ಗೃಹ ಮಂಡಳಿಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, 'ಬೆಂಗಳೂರಿನಲ್ಲಿ ವಸತಿ ಸೌಲಭ್ಯಕ್ಕೆ ಬೇಡಿಕೆ ಹೆಚ್ಚುತ್ತಿದೆ. ಅದನ್ನು ಈಡೇರಿಸಲು ಹಾಗೂ ನಗರದ ಮೇಲಿನ ಒತ್ತಡ ಕಡಿಮೆ ಮಾಡಲು ಹೊರ ವಲಯದಲ್ಲಿ ಹೊಸ ವಸತಿ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು. ಅಂತರರಾಷ್ಟ್ರೀಯ ಮಟ್ಟದ ಸೌಲಭ್ಯಗಳಿರುವ ಉಪನಗರಗಳು ಮತ್ತು ವಿಲ್ಲಾ ಯೋಜನೆಗಳನ್ನು ಆರಂಭಿಸಲು ತಕ್ಷಣದಿಂದಲೇ ಕಾರ್ಯಪ್ರವೃತ್ತರಾಗಿ' ಎಂದು ಸೂಚಿಸಿದರು.



ವಸತಿ ಸಚಿವ ಬಿ.ಜೆಡ್ ಜಮೀರ್ ಅಹಮದ್ ಖಾನ್ ಅವರು ಕರ್ನಾಟಕ ಗೃಹ ಮಂಡಳಿ ಕಚೇರಿಗೆ ಬುಧವಾರ ಭೇಟಿನೀಡಿ ಅಧಿಕಾರಿಗಳು, ಸಿಬ್ಬಂದಿಯ ಕಾರ್ಯವೈಖರಿ ಪರಿಶೀಲಿಸಿದರು

'ಯೋಜನೆಗಳಿಗೆ ತಕ್ಷಣದಲ್ಲೇ ಸ್ಥಳ ಗುರುತಿಸಬೇಕು. ಭೂಸ್ವಾಧೀನ ಪ್ರಕ್ರಿಯೆಯನ್ನು ತ್ವರಿತವಾಗಿ ಆರಂಭಿಸಲು ಕ್ರಮ ಕೈಗೊಳ್ಳಬೇಕು. ಬಡವರಿಗಾಗಿ ರೂಪಿಸುವ ವಸತಿ ಯೋಜನೆಗಳಲ್ಲಿ ಲಾಭವೇ ಪ್ರಧಾನ ಆಗಬಾರದು. ವಸತಿ ಯೋಜನೆಗಳ ಕಾಮಗಾರಿಗಳಲ್ಲಿ ಗುಣಮಟ್ಟದಲ್ಲಿ ರಾಜಿಗೆ ಅವಕಾಶ ಇರಕೂಡದು ಎಂದು ತಾಕೀತು ಮಾಡಿದರು.

ಸಭೆಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಸಚಿವರು, 'ಪ್ರತಿ ಉಪನಗರವನ್ನು ತಲಾ ಎರಡು ಸಾವಿರ ಎಕರೆ ವಿಸ್ತೀರ್ಣದಲ್ಲಿ ನಿರ್ಮಿಸಲಾಗುವುದು. ಅಲ್ಲಿ ತಲಾ 30,000 ನಿವೇಶನಗಳು ಲಭ್ಯವಾಗಲಿವೆ. ವಿಲ್ಲಾ ಯೋಜನೆಗಳು ತಲಾ 500 ಎಕರೆಯಲ್ಲಿ ಅನುಷ್ಠಾನಕ್ಕೆ ಬರಲಿವೆ. ಈ ಯೋಜನೆಗಳಿಂದ ನಗರದ ಮೇಲಿನ ಒತ್ತಡ ಕಡಿಮೆ ಆಗಬೇಕು ಎಂಬುದು ನಮ್ಮ ಗುರಿ' ಎಂದರು.

'ಉಪನಗರಗಳಲ್ಲಿ 1.50 ಲಕ್ಷ ನಿವೇಶನಗಳು ಹಾಗೂ ವಿಲ್ಲಾ ಯೋಜನೆಗಳಲ್ಲಿ 25 ಸಾವಿರ ಮನೆಗಳ ನಿರ್ಮಾಣವಾಗುತ್ತವೆ. ಮೆಟ್ರೊ ರೈಲು ಸೇವೆಯ ಸಂಪರ್ಕವನ್ನು ಗಮನದಲ್ಲಿ ಇರಿಸಿಕೊಂಡು ಈ ಯೋಜನೆಗಳ ಸ್ಥಳವನ್ನು ಅಂತಿಮಗೊಳಿಸಲಾಗುವುದು' ಎಂದು ಹೇಳಿದರು.

'ಜಮೀನು ಮಾಲೀಕರೊಂದಿಗೆ ಶೇಕಡ 50:50ರ ಅನುಪಾತದಲ್ಲಿ ಈ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗುವುದು. ಇದರಿಂದಾಗಿ ಗೃಹ ಮಂಡಳಿಗೆ ಭೂಸ್ವಾಧೀನದ ಹೊರೆ ಹೆಚ್ಚಿನ ಪ್ರಮಾಣದಲ್ಲಿ ಬೀಳುವುದಿಲ್ಲ' ಎಂದರು.

ವಸತಿ ಇಲಾಖೆ ಕಾರ್ಯದರ್ಶಿ ರವಿಕುಮಾರ್, ಗೃಹ ಮಂಡಳಿ ಆಯುಕ್ತೆ ಕವಿತಾ ಎಸ್. ಮನ್ನಿಕೇರಿ ಇದ್ದರು.

ಮಾಹಿತಿ ಕೊರತೆ: ಅಧಿಕಾರಿಗಳಿಗೆ ತರಾಟೆ

ಅಗತ್ಯ ಮಾಹಿತಿಗಳಿಲ್ಲದೇ ಸಭೆಗೆ ಬಂದಿದ್ದ ಕೆಲವು ಅಧಿಕಾರಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡ ಸಚಿವ ಜಮೀರ್ ಅಹಮದ್ ಖಾನ್, ಮುಂದಿನ ವಾರ ಪುನಃ ಪ್ರಗತಿ ಪರಿಶೀಲನೆ ನಡೆಸುವುದಾಗಿ ತಿಳಿಸಿದರು.

'ಕಾಲಹರಣ ಮಾಡಲು ನಾನು ಇಲ್ಲಿಗೆ ಬಂದಿಲ್ಲ. ಸಭೆಯ ಬಗ್ಗೆ ಅಧಿಕಾರಿಗಳಿಗೆ ಗಂಭೀರತೆ ಇಲ್ಲವೆ? ವಾರದ ಮುಂಚೆಯೇ ಸಭೆ ನಿಗದಿಯಾಗಿದೆ. ಆದರೂ ನಿಮ್ಮ ಬಳಿ ಮಾಹಿತಿ ಇಲ್ಲದಿದ್ದರೆ ಹೇಗೆ' ಎಂದು ಸಚಿವರು ಅಧಿಕಾರಿಗಳನ್ನು ಪ್ರಶ್ನಿಸಿದರು.

ಸಂಕ್ಷಿಪ್ತ ಸುದ್ದಿ

ಜಾಮೀನು: ಹೈಕೋರ್ಟ್‌ಗೆ ಶರಣರ ಅರ್ಜಿ

ಬೆಂಗಳೂರು: ಪ್ರೌಢಶಾಲೆಯಲ್ಲಿ ಕಲಿಯುತ್ತಿದ್ದ ಇಬ್ಬರು ಬಾಲಕಿಯರಿಗೆ ಲೈಂಗಿಕ ಕಿರುಕುಳ ನೀಡಿ ಅತ್ಯಾಚಾರ ಎಸಗಿದ ಆರೋಪದಲ್ಲಿ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆಯಡಿ ನ್ಯಾಯಾಂಗ ಬಂಧನದಲ್ಲಿರುವ ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಮುರುಘಾ ಶರಣರು ನಿಯಮಿತ (ರೆಗ್ಯುಲರ್) ಜಾಮೀನು ಮಂಜೂರು ಮಾಡುವಂತೆ ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಈ ಸಂಬಂಧ ಆರೋಪಿ ಶಿವಮೂರ್ತಿ ಶರಣರು ಸಲ್ಲಿಸಿರುವ ಕ್ರಿಮಿನಲ್ ಅರ್ಜಿ ನ್ಯಾಯಮೂರ್ತಿ ಪಿ. ಎಂ. ನವಾಜ್ ಅವರ ಏಕಸದಸ್ಯ ನ್ಯಾಯಪೀಠದ ಮುಂದೆ ಸದ್ಯದಲ್ಲೇ ವಿಚಾರಣೆಗೆ ನಿಗದಿಯಾಗುವ ನಿರೀಕ್ಷೆ ಇದೆ.

'ಲುಲು'ಗೆ ಪ್ರಶಸ್ತಿ

ಬೆಂಗಳೂರು: ಇನ್‌ಸ್ಟೋರ್ ಏಷ್ಯಾ ವಿಎಂ ಆ್ಯಂಡ್ ಆರ್‌ಡಿ ರಿಟೇಲ್ ಅವಾರ್ಡ್ಸ್‌ನ ಎರಡು ವಿಭಾಗಗಳಲ್ಲಿ ಲುಲು ಸಮೂಹವು ಪ್ರಶಸ್ತಿ ಗೆದ್ದುಕೊಂಡಿದೆ. 'ಲುಲು ಡೈಲಿ'ಯು ಅತ್ಯುತ್ತಮ ಆಹಾರ ಮತ್ತು ಇತರ ವಹಿವಾಟುಗಳ ವಿಭಾಗದಲ್ಲಿ ಪ್ರಶಸ್ತಿ ಪಡೆದುಕೊಂಡಿದೆ ಎಂದು ಪ್ರಕಟಣೆ ತಿಳಿಸಿದೆ.

ಬೆಂಗಳೂರಿನ ಲುಲು ಫ್ಯಾಷನ್ ಸ್ಟೋರ್‌ಗೆ ಬೆಸ್ಟ್ ಫ್ಯಾಷನ್ ಡಿಪಾರ್ಟ್‌ಮೆಂಟ್ ಸ್ಟೋರ್ ಎಂಬ ಹೆಗ್ಗಳಿಕೆ ದೊರೆತಿದೆ. ಮುಂಬೈನ ಜಿಯೊ ವರ್ಲ್ಡ್ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಲುಲು ಬೆಂಗಳೂರು ವಿಭಾಗದ ವಾಣಿಜ್ಯ ವ್ಯವಸ್ಥಾಪಕ ಸೈಯದ್ ಅತೀಕ್ ಅವರು ಪ್ರಶಸ್ತಿ ಸ್ವೀಕರಿಸಿದರು.

'ಗೋಮಾಂಸ ರಫ್ತು; ₹40 ಸಾವಿರ ಕೋಟಿ ವಹಿವಾಟು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೈನ ಸಮುದಾಯದ ಕೆಲವರು ಗೋವಿನ ಮಾಂಸವನ್ನು ವಿದೇಶಗಳಿಗೆ ರಫ್ತು ಮಾಡುವ ಮೂಲಕ ವಾರ್ಷಿಕ ₹40 ಸಾವಿರ ಕೋಟಿ ವಹಿವಾಟು ನಡೆಸುತ್ತಿದ್ದಾರೆ' ಎಂದು ರಾಷ್ಟ್ರೀಯ ದ್ರಾವಿಡ ಸಂಘದ (ಆರ್‌ಡಿಎಸ್) ಅಧ್ಯಕ್ಷ ಅಗ್ನಿ ಶ್ರೀಧರ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಗೋವಿನ ಮಾಂಸ ರಫ್ತು ಮಾಡುವ ಉದ್ಯಮದಲ್ಲಿ ಈ ಹಿಂದೆ ಮುಸ್ಲಿಂ ಸಮುದಾಯವು ದೊಡ್ಡ ಪಾಲನ್ನು ಹೊಂದಿತ್ತು. ಮುಸ್ಲಿಮರನ್ನು ಈ ಉದ್ಯಮದಿಂದ ಹೊರಗಿಡಲು ಆರ್‌ಎಸ್‌ಎಸ್ ಮತ್ತು ಬಿಜೆಪಿ ಸರ್ಕಾರ ಗೋಹತ್ಯೆ ನಿಷೇಧ ಕಾನೂನು ಜಾರಿಗೊಳಿಸಿದೆ. ಈ ಹುನ್ನಾರದ ಹಿಂದೆ ಜೈನ ಸಮುದಾಯವಿದೆ' ಎಂದು ಅವರು ದೂರಿದರು.

'ಶ್ರೀಮಂತ ಮುಸ್ಲಿಮರು ಹಸುವಿನ ಮಾಂಸವನ್ನು ತಿನ್ನುವುದಿಲ್ಲ. ಆದರೆ, ಗೋಹತ್ಯೆಯ ವಿಷಯ ಮುನ್ನಲೆಗೆ ಬಂದಾಗಲೆಲ್ಲ ಇದನ್ನು ಮುಸ್ಲಿಮರ ಆಹಾರವೆಂಬಂತೆ ಬಿಂಬಿಸಲಾಗುತ್ತಿದೆ.

ಆದರೆ, ದಲಿತರು, ಕ್ರಿಶ್ಚಿಯನ್ನರು ಹಸುವಿನ ಮಾಂಸವನ್ನು ಹೆಚ್ಚು ಸೇವಿಸುತ್ತಾರೆ ಎಂಬುದನ್ನು ಪ್ರಜ್ಞಾಪೂರ್ವಕವಾಗಿ ಮರೆಸುವ ಕೆಲಸ ನಡೆಯುತ್ತಿದೆ' ಎಂದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, 'ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆಯ ಮೂಲಕ ರಾಜ್ಯದ ಕೃಷಿ ಕುಟುಂಬಗಳ ಆರ್ಥಿಕ ಸ್ಥಿತಿ ಚಿಂತಾಜನಕವಾಗಿದ್ದು, ರೈತರ ಜೀವನ ಮೂರಾಬಟ್ಟೆಯಾಗಿದೆ. ವಯಸ್ಸಾದ ಹಸುಗಳನ್ನು ನೋಡಿಕೊಳ್ಳುವುದು ರೈತರಿಗೆ ಕಷ್ಟವಾಗುತ್ತಿದೆ. ಆದ್ದರಿಂದ, ಬಿಜೆಪಿ ಸರ್ಕಾರ ಜಾರಿಗೊಳಿಸಿರುವ ನಿಷೇಧ ಕಾಯ್ದೆಯನ್ನು ಕೂಡಲೇ ಹಿಂಪಡೆಯಬೇಕು' ಎಂದು ಒತ್ತಾಯಿಸಿದರು.

ಅರೆಶಂಕರ ಮಠದ ಪೀಠಾಧ್ಯಕ್ಷ ಚೈತನ್ಯ ಸಿದ್ಧರಾಮ ಸ್ವಾಮೀಜಿ, ರೈತ ಸಂಘದ ಚಾಮರಸ ಮಾಲೀಪಾಟೀಲ, ಮನೋವಿಜ್ಞಾನಿ ಡಾ. ಅ. ಶ್ರೀಧರ್ ಇದ್ದರು.

ಬಿಜೆಪಿ ಜನರ ಭಾವನೆಗಳನ್ನು ಕೆರಳಿಸುತ್ತಿದೆ: ಶ್ರೀಧರ್ ಆರೋಪ

'ಹಸುವನ್ನು ಕೊಂದರೆ ತಾಯಿಯನ್ನು ಕೊಂದಂತೆ ಎಂಬ ಹೇಳಿಕೆಗಳ ಮೂಲಕ ಜನರ ಭಾವನೆಗಳನ್ನು ಕೆರಳಿಸುವ ಕೆಲಸವನ್ನು ಬಿಜೆಪಿ ಮತ್ತು ಅದರ ಬೆಂಬಲಿತ ಗುಂಪುಗಳು ಮಾಡುತ್ತಿವೆ' ಎಂದು ಅಗ್ನಿ ಶ್ರೀಧರ್ ಆರೋಪಿಸಿದರು.

'ಆಹಾರದ ಹಕ್ಕಿನ ವಿಚಾರದಲ್ಲಿ ಗೋವನ್ನು ಭಾವನಾತ್ಮಕ ನೆಲೆಯಲ್ಲಿ ಚರ್ಚೆಗೆ ಎಳೆದು ತರಲಾಗುತ್ತಿದೆ. ಯಾವಾಗ ನಿಮ್ಮ ತಾಯಿಯನ್ನು ಪರಿಷೆ, ಜಾತ್ರೆಗಳಲ್ಲಿ ಖರೀದಿಸಲು ಆರಂಭಿಸಿದ್ದೀರಿ? ಯಾಕೆ ನಿಮ್ಮ ತಾಯಿಯನ್ನು ರಸ್ತೆಗಳಿಗೆ ಬೀಡುತ್ತಿದ್ದೀರಿ? ವಯಸ್ಸಾದ ಹಸುಗಳಿಗೆ ಸೂಕ್ತ ವ್ಯವಸ್ಥೆ ಏಕೆ ಕಲ್ಪಿಸುತ್ತಿಲ್ಲ ಎಂದು ಆ ಗುಂಪುಗಳಿಗೆ ಪ್ರಶ್ನಿಸಬೇಕು' ಎಂದರು.

'ಜಾತಿವಾರು ಸಮೀಕ್ಷೆಯ ದತ್ತಾಂಶ ಆಧರಿಸಿ ಸೌಲಭ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದಿನ ಬಾರಿ ನನ್ನ ಸರ್ಕಾರದ ಅವಧಿಯಲ್ಲಿ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ನಡೆಸಿದ ಜಾತಿವಾರು ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ವರದಿಯನ್ನು ಸ್ವೀಕರಿಸಿ, ಅದರ ದತ್ತಾಂಶದ ಆಧಾರದಲ್ಲಿ ವಿವಿಧ ಸಮುದಾಯಗಳಿಗೆ ಅನುಕೂಲ ಕಲ್ಪಿಸಲಾಗುವುದು' ಎಂದು ತಮ್ಮನ್ನು ಭೇಟಿ ಮಾಡಿದ ಕರ್ನಾಟಕ ಶೋಷಿತ ವರ್ಗಗಳ ಮಹಾ ಒಕ್ಕೂಟದ ನಿಯೋಗಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

'ಜಾತಿವಾರು ಸಮೀಕ್ಷೆಯಿಂದ ಜನರಿಗೆ ಒದಗಿಸಬೇಕಾದ ಸೌಲಭ್ಯಗಳು, ಆದ್ಯತೆಯ ಅಂಶಗಳ ಕುರಿತು ನಿರ್ಧಾರ ಕೈಗೊಳ್ಳಲು ಅಗತ್ಯವಿರುವ ದತ್ತಾಂಶ ಲಭ್ಯವಾಗುವುದು. ಮೀಸಲಾತಿ ಮತ್ತಿತರ ಸೌಲಭ್ಯಗಳನ್ನು ಒದಗಿಸಲು ವೈಜ್ಞಾನಿಕ ಹಾಗೂ ನಿಖರ ಮಾಹಿತಿ ಅಗತ್ಯ. ಈ ಉದ್ದೇಶದಿಂದ ಜಾತಿವಾರು ಸಮೀಕ್ಷೆ ನಡೆಸಲಾಗಿತ್ತು' ಎಂದರು.

'ಬಿಜೆಪಿ ಸರ್ಕಾರವು ಮೀಸಲಾತಿಯಲ್ಲಿ ಸೃಷ್ಟಿಸಿದ ಗೊಂದಲ ನಿವಾರಣೆ ಮಾಡಲಾಗುವುದು. ಇಲ್ಲವಾದರೆ ಯಾರಿಗೂ ಸಾಮಾಜಿಕ ನ್ಯಾಯ ಒದಗಿಸಲು ಸಾಧ್ಯವಾಗದು' ಎಂದೂ ಅಭಿಪ್ರಾಯಪಟ್ಟರು.

ಒಕ್ಕೂಟದ ಮುಖಂಡರಾದ ಕೆ.ಎಂ. ರಾಮಚಂದ್ರಪ್ಪ ಅವರ ನೇತೃತ್ವದಲ್ಲಿ ಮಾವಳ್ಳಿ ಶಂಕರ್, ಪ್ರೊ. ರವಿ ವರ್ಮಕುಮಾರ್, ಅನಂತ್ ನಾಯಕ್, ಡಾ. ನರಸಿಂಹಯ್ಯ, ಪ್ರೊ. ಜಾಫೆಟ್, ಬಿ.ಟಿ. ಲಲಿತಾನಾಯಕ್, ಜಿ.ಎಸ್.ಪಾಟೀಲ ಸೇರಿ 150ಕ್ಕೂ ಹೆಚ್ಚು ಮಂದಿ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದರು.

ಅಂಡರ್‌ಪಾಸ್‌ನಲ್ಲಿ ಸಿಲುಕಿದ್ದ ಕಂಟೈನರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಟೈನರ್ ವಾಹನವೊಂದು ಬುಧವಾರ ಮಹಾರಾಣಿ ಕಾಲೇಜು ಬಳಿಯ ಅಂಡರ್‌ಪಾಸ್‌ನಲ್ಲಿ ಸಿಲುಕಿಕೊಂಡ ಪರಿಣಾಮ ಸುತ್ತಮುತ್ತಲ ರಸ್ತೆಗಳಲ್ಲಿ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಎರಡು ಗಂಟೆಗಳ ಸತತ ಪ್ರಯತ್ನದ ಬಳಿಕ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಲಾಯಿತು.ಬೃಹತ್ ವಾಹನಗಳ ಸಂಚಾರ ತಡೆಯುವ ಉದ್ದೇಶಕ್ಕೆ ಮಹಾರಾಣಿ ಕಾಲೇಜು ಸಮೀಪದ ಅಂಡರ್‌ಪಾಸ್‌ನಲ್ಲಿ ಕಬ್ಬಿಣದ ರಾಡ್ ಅಳವಡಿಸಲಾಗಿದೆ. ಇದನ್ನು ಗಮನಿಸದ ಕಂಟೈನರ್ ಚಾಲಕ ಬೆಳಿಗ್ಗೆ ಅಂಡರ್‌ಪಾಸ್‌ನಲ್ಲಿ ವಾಹನ ಚಾಲನೆ ಮಾಡಿಕೊಂಡು ಹೋಗಲು ಮುಂದಾಗಿದ್ದರಿಂದ ಈ ಸಮಸ್ಯೆ ಎದುರಾಗಿತ್ತು.

ಅಂಡರ್‌ಪಾಸ್‌ನಲ್ಲಿ ಸಿಲುಕಿಕೊಂಡ ಕಂಟೈನರ್ ಮುಂದೆಯೂ ಹೋಗಲಾಗದೆ, ಹಿಂದೆಯೂ ಚಲಿಸಲಾರದೆ ನಿಂತಲ್ಲೇ ನಿಂತಿತ್ತು. ಜೆಸಿಬಿ ಯಂತ್ರದ ಸಹಾಯದಿಂದ ಕಂಟೈನರ್ ವಾಹನವನ್ನು ಅಂಡರ್ ಪಾಸ್‌ನಿಂದ ಹೊರಗೆ ತರಲಾಯಿತು.

ರೋಹಿತ್ ಶೆಟ್ಟಿ ನಾರಾಯಣ ನೇತ್ರಾಲಯದ ಅಧ್ಯಕ್ಷ



ಬೆಂಗಳೂರು: ನಾರಾಯಣ ನೇತ್ರಾಲಯದ ಅಧ್ಯಕ್ಷರಾಗಿ ರೋಹಿತ್ ಶೆಟ್ಟಿ ಆಯ್ಕೆಯಾಗಿದ್ದಾರೆ.

ಸಂಸ್ಥೆಯ ಸಂಸ್ಥಾಪನಾಧ್ಯಕ್ಷಡಾ. ಭುಜಂಗ ಶೆಟ್ಟಿ ಅವರು ಮೇ 19ರಂದು ಹೃದಯಾಘಾತದಿಂದ ಮೃತಪಟ್ಟಿದ್ದರು. ಆಸ್ಪತ್ರೆಯ ಉಪಾಧ್ಯಕ್ಷರಾಗಿದ್ದ ರೋಹಿತ್ ಶೆಟ್ಟಿ ಈಗ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇವರು ಭುಜಂಗ ಶೆಟ್ಟಿ ಅವರ ಅಳಿಯ.

'ಡಾ. ಭುಜಂಗ ಶೆಟ್ಟಿ ಅವರು ಹಾಕಿಕೊಟ್ಟ ಮೌಲ್ಯಗಳು ಮತ್ತು ತತ್ವಗಳನ್ನು ಎತ್ತಿ ಹಿಡಿಯಲಾಗುವುದು. ಆಸ್ಪತ್ರೆಯು ಇನ್ನಷ್ಟು ಉನ್ನತ ಮಟ್ಟಕ್ಕೆ ಕೊಂಡೊಯ್ಯಲಾಗುವುದು ಎಂದು ಅವರು ತಿಳಿಸಿದ್ದಾರೆ.

ಬನಶಂಕರಿ ಲೇಔಟ್: ಮನೆ ನಿರ್ಮಿಸಲು ನಿವೇಶನದಾರರಿಗೆ ಬಫರ್ ವಲಯದ 'ಕಗ್ಗಂಟು'

ಬಿಡಿಎ ನಿವೇಶನಕ್ಕೆ ಅರಣ್ಯ ಇಲಾಖೆ 'ಬೇಲಿ'

• ಆದಿತ್ಯ ಕೆ.ಎ.





ಬನಶಂಕರಿ ಲೇಔಟ್‌ನಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು 'ಬಫರ್ ವಲಯ'ವೆಂದು ಪ್ರತಿಪಾದಿಸುತ್ತಿರುವ ನಿವೇಶನ ಹಂಚಿಕೆಯಾಗಿರುವ ಪ್ರದೇಶ (ಎಡಚಿತ್ರ). ಅರಣ್ಯ ಇಲಾಖೆ ಗಡಿ ಗುರುತಿಗೆ ಹಾಕಿರುವ ಕಲ್ಲು.

ಬೆಂಗಳೂರು: 'ಸಿಲಿಕಾನ್ ಸಿಟಿ'ಯಲ್ಲಿ ಸ್ವಂತ ನಿವೇಶನ ಹೊಂದಬೇಕು, ಅಲ್ಲಿ ಸುಂದರ ಮನೆ ನಿರ್ಮಿಸಬೇಕು ಎಂಬುದು ಹಲವರ ಕನಸು. ಆದರೆ, ಬಿಡಿಎಯಿಂದ ನಿವೇಶನ ಖರೀದಿಸಿ, ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಮನೆ ನಿರ್ಮಿಸಿದ್ದವರೇ ಈಗ ಆ ಮನೆ ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ.

ಬನಶಂಕರಿಯ ವಿವಿಧ ಹಂತಗಳ ನಿವೇಶನ ಖರೀದಿದಾರರು ಮನೆ ನಿರ್ಮಿಸಲು ಮುಂದಾದರೆ ಈ ಜಾಗವು ತುರಹಳ್ಳಿ 'ಬಫರ್ ವಲಯ'ವೆಂದು ಅರಣ್ಯ ಇಲಾಖೆ ಅಡ್ಡಗಾಲು ಹಾಕುತ್ತಿದೆ. ಕೆಲವು ಬ್ಲಾಕ್‌ನ ನಿವೇಶನಗಳ ಬಳಿ ಅರಣ್ಯ ಇಲಾಖೆ ಬೇಲಿಯನ್ನೇ ನಿರ್ಮಿಸಿದೆ.

ಬನಶಂಕರಿ ಕ್ಷೇಮಾಭಿವೃದ್ಧಿ ಸಂಘದ ನೇತೃತ್ವದಲ್ಲಿ ನಿವೇಶನದಾರರು ಈಗ ಬಿಡಿಎ, ಅರಣ್ಯ ಇಲಾಖೆ ವಿರುದ್ಧ ಹೋರಾಟ ನಡೆಸಲು ಸಜ್ಜಾಗಿದ್ದಾರೆ.

ಹಿಂದಿನ ಸರ್ಕಾರದ ಅವಧಿಯಲ್ಲಿ ನಿವೇಶನದಾರರು ಮನವಿ ಸಲ್ಲಿಸಿದ್ದರೂ ನಿವೇಶನದಾರರ ಸಮಸ್ಯೆಗೆ ಪರಿಹಾರ ಸಿಕ್ಕಿರಲಿಲ್ಲ. ಮನೆ ನಿರ್ಮಿಸಲು ತಂದು ಹಾಕಿದ್ದ ಮರಳು ಹಾಗೂ ಕಲ್ಲುಗಳನ್ನು ಅರಣ್ಯ ಇಲಾಖೆ ಸಿಬ್ಬಂದಿ ತೆರವು ಮಾಡಿದ್ದರೂ ಬಿಡಿಎ ಕ್ರಮ ತೆಗೆದುಕೊಂಡಿರಲಿಲ್ಲ. ಬಿಡಿಎ ಅಧಿಕಾರಿಗಳ ವಿರುದ್ಧವೂ ನಿವೇಶನದಾರರ ಆಕ್ರೋಶ ಮಡುಗಟ್ಟಿದೆ.

'ಬೆಂಗಳೂರು ಅಭಿವೃದ್ಧಿ ಸಚಿವ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ ನ್ಯಾಯ ಕಲ್ಪಿಸುವಂತೆ ಕೋರುತ್ತೇವೆ. ಬಫರ್ ವಲಯವೇ ಆಗಿದ್ದರೆ ಅದನ್ನು ಸಂಪೂರ್ಣ ತೆರವು ಮಾಡುವಂತೆಯೂ ಮನವಿ ಸಲ್ಲಿಸುತ್ತೇವೆ' ಎಂದು ಬನಶಂಕರಿ 6ನೇ ಹಂತದ 2ನೇ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಸತೀಶ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

2003–2004ರಲ್ಲಿ ಬಿಡಿಎ ಬನಶಂಕರಿಯ ವಿವಿಧ ಹಂತದಲ್ಲಿ 1ರಿಂದ 14 ಬ್ಲಾಕ್ ನಿರ್ಮಿಸಿತ್ತು. ಅಂದು ಕಂದಾಯ ಇಲಾಖೆ ಹಾಗೂ ಬಿಡಿಎ ಜಂಟಿ ಸರ್ವೆ ನಡೆಸಿಯೇ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳಲಾಗಿತ್ತು. ಆಗ ಯಾವ ಸಮಸ್ಯೆಯೂ ಕಂಡು ಬಂದಿರಲಿಲ್ಲ. ಬಿಡಿಎ ನಿವೇಶನಗಳನ್ನು ರಚಿಸಿ ಮಾರಾಟ ಮಾಡಿತ್ತು. ಈಗ ಅಲ್ಲಿ 3, 5, 4 'ಬಿ' ಬ್ಲಾಕ್ ಹಾಗೂ 4'ಎಚ್' ಬ್ಲಾಕ್‌ನ ನೂರಾರು ನಿವೇಶನದಾರರಿಗೆ ಮನೆ ನಿರ್ಮಿಸಲು ಸಾಧ್ಯವಾಗುತ್ತಿಲ್ಲ. ತುರಹಳ್ಳಿ ಮೀಸಲು ಅರಣ್ಯ ಪ್ರದೇಶಕ್ಕೆ ಈ ಜಾಗ ಸೇರಿದ್ದು ಎಂದು ಅರಣ್ಯ ಇಲಾಖೆ ಸಿಬ್ಬಂದಿ ಪಟ್ಟು ಹಿಡಿದಿದ್ದಾರೆ. ಮನೆ ನಿರ್ಮಿಸಲು ತಂದು ಹಾಕುವ ಸಾಮಗ್ರಿಗಳನ್ನೂ ಸಿಬ್ಬಂದಿ ಜಪ್ತಿ ಮಾಡುತ್ತಿದ್ದಾರೆ. ಈ ಸ್ಥಳದಲ್ಲೇ ಕೆಲವರು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಮನೆ ನಿರ್ಮಿಸಿದ್ದಾರೆ. ಹಲವು ವರ್ಷ ಕಳೆದರೂ ತುರಹಳ್ಳಿ ಸಮಸ್ಯೆ ಇಂದಿಗೂ ಕಗ್ಗಂಟಾಗಿಯೇ ಉಳಿದಿದೆ.

ಎರಡು ಎಕರೆಯಷ್ಟು ಅರಣ್ಯ ಜಾಗವನ್ನು ಬಿಡಿಎ ಒತ್ತುವರಿ ಮಾಡಿಕೊಂಡು ನಿವೇಶನ ರಚಿಸಿದೆ ಎಂಬುದು ಅರಣ್ಯ ಇಲಾಖೆ ವಾದ. ಕೆಲವು ನಿವೇಶನಗಳು ಬಫರ್ ವಲಯದಲ್ಲಿ ಬರುತ್ತವೆ. ಅಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡುವಂತಿಲ್ಲ. ಅರಣ್ಯ ಇಲಾಖೆಗೆ ಜಾಗವನ್ನು ಬಿಟ್ಟುಕೊಡಬೇಕು ಎಂದು ಸಿಬ್ಬಂದಿ ಹೇಳುತ್ತಿದ್ದಾರೆ. 'ಅದು ಅರಣ್ಯ ಜಾಗವಲ್ಲ' ಎಂಬುದು ಬಿಡಿಎ ಪ್ರತಿವಾದನೆ. ಇದರಿಂದ ತುರಹಳ್ಳಿ ಕಾಡಿನ ಪಕ್ಕದಲ್ಲಿ ಹಂಚಿಕೆ ಆಗಿರುವ ನೂರಾರು ನಿವೇಶನದಾರರು ಸಂಕಷ್ಟಕ್ಕೆ ಒಳಗಾಗಿದ್ದಾರೆ.


ವಿದ್ಯುತ್ ಮಾರ್ಗದ ಕೆಳಗೆ ಉದ್ಯಾನ!

'ಬಡಾವಣೆ ನಿರ್ಮಿಸುವಾಗ ನಾಗರಿಕ ಸೌಲಭ್ಯ ಹಾಗೂ ಉದ್ಯಾನಕ್ಕೆ ಜಾಗ ಮೀಸಲಿಡಬೇಕು. ಆದರೆ, ಇಲ್ಲಿ ವಿಶಾಲವಾದ ಜಾಗವನ್ನೇ ಮೀಸಲಿಟ್ಟಿಲ್ಲ. ಬನಶಂಕರಿ ಲೇಔಟ್‌ನಲ್ಲಿ ಹೈಟೆನ್ಷನ್ ವಿದ್ಯುತ್ ಮಾರ್ಗದ ಕೆಳಗೆ ಅನುಪಯುಕ್ತ ಪ್ರದೇಶವನ್ನು ಉದ್ಯಾನಕ್ಕೆ ಮೀಸಲಿಡಲಾಗಿದೆ. ಅಲ್ಲಿಯೂ ಅಭಿವೃದ್ಧಿ ಮಾಡಿಲ್ಲ. ಒಂದು ವೇಳೆ ವಿದ್ಯುತ್ ಮಾರ್ಗದ ಕೆಳಗೆ ಉದ್ಯಾನ ನಿರ್ಮಿಸಿದರೆ ಮಕ್ಕಳು ಆಟವಾಡಲು ಸಾಧ್ಯವೇ' ಎಂದು ಸ್ಥಳೀಯರು ಪ್ರಶ್ನಿಸುತ್ತಾರೆ.

'ಒಳಚರಂಡಿ ವ್ಯವಸ್ಥೆಯೂ ಉತ್ತಮವಾಗಿಲ್ಲ. ಇಡೀ ಬಡಾವಣೆ ಉದ್ದಕ್ಕೂ ಯುಜಿಡಿ ಚೇಂಬರ್‌ಗಳು ಅಪಾಯಕ್ಕೆ ಆಹ್ವಾನಿಸುವಂತೆ ಗೋಚರಿಸುತ್ತಿವೆ. ಇದರಿಂದ ರಸ್ತೆ ಅಪಘಾತಗಳು ಹೆಚ್ಚುತ್ತಿವೆ' ಎಂದು ಸ್ಥಳೀಯರು ಹೇಳುತ್ತಾರೆ.

'ಇಷ್ಟೆಲ್ಲ ಸಮಸ್ಯೆಗಳ ನಡುವೆ ಬಡಾವಣೆಯ ನಿವಾಸಿಗಳು ಆಸ್ತಿ ತೆರಿಗೆ ಪಾವತಿಸುತ್ತಿದ್ದಾರೆ. ಬಿಡಿಎ ಬಡಾವಣೆಯನ್ನು ಯಾವುದೇ ರೀತಿಯಲ್ಲಿ ನಿರ್ವಹಣೆ ಮಾಡದೇ, ನಿರ್ವಹಣಾ ವೆಚ್ಚವನ್ನು ವಸೂಲಿ ಮಾಡುವುದು ಸರಿಯಲ್ಲ' ಎಂದು ನಿವಾಸಿ ಸುಧೀರ್ ಹೇಳುತ್ತಾರೆ.

'ನೋಟಿಸ್ ಕೊಟ್ಟರೆ ಕೋರ್ಟ್‌ಗಾದರೂ ಹೋಗುತ್ತೇವೆ'



ಸತೀಶ್

ಹೆಮ್ಮಿಗೆಪುರ, ಉತ್ತರಹಳ್ಳಿ, ಮನವರ್ತೆ ಕಾವಲ್, ತುರಹಳ್ಳಿಯ ವಿವಿಧ ಸರ್ವೆ ನಂಬರ್‌ಗಳಲ್ಲಿ ಬಿಡಿಎ ನಿವೇಶನ ನಿರ್ಮಿಸಿ ಹಂಚಿಕೆ ಮಾಡಿದೆ. ಕಾಡಂಚಿನ ನಿವೇಶನಗಳು ನಮಗೆ ಸೇರಿದ್ದು ಎಂದು ನಿವೇಶನದಾರರಿಗೆ ನೋಟಿಸ್ ಕೊಡಿ ಎಂದು ಅರಣ್ಯ ಇಲಾಖೆ ಅಧಿಕಾರಿಗಳ ಬಳಿ ಮನವಿ ಮಾಡಿದ್ದೆವು. ಆದರೆ, ನಿವೇಶನದಾರರಿಗೆ ನೋಟಿಸ್ ಕೊಡಲು ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ. ಬಿಡಿಎಗೆ ನೋಟಿಸ್ ನೀಡಿದ್ದೇವೆ ಎಂದು ಬೆದರಿಸುತ್ತಾರೆ. ನಮಗೆ ನೋಟಿಸ್ ನೀಡಿದರೆ ಕೋರ್ಟ್‌ಗಾದರೂ ಹೋಗುತ್ತೇವೆ' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಸತೀಶ್ ಹೇಳಿದರು.

ಎರಡು ದಶಕದಿಂದ ನೀರಿನ ಸಮಸ್ಯೆ

ಬಿಡಿಎ ಬಡಾವಣೆ ನಿರ್ಮಿಸಿ ಎರಡು ದಶಕಗಳೇ ಕಳೆದಿದ್ದರೂ ಕಾವೇರಿ ನೀರು ಲಭ್ಯವಾಗುತ್ತಿಲ್ಲ. ಬಡಾವಣೆ ಪಕ್ಕವೇ ನೀರಿನ ಬೃಹತ್ ಪೈಪುಗಳು ಹಾದು ಹೋಗಿವೆ. ಆದರೆ, ನೀರಿನ ವ್ಯವಸ್ಥೆ ಕಲ್ಪಿಸಿಲ್ಲ. ಬೇರೆ ಬೇರೆ ಬ್ಲಾಕ್‌ನ 18 ಸಾವಿರ ನಿವೇಶನಗಳ ಪೈಕಿ ಅರ್ಧದಷ್ಟು ಮಂದಿ ಮನೆ ನಿರ್ಮಿಸಿದ್ದಾರೆ. ಎಲ್ಲರೂ ಕೊಳವೆಬಾವಿಯನ್ನೇ ಕುಡಿಯುವ ನೀರಿಗೆ ಆಶ್ರಯಿಸಬೇಕಾದ ಸ್ಥಿತಿಯಿದೆ. ಕೆಲವರು ಟ್ಯಾಂಕರ್ ಮೂಲಕ ನೀರು ತರಿಸಿಕೊಳ್ಳುತ್ತಿದ್ದಾರೆ. ರಾಜಧಾನಿಯ ಪ್ರತಿಷ್ಠಿತ ಬಡಾವಣೆಗಳಲ್ಲಿ ಒಂದಾಗಿರುವ ಬನಶಂಕರಿಯಲ್ಲಿ ಸಮಸ್ಯೆ ತೀವ್ರವಾಗಿದೆ ಎಂದು ನಿವಾಸಿಗಳು ಅಳಲು ತೋಡಿಕೊಳ್ಳುತ್ತಾರೆ. ಕೊಳವೆಬಾವಿಯನ್ನೇ ಆಶ್ರಯಿಸಿದ್ದರಿಂದ ಅಂತರ್ಜಲಮಟ್ಟವೂ ಕುಸಿಯುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

'ತ್ಯಾಜ್ಯ ವಿಲೇವಾರಿಗೂ ಸೂಕ್ತ ವ್ಯವಸ್ಥೆ ಇಲ್ಲವಾಗಿದೆ. ರಸ್ತೆ ಬದಿ ಸೇರಿದಂತೆ ಎಲ್ಲೆಂದರಲ್ಲಿ ಕಸದ ರಾಶಿಯೇ ಕಾಣಿಸುತ್ತಿದೆ. ಬಿಡಿಎ ಕ್ರಮ ಕೈಗೊಳ್ಳದ ಕಾರಣಕ್ಕೆ ಬಡಾವಣೆ ನಿವಾಸಿಗಳ ಮುಂದಾಳತ್ವದಲ್ಲಿ ತಾತ್ಕಾಲಿಕ ವ್ಯವಸ್ಥೆ ಮಾಡಿಕೊಂಡಿದ್ದೇವೆ' ಎಂದು ನಿವಾಸಿ ಸತೀಶ್ ಹೇಳುತ್ತಾರೆ.



ಪರಿಸರ ದಿನಾಚರಣೆಯ ಅಂಗವಾಗಿ ಸ್ಪಂದನ ಆಯೋಜಿಸಿದ್ದ ಬೈಸಿಕಲ್ ಜಾಥಾದಲ್ಲಿ ವಿದ್ಯಾರ್ಥಿಗಳು ಪರಿಸರ ಜಾಗೃತಿ ಮೂಡಿಸಿದರು

ಪರಿಸರ ಜಾಗೃತಿಗೆ ಬೈಸಿಕಲ್ ಜಾಥಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ದೇವರಚಿಕ್ಕನಹಳ್ಳಿಯ ಬಿಡಿಎ ಬಡಾವಣೆಯ ಉದ್ಯಾನದಲ್ಲಿ ಹಣ್ಣಿನ ಗಿಡಗಳನ್ನು ನೆಡುವುದರ ಮೂಲಕ ಪರಿಸರ ದಿನಾಚರಣೆ ಆಚರಿಸಲಾಯಿತು.

ಸ್ಪಂದನ ಆಯೋಜಿಸಿದ್ದ ಬೈಸಿಕಲ್ ಜಾಥಾದಲ್ಲಿ ದೇವರಚಿಕ್ಕನಹಳ್ಳಿಯ ಬಿಡಿಎ ಬಡಾವಣೆಯ ವಿದ್ಯಾರ್ಥಿಗಳು, ನಾಗರಿಕರು ಮತ್ತು ವಾಯುವಿಹಾರಿಗಳು ಭಾಗವಹಿಸಿ ಪರಿಸರದ ಬಗ್ಗೆ ಜಾಗೃತಿ ಮೂಡಿಸಿದರು. ಜಾಥಾದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಶಂಸಾ ಪತ್ರ ಹಾಗೂ ಪದಕಗಳನ್ನು ವಿತರಿಸಲಾಯಿತು.

ಸ್ಪಂದನದ ಅಧ್ಯಕ್ಷ ಎಂ. ಜಯಶಂಕರ್ ವಿದ್ಯಾರ್ಥಿಗಳಾದ ಮಹೇಶ ಎನ್., ನಾಗರಾಜ್ ಎನ್., ಧನುಷ್ ಬಿ., ದಿಲಿಪ್ ಬಿ., ಗೋಕುಲ್, ಕಫೇಂದರ್, ಶ್ರೀನಿವಾಸ್ ರೆಡ್ಡಿ, ಭೂತೇಶ್, ಪ್ರಕಾಶ್, ಮಹದೇವಸ್ವಾಮಿ, ಚಂದ್ರಶೇಖರ್ ಇದ್ದರು.

'ಭೀಮ ಸಂಕಲ್ಪ' ಸಮಾವೇಶ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿಯು ಜೂನ್ 9ರಂದು ಟೌನ್‌ಹಾಲ್‌ನಲ್ಲಿ 'ಭೀಮ ಸಂಕಲ್ಪ ಸಮಾವೇಶ' ಹಮ್ಮಿಕೊಂಡಿದೆ' ಎಂದು ಸಮಿತಿಯ ಸದಸ್ಯ ಇಂದೂಧರ ಹೊನ್ನಾಪುರ ತಿಳಿಸಿದರು.

'ಈ ಸಮಾವೇಶದಲ್ಲಿ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮರುಸ್ಥಾಪನೆಗಾಗಿ ಶ್ರಮಿಸಿದ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸಲಾಗುವುದು' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ. ಸ್ಫೂರ್ತಿಧಾಮದ ಅಧ್ಯಕ್ಷ ಎಸ್. ಮರಿಸ್ವಾಮಿ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಜಿ. ಪರಮೇಶ್ವರ, ಕೆ.ಎಚ್. ಮುನಿಯಪ್ಪ, ಎಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ, ಪ್ರಿಯಾಂಕ್ ಖರ್ಗೆ, ಜಮೀರ್ ಅಹ್ಮದ ಖಾನ್, ಶಿವರಾಜ ತಂಗಡಗಿ, ಕೃಷ್ಣಪ್ಪ ಟ್ರಸ್ಟ್‌ನ ಮುಖ್ಯಸ್ಥೆ ಇಂದಿರಾ ಕೃಷ್ಣಪ್ಪ ಭಾಗವಹಿಸಲಿದ್ದಾರೆ ಎಂದು ಅವರು ಹೇಳಿದರು.

ಐಐಎಸ್‌ಸಿ ವಿಜ್ಞಾನಿಗಳಿಂದ ನಾಲ್ಕು ವರ್ಷ ಅಧ್ಯಯನ– ವರದಿ ಪ್ರಕಟ

ಬೆಳ್ಳಂದೂರು ಕೆರೆ: ನೊರೆಗೆ 3 ಕಾರಣ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಗರದ ಬೆಳ್ಳಂದೂರು ಕೆರೆಯಲ್ಲಿ ಪ್ರತಿ ವರ್ಷ ಸೃಷ್ಟಿಯಾಗುವ ನೊರೆಗೆ ಭಾರತೀಯ ವಿಜ್ಞಾನ ಸಂಸ್ಥೆಯ ಸುಸ್ಥಿರ ತಂತ್ರಜ್ಞಾನ ಕೇಂದ್ರದ ವಿಜ್ಞಾನಿಗಳು ಮೂರು ಪ್ರಮುಖ ಕಾರಣಗಳನ್ನು ಪತ್ತೆ ಮಾಡಿದ್ದಾರೆ.

ಈವರೆಗೆ ಹಲವು ತಜ್ಞರು ಈ ಸಂಬಂಧ ಅನೇಕ ಸಿದ್ಧಾಂತಗಳನ್ನು ಮುಂದಿಟ್ಟಿದ್ದರು. ಅದಕ್ಕೆ ಪೂರಕವಾಗಿ ನಿಯಂತ್ರಣ ಕ್ರಮಗಳನ್ನು ತೆಗೆದುಕೊಂಡಿದ್ದರೂ ನೊರೆ ಸೃಷ್ಟಿಯಾಗುವುದನ್ನು ತಡೆಯುವುದಕ್ಕೆ ಸಾಧ್ಯವಾಗಿರಲಿಲ್ಲ. ಇದರಹಿಂದಿನರಹಸ್ಯವನ್ನುಅರಿತುಕೊಳ್ಳುವ ಉದ್ದೇಶದಿಂದ ಸುಸ್ಥಿರ ತಂತ್ರಜ್ಞಾನ ಕೇಂದ್ರದ ವಿಜ್ಞಾನಿಗಳು 4 ವರ್ಷಗಳ ಕಾಲ ಅಧ್ಯಯನ ನಡೆಸಿದ್ದು, ಅದರ ವರದಿ ಪ್ರಕಟವಾಗಿದೆ.

ಮುಖ್ಯವಾಗಿ ನಗರದಲ್ಲಿ ಧಾರಾಕಾರವಾಗಿ ಮಳೆ ಸುರಿದ ಬಳಿಕ, ಮಳೆ ನೀರು ಕೆರೆಗೆ ಸೇರಿ ಅದರಲ್ಲಿನ ಮಾಲಿನ್ಯಕಾರಕ ಅಂಶಗಳು ಕದಡಿ ಹೋಗಿ ನೊರೆ ಸೃಷ್ಟಿಯಾಗುತ್ತಿತ್ತು ಎಂದು ತರ್ಕಿಸಲಾಗಿತ್ತು. ಆದರೆ, ಅದಷ್ಟೇ ಕಾರಣವಲ್ಲ ಎಂಬುದು ಹೊಸ ಅಧ್ಯಯನದಿಂದ ಗೊತ್ತಾಗಿದೆ.

ವಿಜ್ಞಾನಿಗಳು ನೀಡಿದ ಮೂರು ಕಾರಣಗಳು:

- ಒಂದು ಬಕೆಟ್‌ಗೆ ಒಂದು ಹಿಡಿ ಡಿಟರ್ಜೆಂಟ್ ಪುಡಿಯನ್ನು ಹಾಕಿ ಚೆನ್ನಾಗಿ ಕಲಕಿದರೆ ಹೇಗೆ ನೊರೆ ಸೃಷ್ಟಿಯಾಗುತ್ತದೆಯೊ ಅದೇ ರೀತಿ ಬೆಳ್ಳಂದೂರು ಕೆರೆಯಲ್ಲಿ ನೊರೆ ಸೃಷ್ಟಿ ಆಗುತ್ತದೆ. ಅದು ಹೇಗೆಂದರೆ, ಸಂಸ್ಕರಿಸದ ಮಾಲಿನ್ಯಯುಕ್ತ ನೀರು ಕೆರೆಗೆ ಬರುತ್ತದೆ. ಹೀಗೆ ಬಂದು ಸೇರಿದ ಮಾಲಿನ್ಯಯುಕ್ತ ನೀರು ಕೆರೆಯಿಂದ ಹೊರ ಹೋಗಲು ಕನಿಷ್ಠ 10–15 ದಿನಗಳು ಬೇಕಾಗುತ್ತದೆ. ಈ ಅವಧಿಯಲ್ಲಿ ಸಾವಯವ ವಸ್ತುಗಳು ಕೆರೆಯ ನೀರಿನಲ್ಲಿ ಆಮ್ಲಜನಕವಿಲ್ಲದೇ, ತಳ ಸೇರುತ್ತವೆ. ಕೆಸರಿನ ರೂಪ ಪಡೆಯುತ್ತದೆ. ಅಲ್ಲದೇ ಡಿಟರ್ಜೆಂಟ್, ಬಟ್ಟೆಗಳಿಗೆ ಬಳಸುವ ಬಣ್ಣಗಳು ಮಾಲಿನ್ಯದ ನೀರಿನ ಮೇಲ್ಪದರದಲ್ಲೇ ಉಳಿಯುತ್ತದೆ ಇವು ಕರಗುವುದಿಲ್ಲ. ಹಾಗೆಯೇ ಕೆರೆಯನ್ನು ಸೇರುತ್ತದೆ.
- ಭಾರಿ ಮಳೆ ಆದ ಸಂದರ್ಭದಲ್ಲಿ ಅಪಾರ ಪ್ರಮಾಣದ ನೀರು ಹರಿದು ಬರುತ್ತದೆ. ಈ ರೀತಿ ವೇಗವಾಗಿ ಬರುವ ನೀರಿನಿಂದ ಕೆರೆಯ ನೀರು ಬಗ್ಗಡಗೊಳ್ಳುತ್ತದೆ. ರಾತ್ರಿ ಇಡೀ ಒಳಹರಿವಿನ ಪ್ರಮಾಣ ಹೆಚ್ಚಿದಂತೆ ಕೆರೆಯ ಅಡಿಯಲ್ಲಿ ಕೆಸರು ಮತ್ತು ಮಾಲಿನ್ಯದ ನೀರಿನ ಮಂಥನ ಆರಂಭವಾಗುತ್ತದೆ. ಇದು ನೊರೆ ಸೃಷ್ಟಿಯಾಗಲು ವೇದಿಕೆಯನ್ನು ಹದ ಮಾಡುತ್ತದೆ. ಕೆರೆಯ ಆಳದಲ್ಲಿ ಅಲ್ಪ ಪ್ರಮಾಣದ ನೊರೆ ಇರುತ್ತದೆ. ಮಳೆಯಿಂದಾಗಿ ಕೆರೆಯಲ್ಲಿ ಯಾವಾಗ ನೀರಿನ ಪ್ರಮಾಣ ಹೆಚ್ಚುತ್ತಾ ಹೋಗುತ್ತದೆಯೋ ಆಗ 25 ಅಡಿ ಎತ್ತರದಷ್ಟು ಗಾಳಿ ಗುಳ್ಳೆಗಳು ಹಾರುತ್ತವೆ. ಈ ಗಾಳಿಗುಳ್ಳೆಗಳು ನೊರೆಯನ್ನು ಸೃಷ್ಟಿಸುತ್ತದೆ.
- ಕೆಲವು ವಿಸರ್ಜಿತ ಘನವಸ್ತುಗಳಲ್ಲಿ ಬ್ಯಾಕ್ಟೀರಿಯಾಗಳೂ ಇರುತ್ತವೆ. ಇವು ಕೂಡ ನೊರೆ ಸೃಷ್ಟಿಯಾಲು ಕಾರಣವಾಗುತ್ತವೆ. ಈ ಅಂಶವನ್ನು ದೃಢಪಡಿಸಲು ಇನ್ನಷ್ಟು ಪ್ರಯೋಗಗಳು ನಡೆಯಬೇಕಾಗಿವೆ.

ಸುಸ್ಥಿರ ತಂತ್ರಜ್ಞಾನ ಕೇಂದ್ರದ ವಿಜ್ಞಾನಿಗಳಾದ ಚಾಣಕ್ಯ ಎಚ್.ಎನ್, ಲಕ್ಷ್ಮಿನಾರಾಯಣ ರಾವ್ ಮತ್ತು ಪಿಎಚ್.ಡಿ ವಿದ್ಯಾರ್ಥಿನಿ ರೇಷ್ಮಿ ದಾಸ್ ಈ ಅಧ್ಯಯನ ನಡೆಸಿದ್ದಾರೆ.

ಒಟ್ಟಾಗಿ ಬ್ರಾಹ್ಮಣರ ಸಂಖ್ಯೆ ಪರಿಗಣಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗವು ಸಲ್ಲಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ವರದಿಯಲ್ಲಿ ಬ್ರಾಹ್ಮಣ ಸಮುದಾಯದ ಎಲ್ಲ 44 ಉಪ ಜಾತಿಗಳ ಜನಸಂಖ್ಯೆಯನ್ನು ಒಟ್ಟಾಗಿ ಪರಿಗಣಿಸಬೇಕು ಎಂದು ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಎಸ್. ಸಚ್ಚಿದಾನಂದ ಮೂರ್ತಿ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬುಧವಾರ ಪತ್ರ ಬರೆದಿರುವ ಅವರು, 'ಜಾತಿ ಗಣತಿ ಸಂದರ್ಭದಲ್ಲಿ ಬ್ರಾಹ್ಮಣ ಸಮುದಾಯದ ಎಲ್ಲ ಉಪ ಜಾತಿಗಳ ಜನರು ಒಂದೇ ಕೋಡ್ ನಮೂದಿಸಿಲ್ಲ. ಸ್ಮಾರ್ತ , ಶ್ರೀ ವೈಷ್ಣವ, ಮಾಧ್ವ, ಹವ್ಯಕ, ಕೂಟ ಬ್ರಾಹ್ಮಣ ಹೀಗೆ ವಿವಿಧ ಉಪ ಜಾತಿಯವರು ಪ್ರತ್ಯೇಕ ಕೋಡ್ ನಮೂದಿಸಿದ್ದಾರೆ. ನಮ್ಮ ಸಮುದಾಯದ ಜನರು 44 ಪ್ರತ್ಯೇಕ ಕೋಡ್‌ಗಳನ್ನು ಉಲ್ಲೇಖಿಸಿದ್ದಾರೆ. ಈ ಎಲ್ಲವನ್ನೂ ಒಟ್ಟಾಗಿ ಬ್ರಾಹ್ಮಣರಿಗೆ ನೀಡಿದ್ದ ಕೋಡ್ ಸಂಖ್ಯೆ 200ರ ಅಡಿಯಲ್ಲಿ ಪರಿಗಣಿಸಬೇಕು' ಎಂದು ಆಗ್ರಹಿಸಿದ್ದಾರೆ.

ಕ್ಷಯ ರೋಗಿಗಳ ದತ್ತು ಪಡೆದ ಸಂಸದ

ಪ್ರಜಾವಾಣಿ ವಾರ್ತೆ



ಆಹಾರದ ಕಿಟ್‌ಗಳನ್ನು ರಾಮಲಿಂಗಾರೆಡ್ಡಿ ವಿತರಿಸಿದರು. ಲಹರ್ ಸಿಂಗ್ ಇದ್ದಾರೆ.

ಬೆಂಗಳೂರು: ಪ್ರಧಾನ ಮಂತ್ರಿ ಟಿಬಿ ಮುಕ್ತ ಭಾರತ ಅಭಿಯಾನದ ಭಾಗವಾದ 'ನಿ-ಕ್ಷಯ್ ಮಿತ್ರ ಯೋಜನೆ'ಯಡಿ ದತ್ತು ಪಡೆದ ಕ್ಷಯ ರೋಗಿಗಳಿಗೆ ನಗರದಲ್ಲಿ ಬುಧವಾರ ಉಚಿತವಾಗಿ ಪೌಷ್ಟಿಕ ಆಹಾರದ ಕಿಟ್‌ಗಳನ್ನು ವಿತರಿಸಲಾಯಿತು.

ಸಂಸದ ಲಹರ್ ಸಿಂಗ್ ಹಾಗೂ ಅವರ ಜೊತೆಗಾರರು ನಗರದಲ್ಲಿ ಒಟ್ಟು 1,400 ಕ್ಷಯ ರೋಗಿಗಳನ್ನು ದತ್ತು ಪಡೆದು, ಅಗತ್ಯ ಆಹಾರದ ಕಿಟ್‌ಗಳನ್ನು ಪೂರೈಸುತ್ತಿದ್ದಾರೆ. ಉದ್ಯಮಿ ಅನಿಲ್ ಅಗರ್ವಾಲ್ ಅವರು ನಗರದಲ್ಲಿ 300 ರೋಗಿಗಳನ್ನು ದತ್ತು ಪಡೆದರು.

ಕ್ಷಯ ರೋಗಿಗಳಿಗೆ ಪೌಷ್ಟಿಕ ಆಹಾರದ ಕಿಟ್ ವಿತರಿಸಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, 'ರಾಜ್ಯವನ್ನು 2025ರ ವೇಳೆಗೆ ಕ್ಷಯ ಮುಕ್ತಗೊಳಿಸಲು ಕಾರ್ಯಯೋಜನೆ ಹಾಕಿಕೊಳ್ಳಲಾಗಿದೆ. ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮದಡಿ ಈ ರೋಗ ತಡೆಗೆ ಕ್ರಮ ವಹಿಸಲಾಗಿದೆ. ಚುನಾಯಿತ ಜನಪ್ರತಿನಿಧಿಗಳು, ಸರ್ಕಾರಿ ಅಧಿಕಾರಿಗಳು, ಸರ್ಕಾರೇತರ ಸಂಸ್ಥೆಗಳು, ಸಂಘ–ಸಂಸ್ಥೆಗಳು, ಉದ್ಯಮಿಗಳು ಕ್ಷಯ ರೋಗಿಗಳನ್ನು ದತ್ತು ಪಡೆದು, ಪೂರಕ ನೆರವು ನೀಡಬೇಕು. ಈ ಕ್ರಮ ರೋಗದ ವಿರುದ್ಧ ಹೋರಾಡಲು ಸಹಕಾರಿ' ಎಂದು ಹೇಳಿದರು.

ಜಯನಗರದ ಕೆಎಂವೈಎಫ್ ಡಿ.ಆರ್.ರಂಕ ಡಯಾಲಿಸಿಸ್ ಸೆಂಟರ್‌ಗೆ ₹16.8 ಲಕ್ಷ ಮೊತ್ತದ 2 ಡಯಾಲಿಸಿಸ್ ಯಂತ್ರಗಳನ್ನು ಸಂಸದರ ನಿಧಿಯಿಂದ ನೀಡುವುದಾಗಿ ಘೋಷಿಸಿದ ಲಹರ್ ಸಿಂಗ್, 'ಬೆಂಗಳೂರಿನಲ್ಲಿ ವೈಯಕ್ತಿಕವಾಗಿ 500, ಸಮುದಾಯ ಹಾಗೂ ಸ್ನೇಹಿತರ ಜೊತೆಗೂಡಿ ಒಟ್ಟು 1,400 ಕ್ಷಯ ರೋಗಿಗಳನ್ನು ದತ್ತು ಪಡೆಯಲಾಗಿದೆ. ಕ್ಷಯ ರೋಗಿಗಳಿಗೆ ಪೌಷ್ಟಿಕ ಆಹಾರದ ನೆರವು ನೀಡುವ ಮೂಲಕ ಕ್ಷಯ ಮುಕ್ತ ಕಾರ್ಯಕ್ಕೆ ಸಾಮೂಹಿಕ ಬೆಂಬಲ ನೀಡಬೇಕು' ಎಂದರು.

'ಈ ರೋಗಕ್ಕೆ ಕನಿಷ್ಠ 6 ತಿಂಗಳು ಚಿಕಿತ್ಸೆ ನೀಡಿದರೆ ಸಂಪೂರ್ಣವಾಗಿ ಗುಣವಾಗುತ್ತದೆ' ಎಂದರು.

16ರಿಂದ ಗ್ರೀನ್ ವೆಹಿಕಲ್ ಎಕ್ಸ್‌ಪೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ಜೂನ್ 16ರಿಂದ 18ರವರೆಗೆ 4ನೇ ಆವೃತ್ತಿಯ ಗ್ರೀನ್ ವೆಹಿಕಲ್ ಎಕ್ಸ್‌ಪೊ ನಡೆಯಲಿದೆ ಎಂದು ಕರ್ನಾಟಕ ನವೀಕೃತ ಇಂಧನ ಉತ್ಪಾದಕರ ಸಂಘ ತಿಳಿಸಿದೆ.

ಕರ್ನಾಟಕ ಎಲೆಕ್ಟ್ರಿಕ್ ವಾಹನೋದ್ಯಮ ವಲಯದಲ್ಲಿ ಮಹತ್ವದ ಸಾಧನೆಯತ್ತ ದಾಪುಗಾಲಿಡುತ್ತಿದ್ದು, ಹಸಿರು ವಾಹನಗಳ ತಾಣವಾಗಿ ಹೊರ ಹೊಮ್ಮುತ್ತಿದೆ ಎಂದು ಸಂಘದ ಅಧ್ಯಕ್ಷ ಕೆ.ಆರ್. ಸುಧೀಂದ್ರ ಕುಮಾರ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜೂನ್ 16 ರಂದು ಈ ಎಕ್ಸ್‌ಪೊ ಅನ್ನು ಉದ್ಘಾಟಿಸಲಿದ್ದಾರೆ. ಇಂಧನ ಸಚಿವ ಕೆ.ಜೆ. ಜಾರ್ಜ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.



ಹಲಸೂರಿನಲ್ಲಿ ನಿರ್ಮಾಣವಾಗಿರುವ ರಾಮ್‌ರಾಜ್ ಕಾಟನ್ ಕಂಪನಿಯ ನೂತನ ಮಳಿಗೆಗೆ ಬುಧವಾರ ಚಾಲನೆ ದೊರೆಯಿತು. ಸೂರ್ಯ ಬಿಲ್ಡರ್ಸ್ ಆ್ಯಂಡ್ ಡೆವಲಪರ್ಸ್‌ನ ಪಾಲುದಾರ ಸಿ. ಕಿಶನ್ ಲಾಲ್ ಕೊಠಾರಿ ಹಾಗೂ ರಾಮ್‌ರಾಜ್‌ನ ಪ್ರತಿನಿಧಿಗಳು ಇದ್ದರು.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ವಿದ್ಯಾ ಪೋಷಕರ ಸಂಘದಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. 2023ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ 90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ, ಆರ್ಥಿಕವಾಗಿ ದುರ್ಬಲರಾದ ಒಕ್ಕಲಿಗ ಸಮುದಾಯದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಬೆಂಗಳೂರು ಉತ್ತರ ಶೈಕ್ಷಣಿಕ ಜಿಲ್ಲೆ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಯ ಅರ್ಹ ವಿದ್ಯಾರ್ಥಿಗಳು ಜೂನ್ 24ರೊಳಗೆ ಅರ್ಜಿ ಹಾಕಬಹುದು. ಮಾಹಿತಿಗೆ 9844430432, 9845048696ಗೆ ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

'ಯೂತ್‌-20 ಮಾನಸಿಕ ಆರೋಗ್ಯ ಯೋಗಕ್ಷೇಮ ಮತ್ತು ಕ್ರೀಡೆ' ಕುರಿತು ಸಮಾಲೋಚನೆ: ಅಧ್ಯಕ್ಷತೆ: ಡಾ. ಪ್ರತಿಮಾ ಮೂರ್ತಿ, ಅತಿಥಿಗಳು: ಡಾ. ಬಿ.ಎಸ್. ಪ್ರದೀಪ್, ಡಾ. ಲಕ್ಷ್ಮಿ ನಿಶಾಂತ ಜೆ., ಡಾ. ಜಯಂತ್ ಮಹಾದೇವನ್, ಡಾ. ಗೀತಾ ದೇಸಾಯಿ, ಡಾ. ಪೃಥ್ವಿರಾಜ್ ಆರ್., ಡಾ. ಪ್ರಿಯಾಂಕ ರೋಹಟಗಿ, ಡಾ. ಪ್ರಚೇತ್ ಆರ್., ಆಯೋಜನೆ ಮತ್ತು ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಬೆಳಿಗ್ಗೆ 10.30ರಿಂದ

ಹುತಾತ್ಮ ಮೈಲಾರ ಮಹಾದೇವ ಅವರ ಜನ್ಮ ದಿನಾಚರಣೆ: ಉದ್ಘಾಟನೆ: ಥಾವರಚಂದ್ ಗೆಹಲೋತ್, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಉಪಸ್ಥಿತಿ: ಜಗದೀಶ್ ಶೆಟ್ಟರ್, ಎ. ಮುರಿಗೆಪ್ಪ, ಮನು ಬಳಿಗಾರ, ಅತಿಥಿಗಳು: ಎಚ್.ಕೆ. ಪಾಟೀಲ, ಯು.ಬಿ. ಬಣಕಾರ್, ರಘುನಂದನ್ ಮೂರ್ತಿ, ಎಚ್.ಎಸ್. ನರೇಂದ್ರ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಹುತಾತ್ಮ ಮೈಲಾರ ಮಹಾದೇವ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಬೆಳಿಗ್ಗೆ 11

ನೃತ್ಯ ಚಿಕಿತ್ಸೆ ಕಾರ್ಯಾಗಾರ: ಅತಿಥಿ: ಸತ್ಯನಾರಾಯಣ ಎ.ವಿ., ಆಯೋಜನೆ: ಸೃಷ್ಟಿ ಇನ್‌ಸ್ಟಿಟ್ಯೂಟ್ ಆಫ್ ಡಾನ್ಸ್ ಥೆರಪಿ, ಸ್ಥಳ: ಲಿಡ್ಕರ್ ಭವನ, ವಸಂತನಗರ, ಸಂಜೆ 4.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಬಿಂದು ಶಂಕರ್, ಅತಿಥಿಗಳು: ಅಕ್ಷರ ಭಾರದ್ವಾಜ್, ಜ್ಯೋತಿ ಪಟ್ಟಾಭಿರಾಮ್, ರಾಘವೇಂದ್ರ ಜೆ. ಪ್ರಭಾತ್, ಆಯೋಜನೆ: ದಿ ಸ್ಟ್ರಕ್ಚರಲ್ ಸ್ಕೂಲ್ ಫೈನ್ ಆರ್ಟ್, ಸ್ಥಳ: ಎ.ಡಿ.ಎ ರಂಗಮಂದಿರ, ಸಂಜೆ 5.30



ಬಿಂದು ಶಂಕರ್

ಗೋ ಪೂಜಾ ಕಾರ್ಯಕ್ರಮ: ಆಯೋಜನೆ ಗೋ ಸೇವಾ ಗತಿ ವಿಧಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ರಾಜೀವ ಗಾಂಧಿ ವೃತ್ತ, ಶೇಷಾದ್ರಿಪುರ, ಸಂಜೆ 6

'ವರ್ತಮಾನದ ಕನ್ನಡದ ಸ್ಥಿತಿ–ಗತಿ ಯುವ ಜನತೆಯ ಪಾತ್ರ' ಕುರಿತು ಉಪನ್ಯಾಸ: ಆರ್. ವೆಂಕಟರಾಜು, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಪ್ರವಚನ ವಾಹಿನಿ: 'ಪ್ರಭುಲಿಂಗ ಲೀಲೆಯ ಸ್ವಾರಸ್ಯಕರ ಪ್ರಸಂಗಗಳು' ಕುರಿತು ಉಪನ್ಯಾಸ: ಸಿ.ಯು. ಮಂಜುನಾಥ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯ ಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ಹರಿದಾಸ ವೈಭವ': ಗಾಯನ: ಕೆ.ಎಂ. ಕೀರ್ತನ ಮತ್ತು ತಂಡ, ಆಯೋಜನೆ ಮತ್ತು ಸ್ಥಳ : ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

ಬಾಲ್ಯವಿವಾಹ: ಅಪರಾಧಿಗೆ ಐದು ವರ್ಷ ಜೈಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೈಂಗಿಕ ಉದ್ದೇಶದಿಂದ ಬಾಲಕಿಯನ್ನು ಅಪಹರಿಸಿ ಬಾಲ್ಯ ವಿವಾಹವಾಗಿದ್ದ ಅಪ ರಾಧಿಗೆ ನಗರದ ತ್ವರಿತ ವಿಶೇಷ ನ್ಯಾಯಾಲಯವು (ಎಫ್‌ಟಿಎಸ್‌ಸಿ –1) ಐದು ವರ್ಷ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ, ಬುಧವಾರ ಆದೇಶಿಸಿದೆ.

ನಾಗಮಂಗಲ ತಾಲ್ಲೂಕಿನ ಜಿ.ಬೊಮ್ಮೇನಹಳ್ಳಿ ಬಿ.ಸಿ. ಹರೀಶ್‌ಗೆ (25) ಐದು ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ₹25 ಸಾವಿರ ದಂಡ ವಿಧಿಸಿ ನ್ಯಾಯಾಧೀಶರಾದ ಕೆ.ಎನ್.ರೂಪಾ ಆದೇಶಿಸಿದ್ದಾರೆ.

ಏನಿದು ಪ್ರಕರಣ?: 2021ರ ಫೆಬ್ರುವರಿ 14ರಂದು ಅಪರಾಧಿ ಆಟೊದಲ್ಲಿ ಬಾಲಕಿಯ ಮನೆ ಬಳಿಗೆ ಬಂದು, ಅಪಹರಿಸಿಕೊಂಡು ಹೋಗಿದ್ದ. ಮರುದಿವಸ ಭೀಮನಹಳ್ಳಿ ಗ್ರಾಮದ ಅರೇತಿಮ್ಮಪ್ಪ ದೇವಸ್ಥಾನದಲ್ಲಿ ಬಾಲಕಿಯನ್ನು ಮದುವೆ ಆಗಿದ್ದ. ಪೋಷಕರು ದೂರು ನೀಡಿದ್ದರು. ಪೊಲೀಸರು ಪ್ರಕರಣ ದಾಖಸಿಕೊಂಡಿದ್ದರು. ತನಿಖಾಧಿಕಾರಿಗಳಾದ ಪ್ರವೀಣ್ ವಸೂರ್ ಹಾಗೂ ಎಚ್. ಡಿ.ಕುಲಕರ್ಣಿ ಅವರು ತನಿಖೆ ನಡೆಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು.

ಈ ಪ್ರಕರಣದಲ್ಲಿ 36 ಮಂದಿಯಿಂದ ಸಾಕ್ಷ್ಯಾಧಾರ ಸಂಗ್ರಹಿಸಿ, ಅದರಲ್ಲಿ 18 ಮಂದಿ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಲಾಗಿತ್ತು. ಸರ್ಕಾರಿ ವಕೀಲರಾಗಿ ಪಿ.ಕೃಷ್ಣವೇಣಿ ವಾದ ಮಂಡಿಸಿದ್ದರು.

ನೀರಿನಲ್ಲಿ ಕಾರು ಮುಳುಗಿ ಯುವತಿ ಮೃತಪಟ್ಟ ಪ್ರಕರಣದ ತನಿಖೆ

ಲೋಕಾಯುಕ್ತರ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇ 21ರಂದು ನಗರದಲ್ಲಿ ಭಾರಿ ಮಳೆ ಸುರಿದ ಸಂದರ್ಭದಲ್ಲಿ ಕಾರು ಮುಳುಗಿ ಭಾನುರೇಖಾ ಎಂಬ ಯುವತಿ ಸಾವಿಗೀಡಾದ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಆರಂಭಿಸಿರುವ ಲೋಕಾಯುಕ್ತ ಪೊಲೀಸರು, ದುರ್ಘಟನೆಗೆ ಕಾರಣವಾದ ಕೆ.ಆರ್. ವೃತ್ತದ ಅಂಡರ್‌ಪಾಸ್‌ಗೆ ಬುಧವಾರ ಭೇಟಿನೀಡಿ ಪರಿಶೀಲಿಸಿದರು.

ಘಟನೆಗೆ ಸಂಬಂಧಿಸಿದಂತೆ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಆರಂಭಿಸಿರುವ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ತನಿಖೆ ನಡೆಸುವಂತೆ ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಆದೇಶಿಸಿದ್ದರು. ಲೋಕಾಯುಕ್ತದ ಐಜಿಪಿ ಡಾ.ಸುಬ್ರಮಣ್ಯೇಶ್ವರ ರಾವ್ ನೇತೃತ್ವದ ಪೊಲೀಸ್ ಅಧಿಕಾರಿಗಳ ತಂಡ ಕೆ.ಆರ್. ವೃತ್ತದ ಅಂಡರ್‌ಪಾಸ್‌ಗೆ ಭೇಟಿ ನೀಡಿ ಮಾಹಿತಿ ಕಲೆಹಾಕಿತು.

ಲೋಕಾಯುಕ್ತದ ತಾಂತ್ರಿಕ ವಿಭಾಗದ ಎಂಜಿನಿಯರ್‌ಗಳೊಂದಿಗೆ ಘಟನಾ ಸ್ಥಳದಲ್ಲಿ ಪರಿಶೀಲನೆ ನಡೆಸಲಾಯಿತು. ಬಿಬಿಎಂಪಿಯ ಮಳೆ ನೀರು ಕಾಲುವೆ ವಿಭಾಗದ ಅಧಿಕಾರಿಗಳು ಹಾಗೂ ಎಂಜಿನಿಯರಿಂಗ್ ವಿಭಾಗದ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಿ ಅವರಿಂದ ವಿವರಣೆ ಪಡೆಯಲಾಯಿತು. ಟ್ಯಾಂಕರ್‌ನಲ್ಲಿ ನೀರು ತರಿಸಿ ಅಂಡರ್‌ಪಾಸ್‌ನ ಕಾಲುವೆಯಲ್ಲಿ ಹರಿಸಿ, ಪರೀಕ್ಷಿಸಲಾಯಿತು.



ಬೆಂಗಳೂರಿನ ಕೆ.ಆರ್‌. ವೃತ್ತದ ಅಂಡರ್‌ಪಾಸ್‌ನಲ್ಲಿ ಮಳೆ ನೀರಿನಲ್ಲಿ ಕಾರು ಸಿಲುಕಿ ಯುವತಿಯೊಬ್ಬರು ಮೃತಪಟ್ಟ ದುರ್ಘಟನೆ ಕುರಿತು ತನಿಖೆ ನಡೆಸುತ್ತಿರುವ ಲೋಕಾಯುಕ್ತದ ಐಜಿಪಿ ಡಾ.ಸುಬ್ರಮಣ್ಯೇಶ್ವರ ರಾವ್ ನೇತೃತ್ವದ ತಂಡ ಘಟನಾ ಸ್ಥಳಕ್ಕೆ ಬುಧವಾರ ಭೇಟಿ ನೀಡಿ ಪರಿಶೀಲನೆ ನಡೆಸಿತು – ಪ್ರಜಾವಾಣಿ ಚಿತ್ರ

‘ದುರ್ಘಟನೆ ಸಂಭವಿಸಿದ ದಿನ ಅಂಡರ್‌ಪಾಸ್‌ನಲ್ಲಿ ಬೃಹತ್ ಪ್ರಮಾಣದ ನೀರು ಸಂಗ್ರಹ ಆಗಲು ಕಾರಣ, ಮಳೆನೀರು ಅಂಡರ್‌ಪಾಸ್‌ನಲ್ಲಿ ನಿಲ್ಲದಂತೆ ಕೈಗೊಂಡಿದ್ದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಬಿಬಿಎಂಪಿ ಅಧಿಕಾರಿಗಳನ್ನು ಪ್ರಶ್ನಿಸಲಾಯಿತು. ಕೆ.ಆರ್. ವೃತ್ತದ ಅಂಡರ್‌ಪಾಸ್ ಮಾತ್ರವಲ್ಲ ನಗರದ ಯಾವುದೇ ಅಂಡರ್‌ಪಾಸ್‌ನಲ್ಲೂ ಸರಿಯಾದ ನಿರ್ವಹಣೆ ಇಲ್ಲ ಎಂಬ ಮಾಹಿತಿ ತನಿಖಾ ತಂಡಕ್ಕೆ ಲಭ್ಯವಾಗಿದೆ’ ಎಂದು ಮೂಲಗಳು ತಿಳಿಸಿವೆ.

ಅಂಡರ್‌ಪಾಸ್‌ಗಳಲ್ಲಿ ಮಳೆನೀರು ನಿಲ್ಲುವುದನ್ನು ತಡೆಯಲು ಕಾಲುವೆಗಳಲ್ಲಿ ಹೂಳು ತೆಗೆಯಬೇಕಿತ್ತು. ಅಂಡರ್‌ಪಾಸ್ ಮತ್ತು ಅವುಗಳಿಗೆ ಹೊಂದಿಕೊಂಡ ಕಾಲುವೆಗಳಲ್ಲಿ ಹೂಳು ತೆಗೆದಿಲ್ಲ ಎಂಬ ಮಾಹಿತಿ ತನಿಖಾ ತಂಡಕ್ಕೆ ಸಿಕ್ಕಿದೆ. ಮಳೆಗಾಲಕ್ಕೂ ಮೊದಲು ಸರಿಯಾದ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿಲ್ಲ ಎಂಬುದು ಪರಿಶೀಲನೆ ವೇಳೆ ಗೊತ್ತಾಗಿದೆ.

‘ಕೆ.ಆರ್. ವೃತ್ತದ ಅಂಡರ್‌ಪಾಸ್‌ನಲ್ಲಿ ದುರ್ಘಟನೆ ಸಂಭವಿಸಲು ಕಾರಣವಾದ ಅಂಶಗಳ ಕುರಿತು ತನಿಖೆ ನಡೆಸುತ್ತಿದ್ದೇವೆ. ಅದರ ಜತೆಯಲ್ಲೇ ಇತರ ಅಂಡರ್‌ಪಾಸ್‌ಗಳ ನಿರ್ವಹಣೆಯಲ್ಲಿನ ಲೋಪಗಳ ಬಗ್ಗೆಯೂ ಪರಿಶೀಲನೆ ನಡೆಸಲಾಗುವುದು. ಕರ್ತವ್ಯಲೋಪದ ಕುರಿತು ಬಿಬಿಎಂಪಿ ಹಿರಿಯ ಅಧಿಕಾರಿಗಳಿಂದ ವಿವರಣೆ ಪಡೆಯಲಾಗುವುದು’ ಎಂದು ತನಿಖಾ ತಂಡದ ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

‘ಅರ್ಚಕ ಉತ್ತರದಾಯಿತ್ವ ತಂದೆಯ ವಂಶದಿಂದ ಇರಬೇಕು’

ಬೆಂಗಳೂರು: ’ವಂಶಪಾರಂಪರ್ಯವಾಗಿ ಅರ್ಚಕರಾಗುವ ಉತ್ತರಾದಾಯಿತ್ವ ತಂದೆಯ ಕಡೆಯಿಂದ ಇರಬೇಕೇ ವಿನಾ ತಾಯಿ ಕಡೆಯಿಂದಲ್ಲ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಸಂಬಂಧ ನಗರದ ಕೆ. ಆರ್. ಪುರಂನ ಎಂ. ಎಸ್. ರವಿ ದೀಕ್ಷಿತ್ ಮತ್ತು ಎಂ. ಎಸ್. ವೆಂಕಟೇಶ್ ದೀಕ್ಷಿತ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎನ್. ಎಸ್. ಸಂಜಯ್ ಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾ ಮಾಡಿದೆ.

’ಅರ್ಜಿದಾರರ ಪೂರ್ವಜರು ಹಿಂದಿನ ಮೂರು ತಲೆಮಾರು ದೇವಸ್ಥಾನದಲ್ಲಿ ಅರ್ಚಕ ವೃತ್ತಿ ನಡೆಸಿಕೊಂಡು ಬಂದಿರುವುದನ್ನು ಸಾಬೀತುಪಡಿಸಲು ಯಾವುದೇ ದಾಖಲೆಗಳು ಇಲ್ಲ‘ ಎಂಬ ಧಾರ್ಮಿಕ ದತ್ತಿ ಇಲಾಖೆ ಆಯುಕ್ತರ ವಾದವನ್ನು ನ್ಯಾಯಪೀಠ ಮಾನ್ಯ ಮಾಡಿದೆ.

’ಮಹಾಬಲೇಶ್ವರ ಸ್ವಾಮಿ ದೇವಾಲಯದಲ್ಲಿ ನನ್ನ ತಾಯಿಯ ತಂದೆ ಅರ್ಚಕರಾಗಿದ್ದು, ಅವರ ನಿಧನದ ಬಳಿಕ ಬಳಿಕ ತಂದೆಯನ್ನು ಅರ್ಚಕರನ್ನಾಗಿ ನಿಯೋಜಿಸಲಾಗಿತ್ತು. ಈಗ ಅವರೂ ನಿಧನರಾಗಿರುವುದರಿಂದ ವಂಶಪಾರಂಪರ್ಯವಾಗಿ ನನ್ನನ್ನೇ ಅರ್ಚಕನನ್ನಾಗಿ ನಿಯೋಜಿಸಬೇಕು‘ ಎಂದು ಅರ್ಜಿದಾರರು ಕೋರಿದ್ದರು.



‘ಅರ್ಜಿದಾರರ ತಾಯಿಯ ತಂದೆ 1980ರ ಡಿಸೆಂಬರ್‌ನಲ್ಲಿ ಕೆ. ಆರ್. ಪುರಂ ತಹಶೀಲ್ದಾರ್‌ಗೆ ಪತ್ರ ಬರೆದು, ಅಳಿಯನಿಗೆ (ಅರ್ಜಿದಾರರ ತಂದೆ) ಪೂಜಾ ಕೈಂಕರ್ಯ ಮುಂದುವರಿಸಲು ಅನುಮತಿಸುವಂತೆ ಕೋರಿದ್ದರು. ತಾಯಿಯ ತಂದೆ ಅರ್ಚಕರಾಗಿದ್ದರು ಎಂಬ ಆಧಾರದಲ್ಲಿ ಅರ್ಜಿದಾರರು ಅರ್ಚಕನ ಹಕ್ಕು ಕೋರುತ್ತಿದ್ದಾರೆ. ವಂಶಪಾರಂಪರ್ಯದ ಭಾಗವಾಗಿ ಅವರು ಅರ್ಚಕರಾಗಿ ಮುಂದುವರಿಯಲು ಕೋರಲಾಗದು‘ ಎಂದು ನ್ಯಾಯಪೀಠ ಹೇಳಿದೆ.

ಕೋಮುದ್ವೇಷ ಬಿತ್ತುವ ಸಂದೇಶ ಪ್ರಕಟಿಸಿದರೆ ಕ್ರಮ; ಕಮಿಷನರ್

ಬೆಂಗಳೂರು: ‘ಸಾಮಾಜಿಕ ಮಾಧ್ಯಮಗಳಲ್ಲಿ ಕೋಮು ದ್ವೇಷಬಿತ್ತುವ ಸಂದೇಶಗಳನ್ನು ಪ್ರಕಟಿಸುವುದು ಅಥವಾ ಅದನ್ನು ಮತ್ತೊಬ್ಬರಿಗೆ ಹಂಚುವುದು ಪತ್ತೆಯಾದರೆ ಅವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ’ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಎಚ್ಚರಿಕೆ ನೀಡಿದರು.

ನಗರದಲ್ಲಿ ಬುಧವಾರ ಮಾತನಾಡಿದ ಅವರು, ‘ಕೋಮುದ್ವೇಷ ಪೋಸ್ಟ್‌ಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಾಕುವವರನ್ನು ಪತ್ತೆ ಹಚ್ಚಲು ಸಾಮಾಜಿಕ ಮಾಧ್ಯಮ ಸೇವಾ ಪೂರೈಕೆದಾರರು ಪೊಲೀಸರಿಗೆ ನೆರವು ನೀಡಲು ಒಪ್ಪಿದ್ದಾರೆ. ಪೋಸ್ಟ್ ಹಾಕಿದರೆ ತಕ್ಷಣವೇ ದುಷ್ಕರ್ಮಿಗಳನ್ನು ಬಂಧಿಸಲಾಗುವುದು’ ಎಂದು ಎಚ್ಚರಿಸಿದರು.

‘ನಗರದ ಕಾಲೇಜುಗಳಿಗೆ ಪೊಲೀಸರೇ ಭೇಟಿ ನೀಡಿ ಜಾಗೃತಿ ಮೂಡಿಸಲಿದ್ದಾರೆ. ಸೌಹಾರ್ದತೆ ಕಾಪಾಡುವಂತೆ ಮನವಿ ಮಾಡುತ್ತೇವೆ’ ಎಂದರು.

ವಿದೇಶಿ ಸಿಗರೇಟ್ ಜಪ್ತಿ

ಬೆಂಗಳೂರು: ನಗರದಲ್ಲಿ ಸಿಸಿಬಿ ಪೊಲೀಸರು ಬುಧವಾರ ಕಾರ್ಯಾಚರಣೆ ನಡೆಸಿ ₹3.75 ಲಕ್ಷ ಮೌಲ್ಯದ ಇ-ಸಿಗರೇಟು ಹಾಗೂ ವಿದೇಶಿ ಸಿಗರೇಟ್ ಅನ್ನು ಜಪ್ತಿ ಮಾಡಿ, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಆರೋಪಿಗಳು ಕೋರಮಂಗಲ ಪೊಲೀಸ್ ಠಾಣಾ ವ್ಯಾಪ್ತಿಯ ಮೇಘನಾ ಫುಡ್ ಬಳಿಯ ದಿ. ಸ್ಮೋಕ್ ಶಾಪ್‌ನಲ್ಲಿ ಇ- ಸಿಗರೇಟ್ ಮಾರಾಟ ಮಾಡುತ್ತಿದ್ದರು. ಅವರಿಂದ ₹3.75 ಲಕ್ಷ ಮೌಲ್ಯದ ಇ-ಸಿಗರೇಟ್ ಹಾಗೂ 11,900 ನಗದು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಬ್ಯಾಂಕ್‌ಗೆ ವಂಚನೆ: ₹100 ಕೋಟಿ ಮೌಲ್ಯದ ಆಸ್ತಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ವಂಚನೆ ಪ್ರಕರಣದಲ್ಲಿ ಭಾರತ್ ಇನ್ಫ್ರಾ ಎಕ್ಸ್‌ಪೋರ್ಟ್ಸ್ ಅಂಡ್ ಇಂಪೋರ್ಟ್ಸ್ ಲಿಮಿಟೆಡ್‌ನ ಬೆಂಗಳೂರು ಹಾಗೂ ದಾವಣಗೆರೆಯ ಕಚೇರಿಗಳಲ್ಲಿ ಸೋಮವಾರ ಶೋಧ ನಡೆಸಿರುವ ಜಾರಿ ನಿರ್ದೇಶನಾಲಯ (ಇ.ಡಿ), ₹ 100 ಕೋಟಿ ಮೌಲ್ಯದ ಸ್ಥಿರಾಸ್ತಿ ಗಳನ್ನು ಪತ್ತೆಮಾಡಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಬೆಂಗಳೂರು ನಗರ ಶಾಖೆಯಿಂದ ₹ 113.38 ಕೋಟಿ ಸಾಲ ಪಡೆದು ವಂಚಿಸಿರುವ ಆರೋಪ ಭಾರತ್ ಇನ್ಫ್ರಾ ಎಕ್ಸ್‌ಪೋರ್ಟ್ಸ್ ಅಂಡ್ ಇಂಪೋರ್ಟ್ಸ್ ಲಿಮಿಟೆಡ್ ಮೇಲಿದೆ. 2017ರ ಜನವರಿಯಿಂದಲೂ ಈ ಸಾಲ ಮರುಪಾವತಿ ಆಗಿಲ್ಲ. ಈ ಸಂಬಂಧ ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ)ಯಡಿ ಪ್ರಕರಣ ದಾಖಲಿಸಿಕೊಂಡಿರುವ ಇ.ಡಿ, ತನಿಖೆ ನಡೆಸುತ್ತಿದೆ. ಬೆಂಗಳೂರು ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ಈ ಕಂಪನಿಗೆ ಸಂಬಂಧಿಸಿದ ಏಳು ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ ಎಂದು ಇ.ಡಿ ನಿರ್ದೇಶಕರು ತಿಳಿಸಿದ್ದಾರೆ.

ನಕಲಿ ದಾಖಲೆ ಸಲ್ಲಿಸಿ ಭಾರತ್ ಇನ್ಫ್ರಾ ಎಕ್ಸ್‌ಪೋರ್ಟ್ಸ್ ಅಂಡ್ ಇಂಪೋರ್ಟ್ಸ್ ಲಿಮಿಟೆಡ್ ಸಾಲ ಪಡೆದಿರುವುದು ತನಿಖೆಯಲ್ಲಿ ಪತ್ತೆಯಾಗಿದೆ. ಗುತ್ತಿಗೆ ಒಪ್ಪಂದ, ಸೂಕ್ತ ದಾಖಲೆಗಳಿಲ್ಲದೇ ಹಣದ ವರ್ಗಾವಣೆಯೂ ನಡೆದಿದೆ ಎಂದು ತನಿಖಾ ಸಂಸ್ಥೆ ಹೇಳಿದೆ.

‘ಕಂಪನಿಗೆ ಬ್ಯಾಂಕ್ ನೀಡಿದ್ದ ಸಾಲದಲ್ಲಿ ₹ 101.18 ಕೋಟಿಯನ್ನು ಸಂಶಯಾಸ್ಪದ ರೀತಿಯಲ್ಲಿ ಇತರ ಖಾತೆಗಳಿಗೆ ವರ್ಗಾವಣೆ ಮಾಡಿರುವುದು ಪತ್ತೆಯಾಗಿದೆ. ಆರಾಧ್ಯ ವೈರ್ ರೋಪ್ಸ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯ ಖಾತೆಗೆ ಆರೋಪಿತ ಕಂಪನಿಯ ಸಾಲದ ಖಾತೆಯಿಂದ ಹತ್ತು ಬಾರಿ ಹಣ ವರ್ಗಾವಣೆ ಮಾಡಲಾಗಿತ್ತು. ನಕಲಿ ವಾಹನ ನೋಂದಣಿ ಸಂಖ್ಯೆಯ ಆಧಾರದಲ್ಲಿ ಭಾರತ್ ಇನ್ಫ್ರಾ ಎಕ್ಸ್‌ಪೋರ್ಟ್ಸ್ ಅಂಡ್ ಇಂಪೋರ್ಟ್ಸ್ ಲಿಮಿಟೆಡ್ ಮತ್ತು ಆರಾಧ್ಯ ವೈರ್ ರೋಪ್ಸ್ ಪ್ರೈವೇಟ್ ಲಿಮಿಟೆಡ್‌ಗಳಿಗೆ ಬಿಲ್ ನೀಡಿದ್ದ ಸಾಗಣೆ ಗುತ್ತಿಗೆದಾರರೊಬ್ಬರಿಗೆ ಹಲವು ಬಾರಿ ಹಣ ವರ್ಗಾವಣೆ ಮಾಡಲಾಗಿದೆ’ ಎಂದು ಇ.ಡಿ ತಿಳಿಸಿದೆ.

ಕಂಪನಿ ₹ 100 ಕೋಟಿ ಮೌಲ್ಯದ ಸ್ಥಿರಾಸ್ತಿ ಹೊಂದಿರುವುದು ಪತ್ತೆಯಾಗಿದೆ. ₹ 14.5 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ. ಅಕ್ರಮಕ್ಕೆ ಸಂಬಂಧಿಸಿದ ದಾಖಲೆ, ಡಿಜಿಟಲ್ ಸಾಕ್ಷ್ಯಗಳು ಮತ್ತು ಬ್ಯಾಂಕ್ ಖಾತೆಗೆ ಸಂಬಂಧಿಸಿದ ಸಾಕ್ಷ್ಯಗಳನ್ನು ತನಿಖಾ ತಂಡ ವಶಪಡಿಸಿಕೊಂಡಿದೆ ಎಂದು ಮಾಹಿತಿ ನೀಡಿದ್ದಾರೆ.

106 ಮಂದಿ ಬಂಧನ; ₹2.60 ಕೋಟಿ ಸ್ವತ್ತು ಜಪ್ತಿ

ಅಪರಾಧ ಸುದ್ದಿ

ಬೆಂಗಳೂರು: ಕೇಂದ್ರ ವಿಭಾಗ ವ್ಯಾಪ್ತಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ವಿವಿಧ ಪ್ರಕರಣಗಳಲ್ಲಿ ಭಾಗಿಯಾದ 106 ಮಂದಿ ಆರೋಪಿಗಳನ್ನು ಬಂಧಿಸಿ, ₹ 2.69 ಕೋಟಿಯ ಸ್ವತ್ತುಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

ಕೆಲವು ದಿನಗಳಿಂದ ನಡೆದ ಕಾರ್ಯಾಚರಣೆಯುಲ್ಲಿ ಒಟ್ಟು 103 ಪ್ರಕರಣ ಪತ್ತೆ ಹಚ್ಚಲಾಗಿದೆ ಎಂದು ನಗರದ ಪೊಲೀಸ್ ಕಮಿಷನರ್ ಬಿ.ದಯಾನಂದ್ ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಹೇಳಿದರು.

ಶೇಷಾದ್ರಿಪುರಂ, ವೈಯ್ಯಾಲಿಕಾವಲ್, ಹಲಸೂರುಗೇಟ್, ಅಶೋಕ ನಗರ, ವಿವೇಕನಗರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದಿದ್ದ ಕಾರ್ಯಾಚರಣೆಯಲ್ಲಿ, ಚಿನ್ನಾಭರಣ ಕಳವು ಮಾಡಿದ್ದ 14 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ. 19 ಪ್ರಕರಣಗಳಲ್ಲಿ ₹ 1.5 ಕೋಟಿ ಮೌಲ್ಯದ 2 ಕೆ.ಜಿ 110 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ.

ಹಲಸೂರು ಗೇಟ್, ವಿವೇಕನಗರ ಪೊಲೀಸ್ ಠಾಣೆ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಬೆಳ್ಳಿ ಸಾಮಗ್ರಿ ಕಳವು ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರಿಂದ ₹63.19 ಲಕ್ಷದ 105 ಕೆ.ಜಿ. ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ ಎಂದು ತಿಳಿಸಿದರು.

ಹೈಗ್ರೌಂಡ್ಸ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಾರುಗಳನ್ನು ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ₹18 ಲಕ್ಷದ ಕಾರುಗಳನ್ನು ಜಪ್ತಿ ಮಾಡಲಾಗಿದೆ. ಬೈಕ್ ಕಳವು ಮಾಡುತ್ತಿದ್ದ ಮೂವರು ಆರೋಪಿಗಳನ್ನು ಶೇಷಾದ್ರಿಪುರಂ, ಅಶೋಕನಗರ ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ ₹3.30 ಲಕ್ಷದ ಐದು ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಹೇಳಿದರು.

ಮನೆಗಳಿಗೆ ನುಗ್ಗಿ ನಗದು ಕಳವು ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಿ, ₹2.12 ಲಕ್ಷ ನಗದು ಜಪ್ತಿ ಮಾಡಲಾಗಿದೆ. ವಿವೇಕನಗರ ಪೊಲೀಸರು, ಮೊಬೈಲ್ ಕಳವು ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬಂಧಿಸಿ 113 ಮೊಬೈಲ್ ಜಪ್ತಿ ಮಾಡಿದ್ದಾರೆ ಎಂದು ತಿಳಿಸಿದರು.

ಸಜೀವ ಗುಂಡುಗಳು ಪತ್ತೆ: ಕಬ್ಬನ್‌ಪಾರ್ಕ್ ಪೊಲೀಸರು ಮೂರು ಪಿಸ್ತೂಲ್ ಹಾಗೂ 99 ಸಜೀವ ಗುಂಡುಗಳನ್ನು ಜಪ್ತಿ ಮಾಡಿದ್ದಾರೆ. ಇದರ ಮೌಲ್ಯ ₹40 ಲಕ್ಷ ಎಂದು ಅಂದಾಜಿಸಲಾಗಿದೆ.

ಪಿಸ್ತೂಲ್ ಹೊಂದಿದ್ದ ಆರೋಪಿ ಕೇರಳ ಮೂಲದವನು. ಆತನನ್ನು ಕ್ವೀನ್ಸ್ ರಸ್ತೆಯ ಬಸ್ ನಿಲ್ದಾಣದ ಬಳಿ ಬಂಧಿಸಲಾಗಿದೆ. ಬಿಎಂಡಬ್ಲ್ಯು ಕಾರು ವಶಕ್ಕೆ ಪಡೆಯಲಾಗಿದೆ.

ನಾಗಾಲ್ಯಾಂಡ್‌ನಿಂದ ಈ ಪಿಸ್ತೂಲ್ ತಂದು ನಗರದಲ್ಲಿ ಮಾರಲು ಯತ್ನಿಸಿದ್ದ ಎಂದು ಪೊಲೀಸರು ಹೇಳಿದರು. ಈತ ಮಾದಕ ಪದಾರ್ಥಗಳ ಮಾರಾಟದಲ್ಲೂ ಭಾಗಿಯಾಗಿರುವ ಶಂಕೆಯಿದೆ ಎಂದು ಪೊಲೀಸರು ಹೇಳಿದರು.

ಸುಳ್ಳು ಪ್ರಕರಣ: ಇಬ್ಬರು ಇನ್‌ಸ್ಪೆಕ್ಟರ್ ಅಮಾನತು

ಬೆಂಗಳೂರು: ವೈದ್ಯರೊಬ್ಬರ ವಿರುದ್ಧ ‘ಮಾದಕ ವಸ್ತು ಮತ್ತು ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ’ (ಎನ್‌ಡಿಪಿಎಸ್) ಅಡಿ ಸುಳ್ಳು ಪ್ರಕರಣ ದಾಖಲಿಸಿ, ಅವರ ವಿರುದ್ಧ ಆರೋಪ ಪಟ್ಟಿಯನ್ನೂ ಸಲ್ಲಿಸಿ ಕಾನೂನು ದುರ್ಬಳಕೆ ಮಾಡಿದ್ದ ಆರೋಪದಡಿ ಇಬ್ಬರು ಇನ್‌ಸ್ಪೆಕ್ಟರ್‌ಗಳನ್ನು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಅವರು ಅಮಾನತು ಮಾಡಿದ್ದಾರೆ.

ಜ್ಞಾನಭಾರತಿ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಮಂಜುನಾಥ್ ಹಾಗೂ ಇದೇ ಠಾಣೆಯಲ್ಲಿ ಈ ಹಿಂದೆ ಕರ್ತವ್ಯ ನಿರ್ವಹಿಸಿದ್ದ ಇನ್‌ಸ್ಪೆಕ್ಟರ್ ಲಕ್ಷ್ಮಣ್ ನಾಯಕ್ ಅವರನ್ನು ಅಮಾನತು ಮಾಡಲಾಗಿದೆ. ಲಕ್ಷ್ಮಣ ನಾಯಕ್ ಅವರು ಪ್ರಸ್ತುತ ದೇವನಹಳ್ಳಿ ಠಾಣೆ ಇನ್‌ಸ್ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾರೆ.

2022ರಲ್ಲಿ ವೈದ್ಯರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಅಡಿ ಲಕ್ಷ್ಮಣ್ ನಾಯಕ್ ಎಫ್‌ಐಆರ್ ದಾಖಲಿಸಿದ್ದರು. ಲಕ್ಷ್ಮಣ್ ನಾಯಕ್ ವರ್ಗಾವಣೆಯಾದ ಮೇಲೆ ಅದೇ ಠಾಣೆಗೆ ಮಂಜುನಾಥ್ ವರ್ಗಾವಣೆಗೊಂಡು ಬಂದಿದ್ದರು. ಮಂಜುನಾಥ್ ಅವರು ವೈದ್ಯರ ವಿರುದ್ಧ ಆರೋಪಪಟ್ಟಿ ಸಲ್ಲಿಸಿದ್ದರು.

ಸವಾರನ ವಿರುದ್ಧ ಎಫ್‌ಐಆರ್

ಬೆಂಗಳೂರು: ಸಂಚಾರ ಪೊಲೀಸ್ ಠಾಣೆಯ ಸಿಬ್ಬಂದಿಯೊಬ್ಬರ ಕರ್ತವ್ಯಕ್ಕೆ ಅಡ್ಡಿಪಡಿಸಿ ನಿಂದಿಸಿದ ಆರೋಪದಡಿ ಕಿರಣ್ ಎಂಬಾತನ ವಿರುದ್ಧ ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಠಾಣೆಯ ಹೆಡ್‌ಕಾನ್‌ಸ್ಟೆಬಲ್ ಎ. ಗಿರಿಧರ್ ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ.

ಕನಕಪುರ ಮುಖ್ಯರಸ್ತೆಯಲ್ಲಿ ಗಿರಿಧರ್ ಕರ್ತವ್ಯ ನಿರ್ವಹಿಸುತ್ತಿದ್ದರು. ಅದೇ ವೇಳೆಯಲ್ಲಿ ಹೆಲ್ಮೆಟ್ ಧರಿಸದೆ ಬೈಕ್‌ನಲ್ಲಿ ಬರುತ್ತಿದ್ದ ಕಿರಣ್‌ನನ್ನು ತಡೆದು ಫೋಟೊ ತೆಗೆಯಲು ಮುಂದಾಗಿದ್ದಾರೆ. ಆಗ ಕಾನ್‌ಸ್ಟೆಬಲ್‌ನನ್ನು ನಿಂದಿಸಿ, ಸಮವಸ್ತ್ರದ ಕೊರಳಪಟ್ಟಿ ಹಿಡಿದು ಎಳೆದಾಡಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾನೆ. ಪ್ರಾಣ ಬೆದರಿಕೆ ಹಾಕಿದ್ದಾನೆ ಎಂದು ಎಫ್‌ಐಆರ್‌ನಲ್ಲಿದೆ.

CONNECT ಕ್ಲಾಸಿಫೈಡ್ಸ್





ಕೋಣನಕುಂಟೆ ರಸ್ತೆಯ ಆರ್‌ಎಂಎಸ್ ಇಂಟರ್‌ನ್ಯಾಷನಲ್ ಸ್ಕೂಲ್ ಬಳಿ ರಸ್ತೆ ಉಬ್ಬಿಗೆ ಗುರುತು ಇಲ್ಲದಿರುವುದರಿಂದ ವಾಹನ ಸವಾರರು ಸಮಸ್ಯೆ ಎದುರಿಸಿದರು (ಎಡಚಿತ್ರ) ಕನಕಪುರ ರಸ್ತೆಯಲ್ಲಿ (ಕೋಣನಕುಂಟೆ ಸಮೀಪ) ಬೀದಿ ದೀಪಗಳು ಬೆಳಗದ ಕಾರಣ ರಸ್ತೆ ಉಬ್ಬುಗಳು ಗೋಚರಿಸದೆ ವಾಹನ ಸವಾರರು ಪರದಾಡುತ್ತಿದ್ದಾರೆ

–ಪ್ರಜಾವಾಣಿ ಚಿತ್ರಗಳು/ ಕಿಶೋರ್ ಕುಮಾರ್ ಬೋಳಾರ್

ಕನಕಪುರ ರಸ್ತೆಯಲ್ಲಿ ವಾಹನ ಸವಾರರಿಗೆ ಸಮಸ್ಯೆ • ರಾತ್ರಿ ವೇಳೆ ಸಂಚಾರ ದುಸ್ತರ • ಹೆಚ್ಚುತ್ತಿರುವ ಅಪಘಾತ

ಅವೈಜ್ಞಾನಿಕ ರಸ್ತೆ ಉಬ್ಬು, ಬೆಳಗದ ಬೀದಿ ದೀಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಕಪುರ ರಸ್ತೆಯಲ್ಲಿ ಅವೈಜ್ಞಾನಿಕ ರಸ್ತೆ ಉಬ್ಬುಗಳು (ಹಂಪ್ಸ್) ರಸ್ತೆ ಅಪಘಾತಕ್ಕೆ ಕಾರಣವಾದರೆ, ಕೆಟ್ಟುಹೋದ ಬೀದಿ ದೀಪಗಳು ಸುಗಮ ಸಂಚಾರಕ್ಕೆ ಅಡ್ಡಿಪಡಿಸುತ್ತಿವೆ.

ಕೋಣನಕುಂಟೆ ವೃತ್ತದಿಂದ ಬನಶಂಕರಿವರೆಗೂ ವೇಗ ತಡೆಗೆ ಹಲವು ರಸ್ತೆ ಉಬ್ಬುಗಳನ್ನು ನಿರ್ಮಿಸಲಾಗಿದೆ. ಆದರೆ, ಅವುಗಳ ಮೇಲೆ ಕಪ್ಪು, ಬಿಳಿ ಹಾಗೂ ಕತ್ತಲಿನಲ್ಲಿ ಸ್ವಯಂ ಪ್ರತಿಫಲನ-ಗೊಳ್ಳುವ ಪಟ್ಟಿ ಇಲ್ಲ. 40 ಮೀಟರ್‌ಗೂ ಮೊದಲೇ ರಸ್ತೆ ಉಬ್ಬು ಇರುವ ಬಗ್ಗೆ ಎಚ್ಚರಿಕೆಯ ಫಲಕವನ್ನೂ ರಸ್ತೆ ಪಕ್ಕದಲ್ಲಿ ಅಳವಡಿಸಿಲ್ಲ. ಇದರಿಂದಾಗಿ ರಾತ್ರಿಯ ವೇಳೆ ಈ ರಸ್ತೆಯಲ್ಲಿ ಅಪಘಾತಗಳು ಸಂಭವಿಸುತ್ತಿವೆ. ಆರ್‌ಎಂಎಸ್ ಇಂಟರ್ ನ್ಯಾಷನಲ್ ಸ್ಕೂಲ್ ಎದುರು ರಾತ್ರಿ ಅವಧಿಯಲ್ಲಿ ಹೆಚ್ಚಾಗಿ ರಸ್ತೆ ಅಪಘಾತಗಳಾಗುತ್ತಿವೆ.

ಕನಕಪುರ ರಸ್ತೆಯು ನಗರದ ಕೋಣನಕುಂಟೆ, ಜೆಪಿ ನಗರ, ಕುಮಾರಸ್ವಾಮಿ ಲೇಔಟ್, ಬನಶಂಕರಿ, ತಲಘಟ್ಟಪುರ, ಅಂಜನಾಪುರ ಸೇರಿ ವಿವಿಧ ಪ್ರದೇಶಗಳಿಗೆ ಸಂಪರ್ಕ ಸಾಧಿಸಲಿದೆ. ಫೋರಂ ಸೇರಿ ವಿವಿಧ ಮಾಲ್ ಹಾಗೂ ಮಳಿಗೆಗಳು ಈ ರಸ್ತೆಗೆ ಹೊಂದಿಕೊಂಡು ತಲೆಯೆತ್ತಿವೆ. ವಿವಿಧ ಪ್ರತಿಷ್ಠಿತ ಸಂಸ್ಥೆಗಳ ಅಪಾರ್ಟ್‌ಮೆಂಟ್ ಸಮುಚ್ಚಯಗಳೂ ಇವೆ. ಇದರಿಂದಾಗಿ ಈ ರಸ್ತೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ವಾಹನ ಸಂಚಾರ ಹೆಚ್ಚಿದೆ. ವಾರಾಂತ್ಯದಲ್ಲಿ ವಾಹನ ದಟ್ಟಣೆ ಉಂಟಾಗುತ್ತಿದೆ. ಕೋಣನಕುಂಟೆ ಸೇರಿ ವಿವಿಧೆಡೆ ಬೀದಿ ದೀಪಗಳು ಕೆಟ್ಟು ಹಲವು ದಿನಗಳಾದರೂ ಸರಿಪಡಿಸದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.



ಕನಕಪುರ ರಸ್ತೆಯ ಕೋಣನಕುಂಟೆ ವೃತ್ತದ ಬಳಿ ಬೀದಿ ದೀಪಗಳು ರಾತ್ರಿಯ ವೇಳೆ ಬೆಳಗುತ್ತಿಲ್ಲ

ಕಾರ್ಯಾಚರಣೆ ಮಾಡದ ಸಿಗ್ನಲ್: ಆರ್‌ಎಂಎಸ್ ಇಂಟರ್‌ನ್ಯಾಷನಲ್ ಸ್ಕೂಲ್ ಎದುರು ಚುನಾವಣೆ ಪೂರ್ವವೇ ಪಾದಚಾರಿಗಳಿಗಾಗಿ ಪ್ರತ್ಯೇಕ ಸಿಗ್ನಲ್ ಅಳವಡಿಕೆ ಮಾಡಲಾಗಿತ್ತು. ಈ ವ್ಯವಸ್ಥೆ ವಿದೇಶದಲ್ಲಿದೆ. ರಸ್ತೆ ದಾಟುವವರು ದೀಪದ ಬಟನ್ ಒತ್ತಿ, ಸಾಗಬೇಕು. ಆದರೆ, ಈವರೆಗೂ ಆ ದೀಪಗಳು ಕಾರ್ಯಾಚರಣೆ ಪ್ರಾರಂಭಿಸಿಲ್ಲ. ಅಲ್ಲಿನ ಶಾಲೆ-ಕಾಲೇಜಿನಲ್ಲಿ ಸುಮಾರು 2 ಸಾವಿರ ವಿದ್ಯಾರ್ಥಿಗಳಿದ್ದಾರೆ. ಶಾಲಾ ಮಕ್ಕಳು ಹಾಗೂ ಅವರ ಪಾಲಕರು, ಪಾದಚಾರಿಗಳು ಭಯದಲ್ಲಿಯೇ ರಸ್ತೆ ದಾಟಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಅಲ್ಲಿಯೇ ರಸ್ತೆಯ ಇನ್ನೊಂದು ಕಡೆಯಿಂದ ತೆರಳುವ ವಾಹನಗಳಿಗೆ ತಿರುವು ಪಡೆಯಲು ಅವಕಾಶ ನೀಡಲಾಗಿದೆ. ಅಲ್ಲಿ ಉಬ್ಬು ಅಳವಡಿಸಿಲ್ಲ. ಇದರಿಂದ ಯಲಚೇನಹಳ್ಳಿ ಕಡೆಯಿಂದ ಬರುವವರು ವೇಗವಾಗಿ ಬಂದು, ತಿರುವು ಪಡೆಯುತ್ತಿದ್ದಾರೆ. ಇದರಿಂದಲೂ ಅಪಘಾತಗಳು ಸಂಭವಿಸುತ್ತಿವೆ.

‘ಅವೈಜ್ಞಾನಿಕ ರಸ್ತೆ ಉಬ್ಬುಗಳಿಂದ ಸಂಚಾರ ದುಸ್ತರವಾಗಿದೆ. ರಾತ್ರಿ ವೇಳೆ ವೇಗವಾಗಿ ವಾಹನಗಳು ಸಂಚರಿಸುತ್ತವೆ. ಬೀದಿ ದೀಪಗಳು ಸಹ ಸಮರ್ಪಕವಾಗಿ ಬೆಳಗುತ್ತಿಲ್ಲ. ಇದರಿಂದ ರಸ್ತೆ ಉಬ್ಬುಗಳು ಗೋಚರಿಸದೆ, ಪ್ರತಿ ವಾರ ದ್ವಿಚಕ್ರ ವಾಹನಗಳು ರಸ್ತೆ ಅಪಘಾತಕ್ಕೆ ಒಳಗಾಗುತ್ತಿವೆ’ ಎಂದು ಮಳಿಗೆಯೊಂದರ ರಕ್ಷಣಾ ಸಿಬ್ಬಂದಿ ತಿಳಿಸಿದರು.

‘ರಸ್ತೆಯುದ್ದಕ್ಕೂ ಉಬ್ಬುಗಳನ್ನು ನಿರ್ಮಿಸಲಾಗಿದೆ. ಇದರಿಂದ ಸಂಚಾರ ಕಷ್ಟವಾಗುತ್ತಿದೆ. ರಸ್ತೆ ತಿರುವು ಪಡೆಯುವಾಗ ವೇಗ ಕಡಿತಗೊಳಿಸಲು ಉಬ್ಬುಗಳು ಅಗತ್ಯ. ಆದರೆ, ಅಂತಹ ಕಡೆ ಉಬ್ಬುಗಳನ್ನು ಅಳವಡಿಸಿಲ್ಲ’ ಎಂದು ವಿಜಯನಗರದ ಪಳನಿ ಬೇಸರ ವ್ಯಕ್ತಪಡಿಸಿದರು.

ಮಾನದಂಡ ಉಲ್ಲಂಘನೆ?

ಇಂಡಿಯನ್ ರೋಡ್ ಕಾಂಗ್ರೆಸ್ (ಐಆರ್‌ಸಿ) ನಿಗದಿಪಡಿಸಿದ ಮಾನದಂಡಗಳ ಪ್ರಕಾರ ರಸ್ತೆ ಉಬ್ಬುಗಳನ್ನು ನಿರ್ಮಿಸಬೇಕಾಗುತ್ತದೆ. ಉಬ್ಬುಗಳು 17 ಮೀಟರ್ ವ್ಯಾಸ, 3.7 ಮೀಟರ್ ಉದ್ದ, 0.10 ಮೀಟರ್ ಎತ್ತರ ಹಾಗೂ ವಾಹನಗಳ ಚಕ್ರಗಳ ಅಗಲಕ್ಕಿಂತ ಹೆಚ್ಚಿಗೆ ಇರಬೇಕು. ಈ ಉಬ್ಬುಗಳ ಮೇಲೆ ಕಪ್ಪು, ಬಿಳಿ ಹಾಗೂ ಕತ್ತಲಿನಲ್ಲಿ ಸ್ವಯಂ ಪ್ರತಿಫಲನಗೊಳ್ಳುವ ವರ್ಣ ಬಳಸಿ ಪಟ್ಟಿ ಬಳಿದಿರಬೇಕು. ರಾತ್ರಿಯಲ್ಲಿ ಸ್ಪಷ್ಟವಾಗಿ ಕಾಣಿಸುವ ಸಲುವಾಗಿ ಕ್ಯಾಟ್ ಐಗಳು ಇರಬೇಕು. 40 ಮೀಟರ್ ಮೊದಲೇ ಮುಂದೆ ರಸ್ತೆ ಉಬ್ಬು ಇದೆ ಎಂಬ ಎಚ್ಚರಿಕೆಯ ಫಲಕ ರಸ್ತೆ ಬದಿಯಲ್ಲಿ ಇರಬೇಕು.

ಐಆರ್‌ಸಿ ನಿಗದಿಪಡಿಸಿದ ಮಾನದಂಡದ ಪ್ರಕಾರ, ಚಿಕ್ಕ ರಸ್ತೆಗಳಲ್ಲಿ, ಪರಸ್ಪರ ಛೇದಿಸುವ ಚಿಕ್ಕ ರಸ್ತೆಗಳಲ್ಲಿ, ವಿರಳ ಸಂಚಾರದ ರಸ್ತೆಗಳಲ್ಲಿ, ಪರಸ್ಪರ ಛೇದಿಸಿ ಮುಖ್ಯರಸ್ತೆಗೆ ವಿಲೀನವಾಗುವ ರಸ್ತೆಗಳಲ್ಲಿ, ಜನವಸತಿ, ಆಸ್ಪತ್ರೆ ಹಾಗೂ ಶೈಕ್ಷಣಿಕ ಸಂಸ್ಥೆಗಳ ಪ್ರದೇಶಗಳಲ್ಲಿ, ವೇಗದಿಂದ ಅಪಘಾತ ಸಂಭವಿಸಬಹು-ದಾದ ಪ್ರದೇಶಗಳಲ್ಲಿ, ಚಿಕ್ಕ ಹಾಗೂ ಹಳೆಯ ಸೇತುವೆಗೆ ಸಂಪರ್ಕ ಹೊಂದುವ ರಸ್ತೆಗಳಲ್ಲಿ, ರೈಲ್ವೆ ಲೆವಲ್ ಕ್ರಾಸಿಂಗ್ ಹತ್ತಿರ, ತೀವ್ರ ತಿರುವು ಇರುವ, ಮುಂದಿನ ರಸ್ತೆ ಸರಿಯಾಗಿ ಕಾಣಿಸದಿರುವ ರಸ್ತೆಗಳಲ್ಲಿ ಹಾಗೂ ಗಂಟೆಗೆ 25 ಕಿ.ಮೀ. ವೇಗವಾಗಿ ಚಲಿಸಬಹುದಾದ ರಸ್ತೆಗಳಲ್ಲಿ ಮಾತ್ರವೇ ಉಬ್ಬುಗಳನ್ನು ನಿರ್ಮಿಸಬಹುದು. ಆದರೆ, ಈ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ಸಾರ್ವಜನಿಕರು ದೂರಿದರು.



ವಾಹನಗಳು ವೇಗವಾಗಿ ಬರುವುದರಿಂದ ಮಕ್ಕಳೊಂದಿಗೆ ರಸ್ತೆ ದಾಟುವುದು ಕಷ್ಟವಾಗಿದೆ. ವಾಹನ ಸವಾರರಿಗೆ ರಸ್ತೆ ಉಬ್ಬುಗಳು ಗೋಚರಿಸುತ್ತಿಲ್ಲ
ಚೈತ್ರಾ, ಯಲಚೇನಹಳ್ಳಿ



ಅವೈಜ್ಞಾನಿಕ ರಸ್ತೆ ಉಬ್ಬುಗಳಿಂದ ಸಮಸ್ಯೆ ಆಗುತ್ತಿದೆ. ಬೀದಿ ದೀಪಗಳು ಬೆಳಗದಿದ್ದರಿಂದ ರಾತ್ರಿ ವೇಳೆ ರಸ್ತೆ ಉಬ್ಬುಗಳು ಸಹ ಗೋಚರಿಸುತ್ತಿಲ್ಲ
ನಾಗರಾಜ್, ಕಗ್ಗಲೀಪುರ



ಅವೈಜ್ಞಾನಿಕ ರಸ್ತೆ ಉಬ್ಬುಗಳಿಂದ ವಾಹನಗಳ ನಿರ್ವಹಣಾ ವೆಚ್ಚ ಹೆಚ್ಚುತ್ತಿದೆ. ರಸ್ತೆ ಉಬ್ಬುಗಳಿಗೆ ಸ್ವಯಂ ಪ್ರತಿಫಲನಗೊಳ್ಳುವ ವರ್ಣ ಬಳಸಿ ಪಟ್ಟಿ ಬಳಿದಿಲ್ಲ
ಮಹೇಶ್, ಆಟೊ ರಿಕ್ಷಾ ಚಾಲಕ

ಕೋಣನಕುಂಟೆ ವೃತ್ತ ಸೇರಿ ವಿವಿಧೆಡೆ ರಸ್ತೆ ಉಬ್ಬುಗಳನ್ನು ವೈಜ್ಞಾನಿಕವಾಗಿಯೇ ನಿರ್ಮಿಸಲಾಗಿದೆ. ರಸ್ತೆ ಅಪಘಾತಗಳು ನಡೆಯುತ್ತಿರುವ ಬಗ್ಗೆ ನಮಗೆ ದೂರುಗಳು ಬಂದಿಲ್ಲ
ಡಿ. ಮಹದೇವ್, ಬೆಂಗಳೂ ದಕ್ಷಿಣ ಉಪವಿಭಾಗದ (ಸಂಚಾರ) ಎಸಿಪಿ

ಸಕಾಲಕ್ಕೆ ಸಿಗದ ಚಿಕಿತ್ಸೆ ಗರ್ಭದಲ್ಲೇ ಶಿಶು ಸಾವು

ಪ್ರಜಾವಾಣಿ ವಾರ್ತೆ

ಯಾದಗಿರಿ: ತಾಲ್ಲೂಕಿನ ಹೊನಗೇರಾ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಕಾಲಕ್ಕೆ ಚಿಕಿತ್ಸೆ ಲಭಿಸದೇ ಇರುವುದರಿಂದ ಆಶನಾಳ ಗ್ರಾಮದ ಗರ್ಭಿಣಿ ಲಕ್ಷ್ಮೀ ಅವರ ಗರ್ಭದಲ್ಲೇ ಶಿಶು ಮೃತಪಟ್ಟಿದೆ. ನಿರ್ಲಕ್ಷ್ಯ ವಹಿಸಿದ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮಹಿಳೆಯ ಕುಟುಂಬದವರು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಲಕ್ಷ್ಮೀ ಅವರನ್ನು ಹೆರಿಗೆಗಾಗಿ ಹೊನಗೇರಾ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆತಂದಾಗ ವೈದ್ಯರು ಇರಲಿಲ್ಲ. ಹೀಗಾಗಿ ಆಶಾ ಕಾರ್ಯಕರ್ತೆ ಯಾದಗಿರಿ ನಗರದಲ್ಲಿರುವ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಮಂಗಳವಾರ ಸಂಜೆ ಗರ್ಭಿಣಿಯನ್ನು ಕರೆತಂದಿದ್ದರು. ಈ ವೇಳೆ ಸ್ಕ್ಯಾನಿಂಗ್ ಮಾಡಿದಾಗ ಗರ್ಭದಲ್ಲೇ ಶಿಶು ಮೃತ-ಪಟ್ಟಿರುವುದು ಬೆಳಕಿಗೆ ಬಂದಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರು ಸಕಾಲಕ್ಕೆ ಅಗತ್ಯ ಚಿಕಿತ್ಸೆ ನೀಡಿದ್ದರೆ ಶಿಶು ಮೃತ-ಪಡುತ್ತಿರಲಿಲ್ಲ ಎಂದು ಸಂಬಂಧಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆಸ್ಪತ್ರೆ ಬಳಿ ಜಮಾಯಿಸಿದ ಕುಟುಂಬಸ್ಥರು ಆರೋಗ್ಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ವೈದ್ಯರು ಖಾಸಗಿ ಕ್ಲಿನಿಕ್ ಹೊಂದಿದ್ದು, ಸರ್ಕಾರಿ ಆಸ್ಪತ್ರೆಯಲ್ಲಿ ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲ ಎಂದು ಆರೋಪಿಸಿದರು.

ಆಸ್ಪತ್ರೆಗೆ ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರು ಭೇಟಿ ನೀಡಿದ ಮಾಹಿತಿ ಪಡೆದರು. ಸಂಬಂಧಿಸಿದ ವೈದ್ಯರ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡುವುದಾಗಿ ಭರವಸೆ ನೀಡಿದರು. ಈ ಕುರಿತು ಪ್ರತಿಕ್ರಿಯಿಸಿದ ಡಿಎಚ್‌ಒ ಡಾ.ಲಕ್ಷ್ಮೀಕಾಂತ ಒಂಟಿಪೀರ, ‘ಹೊನಗೇರಾ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಲಕ್ಷ್ಮಣ ಪವರ್ ವಿರುದ್ಧ ಆರೋಪಗಳು ಕೇಳಿ ಬಂದಿವೆ. ಈ ಬಗ್ಗೆ ಸಮಿತಿ ರಚಿಸಲಾಗಿದೆ. ವರದಿ ಆಧರಿಸಿ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಆರ್.ಹಿತೇಂದ್ರ ಕಾನೂನು, ಸುವ್ಯವಸ್ಥೆ ವಿಭಾಗದ ಎಡಿಜಿಪಿ

ಬೆಂಗಳೂರು: ಐಪಿಎಸ್ ಅಧಿಕಾರಿ ಆರ್.ಹಿತೇಂದ್ರ ಅವರನ್ನು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರನ್ನಾಗಿ ನೇಮಿಸಲಾಗಿದೆ. ಈವರೆಗೆ ಆ ಹುದ್ದೆ ನಿಭಾಯಿಸುತ್ತಿದ್ದ ಅಲೋಕ್ ಕುಮಾರ್ ಅವರನ್ನು ಬೆಂಗಳೂರು ಸಂಚಾರ ಮತ್ತು ರಸ್ತೆ ಸುರಕ್ಷತೆ ವಿಭಾಗಕ್ಕೆ ವರ್ಗಾಯಿಸಲಾಗಿದೆ.

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಉಮೇಶ್ ಅವರನ್ನು ಅಪರಾಧ ಮತ್ತು ತಾಂತ್ರಿಕ ಸೇವೆಗಳು,- ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಸೌಮೇಂದು ಮುಖರ್ಜಿಯವರನ್ನು ಆಡಳಿತ ವಿಭಾಗಕ್ಕೆ ವರ್ಗಾಯಿಸಲಾಗಿದೆ.

ಕಿಯೋನಿಕ್ಸ್‌ಗೆ ಗಿರೀಶ್: ಐಎಫ್‌ಎಸ್ ಅಧಿಕಾರಿ ಗಿರೀಶ್ ಎಚ್.ಸಿ ಅವರನ್ನು ಕಿಯೋನಿಕ್ಸ್ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ ನೇಮಿಸಲಾಗಿದ್ದು, ಆ ಹುದ್ದೆಯಲ್ಲಿದ್ದ ಐಪಿಎಸ್ ಅಧಿಕಾರಿ ರವಿ ಚೆನ್ನಣ್ಣವರ್ ಅವರನ್ನು ವರ್ಗಾಯಿಸಲಾಗಿದೆ.

ವಯನಾಡು: ಉಪಚುನಾವಣೆಗೆ ಸಿದ್ಧತೆ

ಕೋಯಿಕ್ಕೋಡ್ (ಪಿಟಿಐ): ವಯನಾಡು ಲೋಕಸಭಾ ಕ್ಷೇತ್ರಕ್ಕೆ ಉಪಚುನಾವಣೆ ನಡೆಸುವುದಕ್ಕೆ ಸಂಬಂಧಿಸಿ ಚುನಾವಣಾ ಆಯೋಗ ಸಿದ್ಧತೆ ಆರಂಭಿಸಿದೆ.

ಬುಧವಾರ ವಿದ್ಯುನ್ಮಾನ ಮತಯಂತ್ರಗಳು (ಇವಿಎಂ) ಹಾಗೂ ವಿವಿಪ್ಯಾಟ್ ಯಂತ್ರಗಳ ಪರಿಶೀಲನೆ ಕಾರ್ಯ ನಡೆಸಿದ ಜಿಲ್ಲಾಡಳಿತ, ಈ ಕುರಿತು ಎಲ್ಲ ರಾಜಕೀಯ ಪಕ್ಷಗಳಿಗೆ ಮಾಹಿತಿ ನೀಡಿತ್ತು ಎಂದು ಮೂಲಗಳು ತಿಳಿಸಿವೆ.

ಈ ನಡುವೆ, ಉಪಚುನಾವಣೆ ನಡೆಸಲು ಉದ್ದೇಶಿಸಿರುವ ಆಯೋಗದ ಕ್ರಮವನ್ನು ವಿರೋಧ ಪಕ್ಷ ಕಾಂಗ್ರೆಸ್ ಟೀಕಿಸಿದೆ.

ಮಾನಹಾನಿ ಪ್ರಕರಣವೊಂದರಲ್ಲಿ ರಾಹುಲ್ ಗಾಂಧಿ ಅವರಿಗೆ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿ ಸೂರತ್ ನ್ಯಾಯಾಲಯ ಮಾರ್ಚ್ 23ರಂದು ತೀರ್ಪು ನೀಡಿತ್ತು. ಮಾರನೇ ದಿನವೇ ಲೋಕಸಭಾ ಸಚಿವಾಲಯವು ರಾಹುಲ್ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿತ್ತು. ಸೂರತ್ ನ್ಯಾಯಾಲಯ ನೀಡಿರುವ ಶಿಕ್ಷೆಗೆ ತಡೆ ನೀಡುವಂತೆ ಕೋರಿ ರಾಹುಲ್ ಸಲ್ಲಿಸಿದ್ದ ಮರುಪರಿಶೀಲನಾ ಅರ್ಜಿಯನ್ನು ಸೆಷನ್ಸ್ ಕೋರ್ಟ್ ತಿರಸ್ಕರಿಸಿದೆ. ಇದನ್ನು ಪ್ರಶ್ನಿಸಿ ಅವರು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ಗುಜರಾತ್ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ.

ಚಿಂತಾಮಣಿಯಲ್ಲಿ ಮತೀಯ ಗೂಂಡಾಗಿರಿ

ಚಿಂತಾಮಣಿ: ನಗರದಲ್ಲಿ ಬುಧವಾರ ಹಿಂದೂ ಯುವಕನ ಜೊತೆ ಓಡಾಡುತ್ತಿದ್ದ ಮುಸ್ಲಿಂ ಯುವತಿಯನ್ನು ಕೆಲವು ಮುಸ್ಲಿಂ ಹುಡುಗರು ತರಾಟೆಗೆ ತೆಗೆದುಕೊಂಡ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಯುವಕ,ಯುವತಿ ಚೇಳೂರು ಸಮೀಪದ ಗ್ರಾಮದವರು ಎಂದು ತಿಳಿದು ಬಂದಿದೆ. ಚಿಂತಾಮಣಿಯ ಮೆಹಬೂಬ್ ನಗರದ ಬಳಿ ಹೊರಟಿದ್ದ ಈ ಇಬ್ಬರನ್ನು ತಡೆದ ಮುಸ್ಲಿಂ ಹುಡುಗರ ಗುಂಪು ಜಗಳ ತೆಗೆದಿದೆ. ‘ನಾವಿಬ್ಬರು ಸ್ನೇಹಿತರು’ ಎಂದು ಆ ಯುವಕ ಮತ್ತು ಯುವತಿ ಹೇಳಿದರೂ ಕೇಳಿಸಿಕೊಳ್ಳದ ಗುಂಪು ವಾಗ್ವಾದ ನಡೆಸಿದೆ.

‘ಸ್ನೇಹಿತರಾದರೆ ಕಾಲೇಜಿನಲ್ಲಿ ಇರಬೇಕಾಗಿತ್ತು. ಇಲ್ಲಿ ಯಾಕೆ ತಿರುಗಾಡುತ್ತಿದ್ದೀರಿ’ ಎಂದು ಗುಂಪು ಪ್ರಶ್ನಿಸಿದೆ. ಮಾತಿಗೆ ಮಾತು ಬೆಳೆದು ಗುಂಪು ಯುವಕನನ್ನು ತಳ್ಳಾಡಿದೆ. ಜಾಲತಾಣಗಳಲ್ಲಿ ವಿಡಿಯೊ ಹರಿದಾಡುತ್ತಲೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ.ಎಲ್. ನಾಗೇಶ್ ಚಿಂತಾಮಣಿಗೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿದ್ದಾರೆ. ತೀರಾ ಇತ್ತೀಚೆಗೆ ಇದೇ ರೀತಿಯ ಘಟನೆ ಚಿಕ್ಕಬಳ್ಳಾಪುರ ನಗರದಲ್ಲಿಯೂ ನಡೆದಿತ್ತು.

ಅನುದಾನ ಹಂಚಿಕೆಗೆ ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಅನುಷ್ಠಾನವಾಗುತ್ತಿರುವ ಎಲ್ಲ ರೀತಿಯ ನಿರ್ಮಾಣ ಮತ್ತು ಸಿವಿಲ್ ಕಾಮಗಾರಿಗಳ ಪೈಕಿ ಬಾಕಿ ಉಳಿದಿರುವ ಕಾಮಗಾರಿಗಳನ್ನು ಮುಂದುವರಿಸಲು ಅನುದಾನ ಹಂಚಿಕೆ ಮಾಡುವ ಸಂಬಂಧ ರಾಜ್ಯ ಸರ್ಕಾರ ಮಾರ್ಗಸೂಚಿ ಹೊರಡಿಸಿದೆ.

ಈಗಾಗಲೇ ಅನುಮೋದನೆಗೊಂಡ ಕಾಮಗಾರಿಗಳಲ್ಲಿ ಬಾಕಿ ಉಳಿದಿರುವ ಕೆಲಸಗಳಿಗೆ, ಆಯವ್ಯಯದಲ್ಲಿ ಒದಗಿಸಿದ ಮೊತ್ತಕ್ಕಿಂತ ಕಡಿಮೆ ಇದ್ದಲ್ಲಿ ಮುಂದುವರೆದ ಕಾಮಗಾರಿಗಳಿಗೆ ಎಷ್ಟು ಪ್ರಮಾಣದ ಅನುದಾನ ಹಂಚಿಕೆ ಮಾಡಬೇಕು ಎಂಬ ವಿವರವನ್ನು ನೀಡಿದೆ.

ಆ ಪ್ರಕಾರ, ಕಾಮಗಾರಿಗಳ ಬಾಕಿ ಕಾರ್ಯಭಾರದ ಮೊತ್ತವು ಆಯವ್ಯಯದಲ್ಲಿ ನಿಗದಿಯಾದ ಅನುದಾನದ ಶೇ 50 ಕ್ಕಿಂತ ಕಡಿಮೆ ಇದ್ದಲ್ಲಿ ಪೂರ್ಣ ಮೊತ್ತವನ್ನು ಹಂಚಿಕೆ ಮಾಡಬೇಕು.

ಒಂದು ವೇಳೆ ಆಯವ್ಯಯದಲ್ಲಿ ಒದಗಿಸಿದ ಅನುದಾನದ ಶೇ 50 ಕ್ಕಿಂತ ಹೆಚ್ಚಿಗೆ ಇದ್ದು ಶೇ 100 ಕ್ಕಿಂತ ಕಡಿಮೆ ಇದ್ದಲ್ಲಿ ಆಯವ್ಯಯದ ಅನುದಾನದಲ್ಲಿ ಕನಿಷ್ಠ ಶೇ 60 ರಷ್ಟು ಮೊತ್ತವನ್ನು ಹಂಚಿಕೆ ಮಾಡಬೇಕು.

ಆಯವ್ಯಯದಲ್ಲಿ ಒದಗಿಸಿದ ಅನುದಾನಕ್ಕಿಂತ ಅಧಿಕವಾಗಿದ್ದಲ್ಲಿ ಆಯವ್ಯಯದ ಅನುದಾನದಲ್ಲಿ ಕನಿಷ್ಠ ಶೇ 80 ರಷ್ಟು ಮೊತ್ತವನ್ನು ಮುಂದುವರೆದ ಕಾಮಗಾರಿಗಳಿಗೆ ಹಂಚಿಕೆ ಮಾಡಬೇಕು. ಅಲ್ಲದೇ, ಮುಂದುವರೆದ ಕಾಮಗಾರಿಗಳಿಗೆ ಅನುದಾನ ಹಂಚಿಕೆ ಮಾಡುವಾಗ, ಅದೇ ವರ್ಷದಲ್ಲಿ ಮುಕ್ತಾಯಗೊಳ್ಳಬೇಕು ಎಂದು ಕಾಲಾವಕಾಶ ನಿಗದಿ ಮಾಡಿದ್ದರೆ, ಪೂರ್ಣ ಮೊತ್ತವನ್ನು ಆದ್ಯತೆ ಮೇಲೆ ಕಾಯ್ದಿರಿಸಬೇಕು.

₹10 ಕೋಟಿ ಮೊತ್ತದವರೆಗಿನ ಕಾಮಗಾರಿಗಳಿಗೆ ಪೂರ್ಣ ಅನುದಾನ ಒಂದೇ ಆರ್ಥಿಕ ವರ್ಷದಲ್ಲಿ ಒದಗಿಸಬೇಕು. ₹10 ಕೋಟಿ ಮೀರಿದ ಮತ್ತು ₹100 ಕೋಟಿವರೆಗಿನ ಕಾಮಗಾರಿಗಳಿಗೆ ಮೊದಲನೇ ಆರ್ಥಿಕ ವರ್ಷದಲ್ಲಿ ಶೇ 40, ಎರಡನೇ ಆರ್ಥಿಕ ವರ್ಷದಲ್ಲಿ ಶೇ 60 ರಷ್ಟು ಮೊತ್ತವನ್ನು ಹಂಚಿಕೆ ಮಾಡಬೇಕು.

₹100 ಕೋಟಿ ಮೊತ್ತ ಮೀರಿದ ಎಲ್ಲ ಕಾಮಗಾರಿಗಳಿಗೆ ಮೊದಲನೇ ಆರ್ಥಿಕ ವರ್ಷದಲ್ಲಿ ಶೇ 30, ಎರಡನೇ ಆರ್ಥಿಕ ವರ್ಷದಲ್ಲಿ ಶೇ 40, ಮೂರನೇ ಆರ್ಥಿಕ ವರ್ಷದಲ್ಲಿ ಶೇ 30 ರಷ್ಟು ಅನುದಾನ ಒದಗಿಸಬೇಕು ಎಂದು ಆಯಾ ಇಲಾಖೆಗಳಿಗೆ ಸೂಚಿಸಲಾಗಿದೆ.

ಕಳಪೆ ಕಾಮಗಾರಿ ಸಹಿಸಲ್ಲ: ಹೈಕೋರ್ಟ್

ಬೆಂಗಳೂರು: ‘ಸಾರ್ವಜನಿಕರ ಹಣವನ್ನು ಬಳಕೆ ಮಾಡಿ ನಿರ್ಮಿಸಲಾಗುವ ಕಾಮಗಾರಿ ಯೋಜನೆಗಳ ಗುಣಮಟ್ಟ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಎಚ್ಚರಿಕೆ ವಹಿಸಬೇಕು’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

‘ಭದ್ರತಾ ಠೇವಣಿ ಬಿಡುಗಡೆಗೊಳಿಸಲು ನಿರ್ದೇಶಿಸಬೇಕು’ ಎಂದು ಕೋರಿ ‘ಪಿಜಿ ಸೆಟ್ಟಿ ಕನ್‌ಸ್ಟ್ರಕ್ಷನ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ ಕಂಪನಿ’ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಸಾರ್ವಜನಿಕರ ಹಣದಲ್ಲಿ ನಿರ್ಮಾಣವಾಗುವ ಯೋಜನೆಗಳು ಕಳಪೆಯಾಗಿದ್ದರೆ ಸಹಿಸಲಾಗುವುದಿಲ್ಲ’ ಎಂದು ಎಚ್ಚರಿಸಿದೆ.

‘ಗುತ್ತಿಗೆದಾರರು ಕಳಪೆ ಗುಣಮಟ್ಟದ ಕಟ್ಟಡ ನಿರ್ಮಾಣ ಮಾಡಿರುವ ಬಗ್ಗೆ ದೂರು ದಾಖಲಾಗಿದ್ದರೂ ಬಿಲ್‌ಗಳನ್ನು ಮಂಜೂರು ಮಾಡಲಾಗಿದೆ. ಇದು ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಎಂಜಿನಿಯರ್‌ಗಳ ಕಾರ್ಯ. ಕಳಪೆ ಕಾಮಗಾರಿಯಿದ್ದರೂ ಅನುಮೋದನೆ ನೀಡಿರುವ ಈ ಎಂಜಿನಿಯರ್‌ಗಳ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ನ್ಯಾಯಪೀಠ ಸೂಚಿಸಿದೆ. ಮಂಡ್ಯ ಮತ್ತು ಚಾಮರಾಜನಗರದಲ್ಲಿ ಪೊಲೀಸ್ ವಸತಿ ಯೋಜನೆಯಡಿ ಸಮುಚ್ಚಯ ನಿರ್ಮಿಸಿದ್ದ ಅರ್ಜಿದಾರರು ಕಳಪೆ ಗುಣಮಟ್ಟದ ಕಾಮಗಾರಿ ನಡೆಸಿದ ಆರೋಪ ಹೊತ್ತಿದ್ದಾರೆ.



ಮೀನುಗಳು ಸ್ನೇಹಿತರು...

‘ವಿಶ್ವ ಸಾಗರ ದಿನಾಚರಣೆಯ’ ಮುನ್ನಾ ದಿನವಾದ ಬುಧವಾರ ಬ್ರಿಗೇಡ್ ರಸ್ತೆಯ ವೃತ್ತದಲ್ಲಿ ಪೇಟಾ ಇಂಡಿಯಾದ ಸ್ವಯಂಸೇವಕಿಯೊಬ್ಬರು ಮತ್ಸ್ಯಕನ್ಯೆಯ ವೇಷ ಧರಿಸಿ ‘ಮೀನುಗಳು ನಮ್ಮ ಸ್ನೇಹಿತರು, ಆಹಾರವಲ್ಲ’ ಎಂಬ ಫಲಕ ಹಿಡಿದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು -ಪ್ರಜಾವಾಣಿ ಚಿತ್ರ



ರೇವಾ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿರುವ ಲಿ ಅಂಡ್ ಲೆ ಅಂತರರಾಷ್ಟ್ರೀಯ ವಿದ್ಯಾರ್ಥಿ ಸಿನಿಮೋತ್ಸವಕ್ಕೆ ಬಹುಭಾಷಾ ನಟಿ ಖುಷ್ಬು ಸುಂದರ್ ಚಾಲನೆ ನೀಡಿದರು

ಸಿನಿಮೋತ್ಸವಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಮಹಿಳೆಯರೂ ಪುರುಷರಿಗೆ ಸರಿಸಮಾನವಾಗಿ ಎಲ್ಲ ರಂಗಗಳಲ್ಲಿಯೂ ಸಾಧನೆ ಮಾಡುತ್ತಿದ್ದಾರೆ ಎಂದು ಬಹುಭಾಷಾ ನಟಿ ಖುಷ್ಬು ಸುಂದರ್ ಅಭಿಪ್ರಾಯಪಟ್ಟರು.

ರೇವಾ ವಿಶ್ವವಿದ್ಯಾಲಯದಲ್ಲಿ ಕಲಾ, ಮಾನವಿಕ ಮತ್ತು ಸಮಾಜ ವಿಜ್ಞಾನ ವಿಭಾಗದ ವತಿಯಿಂದ ಆಯೋಜಿಸಿದ್ದ ಮೂರು ದಿನಗಳ ‘ಲಿ ಅಂಡ್ ಲೆ’ ಅಂತರರಾಷ್ಟ್ರೀಯ ವಿದ್ಯಾರ್ಥಿ ಸಿನಿಮೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಸಿನಿಮಾ, ರಾಜಕೀಯ, ಕ್ರೀಡೆ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ಮಹಿಳೆಯರಿಗೆ ವಿಪುಲ ಅವಕಾಶಗಳಿವೆ. ತಮಗೆ ಆಸಕ್ತಿಯಿರುವ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಸಾಧನೆ ಮಾಡಬೇಕು ಎಂದರು. ಇತ್ತೀಚೆಗೆ ದಕ್ಷಿಣ ಭಾರತದ ಚಿತ್ರಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಸದ್ದು ಮಾಡುತ್ತಿದ್ದು, ಆಸ್ಕರ್ ಪ್ರಶಸ್ತಿ ಪಡೆಯುತ್ತಿರುವುದು ಸಂತೋಷದ ವಿಷಯ. ಈ ದಿಸೆಯಲ್ಲಿ ನಮ್ಮ ಚಿತ್ರಗಳು ಅಲ್ಲಿ ಗುರುತಿಸಿಕೊಂಡು ಯಶಸ್ವಿಯಾಗಲು ಇನ್ನಷ್ಟು ಗುಣಮಟ್ಟದ ಸಿನಿಮಾಗಳನ್ನು ಸಿದ್ಧಪಡಿಸಬೇಕಾದ ಅಗತ್ಯವಿದೆ ಎಂದರು.

ಗಂಧದ ಗುಡಿ ಪ್ರದರ್ಶನ: ಮೂರು ದಿನಗಳ ಕಾಲ ನಡೆಯಲಿರುವ ಅಂತರರಾಷ್ಟ್ರೀಯ ವಿದ್ಯಾರ್ಥಿ ಸಿನಿಮೋತ್ಸವದಲ್ಲಿ ಡಾ.ಪುನೀತ್ ರಾಜ್ ಕುಮಾರ್ ನಟನೆಯ ಕೊನೆಯಚಿತ್ರ ‘ಗಂಧದ ಗುಡಿ’ಯನ್ನು ಉದ್ಘಾಟನಾ ಸಮಾರಂಭದಲ್ಲಿ ಪ್ರದರ್ಶಿಸಲಾಯಿತು.

ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಮಾತನಾಡಿದರು. ಪತ್ರಕರ್ತೆ ಮಾಯಾ ಶರ್ಮ, ರೇವಾ ವಿವಿ ಕುಲಪತಿ ಡಾ.ಎಂ. ಧನಂಜಯ, ಕುಲಸಚಿವ ಡಾ.ಎನ್. ರಮೇಶ್ ಉಪಸ್ಥಿತರಿದ್ದರು.

ಬಿಜೆಪಿ ಪ್ರಮುಖ ನಾಯಕರ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯ ನೂತನ ಶಾಸಕರು ಮತ್ತು ಪರಾಜಿತ ಅಭ್ಯರ್ಥಿಗಳ ಸಭೆ ಗುರುವಾರ ಮಲ್ಲೇಶ್ವರದ ಬಿಜೆಪಿ ಕಾರ್ಯಾಲಯದಲ್ಲಿ ನಡೆಯಲಿದೆ.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಸುದ್ದಿಗಾರರರಿಗೆ ಈ ವಿಷಯ ತಿಳಿಸಿದರು.

ನೂತನ ಶಾಸಕರ ಸಭೆಯು ಬೆಳಿಗ್ಗೆ 10.30 ಕ್ಕೆ ನಡೆಯಲಿದೆ. ಮಧ್ಯಾಹ್ನದ ನಂತರ 3 ಗಂಟೆಗೆ ಎಲ್ಲ ಪರಾಜಿತ ಅಭ್ಯರ್ಥಿಗಳ ಸಭೆ ನಡೆಸಲಾಗುವುದು. ಸಂಜೆ ರಾಜ್ಯ ಬಿಜೆಪಿ ಪ್ರಮುಖ ನಾಯಕರ ಸಭೆ ನಡೆಯಲಿದೆ. ಈ ಎಲ್ಲ ಸಭೆಗಳಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಶಾಸಕ ಆರ್.ಅಶೋಕ, ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಭಾಗವಹಿಸುವರು ಎಂದರು.

ಸಭೆಯಲ್ಲಿ ರಾಜ್ಯ ಚುನಾವಣೆಯ ಕುರಿತ ಅವಲೋಕನ, ಕೇಂದ್ರ ಸರ್ಕಾರದ 9 ವರ್ಷಗಳ ಯೋಜನೆ, ಜುಲೈ 3 ರಿಂದ ನಡೆಯುವ ಅಧಿವೇಶನ ಮತ್ತು ವಿಧಾನಪರಿಷತ್ ಚುನಾವಣೆ ಕುರಿತು ಚರ್ಚೆ ನಡೆಯಲಿದೆ.

ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ನಿವಾಸಕ್ಕೆ ಭೇಟಿ, ಚರ್ಚೆ

ದೇಶಕ್ಕಾಗಿ ಒಗ್ಗಟ್ಟಿನಿಂದ ಸಾಗಬೇಕು: ಫಾರೂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದ ಒಳಿತಿಗಾಗಿ ಎಲ್ಲರೂ ಒಗ್ಗಟ್ಟಿನಿಂದ ಲೋಕಸಭಾ ಚುನಾವಣೆ ಎದುರಿಸಬೇಕಿದೆ’ ಎಂದು ನ್ಯಾಷನಲ್ ಕಾನ್ಫರೆನ್ಸ್ ನಾಯಕ ಫಾರೂಕ್ ಅಬ್ದುಲ್ಲಾ ಹೇಳಿದರು.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಅವರ ನಿವಾಸಕ್ಕೆ ಬುಧವಾರ ಬೆಳಿಗ್ಗೆ ಭೇಟಿನೀಡಿ ಚರ್ಚಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಯಾರೂ ನಿರಾಶರಾಗಬೇಕಿಲ್ಲ. ನಿಧಾನವಾಗಿ ನಮಗೆ ದಾರಿ ಸಿಗುತ್ತದೆ. ಒಗ್ಗಟ್ಟಿನಿಂದ ಸಾಗಬೇಕಿರುವುದು ಈಗ ನಮ್ಮ ಮುಂದಿರುವ ಮುಖ್ಯ ವಿಚಾರ’ ಎಂದು ಹೇಳಿದರು

‘ಧರ್ಮದ ಆಧಾರದಲ್ಲಿ ದೇಶ ವಿಭಜನೆ ಆಗಬೇಕಾ? ದೇಶ ಒಟ್ಟಾಗಿ ಇರುವುದು ಬೇಕಾ? ನಮ್ಮದು ವೈವಿಧ್ಯವನ್ನು ಹೊಂದಿರುವ ದೇಶ. ಕರ್ನಾಟಕ ಮತ್ತು ಕಾಶ್ಮೀರದ ಮಧ್ಯೆ ಸಾಮ್ಯತೆ ಕಾಣಲು ಸಾಧ್ಯವಿಲ್ಲ. ದೇಶ ಉಳಿಯಬೇಕಾದರೆ ನಾವೆಲ್ಲರೂ ಉಳಿಯಬೇಕು’ ಎಂದು ಹೇಳಿದರು.

‘ಇದು ಸೌಜನ್ಯದ ಭೇಟಿ. ದೇವೇಗೌಡರು ಕಾಶ್ಮೀರಕ್ಕೆ ನೀಡಿದ ಕೊಡುಗೆ ದೊಡ್ಡದು. ದೇಶದ ಇತರ ನಾಯಕರು ಕಾಶ್ಮೀರಕ್ಕೆ ಬರಲು ಹಿಂದೇಟು ಹಾಕುತ್ತಿದ್ದಾಗ ಅವರು ಧೈರ್ಯದಿಂದ ಭೇಟಿ ನೀಡಿದ್ದರು. ಅದಕ್ಕಾಗಿ ಅವರಿಗೆ ಕೃತಜ್ಞತೆ ಹೇಳಿದ್ದೇನೆ’ ಎಂದರು.



ನ್ಯಾಷನಲ್ ಕಾನ್ಫರೆನ್ಸ್ ನಾಯಕ ಫಾರೂಕ್ ಅಬ್ದುಲ್ಲಾ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬುಧವಾರ ಭೇಟಿಯಾಗಿ ಅಭಿನಂದಿಸಿದರು. ವಸತಿ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳಾದ ಕೆ. ಗೋವಿಂದರಾಜು ಮತ್ತು ನಜೀರ್ ಅಹಮದ್ ಇದ್ದರು

‘ಕಾಶ್ಮೀರ್ ಫೈಲ್ಸ್’ ಮತ್ತು ‘ದಿ ಕೇರಳ ಸ್ಟೋರಿ’ ಸಿನಿಮಾಗಳ ಕುರಿತ ಪ್ರಶ್ನೆಗೆ ಉತ್ತರಿಸಿದ ಫಾರೂಕ್, ‘ಇವು ದೇಶ ಒಡೆಯುವ ಉದ್ದೇಶದಿಂದ ನಿರ್ಮಿಸಿದ ಚಿತ್ರಗಳು. ಇಂತಹ ಚಿತ್ರಗಳಿಂದ ಸಂವಿಧಾನಕ್ಕೆ ಅಪಾಯ ಎದುರಾಗುತ್ತದೆ. ಹಿಂದೂ, ಮುಸ್ಲಿಂ ಯಾವುದೇ ಸಮುದಾಯ ಇರಲಿ. ಈ ರೀತಿಯ ಚಿತ್ರಗಳು ದೇಶಕ್ಕೆ ಮಾರಕ’ ಎಂದು ಹೇಳಿದರು.

ಒಡಿಶಾದ ಬಾಲೇಶ್ವರ ರೈಲು ಅಪಘಾತದ ಕುರಿತು ಪ್ರತಿಕ್ರಿಯಿಸಿದ ಅವರು, ‘ನೂರಾರು ಮಂದಿ ಈ ದುರ್ಘಟನೆಯಲ್ಲಿ ಮೃತಪಟ್ಟಿದ್ದಾರೆ. ಸರಿಯಾದ ತನಿಖೆ ಆಗಬೇಕು. ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು’ ಎಂದರು.

ಫಾರೂಕ್ ಅಬ್ದುಲ್ಲಾ ಅವರ ಭೇಟಿ ವೇಳೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ, ಶಾಸಕ ಎಚ್‌.ಡಿ. ರೇವಣ್ಣ, ವಿಧಾನಪರಿಷತ್ ಸದಸ್ಯ ಬಿ.ಎಂ. ಫಾರೂಕ್, ಮಾಜಿ ಸಚಿವ ಆರ್. ರೋಷನ್ ಬೇಗ್, ಜೆಡಿಎಸ್ ನಗರ ಘಟಕದ ಅಧ್ಯಕ್ಷ ಹೆಚ್‌.ಎಂ.ರಮೇಶ್ ಗೌಡ ಉಪಸ್ಥಿತರಿದ್ದರು.

‘ಕಾಂಗ್ರೆಸ್‌ನ ಗಿಮಿಕ್ ಬಯಲಾಗಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚುನಾವಣೆಯಲ್ಲಿ ಮತ ಪಡೆಯುವುದಕ್ಕಾಗಿ ಕಾಂಗ್ರೆಸ್ ಮಾಡಿದ್ದ ಅಗ್ಗದ ಗಿಮಿಕ್ ಬಯಲಾಗಿದೆ. ಕಾಂಗ್ರೆಸ್ ಗ್ಯಾರಂಟಿಯ ನಿಜ ಬಣ್ಣವೂ ಹೊರಬಂದಿದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

‘ಕಾಂಗ್ರೆಸ್ ಗ್ಯಾರಂಟಿಗಳು ಅಗ್ಗದ ಗಿಮಿಕ್ ಆಗಿದ್ದವು’ ಎಂಬ ಅರ್ಥದಲ್ಲಿ ಸಚಿವ ಎನ್. ಚಲುವರಾಯಸ್ವಾಮಿ ಮಾತನಾಡಿರುವ ವಿಡಿಯೊ ಬಹಿರಂಗಗೊಂಡಿರುವ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಮತದಾರರನ್ನು ಯಾವ ರೀತಿ ದಾರಿ ತಪ್ಪಿಸಿದ್ದೇವೆ ಎಂದು ಅವರೇ ಹೇಳಿಕೊಂಡಿದ್ದಾರೆ. ಸತ್ಯಾಂಶಗಳು ಒಂದೊಂದಾಗಿ ಈಗ ಹೊರ ಬರುತ್ತಿವೆ’ ಎಂದು ಹೇಳಿದರು.

ಸಚಿವರು ಸತ್ಯ ಒಪ್ಪಿಕೊಳ್ಳುವ ಮೂಲಕ ತಮ್ಮ ಅಸಲಿತನ ತೋರಿಸಿದ್ದಾರೆ. ರಾಜ್ಯದ ಖಜಾನೆ ಖಾಲಿಯಾಗಿದೆ ಎಂದು ಉಪ ಮುಖ್ಯಮಂತ್ರಿ ಹೇಳಿದ್ದಾರೆ. ಸರ್ಕಾರ ವಿದ್ಯುತ್ ದರ ಏರಿಕೆ ಮಾಡಿದೆ. ಒಂದು ಕೈಯಲ್ಲಿ ಕೊಟ್ಟು, ಮತ್ತೊಂದು ಕೈಯಲ್ಲಿ ಕಿತ್ತುಕೊಳ್ಳುವ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ ಎಂದರು.

‘ಕಾಂಗ್ರೆಸ್ ಗೆಲುವಿನ ಅಮಲಿನಲ್ಲಿದ್ದು, ಆಕಾಶದಲ್ಲಿ ತೇಲುತ್ತಿದೆ. ನಾವು ನೆಲದಲ್ಲಿ ಇದ್ದೇವೆ. ನಾವು ಆಕಾಶಕ್ಕೆ ಏರಲು ಸಾಧ್ಯವಾ’ ಎಂದು ಪ್ರಶ್ನಿಸಿದರು.

‘ಮುಂದಿನ ರಾಜಕೀಯ ಬೆಳವಣಿಗೆಗಳ ಕುರಿತು ಎಲ್ಲರೂ ಮಾತನಾಡುತ್ತಿದ್ದಾರೆ. ಕಾಂಗ್ರೆಸ್‌ನವರು ನಮ್ಮನ್ನು ಲೆಕ್ಕಕ್ಕೂ ಇರಿಸಿಲ್ಲ. ಅವರ ಜತೆ ಚರ್ಚೆ ಮಾಡುವುದಕ್ಕೆ ಆಗುತ್ತಾ’ ಎಂದು ಕೇಳಿದರು.

‘ಯಾವ ಗುಮ್ಮ ಇದೆ ನೋಡೋಣ?’

‘ಕಾಂತರಾಜು ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ ಜಾತಿಗಣತಿ ವರದಿಯನ್ನು ಸ್ವೀಕರಿಸುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ. ಆ ವರದಿ ಬರಲಿ. ಅದರಲ್ಲಿ ಯಾವ ಗುಮ್ಮ ಇದೆ ನೋಡೋಣ. ವರದಿಯನ್ನು ಯಾವ ರೀತಿ ಬರೆಸಿಕೊಂಡಿದ್ದಾರೆ ನೋಡೋಣ. ವರದಿ ಮಂಡನೆಯನ್ನು ನಾವು ಸ್ವಾಗತಿಸುತ್ತೇವೆ’ ಎಂದು ಕುಮಾರಸ್ವಾಮಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

806 ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನ

ಗ್ರಾಮೀಣ ಬ್ಯಾಂಕ್‌ಗಳಿಗೆ ಬೇಕಾಗಿದ್ದಾರೆ ನೌಕರರು

ರಾಜ್ಯದ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಲ್ಲಿ(ಆರ್‌ಆರ್‌ಬಿ) ಖಾಲಿಯಿರುವ 806 ಹುದ್ದೆಗಳ ಭರ್ತಿಗಾಗಿ ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆ(ಐಬಿಪಿಎಸ್) ಅರ್ಜಿ ಆಹ್ವಾನಿಸಿದೆ. ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಈ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಅರ್ಜಿ ಸಲ್ಲಿಕೆ, ಶುಲ್ಕ ಮತ್ತಿತರ ವಿವರಗಳು ಇಲ್ಲಿವೆ.

ಆರ್.ಕೆ.ಬಾಲಚಂದ್ರ

ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆ(ಐಬಿಪಿಎಸ್) ದೇಶದಾದ್ಯಂತ 43 ಗ್ರಾಮೀಣ ಬ್ಯಾಂಕ್‌ಗಳಲ್ಲಿ (ಆರ್‌ಆರ್‌ಬಿ) ಖಾಲಿಯಿರುವ 8,612 ಆಫೀಸ್ ಅಸಿಸ್ಟೆಂಟ್ (ಮಲ್ಟಿ ಪರ್ಪಸ್) ಮತ್ತು ಆಫೀಸರ್ ಹುದ್ದೆಗಳ ನೇಮಕಕ್ಕೆ ಅಧಿಸೂಚನೆ ಹೊರಡಿಸಿದೆ. ಇದರಲ್ಲಿ ರಾಜ್ಯದ ಬಳ್ಳಾರಿಯ ಕರ್ನಾಟಕ ಗ್ರಾಮೀಣ ಬ್ಯಾಂಕ್ ಮತ್ತು ಧಾರವಾಡದ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ಗಳು ಸೇರಿದ್ದು, ಈ ಎರಡು ಬ್ಯಾಂಕ್‌ಗಳಲ್ಲಿ ಖಾಲಿ ಇರುವ 806 ಹುದ್ದೆಗಳ ಭರ್ತಿಗಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಜೂನ್ 1 ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದ್ದು, ಜೂನ್ 21 ಅರ್ಜಿ ಸಲ್ಲಿಕೆಗೆ ಕೊನೆ ದಿನವಾಗಿದೆ.

ವಯೋಮಿತಿ: ಆಫೀಸ್ ಅಸಿಸ್ಟೆಂಟ್ (ಮಲ್ಟಿಪರ್ಪಸ್) ಹುದ್ದೆಗೆ 18 ರಿಂದ 28 ವರ್ಷಗಳು. ಆಫೀಸರ್ ಸ್ಕೇಲ್-I ಹುದ್ದೆಗೆ 18 ರಿಂದ 30 ವರ್ಷಗಳು. ಆಫೀಸರ್ ಸ್ಕೇಲ್-II ಹುದ್ದೆಗೆ 21 ರಿಂದ 32 ವರ್ಷಗಳು ಹಾಗೂ ಆಫೀಸರ್ ಸ್ಕೇಲ್ - III ಹುದ್ದೆಗೆ 21 ರಿಂದ 40 ವರ್ಷದೊಳಗಿರಬೇಕು. ಎಸ್.ಸಿ ಮತ್ತು ಎಸ್.ಟಿ ಅಭ್ಯರ್ಥಿಗಳಿಗೆ 5 ವರ್ಷಗಳು, ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷಗಳು ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ 10 ವರ್ಷಗಳ ವಯೋಮಿತಿಯ ಸಡಿಲಿಕೆ ಇದೆ.



ಶೈಕ್ಷಣಿಕ ಅರ್ಹತೆ ಮತ್ತು ಅನುಭವ

ಆಫೀಸ್ ಅಸಿಸ್ಟೆಂಟ್‌ಹುದ್ದೆ ಹಾಗೂ ಆಫೀಸರ್ ಸ್ಕೇಲ್-I ಗೆ ಸ್ಥಳೀಯ ಭಾಷೆ ತಿಳಿದಿರುವುದು ಅವಶ್ಯಕ. ಕಂಪ್ಯೂಟರ್‌ನಿರ್ವಹಣಾ ಜ್ಞಾನ ಹೊಂದಿರುವುದು ಕಡ್ಡಾಯ.

ಆಫೀಸ್ ಅಸಿಸ್ಟೆಂಟ್‌ಹುದ್ದೆ: ಯಾವುದೇ ವಿಷಯದಲ್ಲಿ ಪದವಿ ಪಡೆದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

ಆಫೀಸರ್ ಸ್ಕೇಲ್-I(ಸಹಾಯಕ ವ್ಯವಸ್ಥಾಪಕ): ಯಾವುದೇ ವಿಷಯದಲ್ಲಿ ಪದವಿ. ಕೃಷಿ, ತೋಟಗಾರಿಕೆ, ಅರಣ್ಯ, ಪಶುಸಂಗೋಪನೆ, ಪಶುವೈದ್ಯಕೀಯ ವಿಜ್ಞಾನ, ಕೃಷಿ ಎಂಜಿನಿಯರಿಂಗ್, ಮೀನುಗಾರಿಕೆ, ಕೃಷಿ ಮಾರುಕಟ್ಟೆ ಮತ್ತು ಸಹಕಾರ, ಮಾಹಿತಿ ತಂತ್ರಜ್ಞಾನ, ನಿರ್ವಹಣೆ, ಕಾನೂನು, ಅರ್ಥಶಾಸ್ತ್ರ ಅಥವಾ ಲೆಕ್ಕಶಾಸ್ತ್ರದಲ್ಲಿ ಪದವಿ ಹೊಂದಿರುವವರಿಗೆ ಆದ್ಯತೆ.

ಸ್ಕೇಲ್-II ಅಧಿಕಾರಿಗಳ ಹುದ್ದೆ: ಸ್ಕೇಲ್-II ಅಧಿಕಾರಿಗಳಿಗೆ (ವ್ಯವಸ್ಥಾಪಕರು), ಅಗ್ರಿಕಲ್ಚರ್ ಆಫೀಸರ್ /ಲಾ ಆಫೀಸರ್‌ಗಳಿಗೆ ಯಾವುದೇ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಲ್ಲಿ ಎರಡು ವರ್ಷಗಳ ಸೇವೆ ಮತ್ತು ಸ್ಪೆಷಲ್‌ಆಫೀಸರ್ಸ್‌ ಗಳು/ಚಾರ್ಟೆಡ್ ಅಕೌಂಟೆಂಟ್ /ಟ್ರಶರಿ ಆಫೀಸರ್/ ಮಾರ್ಕೆಟಿಂಗ್ ಆಫೀಸರ್‌ಗಳಿಗೆ ಒಂದು ವರ್ಷ ಸೇವೆ ಸಲ್ಲಿಸಿದ ಅನುಭವ ಹೊಂದಿರಬೇಕು.

ವ್ಯವಸ್ಥಾಪಕರು: ಯಾವುದೇ ವಿಷಯದಲ್ಲಿ ಶೇ 50 ಅಂಕಗಳೊಂದಿಗೆ ಪದವಿ ಪೂರ್ಣಗೊಳಿಸಿರಬೇಕು. ಬ್ಯಾಂಕಿಂಗ್, ಹಣಕಾಸು, ಮಾರುಕಟ್ಟೆ, ಕೃಷಿ, ತೋಟಗಾರಿಕೆ, ಅರಣ್ಯ, ಪಶುಸಂಗೋಪನೆ, ಪಶುವೈದ್ಯಕೀಯ ವಿಜ್ಞಾನ, ಕೃಷಿ ಎಂಜಿನಿಯರಿಂಗ್, ಮೀನುಗಾರಿಕೆ, ಕೃಷಿ ಮಾರುಕಟ್ಟೆ ಮತ್ತು ಸಹಕಾರ, ಮಾಹಿತಿ ತಂತ್ರಜ್ಞಾನ, ನಿರ್ವಹಣೆ, ಕಾನೂನು, ಅರ್ಥಶಾಸ್ತ್ರ ಮತ್ತು ಲೆಕ್ಕಶಾಸ್ತ್ರದಲ್ಲಿ ಪದವಿ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ.

ಸ್ಪೆಷಲ್‌ಆಫೀಸರ್ಸ್ : ಇನ್ ಫಾರ್ಮೇಷನ್ ಟೆಕ್ನಾಲಜಿ ಆಫೀಸರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು ಶೇ 50 ಅಂಕಗಳೊಂದಿಗೆ ಎಲೆಕ್ಟ್ರಾನಿಕ್ಸ್ / ಕಮ್ಯುನಿಕೇಶನ್ / ಕಂಪ್ಯೂಟರ್ ಸೈನ್ಸ್ / ಮಾಹಿತಿ ತಂತ್ರಜ್ಞಾನದಲ್ಲಿ ಪದವಿ ಪಡೆದಿರಬೇಕು. ಇದರ ಜೊತೆಗೆ, ASP, PHP, C++, Java, VB, VC, OCP ಸಾಫ್ಟ್‌ವೇರ್ ಕಲಿಕೆಯ ಪ್ರಮಾಣಪತ್ರ ಪಡೆದಿರಬೇಕು.

ಚಾರ್ಟೆಡ್ ಅಕೌಂಟೆಂಟ್ : ಇನ್‌ಸ್ಟಿಟ್ಯೂಟ್ ಆಫ್ ಚಾರ್ಟೆರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾದಿಂದ ಸರ್ಟಿಫೈಡ್ ಅಸೋಸಿಯೇಟ್ (CA) ಪದವಿ ಪಡೆದಿರುವುದು ಕಡ್ಡಾಯ.

ಲಾ ಆಫೀಸರ್: ಶೇ 50 ಅಂಕಗಳೊಂದಿಗೆ ಕಾನೂನು ಪದವಿ ಅಥವಾ ತತ್ಸಮಾನ ಪದವಿ ಪಡೆದಿರಬೇಕು ಅಥವಾ ಎರಡು ವರ್ಷ ವಕೀಲರಾಗಿ ಕೆಲಸ ಮಾಡಿರಬೇಕು.

ಟ್ರಶರಿ ಆಫೀಸರ್: ಹಣಕಾಸು ವಿಷಯದಲ್ಲಿ ಚಾರ್ಟೆರ್ಡ್ ಅಕೌಂಟೆಂಟ್ ಅಥವಾ ಎಂಬಿಎ ಪದವಿ ಪಡೆದಿರಬೇಕು

ಮಾರ್ಕೆಟಿಂಗ್ ಆಫೀಸರ್: ಮಾರ್ಕೆಟಿಂಗ್‌ನಲ್ಲಿ ಎಂಬಿಎ ಪದವಿ ಹೊಂದಿರಬೇಕು.

ಅಗ್ರಿಕಲ್ಚರ್ ಆಫೀಸರ್: ಈ ಹುದ್ದೆಗಳಿಗೆ ಕೃಷಿ/ತೋಟಗಾರಿಕೆ/ ಹೈನುಗಾರಿಕೆ/ ಪಶುಸಂಗೋಪನೆ/ ಅರಣ್ಯಶಾಸ್ತ್ರ /ಪಶುವೈದ್ಯಕೀಯ ವಿಜ್ಞಾನ/ ಕೃಷಿ ಎಂಜಿನಿಯರಿಂಗ್/ಮೀನುಗಾರಿಕೆ ವಿಷಯದಲ್ಲಿ ಶೇ 50 ಅಂಕಗಳೊಂದಿಗೆ ಪದವಿ ಪಡೆದಿರಬೇಕು.

ಹಿರಿಯ ವ್ಯವಸ್ಥಾಪಕ(ಸ್ಕೇಲ್-III): ಯಾವುದೇ ವಿಷಯದಲ್ಲಿ ಶೇ 50 ಅಂಕಗಳೊಂದಿಗೆ ಪದವಿ ಪಡೆದಿರಬೇಕು. ಬ್ಯಾಂಕಿಂಗ್, ಹಣಕಾಸು, ಮಾರುಕಟ್ಟೆ, ಕೃಷಿ, ತೋಟಗಾರಿಕೆ, ಅರಣ್ಯ, ಪಶುಸಂಗೋಪನೆ, ಪಶುವೈದ್ಯಕೀಯ ವಿಜ್ಞಾನ, ಕೃಷಿ ಎಂಜಿನಿಯರಿಂಗ್, ಮೀನುಗಾರಿಕೆ, ಕೃಷಿ ಮಾರುಕಟ್ಟೆ ಮತ್ತು ಸಹಕಾರ, ಮಾಹಿತಿ ತಂತ್ರಜ್ಞಾನ, ನಿರ್ವಹಣೆ, ಕಾನೂನು, ಅರ್ಥಶಾಸ್ತ್ರ ಅಕೌಂಟೆನ್ಸಿಯಲ್ಲಿ ಪದವಿ/ಡಿಪ್ಲೊಮಾ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ. ಜೊತೆಗೆ ಬ್ಯಾಂಕ್ ಅಥವಾ ವಿತ್ತೀಯ ಸಂಸ್ಥೆಗಳಲ್ಲಿ ಐದು ವರ್ಷ ಕಾರ್ಯನಿರ್ವಹಿಸಿದ ಅನುಭವ ಹೊಂದಿರಬೇಕು.

ಈ ಬಾರಿಯ ಬದಲಾವಣೆಗಳೇನು?

ಈ ಬಾರಿ ಪರೀಕ್ಷೆಗೆ ಅಭ್ಯರ್ಥಿಗಳು ತರುವ ಗುರುತಿನ ಪತ್ರದ (ಐಡಿ ಪ್ರೂಫ್) ಸಂಖ್ಯೆ ನೀಡುವುದು ಕಡ್ಡಾಯ. ಅಭ್ಯರ್ಥಿ ಸಲ್ಲಿಸಿದ ಅರ್ಜಿಯಲ್ಲಿರುವ ಹೆಸರಿನೊಂದಿಗೆ ಗುರುತಿನ ಪತ್ರದಲ್ಲಿರುವ ಹೆಸರು ಹೊಂದಾಣಿಕೆಯಾಗಬೇಕು. ಪೂರ್ವಭಾವಿ ಪರೀಕ್ಷೆಯ ಪ್ರವೇಶ ಪತ್ರವನ್ನು ಪರೀಕ್ಷಾ ಸ್ಥಳದಲ್ಲಿ ಸಂಗ್ರಹಿಸುವಂತಿಲ್ಲ. ಬದಲಿಗೆ, ಇದನ್ನು ಪರೀಕ್ಷಾ ಕೇಂದ್ರದ ಸಿಬ್ಬಂದಿಯಿಂದ ಧೃಡಪಡಿಸಿಕೊಳ್ಳಬೇಕು.

ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆದ ಅಭ್ಯರ್ಥಿಗಳು ಮುಖ್ಯ ಪರೀಕ್ಷೆಯ ಪ್ರವೇಶ ಪತ್ರದೊಂದಿಗೆ ಪ್ರಿಲಿಮ್ಸ್ ಪರೀಕ್ಷೆಯಲ್ಲಿ ದೃಢೀಕರಣಗೊಂಡ ಪ್ರವೇಶ ಪತ್ರವನ್ನೂ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಅಧಿಸೂಚನೆಯನ್ನು (www.ibps.in/) ನೋಡಬಹುದು.

ಯಾವ ಬ್ಯಾಂಕ್ ? ಎಷ್ಟು ಹುದ್ದೆಗಳು

ಬ್ಯಾಂಕ್	ಆಫೀಸ್ ಅಸಿಸ್ಟೆಂಟ್	ಆಫೀಸರ್ ಸ್ಕೇಲ್ -I	ಲಾ ಆಫೀಸರ್	ಸಿಎ	ಒಟ್ಟು
ಕೆಜಿಬಿ, ಬಳ್ಳಾರಿ	400	200	-	-	600
ಕೆವಿಜಿಬಿ, ಧಾರವಾಡ	50	150	4	2	206
ಒಟ್ಟು	450	350	4	2	806

ಕ್ರೆಡಿಟ್ ಇತಿಹಾಸ

(i) ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಬ್ಯಾಂಕ್‌ಖಾತೆ ಹೊಂದಿದ್ದರೆ, ಅವರ CIBIL ಸ್ಕೋರ್ ಚೆನ್ನಾಗಿರಬೇಕು ಮತ್ತು ಬ್ಯಾಂಕ್ ಹುದ್ದೆಗೆ ನೇಮಕವಾಗುವ ಸಮಯದಲ್ಲಿ ಕನಿಷ್ಠ CIBIL ಸ್ಕೋರ್ 650 ಅಥವಾ ಅದಕ್ಕಿಂತ ಹೆಚ್ಚಿರುವುದನ್ನು ಖಚಿತಪಡಿಸಿ ಕೊಳ್ಳಬೇಕು.

(ii) ಸೇರುವ ದಿನಾಂಕದ ಮೊದಲು CIBIL ಸ್ಥಿತಿಯನ್ನು ನವೀಕರಿಸದಿದ್ದರೆ, ಮೊದಲು ನವೀಕರಿಸಬೇಕು ಅಥವಾ CIBIL ವರದಿ ಪ್ರತಿಕೂಲವಾಗಿದ್ದಲ್ಲಿ ಆ ಸಾಲದ ಖಾತೆಗಳಿಗೆ ಸಂಬಂಧಿಸಿದಂತೆ ಯಾವುದೇ ಬಾಕಿ ಉಳಿದಿಲ್ಲ ಎಂದು ಬ್ಯಾಂಕಿನಿಂದ ನಿರಾಪೇಕ್ಷಣಾ ಪತ್ರ(NOC) ಪಡೆಯಬೇಕು. ವಿಫಲವಾದರೆ ಆಫರ್ ಪತ್ರವನ್ನು ಹಿಂಪಡೆಯಲಾಗುತ್ತದೆ / ರದ್ದುಗೊಳಿಸಲಾಗುತ್ತದೆ.

ಶುಲ್ಕಪಾವತಿ: ಸಾಮಾನ್ಯ ಮತ್ತು ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ₹ 850 ಹಾಗೂ ಎಸ್‌ಸಿ/ಎಸ್‌ಟಿ/ ಅಂಗವಿಕಲರು / ಮಾಜಿ ಸೈನಿಕ ಅಭ್ಯರ್ಥಿಗಳಿಗೆ ₹175 ಶುಲ್ಕ ನಿಗದಿಪಡಿಸಲಾಗಿದೆ. ಆನ್‌ಲೈನ್ ಮೂಲಕ ಅಗತ್ಯವಾದ ಅರ್ಜಿ ಶುಲ್ಕವನ್ನು ಪಾವತಿಸಬೇಕಾಗುತ್ತದೆ.

(ಮುಂದಿನ ವಾರ: ಪರೀಕ್ಷೆಯ ವಿಷಯಗಳು ಮತ್ತು ಸಿದ್ಧತೆ ಕುರಿತ ವಿವರ)

(ಲೇಖಕರು ಬ್ಯಾಂಕಿಂಗ್ ಮತ್ತು ವ್ಯಕ್ತಿತ್ವ ವಿಕಸನ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು, ಮಡಿಕೇರಿ)

ಅರ್ಜಿ ಸಲ್ಲಿಸುವಾಗ ಗಮನಿಸಬೇಕಾದ ಅಂಶಗಳು

- ನಿಗದಿತ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಆಫೀಸ್ ಅಸಿಸ್ಟೆಂಟ್ ಮತ್ತು ಆಫೀಸರ್ ಹುದ್ದೆ ಎರಡಕ್ಕೂ ಅರ್ಜಿ ಸಲ್ಲಿಸಬಹುದು.
- ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಯು ತನ್ನ ಕೈ ಬರಹದ ಪ್ರಮಾಣಪತ್ರವನ್ನು ಸ್ಕ್ಯಾನ್ ಮಾಡಿ ಅರ್ಜಿಯೊಂದಿಗೆ ಅಪ್ ಲೋಡ್ ಮಾಡಬೇಕು. ಕ್ಯಾಪಿಟಲ್ ಲೆಟರ್ಸ್‌ನಲ್ಲಿ ಬರೆದ ಡಿಕ್ಲರೇಷನ್ ಮತ್ತು ಸಹಿ ಪರಿಗಣಿಸುವುದಿಲ್ಲ ಎಂದು ಅಧಿಸೂಚನೆಯಲ್ಲಿ ಸ್ಪಷ್ಟಪಡಿಸಲಾಗಿದೆ.
- **ಅರ್ಜಿ ಸಲ್ಲಿಕೆ, ಅಧಿಸೂಚನೆ ಕುರಿತ ಹೆಚ್ಚಿನ ಮಾಹಿತಿಗಾಗಿ www.ibps.in/ ಜಾಲತಾಣಕ್ಕೆ ಭೇಟಿ ನೀಡಿ.**

‘ತರಬೇತಿಗಿಂತ ಮಾರ್ಗದರ್ಶನ ಮುಖ್ಯ’

ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಮಳೂರಿನ ದಾಮಿನಿ ದಾಸ್, ಎಂಜಿನಿಯರಿಂಗ್ ಪದವೀಧರೆ. 2022ನೇ ಸಾಲಿನ ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ನಾಗರಿಕ ಸೇವಾ ಪರೀಕ್ಷೆಯಲ್ಲಿ 345ನೇ ರ್‍ಯಾಂಕ್ ಪಡೆದಿದ್ದಾರೆ. ಎರಡನೇ ಪ್ರಯತ್ನದಲ್ಲಿ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವ ಅವರು, ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ಹೇಗಿರಬೇಕು? ಎಂಬುದರ ಕುರಿತು ‘ಸ್ಪರ್ಧಾವಾಣಿ’ಯೊಂದಿಗೆ ಅನುಭವ ಹಂಚಿಕೊಂಡಿದ್ದಾರೆ.

ಸಂತೋಷ ಜಿಗಳಿಕೊಪ್ಪ



ದಾಮಿನಿ ದಾಸ್

- **ಯುಪಿಎಸ್ಸಿ ಪರೀಕ್ಷೆ ಬರೆಯಲು ಸ್ಫೂರ್ತಿ ಏನು?**

‘ಬಡವರು, ರೈತರು ಹಾಗೂ ನೊಂದವರ ಪರವಾಗಿ ಕೆಲಸ ಮಾಡುವ ಅವಕಾಶ ಸಿಗಬೇಕಾದರೆ, ಐಎಎಸ್ ಅಧಿಕಾರಿಯಾಗಬೇಕು’ ಎಂದು ನನ್ನ ತಂದೆ ಪದೇ ಪದೇ ಹೇಳುತ್ತಿದ್ದರು. ಅವರ ಮಾತುಗಳೇ ನನಗೆ ಸ್ಫೂರ್ತಿಯಾದವು. ಅವರೇ ನಾಗರಿಕ ಸೇವೆ ಪರೀಕ್ಷೆ ತೆಗೆದುಕೊಳ್ಳಲು ಧೈರ್ಯ ತುಂಬಿದರು. ಇದರ ಜೊತೆಗೆ, ಹಿಂದೆ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉನ್ನತಮಟ್ಟದ ರ್‍ಯಾಂಕ್ ಪಡೆದ ಅಭ್ಯರ್ಥಿಗಳ ಸಂದರ್ಶನ ಕೂಡ ನನಗೆ ಉತ್ತೇಜನ ನೀಡಿತು.

- **ಎಷ್ಟನೇ ಪ್ರಯತ್ನದಲ್ಲಿ ಯಶಸ್ಸು ನಿಮ್ಮದಾಗಿದೆ ?**

ಎರಡನೇ ಪ್ರಯತ್ನದಲ್ಲಿ 345ನೇ ರ್‍ಯಾಂಕ್ ಬಂದಿದೆ. ಮೊದಲ ಪ್ರಯತ್ನದಲ್ಲಿ ಪೂರ್ವಭಾವಿ ಪರೀಕ್ಷೆಯಲ್ಲಿ ಮಾತ್ರ ಪಾಸಾಗಿದ್ದೆ. ಮುಖ್ಯ ಪರೀಕ್ಷೆಯಲ್ಲಿ ಕಡಿಮೆ ಅಂಕಗಳು ಬಂದಿದ್ದವು. ಹಾಗಾಗಿ, ಸಂದರ್ಶನಕ್ಕೆ ಹೋಗಲು ಆಗಲಿಲ್ಲ. ಮೊದಲ ಪ್ರಯತ್ನದಲ್ಲಿ ಏನೆಲ್ಲ ತಪ್ಪು ಮಾಡಿದ್ದೆನೋ, ಅವೆಲ್ಲವನ್ನೂ ತಿದ್ದಿಕೊಂಡು ಎರಡನೇ ಪ್ರಯತ್ನದಲ್ಲಿ ಪರೀಕ್ಷೆ ಬರೆದೆ. ಸೋಲು ಸಹಜ. ಪುನಃ ಪ್ರಯತ್ನಿಸಿ ಪರೀಕ್ಷೆ ಬರೆದರೆ ಯಶಸ್ಸು ನಿಶ್ಚಿತ.

- **ಪರೀಕ್ಷೆಗಳಿಗೆ ಹೇಗೆ ಸಿದ್ಧತೆ ಮಾಡಿಕೊಂಡಿದ್ದಿರಿ?**

ಯುಪಿಎಸ್‌ಸಿ ಪರೀಕ್ಷೆಗೆಂದು ಸಿದ್ಧತೆ ಮಾಡಿಕೊಳ್ಳುವಾಗ, ಪೂರ್ವಭಾವಿ(ಪ್ರಿಲಿಮ್ಸ್) ಮತ್ತು ಮುಖ್ಯಪರೀಕ್ಷೆ ಎಂದು ವಿಂಗಡಿಸಿ ಓದಲಿಲ್ಲ. ಆರಂಭದಿಂದಲೇ ಮುಖ್ಯಪರೀಕ್ಷೆಯನ್ನು ಗಮನದಲ್ಲಿಟ್ಟುಕೊಂಡು ಓದಿದೆ. ಹಿಂದಿನ ವರ್ಷಗಳ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸುತ್ತಿದ್ದೆ. ಮುಖ್ಯವಾಗಿ ದಿನಪತ್ರಿಕೆ ಹಾಗೂ ಮಾಸಪತ್ರಿಕೆಗಳನ್ನು ಓದುತ್ತಿದ್ದೆ. ಈ ಪತ್ರಿಕೆಗಳನ್ನು ಹೆಚ್ಚಾಗಿ ಓದಿದ್ದರಿಂದ ಪ್ರಿಲಿಮ್ಸ್ ಪರೀಕ್ಷೆಗೆ ತುಂಬಾ ಅನುಕೂಲವಾಯಿತು. ಮುಖ್ಯ ಪರೀಕ್ಷೆಯಲ್ಲಿ ವಿವರಣಾತ್ಮಕ ಮಾದರಿಯ ಹೆಚ್ಚು ಪ್ರಶ್ನೆಗಳಿರುತ್ತವೆ. ಜೊತೆಗೆ, ಐಚ್ಛಿಕ ವಿಷಯವೂ ಇರುತ್ತದೆ. ಹೀಗಾಗಿ, ಮುಖ್ಯಪರೀಕ್ಷೆಯನ್ನೇ ಗುರಿಯಾಗಿಸಿಕೊಂಡು ಓದಿದರೆ, ಎರಡೂ ಪರೀಕ್ಷೆಗಳಿಗೂ ಹೆಚ್ಚು ಅನುಕೂಲವಾಗುತ್ತದೆ.

- **ಓದಿದ್ದನ್ನು ಹೇಗೆ ನೆನಪಿನಲ್ಲಿಟ್ಟುಕೊಳ್ಳುತ್ತಿದ್ದಿರಿ ?**

ಐಎಎಸ್ ಅಥವಾ ಐಪಿಎಸ್ ಆಗುವುದು ನನ್ನ ಗುರಿ ಎಂದು ನಿರ್ಧಾರ ಮಾಡಿದ ದಿನದಿಂದಲೇ ಹೀಗೆ ಓದಬೇಕೆಂದು ಯೋಜನೆ ತಯಾರಿಸಿ, ವೇಳಾಪಟ್ಟಿ ಸಿದ್ಧಮಾಡಿಕೊಂಡೆ. ಅದಕ್ಕೆ ತಕ್ಕಂತೆ ಓದಿದೆ. ನನ್ನ ಪ್ರಕಾರ, ದಿನಕ್ಕೆ ಎಷ್ಟು ಗಂಟೆ ಓದಬೇಕು ಎಂಬುದಕ್ಕಿಂತ, ಯಾವುದನ್ನು ಓದಬೇಕು ಎಷ್ಟು ಅರ್ಥ ಮಾಡಿಕೊಂಡು ಓದುತ್ತೇವೆ ಎಂಬುದು ಮುಖ್ಯ. ಇದನ್ನೇ ನಾನು ಅನುಸರಿಸಿದ್ದು.

ಬರೀ ಓದಿದರೆ ಸಾಲದು, ಅದನ್ನು ನೋಟ್ಸ್ ಮಾಡಿಕೊಳ್ಳಬೇಕು. ಇದು ಓದಿದ್ದು ನೆನಪಿನಲ್ಲಿ ಉಳಿಯಲು ಸಹಕಾರಿ. ಓದುತ್ತಾ, ಟಿಪ್ಪಣಿ ಮಾಡಿಕೊಳ್ಳುತ್ತಾ, ಮಾಡಿಕೊಂಡಿದ್ದನ್ನು ಆಗಾಗ್ಗೆ ಪುನರ್ ಮನನ ಮಾಡುತ್ತಿದ್ದೆ. ಈ ಕಾರಣದಿಂದಲೇ, ಪರೀಕ್ಷಾ ಸಮಯದಲ್ಲಿ ತುಂಬಾ ಅನುಕೂಲವಾಯಿತು.

- **ಯುಪಿಎಸ್ಸಿ ಪರೀಕ್ಷೆ ಎದುರಿಸಲು ತರಬೇತಿ ಕಡ್ಡಾಯವೇ?**

ತರಬೇತಿಗಿಂತ ಮಾರ್ಗದರ್ಶನ ಮುಖ್ಯ ಅಂತ ಅನ್ನಿಸುತ್ತದೆ. ನನಗೆ, ಪದವಿ ಓದುವಾಗ, ಈ ಸ್ಪರ್ಧಾತ್ಮಕ ಪರೀಕ್ಷೆಯ ಸ್ವರೂಪ ಹೇಗಿರುತ್ತದೆ ಎಂಬುದೇ ಗೊತ್ತಿರಲಿಲ್ಲ. ಪರೀಕ್ಷೆ ಬರೆಯಬೇಕೆಂದು ನಿರ್ಧಾರ ಮಾಡಿದ ಮೇಲೆ, ಸ್ವರೂಪವನ್ನು ತಿಳಿದುಕೊಂಡೆ. ಇದರ ಜೊತೆಗೆ, ಪರೀಕ್ಷೆಯಲ್ಲಿ ಯಶಸ್ವಿಯಾಗಿರುವವರ ಮಾರ್ಗದರ್ಶನ ಪಡೆದೆ. ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಹಾಗೂ ಸಂದರ್ಶನ ಮೂರಕ್ಕೂ ನನಗೆ ಉತ್ತಮ ಮಾರ್ಗದರ್ಶನ ಸಿಕ್ಕಿತು. ತರಬೇತಿ ಬೇಕು- ಬೇಡ ಎನ್ನುವುದು ಅವರವರ ಅಗತ್ಯ ಹಾಗೂ ಸಾಮರ್ಥ್ಯಕ್ಕೆ ಬಿಟ್ಟ ವಿಚಾರ.

- **ಮುಂದೆ ಈ ಪರೀಕ್ಷೆ ಬರೆಯುವವರಿಗೆ ನಿಮ್ಮ ಟಿಪ್ಸ್ ?**
  - ವಿಷಯಗಳನ್ನು (Course Material) ಸಂಗ್ರಹ ಮಾಡಿಕೊಳ್ಳಬೇಕು. ನಿರಂತರವಾದ ಅಧ್ಯಯನ ತುಂಬಾ ಅಗತ್ಯ. ಪ್ರಯತ್ನಗಳು ವಿಫಲವಾದಾಗ ಎದೆಗುಂದದೆ, ಛಲ ಬಿಡದೇ ಗುರಿಯತ್ತ ಮುನ್ನಡೆಯಬೇಕು.
  - ಓದಿದರೆ ಸಾಲದು, ಬರವಣಿಗೆಗೂ ಆದ್ಯತೆ ನೀಡಬೇಕು. ಅದರಲ್ಲೂ ಪ್ರಬಂಧ ಬರವಣಿಗೆಗೆ ಹೆಚ್ಚು ಒತ್ತು ನೀಡಬೇಕು.
  - ಓದಿದ್ದನ್ನು ನೋಟ್ಸ್ ಮಾಡಿಟ್ಟುಕೊಳ್ಳಬೇಕು. ಎಲ್ಲದಕ್ಕಿಂತ ಮುಖ್ಯವಾಗಿ, ಮೌಲ್ಯಮಾಪಕರಿಗೆ ಅರ್ಥವಾಗುವ ರೀತಿಯಲ್ಲಿ ಉತ್ತರ ಬರೆಯುವ ಕಲೆ ರೂಢಿಸಿಕೊಳ್ಳಬೇಕು.

- **ಕನ್ನಡ ಭಾಷೆಯಲ್ಲಿ ಪರೀಕ್ಷೆ ಬರೆಯಬಹುದೇ?**

ಖಂಡಿತ ಬರೆಯಬಹುದು. ಪೂರ್ವಭಾವಿ ಪರೀಕ್ಷೆ ಬಳಿಕ, ಮುಖ್ಯಪರೀಕ್ಷೆಯನ್ನು ಕನ್ನಡದಲ್ಲಿ ಬರೆಯುವ ಅವಕಾಶವಿದೆ. ಜೊತೆಗೆ, ಸಂದರ್ಶನವನ್ನೂ ಕನ್ನಡದಲ್ಲಿ ಎದುರಿಸಬಹುದು. ಇಂಗ್ಲಿಷ್‌ನಲ್ಲಿ ವೇಗವಾಗಿ ಬರೆಯಬಹುದು. ಕನ್ನಡದಲ್ಲಿ ಅಷ್ಟು ವೇಗವಾಗಿ ಬರೆಯುವುದು ಕಷ್ಟ. ಹೀಗಾಗಿ, ಕನ್ನಡದಲ್ಲಿ ಪರೀಕ್ಷೆ ಬರೆಯುವವರು ವೇಗವಾಗಿ ಬರೆಯುವುದನ್ನು ಅಭ್ಯಾಸ ಮಾಡಬೇಕು. ಜೊತೆಗೆ, ಕನ್ನಡದಲ್ಲಿ ಸಿದ್ಧ ವಿಷಯ ವಸ್ತುಗಳು (ರೆಡಿ ಕೋರ್ಸ್ ಮೆಟೀರಿಯಲ್) ಲಭ್ಯವಿರುವುದು ಕಡಿಮೆ. ಅಭ್ಯರ್ಥಿಗಳೇ ನೋಟ್ಸ್ ತಯಾರಿ ಮಾಡಿಕೊಂಡು ಓದಿ, ಕನ್ನಡದಲ್ಲಿ ಪರೀಕ್ಷೆ ಬರೆಯಬಹುದು.

ಕಳೆದ ವಾರ ಇದೇ ಅಂಕಣದಲ್ಲಿ ಯುಪಿಎಸ್‌ಸಿಯ 2022ನೇ ಸಾಲಿನ ನಾಗರಿಕ ಸೇವಾ ಪರೀಕ್ಷೆಯಲ್ಲಿ 390ನೇ ರ್‍ಯಾಂಕ್ ಪಡೆದ **ಮೈಸೂರಿನ ಎಂ.ಪೂಜಾ** ಅವರ ಸಂದರ್ಶನ ಪ್ರಕಟವಾಗಿತ್ತು. ಆ ಸಂದರ್ಶನದ ವಿಡಿಯೊ ವೀಕ್ಷಿಸಲು ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.

‘ವಿದ್ಯುನ್ಮಾನ ಮತಯಂತ್ರ’ದ ಹಾದಿ

ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ –ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ಮಾಹಿತಿ ಇಲ್ಲಿದೆ.

ಪ್ರಚಲಿತ

ಹನುಮನಾಯಕ ರಾಥೋಡ್

ಇತ್ತೀಚೆಗಷ್ಟೇ ಕರ್ನಾಟಕ ವಿಧಾನಸಭಾ ಚುನಾವಣೆ ಪೂರ್ಣಗೊಂಡಿದೆ. ಹಿಂದಿನ ಚುನಾವಣೆಗಳಲ್ಲಿ ಇವಿಎಂ ಕಾರ್ಯನಿರ್ವಹಣೆ ಬಗ್ಗೆ ಹಲವು ರಾಜಕೀಯ ಪಕ್ಷಗಳು ಆಕ್ಷೇಪ ಎತ್ತಿದ್ದವು. ಆದರೆ, ಈ ಚುನಾವಣೆಯ ನಂತರದಲ್ಲಿ ಇವಿಎಂಗಳ (ಎಲೆಕ್ಟ್ರಾನಿಕ್ ವೋಟಿಂಗ್ ಮಷೀನ್ - ಇವಿಎಂ) ಕುರಿತು ಅಂಥ ಯಾವುದೇ ಚರ್ಚೆಗಳಾಗಲಿಲ್ಲ.

ವಿದ್ಯುನ್ಮಾನ ಮತಯಂತ್ರಗಳನ್ನು ಚುನಾವಣೆಯಲ್ಲಿ ಬಳಸಬೇಕೆಂಬ ಯೋಚನೆ ಶುರುವಾಗಿದ್ದು 1977ರಲ್ಲಿ. ಆ ವರ್ಷದಲ್ಲಿ ಚುನಾವಣಾ ಆಯೋಗ ಮೊದಲ ಬಾರಿಗೆ ವಿದ್ಯುನ್ಮಾನ ಮತಯಂತ್ರಗಳ ಬಳಕೆಯ ಕುರಿತು ಪ್ರಸ್ತಾವನೆ ಸಲ್ಲಿಸಿತು. ಚುನಾವಣಾ ವೆಚ್ಚವನ್ನು ಉಳಿಸಲು, ಕಾಗದದ ಬಳಕೆ ಕಡಿಮೆ ಮಾಡಲು ಮತ್ತು ಮತ ಪೆಟ್ಟಿಗೆ ಕಳವಿನಂತಹ ಪ್ರಕರಣಗಳ ವಿರುದ್ಧ ರಕ್ಷಣೆಯಾಗಿ ಕಾರ್ಯನಿರ್ವಹಿಸಲು ಇವಿಎಂಗಳು ನೆರವಾಗುತ್ತವೆ ಎಂಬುದು ಇದರ ಬಳಕೆಯ ಹಿಂದಿನ ಉದ್ದೇಶವಾಗಿತ್ತು.

ಬೆಂಗಳೂರಿನ ಭಾರತ್ ಎಲೆಕ್ಟ್ರಾನಿಕ್ಸ್ ನಿಗಮ ಮತ್ತು ಹೈದರಾಬಾದ್‌ನ ಎಲೆಕ್ಟ್ರಾನಿಕ್ ಕಾರ್ಪೊರೇಷನ್ ಇಂಡಿಯಾ ಲಿಮಿಟೆಡ್ ಸಹಯೋಗದೊಂದಿಗೆ ಕೇಂದ್ರ ಚುನಾವಣಾ ಆಯೋಗವು ಎಲೆಕ್ಟ್ರಾನಿಕ್ ಮತಯಂತ್ರವನ್ನು ವಿನ್ಯಾಸಗೊಳಿಸಿತು.

ತಂತ್ರಜ್ಞಾನದ ರಚನೆ

- ಎಲೆಕ್ಟ್ರಾನಿಕ್ ಮತಯಂತ್ರವು ಎರಡು ಘಟಕಗಳನ್ನು ಒಳಗೊಂಡಿದೆ. ಅವುಗಳೆಂದರೆ 1)ನಿಯಂತ್ರಣ ಘಟಕ 2)ಬ್ಯಾಲೆಟಿಂಗ್ ಘಟಕ.
- ಎರಡು ಘಟಕಗಳನ್ನು ಐದು ಮೀಟರ್ ಕೇಬಲ್‌ನಿಂದ ಸಂಪರ್ಕಿಸಲಾಗುತ್ತದೆ. ನಿಯಂತ್ರಕ ಘಟಕವನ್ನು ಚುನಾವಣಾ ಅಧಿಕಾರಿಯು ನಿಯಂತ್ರಿಸುತ್ತಾರೆ. ಬ್ಯಾಲೆಟಿಂಗ್ ಘಟಕವನ್ನು ಮತದಾರರು ಮತದಾನದ ಕಂಪಾರ್ಟ್‌ಮೆಂಟ್‌ನಲ್ಲಿ ಇಡುತ್ತಾರೆ.
- ಮತ ಯಂತ್ರದಲ್ಲಿರುವ ಮೈಕ್ರೊಚಿಪ್ ಅನ್ನು ಜಪಾನ್ ದೇಶದವರು ತಯಾರಿಸುತ್ತಾರೆ. ಅವರು ಮತ ಯಂತ್ರಗಳನ್ನು ರಫ್ತು ಮಾಡುವ ಸಂದರ್ಭದಲ್ಲಿ ಸೀಲ್ ಮಾಡಿರುತ್ತಾರೆ.

ಸುರಕ್ಷತೆಯ ನಿರ್ವಹಣೆ


ಮತ ಯಂತ್ರದಲ್ಲಿ ಬಳಸಿರುವ ಸಾಫ್ಟ್‌ವೇರ್ ಸುರಕ್ಷತೆಯ ಹಿನ್ನೆಲೆಯಲ್ಲಿ ತಯಾರಕರ ಮಟ್ಟದಲ್ಲಿ ಕಠಿಣ ಶಿಷ್ಟಾಚಾರಗಳಿವೆ. ಉತ್ಪಾದನೆಯ ನಂತರ ಇವಿಎಂಗಳನ್ನು ರಾಜ್ಯಕ್ಕೆ ಮತ್ತು ಅಲ್ಲಿಂದ ಜಿಲ್ಲೆಗಳಿಗೆ ಕಳುಹಿಸಲಾಗುತ್ತದೆ. ಪ್ರತಿ ಇಸಿಐ- ಇವಿಎಂ ಟ್ರ್ಯಾಕಿಂಗ್ ಸಾಫ್ಟ್‌ವೇರ್ ಬಳಸಿಕೊಂಡು ಚುನಾವಣಾ ಆಯೋಗವು ಅದರ ಡೇಟಾಬೇಸ್‌ನಿಂದ ಯಾವ ಯಂತ್ರ ಎಲ್ಲಿಗೆ ತಲುಪುತ್ತದೆ ಎಂಬುದನ್ನು ಕಂಡುಹಿಡಿಯಬಹುದು. ಪ್ರತಿ ಮೈಕ್ರೊಚಿಪ್‌ನ ಮೆಮೊರಿಯಲ್ಲಿ ಗುರುತಿನ ಸಂಖ್ಯೆ ಅಡಕವಾಗಿದೆ. ಮೈಕ್ರೊಚಿಪ್ ಬದಲಾಯಿಸುವ ಯಾವುದೇ ಪ್ರಯತ್ನವನ್ನು ಪತ್ತೆ ಹಚ್ಚಬಹುದು ಮತ್ತು ಇವಿಎಂನ್ನು ನಿಷ್ಕ್ರಿಯಗೊಳಿಸಬಹುದು.

ಶೇಖರಣೆ ಸಾಮರ್ಥ್ಯ

ಮತಯಂತ್ರದಲ್ಲಿ ಗರಿಷ್ಠ 64 ಅಭ್ಯರ್ಥಿಗಳ ಹೆಸರನ್ನು ಪಟ್ಟಿ ಮಾಡಬಹುದು. 16 ಜನ ಅಭ್ಯರ್ಥಿಗಳ ಒಂದು ಪಟ್ಟಿಯಂತೆ ತಯಾರಿಸುತ್ತಾರೆ. 16ರ ನಂತರದ ಅಭ್ಯರ್ಥಿಯನ್ನು ಎರಡನೇ ಬ್ಯಾಲೆಟಿಂಗ್ ಪಟ್ಟಿಗೆ ಸೇರಿಸುತ್ತಾರೆ.

ಮತದಾನ ಮಾಡುವ ವಿಧಾನ

One Person One Vote ಎಂಬಂತೆ ಒಮ್ಮೆ ಬ್ಯಾಲೆಟಿಂಗ್ ಘಟಕದ ಮೂಲಕ ಮತದಾನ ಮಾಡಿದ ಮತದಾರನು ಮತ್ತೊಮ್ಮೆ ಮಾಡಿದರೆ ಅದು ದಾಖಲಾಗುವುದಿಲ್ಲ. ಒಂದು ನಿಮಿಷಕ್ಕೆ ಐದು ಮತ ಮಾತ್ರ ಹಾಕಬಹುದಾದರಿಂದ ಹೆಚ್ಚು ಮತವನ್ನು ಏಕಕಾಲದಲ್ಲಿ ಹಾಕಲಾಗು ವುದಿಲ್ಲ. ಇದರಿಂದ ಸಾವಿರಾರು ಮತಗಳನ್ನು ನಕಲಿ ಮಾಡಿ ಮತಪೆಟ್ಟಿಗೆ ತುಂಬುವುದನ್ನು ತಡೆಯಬಹುದಾಗಿದೆ.



ಮತಯಂತ್ರಗಳ ಉಪಯುಕ್ತತೆ

- ಸುಲಭವಾಗಿ ಸಾಗಿಸಲು ಸಾಧ್ಯ. 1989ರಲ್ಲಿ ಇವಿಎಂ ಬೆಲೆ ₹5500 ಆಗಿತ್ತು. ಪ್ರಸ್ತುತ ಬೆಲೆ ಮತಪತ್ರಕ್ಕೆ ಹೋಲಿಸಿದರೆ ಕಡಿಮೆ ಖರ್ಚಿನದ್ದಾಗಿದೆ.
- ಕಡಿಮೆ ತೂಕ. ಸುಲಭವಾಗಿ ಸಾಗಿಸಲು ಸಹಾಯವಾಗುವಂತೆ ಪಾಲಿ ಪ್ರೊಫೆಲಿನ್ ನಿಂದ ತಯಾರಿಸಲಾಗಿದೆ.
- ಅನಕ್ಷರಸ್ಥರು ಸುಲಭವಾಗಿ ಮತ ಚಲಾಯಿಸಬಹುದು. ಮತ ಎಣಿಕೆಯು ಸುಲಭ. ಒಂದು ಕ್ಷೇತ್ರದ ಮತ ಎಣಿಕೆ ಪೂರ್ಣಗೊಳಿಸಲು 2 ರಿಂದ 3 ಗಂಟೆ ಅವಧಿ ಸಾಕು. ಆದರೆ ಮತಪತ್ರಗಳನ್ನು ಬಳಸುತ್ತಿದ್ದಾಗ, ಮತ ಎಣಿಕೆ ಪೂರ್ಣಗೊಳಿಸಲು 30 ರಿಂದ 40 ಗಂಟೆಗಳ ಕಾಲಾವಧಿ ತೆಗೆದುಕೊಳ್ಳುತ್ತಿತ್ತು.

ಇವಿಎಂ ಮೊದಲ ಪ್ರಯೋಗ

- 1982ರಲ್ಲಿ ಕೇರಳದ ಪರೂರ್ ವಿಧಾನಸಭಾ ಚುನಾವಣೆಯಲ್ಲಿ ಮೊದಲ ಬಾರಿಗೆ ಇವಿಎಂ ಬಳಕೆಮಾಡಲಾಯಿತು. 84 ಮತಗಟ್ಟೆಗಳ ಪೈಕಿ 50 ಮತಗಟ್ಟೆಗಳಲ್ಲಿ ಜನರು ಮತಯಂತ್ರದ ಮೂಲಕವೇ ಮತ ಚಲಾವಣೆಮಾಡಿದರು.
- 1983ರಲ್ಲಿ ಮೊದಲ ಬಾರಿಗೆ ಕರ್ನಾಟಕಕ್ಕೆ ವಿದ್ಯುನ್ಮಾನ ಮತ ಯಂತ್ರವನ್ನು ಪರಿಚಯಿಸಲಾಯಿತು. ಬೆಂಗಳೂರಿನ ಶಾಂತಿನಗರ ಕ್ಷೇತ್ರದಲ್ಲಿ ಮೊದಲ ಬಾರಿಗೆ ಮತಯಂತ್ರ ಬಳಕೆಯಾಯಿತು.
- ನಂತರ 1998 ನವೆಂಬರ್‌ನಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮಧ್ಯಪ್ರದೇಶದ ಐದು ವಿಧಾನಸಭಾ ಕ್ಷೇತ್ರ, ರಾಜಸ್ಥಾನದ ಐದು ವಿಧಾನಸಭಾ ಕ್ಷೇತ್ರ ಹಾಗೂ ರಾಷ್ಟ್ರೀಯ ರಾಜಧಾನಿ ದೆಹಲಿಯ ಆರು ವಿಧಾನಸಭಾ ಕ್ಷೇತ್ರಗಳ ಒಟ್ಟು 16 ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಾಯೋಗಿಕವಾಗಿ ಬಳಸಲಾಯಿತು.
- 2002ರ ಚುನಾವಣೆಯಿಂದ ಎಲ್ಲಾ ಕಡೆ ಎಲೆಕ್ಟ್ರಾನಿಕ್ ಮತಯಂತ್ರವನ್ನು ಬಳಸಲಾಗುತ್ತಿದೆ.
- ಪ್ರಥಮವಾಗಿ ಸಂಪೂರ್ಣ ಎಲ್ಲಾ ಕ್ಷೇತ್ರಗಳಲ್ಲೂ ಮತಯಂತ್ರಗಳೊಂದಿಗೆ ಚುನಾವಣೆ ನಡೆಸಿದ ದೇಶದ ಮೊದಲ ರಾಜ್ಯ ಕರ್ನಾಟಕ.

ಕೋರ್ಟ್ ತಡೆ 1984

1984ರಲ್ಲಿ ಇವಿಎಂಗೆ ಮೊದಲ ವಿಘ್ನ ಎದುರಾಯಿತು. ಯಂತ್ರಗಳ ಬಳಕೆಗೆ ಕೋರ್ಟ್ ತಡೆ ನೀಡಿತು. ಪ್ರಜಾಪ್ರತಿನಿಧಿ ಕಾಯ್ದೆಗೆ ತಿದ್ದುಪಡಿಯಾಗುವವರೆಗೆ ಇವಿಎಂ ಬಳಕೆಮಾಡುವಂತಿಲ್ಲ ಎಂದ ಸುಪ್ರೀಂ ಕೋರ್ಟ್, ಪರೂರ್ ಕ್ಷೇತ್ರದ ಫಲಿತಾಂಶವನ್ನು ತಡೆಹಿಡಿಯಿತು.

ಸುಪ್ರೀಂ ಕೋರ್ಟ್ ಆದೇಶದಂತೆ ಮತಯಂತ್ರಗಳನ್ನು ಚುನಾವಣೆಗಳಲ್ಲಿ ಬಳಸಿಕೊಳ್ಳಲು ಅನುವಾಗುವ ರೀತಿಯಲ್ಲಿ ಪ್ರಜಾಪ್ರತಿನಿಧಿ ಕಾಯ್ದೆಗೆ ತಿದ್ದುಪಡಿ ತಂದು, 61ಎ ಸೆಕ್ಷನ್ ಸೇರ್ಪಡೆಮಾಡಲಾಯಿತು. ಈ ತಿದ್ದುಪಡಿಯಿಂದ ಮತಯಂತ್ರಗಳ ಬಳಕೆಗಿದ್ದ ಅಡ್ಡಿ ನಿವಾರಣೆಯಾಯಿತು. ನಂತರ ಮೂರು ಲೋಕಸಭೆ ಹಾಗೂ 118 ವಿಧಾನಸಭೆ ಚುನಾವಣೆಗಳಲ್ಲಿ ಮತ್ತೆ ಮತ ಯಂತ್ರಗಳನ್ನು ಬಳಸಲಾಯಿತು. 2004ರ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲೂ ಎಲೆಕ್ಟ್ರಾನಿಕ್ ಮತಯಂತ್ರವನ್ನು ಬಳಸಲಾಯಿತು.

ಹೊರದೇಶಗಳಿಗೂ ರಫ್ತು

ಭಾರತದ ಚುನಾವಣೆಗಳಲ್ಲಿ ಇವಿಎಂಗಳನ್ನು ಪರಿಚಯಿಸಿದ ನಂತರ ಭೂತಾನ್, ನೇಪಾಳ ಮತ್ತು ನಮೀಬಿಯಾದಂತಹ ಅನೇಕ ದೇಶಗಳು ತಮ್ಮ ಚುನಾವಣೆಗಳಲ್ಲಿ ಭಾರತದಲ್ಲಿ ತಯಾರಿಸಿದ ಇವಿಎಂ ಯಂತ್ರಗಳನ್ನು ಬಳಸಿವೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಕಾಂಗ್ರೆಸ್ ಗ್ಯಾರಂಟಿಯ ಉಚಿತ ವಿದ್ಯುತ್ ಯೋಜನೆ; ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿಕೆ

ಬಾಡಿಗೆದಾರರ ಅನುಕೂಲಕ್ಕೆ ಸರಳ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಡಿಗೆ, ಗುತ್ತಿಗೆ (ಲೀಸ್) ಮನೆಗಳಲ್ಲಿ ವಾಸಿಸುವ ಎಲ್ಲರಿಗೂ ಮನೆ ಬಾಡಿಗೆ ಕರಾರುಪತ್ರ ಸೇರಿದಂತೆ ಸರಳ ದಾಖಲೆ ಪಡೆದು ಉಚಿತ ವಿದ್ಯುತ್ ಪೂರೈಸಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.



ಕೆ.ಜೆ.ಜಾರ್ಜ್

ಆಧಾರ್ ಹಾಗೂ ವಿದ್ಯುತ್ ಮೀಟರ್‌ನ ಆರ್‌ಆರ್ ಸಂಖ್ಯೆ ಹೊಂದಾಣಿಕೆಯಾದರೆ ಯಾವುದೇ ಸಮಸ್ಯೆ ಇಲ್ಲ. ಒಂದೇ ಮನೆಯಲ್ಲಿ ಬಹುದಿನಗಳಿಂದ ವಾಸಿಸುತ್ತಿರುವ ಬಾಡಿಗೆದಾರರಿಗೂ ಕೆಲ ದಾಖಲೆಗಳಿರುತ್ತವೆ. ಹೊಸದಾಗಿ ಬಾಡಿಗೆ ಮನೆಗೆ ಬಂದವರು, ಮನೆ ಬದಲಿಸಿದವರು. ಮತ್ತೊಂದು ಸ್ಥಳದ ವಿಳಾಸ ಹೊಂದಿರುವ ದಾಖಲೆ ಹೊಂದಿರುವವರು ಮಾಲೀಕರಿಂದ ಪಡೆದ ಕರಾರು ಪತ್ರ ಅಥವಾ ವಾಸ ದೃಢೀಕರಣದ ಯಾವುದೇ ದಾಖಲೆ ನೀಡಿದರೆ ಸಾಕು ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.

ಗೃಹಜ್ಯೋತಿ ಯೋಜನೆ ನಿಯಮಗಳಂತೆ 200 ಯೂನಿಟ್‌ಗಿಂತ ಕಡಿಮೆ ವಿದ್ಯುತ್ ಬಳಸುವ 2.14 ಕೋಟಿ ಗ್ರಾಹಕರಿಗೆ ಈ ಯೋಜನೆಯ ಪ್ರಯೋಜನ ದೊರೆಯಲಿದೆ. ಯೋಜನೆಯ ಲಾಭ ಪಡೆಯಲು ಬಯಸುವವರು ಮಾಹಿತಿ ಸಿಂಧು, ಬೆಂಗಳೂರು ಒನ್, ಗ್ರಾಮ ಒನ್ ಸೇರಿದಂತೆ ಯಾವುದೇ ಸೇವಾ ಕೇಂದ್ರಗಳ ಮೂಲಕ ಅರ್ಜಿ ಸಲ್ಲಿಸಬಹುದು. ಗೃಹ ಜ್ಯೋತಿ ಪೋರ್ಟಲ್ ಮೂಲಕ ಮೊಬೈಲ್‌ನಲ್ಲೂ ಅಪ್‌ಲೋಡ್ ಮಾಡಬಹುದು. ಪ್ರತಿ ಮನೆಯ ವಾರ್ಷಿಕ ಸರಾಸರಿ ಬಳಕೆಯ ಆಧಾರದಲ್ಲಿ ಯೂನಿಟ್ ನಿಗದಿ ಮಾಡಲಾಗುವುದು. ಉಚಿತ ಬಳಕೆಗೆ ಯಾವುದೇ ಕನಿಷ್ಠ ಶುಲ್ಕ, ತೆರಿಗೆಯೂ ಇರುವುದಿಲ್ಲ. ಶೂನ್ಯ ಬಿಲ್ ಬರಲಿದೆ ಎಂದರು.

ಪ್ರತಿ ದಿನ 5 ಲಕ್ಷದಿಂದ 10 ಲಕ್ಷದವರೆಗೆ ಅರ್ಜಿ ಸಲ್ಲಿಕೆಯಾಗುವ ನಿರೀಕ್ಷೆ ಇದ್ದು, ಅದಕ್ಕೆ ತಕ್ಕಂತೆ ಸರ್ವರ್ ವ್ಯವಸ್ಥೆ ಮಾಡಲಾಗಿದೆ. ಗ್ರಾಹಕರು ವಿವಿಧ ಸೇವಾ ಕೇಂದ್ರಗಳ ಸಹಾಯ ಪಡೆಯಬಹುದು ಎಂದು ಹೇಳಿದರು

ಹೊಸ ಮನೆಗಳಿಗೆ ಸದ್ಯಕ್ಕಿಲ್ಲ ಯೋಜನೆ ಭಾಗ್ಯ

ಹೊಸದಾಗಿ ಮನೆ ನಿರ್ಮಿಸಿಕೊಂಡವರು ಯೋಜನೆಯ ಲಾಭ ಪಡೆಯಲು ಒಂದು ವರ್ಷದವರೆಗೆ ಕಾಯಬೇಕು. ನಂತರ ಒಂದು ವರ್ಷದ ಸರಾಸರಿ ಬಳಕೆ ನೋಡಿಕೊಂಡು ಯೋಜನೆ ವ್ಯಾಪ್ತಿಗೆ ಒಳಪಡಿಸಲಾಗುವುದು. ನಿರಂತರವಾಗಿ ಮನೆಗಳನ್ನು ಬದಲಿಸುವವರಿಗೂ ಈ ನಿಯಮ ಅನ್ವಯವಾಗಲಿದೆ ಎಂದು ಸಚಿವ ಜಾರ್ಜ್ ಹೇಳಿದರು.

ಹೊರ ರಾಜ್ಯದವರಿಗೂ ಅವಕಾಶ: ಹೊರ ರಾಜ್ಯದಿಂದ ಬಂದು ಕನಿಷ್ಠ ಒಂದು ವರ್ಷ ಇಲ್ಲಿ ನೆಲೆಸಿರುವವರಿಗೂ ಉಚಿತ ವಿದ್ಯುತ್ ಸಿಗಲಿದೆ. ಸ್ಥಳೀಯ ವಾಸದ ದೃಢೀಕರಣ ಇಲ್ಲವೇ, ಬಾಡಿಗೆ ಕರಾರು ಪತ್ರ ನೀಡಬೇಕು ಎಂದರು.

ಬೇಕಾಗುವ ದಾಖಲೆ

- ಬಾಡಿಗೆ/ಲೀಸ್ ಕರಾರು ಪತ್ರ
- ಆಧಾರ್ ಕಾರ್ಡ್
- ಚುನಾವಣಾ ಗುರುತು ಪತ್ರ
- ಪಡಿತರ ಚೀಟಿ

ಅಂಕಿ–ಅಂಶ

2.16 ಕೋಟಿ
ರಾಜ್ಯದಲ್ಲಿನ ವಿದ್ಯುತ್ ಬಳಕೆದಾರರು

2.14 ಕೋಟಿ
200 ಯೂನಿಟ್ ಒಳಗೆ ವಿದ್ಯುತ್ ಬಳಸುವ ಗ್ರಾಹಕರು

₹13,000 ಕೋಟಿ
ಯೋಜನೆಗೆ ಖರ್ಚಾಗುವ ಮೊತ್ತ

ಅರ್ಜಿ ಸಲ್ಲಿಕೆಯ ಅವಧಿ: ಜೂ.15ರಿಂದ ಜು.5
ಯೋಜನೆ ಜಾರಿ: ಜುಲೈ 1ರಿಂದ

- ಪ್ರತಿ ಗ್ರಾಹಕರಿಗೂ ಅವರು ಬಳಸಿದ ವಾರ್ಷಿಕ ಸರಾಸರಿ ಯೂನಿಟ್ ನಿಗದಿ
- ವಾರ್ಷಿಕ ಸರಾಸರಿಗಿಂತ ಶೇ 10ರಷ್ಟು ಹೆಚ್ಚು ಯೂನಿಟ್ ಬಳಕೆಯೂ ಉಚಿತ
- ನಿಗದಿತ ಯೂನಿಟ್ ನಂತರದ 200 ಯೂನಿಟ್‌ವರೆಗೆ ಚಾಲ್ತಿಯಲ್ಲಿನ ದರ ಅನ್ವಯ
- 200 ಯೂನಿಟ್‌ಗೂ ಹೆಚ್ಚು ವಿದ್ಯುತ್ ಬಳಸಿದರೆ ಪೂರ್ಣ ಶುಲ್ಕ, ಶೇ 9ರಷ್ಟು ತೆರಿಗೆ ವಸೂಲಿ
- ಕಡಿಮೆ ಯೂನಿಟ್ ಬಳಕೆಗೆ ಕನಿಷ್ಠ ಶುಲ್ಕ, ತೆರಿಗೆಯಿಂದಲೂ ವಿನಾಯಿತಿ

11ರ ಮಧ್ಯಾಹ್ನದಿಂದ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಘೋಷಿಸಿದ್ದ ಐದು 'ಗ್ಯಾರಂಟಿ'ಗಳಡಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ಕಲ್ಪಿಸುವ 'ಶಕ್ತಿ' ಯೋಜನೆಗೆ ಇದೇ 11ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದ ಮುಂಭಾಗದಲ್ಲಿ ಚಾಲನೆ ನೀಡಲಿದ್ದಾರೆ. ಅಂದು ಮಧ್ಯಾಹ್ನ 1 ಗಂಟೆಯ ಬಳಿಕ ಮಹಿಳೆಯರು ಈ ಸೌಲಭ್ಯ ಪಡೆಯಬಹುದಾಗಿದೆ.

ಯೋಜನೆಯ ಲಾಂಛನ ಹಾಗೂ ಸ್ಮಾರ್ಟ್ ಕಾರ್ಡ್ ಮಾದರಿಯನ್ನು ಮುಖ್ಯಮಂತ್ರಿ ಅನಾವರಣಗೊಳಿಸಲಿದ್ದಾರೆ. ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಆಯಾ ಜಿಲ್ಲೆಗಳ ಉಸ್ತುವಾರಿ ಸಚಿವರು ಈ ಯೋಜನೆಗೆ ಚಾಲನೆ ನೀಡಲಿದ್ದಾರೆ.

'ಅನ್ನಭಾಗ್ಯ' ಮತ್ತು 'ಶಕ್ತಿ' ಯೋಜನೆಯ ಉದ್ಘಾಟನೆ ಕಾರ್ಯಕ್ರಮಗಳ ಕುರಿತು ಮುಖ್ಯಮಂತ್ರಿ ಬುಧವಾರ ಪೂರ್ವಭಾವಿ ಸಭೆ ನಡೆಸಿದರು. ಆಹಾರ ಸಚಿವ ಕೆ.ಎಚ್.ಮುನಿಯಪ್ಪ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಸಭೆಯಲ್ಲಿದ್ದರು.

ಶಿಕ್ಷಕ, ಉಪನ್ಯಾಸಕರ ನೇಮಕಾತಿ; ವಯೋಮಿತಿ 2 ವರ್ಷ ಸಡಿಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ, ಅನುದಾನಿತ ಶಾಲಾ ಕಾಲೇಜುಗಳ ಶಿಕ್ಷಕರು, ಉಪನ್ಯಾಸಕರ ಹುದ್ದೆಗಳ ಭರ್ತಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ ಎರಡು ವರ್ಷಗಳ ಸಡಿಲಿಕೆ ನೀಡಲಾಗಿದೆ.

ಕೋವಿಡ್ ಕಾರಣದಿಂದ ಆರ್ಥಿಕ ಮಿತವ್ಯಯದ ನಿರ್ಬಂಧ ವಿಧಿಸಲಾಗಿತ್ತು. ಹಾಗಾಗಿ, ನೇಮಕಾತಿಗಳು ವಿಳಂಬವಾಗಿದ್ದವು. ಅನುದಾನಿತ ಸಂಸ್ಥೆಗಳಲ್ಲಿ ಅನುದಾನರಹಿತ ಹುದ್ದೆಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಸಾಧ್ಯವಾಗಿರಲಿಲ್ಲ. ಹಾಗಾಗಿ, ಹಲವು ಆಕಾಂಕ್ಷಿಗಳ ವಯೋಮಿತಿ ಮೀರುತ್ತಿದೆ. ಈ ಎಲ್ಲ ಕಾರಣಗಳಿಂದ ವಯೋಮಿತಿಯ ಸಡಿಲಿಕೆ ನೀಡಲಾಗಿದೆ.

ಈ ನಿಯಮ ಪದವಿಪೂರ್ವ ಕಾಲೇಜಿನಲ್ಲಿ ಖಾಲಿ ಇರುವ 788 ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳ ಭರ್ತಿಗೂ ಅನ್ವಯಿಸುತ್ತದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶದಲ್ಲಿ ವಿವರಿಸಿದೆ.

ಸಮಯ ನಿಗದಿಗೆ ಆಕ್ಷೇಪ: ವಯೋಮಿತಿ ಸಡಿಲಿಕೆಯ ಅವಕಾಶವನ್ನು 2022ರ ಜೂನ್ 23ರಿಂದ ಒಂದು ವರ್ಷದ ಅವಧಿಗೆ ಅನ್ವಯಿಸಿ ಮಿತಿಗೊಳಿಸಿರುವುದರಿಂದ ಇನ್ನು 15 ದಿನದೊಳಗೆ ಅಧಿಸೂಚನೆ ಹೊರಡಿಸುವ ನೇಮಕಾತಿಗಳಿಗೆ ಮಾತ್ರ ಅನ್ವಯವಾಗುತ್ತದೆ. ಹೆಚ್ಚಿನ ಪ್ರಯೋಜನವಾಗುವುದಿಲ್ಲ ಎಂದು ಉದ್ಯೋಗದ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳು ದೂರಿದ್ದಾರೆ.

'ಸ್ಥಾನಮಾನ'ಕ್ಕೆ ಭರಪೂರ ಸವಲತ್ತು!

ಒಂದನೇ ಪುಟದಿಂದ...

ವೃಕ್ಷಮಾತೆ ಸಾಲುಮರದ ತಿಮ್ಮಕ್ಕನವರ ನಿಸ್ವಾರ್ಥ ಸೇವೆಯನ್ನು ಗೌರವಿಸುವುದಕ್ಕಾಗಿ ತಿಮ್ಮಕ್ಕನವರಿಗೆ ಈ ಹಿಂದೆ ನೀಡಲಾಗಿದ್ದ ರಾಜ್ಯ ಸಚಿವ ದರ್ಜೆ ಸ್ಥಾನಮಾನ ಹಾಗೂ ಪರಿಸರ ರಾಯಭಾರಿ ಸ್ಥಾನವನ್ನು ಮುಂದುವರಿಸಲಾಗಿದೆ.

ಮುಖ್ಯಮಂತ್ರಿಯ ಕಾನೂನು ಸಲಹೆಗಾರರಾಗಿ ಎ.ಎಸ್.ಪೊನ್ನಣ್ಣ ಅವರನ್ನು ನೇಮಿಸಿ ಸಂಪುಟ ದರ್ಜೆಯ ಸಚಿವರ ಸ್ಥಾನಮಾನದೊಂದಿಗೆ ಲಭ್ಯವಿರುವ ಎಲ್ಲ ಸೌಲಭ್ಯಗಳನ್ನು ನೀಡಿ ಆದೇಶ ಹೊರಡಿಸುವಂತೆ ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸೂಚಿಸಿದ್ದರು. ಆದರೆ, ಆ ಆದೇಶವನ್ನು ಸದ್ಯಕ್ಕೆ ತಡೆಹಿಡಿಯಲಾಗಿದೆ. ಇನ್ನೂ ಹಲವರು ಸಂಪುಟ ದರ್ಜೆ, ರಾಜ್ಯ ಸಂಪುಟ ದರ್ಜೆ 'ಸ್ಥಾನಮಾನ' ಸಹಿತ ಹುದ್ದೆಗಳನ್ನು ಅಲಂಕರಿಸುವ ಸಾಧ್ಯತೆಯಿದೆ.

ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದಲ್ಲಿ ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ, ಸಲಹೆಗಾರ ಸ್ಥಾನಕ್ಕೆ ನೇಮಕವನ್ನು ಪ್ರಶ್ನಿಸಿ ಧಾರವಾಡದ ಸಮಾಜ ಪರಿವರ್ತನಾ ಸಮುದಾಯ ಹೈಕೋರ್ಟ್‌ನಲ್ಲಿ 2023 ಜ. 13ರಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದು, ಈ ಪ್ರಕರಣ ಮುಖ್ಯ ನ್ಯಾಯಮೂರ್ತಿಯ ಪೀಠದ ಮುಂದೆ ವಿಚಾರಣೆಯ ಹಂತದಲ್ಲಿದೆ.

'ಸ್ಥಾನಮಾನ' ಸೌಲಭ್ಯ ನಾಲ್ಕು ವಿಧ

ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ, ಸಲಹೆಗಾರರು, ನಿಗಮ–ಮಂಡಳಿ, ಆಯೋಗ ಅಥವಾ ಪ್ರಾಧಿಕಾರಗಳ ಅಧ್ಯಕ್ಷ ಸ್ಥಾನಗಳಿಗೆ ನೇಮಗೊಂಡವರಿಗೆ ಸೌಲಭ್ಯಗಳನ್ನು ನೀಡುವ ವ್ಯವಸ್ಥೆಯನ್ನು ನಾಲ್ಕು ರೀತಿ ವಿಂಗಡಿಸಲಾಗಿದೆ. ಕೆಲವರಿಗೆ ಸಂಪುಟ ದರ್ಜೆ ಅಥವಾ ರಾಜ್ಯ ಸಚಿವ ದರ್ಜೆ ಸ್ಥಾನಮಾನದ ಜೊತೆಗೆ ಆ ಸಚಿವರಿಗೆ ಲಭ್ಯವಿರುವ ಎಲ್ಲ ಸವಲತ್ತುಗಳನ್ನು ನೀಡಲಾಗುತ್ತಿದೆ. ಇನ್ನೂ ಕೆಲವರಿಗೆ ಸಂಪುಟ ದರ್ಜೆ ಅಥವಾ ರಾಜ್ಯ ಸಚಿವ ದರ್ಜೆ ಸ್ಥಾನಮಾನ ಮಾತ್ರ ನೀಡಲಾಗುತ್ತದೆ.

'ಸ್ಥಾನಮಾನ' ಮಾತ್ರ ಇರುವವರಿಗೆ ನೀಡುವ ಮನೆ ಬಾಡಿಗೆ ಆಯಾ ದರ್ಜೆಯ ಸಚಿವರಿಗೆ ನೀಡುವ ಮೊತ್ತಕ್ಕಿಂತ ಕಡಿಮೆಯಾಗಿದ್ದು, ಬೆಂಗಳೂರು ಮತ್ತು ಇತರ ನಗರಗಳಲ್ಲಿ ಬೇರೆ ಬೇರೆಯಾಗಿದೆ. ಅದೇ ರೀತಿ ಇಂಧನ ಭತ್ಯೆಯೂ ಕಡಿಮೆ. ಪೀಠೋಪಕರಣ ಖರೀದಿಸಲು ಅವಕಾಶ ಇಲ್ಲ. ₹20 ಲಕ್ಷದ ಮಿತಿಗೆ ಒಳಪಟ್ಟು ವಾಹನ ಸೌಕರ್ಯ ಪಡೆಯಬಹುದು. ಆರು ಸಿಬ್ಬಂದಿ ಹೊಂದಬಹುದು. ಆದರೆ, ವೈದ್ಯಕೀಯ ಭತ್ಯೆ ಮತ್ತು ಶಿಷ್ಟಾಚಾರ ವ್ಯವಸ್ಥೆ ಇರುವುದಿಲ್ಲ.

ಯಡಿಯೂರಪ್ಪ ವಿರುದ್ಧದ ಎಫ್‌ಐಆರ್ ರದ್ದು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಅಕ್ರಮ ಡಿನೋಟಿಫಿಕೇಷನ್ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ಎಂಟು ವರ್ಷಗಳ ಹಿಂದೆ ದಾಖಲಾಗಿದ್ದ ಎಫ್‌ಐಆರ್ ಅನ್ನು ಹೈಕೋರ್ಟ್ ರದ್ದುಪಡಿಸಿದೆ.

'ಲೋಕಾಯುಕ್ತ ಪೊಲೀಸರು ಮಹಾಲೇಖಪಾಲರ (ಸಿಎಜಿ) ವರದಿ ಆಧರಿಸಿ 2015ರಲ್ಲಿ ನನ್ನ ವಿರುದ್ಧ ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಬಿ.ಎಸ್. ಯಡಿಯೂರಪ್ಪ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

'ಸಿಎಜಿ ವರದಿಯನ್ನು ಆಧಾರವಾಗಿ ಇಟ್ಟುಕೊಂಡು ಕ್ರಿಮಿನಲ್ ಪ್ರಕರಣ ದಾಖಲಿಸಲು ಅವಕಾಶವಿಲ್ಲ ಹಾಗೂ ಅದನ್ನು ತನಿಖೆಯ ಭಾಗವಾಗಿ ಪರಿಗಣಿಸಲಾಗದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದ ಇದೇ ಹೈಕೋರ್ಟ್, ಇದೇ ಆರೋಪಕ್ಕೆ ಸಂಬಂಧಿಸಿದಂತೆ ಯಡಿಯೂರಪ್ಪ ವಿರುದ್ಧ ದಾಖಲಾಗಿದ್ದ ಇತರ 15 ಎಫ್‌ಐಆರ್‌ಗಳನ್ನು 2016ರಲ್ಲೇ ರದ್ದುಪಡಿಸಿದೆ.

ಹಾಗಾಗಿ, ಇದೇ ಆರೋಪದಲ್ಲಿ ದಾಖಲಾಗಿರುವ ಈ ಎಫ್‌ಐಆರ್ ಅನ್ನೂ ರದ್ದುಪಡಿಸಬೇಕು' ಎಂದು ಕೋರಿದ್ದ ಅರ್ಜಿದಾರರ ಪರ ವಕೀಲ ಸಂದೀಪ್ ಎಸ್.ಪಾಟೀಲ ಅವರ ವಾದವನ್ನು ನ್ಯಾಯಪೀಠ ಮಾನ್ಯ ಮಾಡಿದೆ.

ಪ್ರಕರಣವೇನು?: 'ಸರ್ಕಾರ ಸ್ವಾಧೀನಪಡಿಸಿಕೊಂಡಿದ್ದ ವಿವಿಧ ಜಮೀನುಗಳನ್ನು ಬಿ.ಎಸ್. ಯಡಿಯೂರಪ್ಪ ಮತ್ತಿತರ ಆರೋಪಿಗಳು ಅಕ್ರಮವಾಗಿ ಡಿನೋಟಿಫೈ ಮಾಡುವ ಮೂಲಕ ಸಾಕಷ್ಟು ಅವ್ಯವಹಾರ ನಡೆಸಿ, ರಾಜ್ಯದ ಬೊಕ್ಕಸಕ್ಕೆ ಭಾರಿ ನಷ್ಟ ಉಂಟು ಮಾಡಿದ್ದಾರೆ' ಎಂದು ಸಿಎಜಿ ತನ್ನ ವರದಿಯಲ್ಲಿ ವಿವರಿಸಿತ್ತು. 'ಈ ವರದಿಯ ಆಧಾರದಲ್ಲಿ ಆರೋಪಿಗಳ ವಿರುದ್ಧ ಕ್ರಮ ಜರುಗಿಸಬೇಕು' ಎಂದು ಕೋರಿ ಸಾಮಾಜಿಕ ಕಾರ್ಯಕರ್ತ ಜಯಕುಮಾರ್ ಹಿರೇಮಠ ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಲೋಕಾಯುಕ್ತ ಪೊಲೀಸರು ಬಿಎಸ್‌ವೈ ವಿರುದ್ಧ ಒಟ್ಟು 16 ಎಫ್‌ಐಆರ್ ದಾಖಲಿಸಿದ್ದರು.

ಮೂರೂ ಸ್ಥಾನ ಕಾಂಗ್ರೆಸ್‌ಗೆ ನಿಶ್ಚಿತ

ವಿಧಾನ ಪರಿಷತ್ ಉಪ ಚುನಾವಣೆ: ಮೂರು ಪ್ರತ್ಯೇಕ ಅಧಿಸೂಚನೆ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನ ಪರಿಷತ್‌ನ ಮೂರು ಸ್ಥಾನಗಳಿಗೆ ಇದೇ 30ರಂದು ನಡೆಯಲಿರುವ ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗುವ ಸಾಧ್ಯತೆ ನಿಚ್ಚಳವಾಗಿದೆ.

ವಿಧಾನಸಭೆಯಲ್ಲಿ ಕಾಂಗ್ರೆಸ್ 135 ಸ್ಥಾನಗಳನ್ನು ಹೊಂದಿದ್ದು, ಪಕ್ಷೇತರರಾಗಿ ಗೆದ್ದಿರುವ ಲತಾ ಮಲ್ಲಿಕಾರ್ಜುನ, ಕೆ. ಪುಟ್ಟಸ್ವಾಮಿಗೌಡ, ಸರ್ವೋದಯ ಕರ್ನಾಟಕ ಪಕ್ಷದ ದರ್ಶನ್ ಪುಟ್ಟಣ್ಣಯ್ಯ ಕಾಂಗ್ರೆಸ್‌ಗೆ ಬೆಂಬಲ ಸೂಚಿಸಿದ್ದಾರೆ. ಬಿಜೆಪಿ 66, ಜೆಡಿಎಸ್ 19 ಹಾಗೂ ಕಲ್ಯಾಣರಾಜ್ಯ ಪ್ರಗತಿ ಪಕ್ಷದ ಒಬ್ಬರು ಶಾಸಕರಿದ್ದಾರೆ.

ಪರಿಷತ್ ಸ್ಥಾನಕ್ಕೆ ರಾಜೀನಾಮೆ ನೀಡಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿದ್ದ ಬಾಬೂರಾವ್ ಚಿಂಚನಸೂರ ಅವರ ಅವಧಿ 2024ರ ಜೂನ್ 17ರಂದು, ಆರ್. ಶಂಕರ್ ಅವರ ಅವಧಿ 2026 ಜೂನ್ 30, ಲಕ್ಷ್ಮಣ ಸವದಿ ಅವರ ಅವಧಿ 2028ರ ಜೂನ್14ರವರೆಗೆ ಇತ್ತು. ಈ ಮೂರು ಸ್ಥಾನಗಳಿಗೆ ಪ್ರತ್ಯೇಕವಾಗಿ ಉಪ ಚುನಾವಣೆ ಜೂನ್ 30ರಂದು ನಿಗದಿಯಾಗಿದೆ.

'ಮೂರೂ ಸ್ಥಾನಗಳ ಮುಕ್ತಾಯದ ಅವಧಿ ಬೇರೆ ಇದೆ. ಈ ಮೂರೂ ಸ್ಥಾನಗಳಿಗೆ ಕೇಂದ್ರ ಚುನಾವಣಾ ಆಯೋಗ ಒಂದೇ ದಿನ ಉಪ ಚುನಾವಣೆ ನಡೆಸಲಿದ್ದು, ಪ್ರತ್ಯೇಕವಾಗಿ ಒಂದೇ ದಿನ (ಜೂನ್ 13) ಅಧಿಸೂಚನೆ ಹೊರಡಿಸಲಿದೆ. ಮೂರು ಸ್ಥಾನಗಳಿಗೆ ಪ್ರತ್ಯೇಕವಾಗಿ ಚುನಾವಣೆಯಲ್ಲಿ ನಡೆಯಲಿದ್ದು, ಎಲ್ಲ 224 ಶಾಸಕರೂ ಮತ ಚಲಾಯಿಸಲು ಅರ್ಹರಾಗಿದ್ದಾರೆ. ಖಾಲಿಯಾಗುವ ಸ್ಥಾನದ ಅವಧಿಯವರೆಗೆ, ಆ ಸ್ಥಾನಕ್ಕೆ ಆಯ್ಕೆಯಾದ ಸದಸ್ಯರ ಅವಧಿ ಇರಲಿದೆ' ಎಂದು ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ತಿಳಿಸಿದರು.

ವಿಧಾನಸಭೆಯಲ್ಲಿ ಭಾರಿ ಬಹುಮತವನ್ನು ಕಾಂಗ್ರೆಸ್ ಹೊಂದಿದ್ದು, ಉಳಿದೆರಡು ಪಕ್ಷಗಳು ಸೇರಿಕೊಂಡರೂ ಆ ಸಂಖ್ಯೆಯ ಹತ್ತಿರವೂ ಬರುವುದಿಲ್ಲ. ಹೀಗಾಗಿ ಮೂರು ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗುವುದು ಖಚಿತವಾಗಿದೆ.


'ಬಿಜೆಪಿ ತ್ಯಜಿಸಿ ಕಾಂಗ್ರೆಸ್ ಸೇರ್ಪಡೆಯಾಗಿರುವ ಬಾಬೂರಾವ್ ಚಿಂಚನಸೂರ ಅವರು ವಿಧಾನಸಭೆ ಚುನಾವಣೆಯಲ್ಲಿ ಗುರುಮಠಕಲ್ ಕ್ಷೇತ್ರದಿಂದ ಕಣಕ್ಕಿಳಿದು ಸೋಲು ಕಂಡಿದ್ದರು. ಆ ಸ್ಥಾನಕ್ಕೆ ಅವರನ್ನೇ ಅಭ್ಯರ್ಥಿ ಮಾಡಲು ಪಕ್ಷದ ನಾಯಕರು ಮುಂದಾಗಿದ್ದಾರೆ. ಆರ್. ಶಂಕರ್ ಮತ್ತು ಲಕ್ಷ್ಮಣ ಸವದಿ ಅವರಿಂದ ತೆರವಾದ ಸ್ಥಾನವನ್ನು ಪಕ್ಷದ ಕಾರ್ಯಕರ್ತರಿಗೆ ನೀಡುವ ಸಾಧ್ಯತೆಯಿದೆ. ಈ ಸ್ಥಾನಗಳ ಸದಸ್ಯತ್ವ ಅವಧಿ ಕಡಿಮೆ ಇದ್ದರೂ, 20ಕ್ಕೂ ಹೆಚ್ಚು ಆಕಾಂಕ್ಷಿಗಳು ಕಣ್ಣಿಟ್ಟಿದ್ದಾರೆ' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಈ ಮಧ್ಯೆ, ಪರಿಷತ್‌ನಲ್ಲಿ ಲೈಂಗಿಕ ಅಲ್ಪಸಂಖ್ಯಾತರ ಸಮುದಾಯಕ್ಕೆ ಕಾಂಗ್ರೆಸ್ ಪ್ರಾತಿನಿಧ್ಯ ನೀಡಬೇಕು ಎಂದು ಆಗ್ರಹಿಸಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಮುಖಂಡರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರಿಗೆ ಟ್ವೀಟ್ ಮೂಲಕ ಮನವಿ ಸಲ್ಲಿಸಲಾಗಿದೆ.

'ಪಕ್ಷ ಅಧಿಕಾರಕ್ಕೆ ಬರಲು ಕಿಸಾನ್ ಘಟಕ ಕೂಡಾ ಕಾರಣ. ಹೀಗಾಗಿ, ಖಾಲಿ ಸ್ಥಾನಕ್ಕೆ ರೈತ ನಾಯಕರಿಗೆ ಅವಕಾಶ ನೀಡಬೇಕು' ಎಂದು ಕೆಪಿಸಿಸಿ ಕಿಸಾನ್ ಘಟಕದ ಅಧ್ಯಕ್ಷ ಸಚಿನ್ ಮಿಗಾ ಒತ್ತಾಯಿಸಿದ್ದಾರೆ.

ಬೋಸರಾಜು ನಾಮನಿರ್ದೇಶನ?

ವಿಧಾನ ಪರಿಷತ್‌ಗೆ ನಾಮನಿರ್ದೇಶಿತ ಸದಸ್ಯರಾಗಿದ್ದ ಕಾಂಗ್ರೆಸ್ಸಿನ ಪಿ.ಆರ್. ರಮೇಶ್ ಮತ್ತು ಮೋಹನಕುಮಾರ್ ಕೊಂಡಜ್ಜಿ ಅವರ ಅವಧಿ ಇದೇ ಮೇ 17ಕ್ಕೆ ಅಂತ್ಯವಾಗಿದೆ. ಸಿ.ಎಂ. ಲಿಂಗಪ್ಪ ಅವರ ಅವಧಿ ಗುರುವಾರ (ಜೂನ್ 8) ಮುಕ್ತಾಯವಾಗಲಿದೆ. ಹೊಸತಾಗಿ ಅಸ್ತಿತ್ವಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ ಈ ಮೂರೂ ಸ್ಥಾನಗಳಿಗೆ ಯಾವಾಗಬೇಕಿದ್ದರೂ ನಾಮನಿರ್ದೇಶನ ಮಾಡಬಹುದು. ಈ ಮೂರೂ ಸ್ಥಾನಗಳ ಅವಧಿ ನಾಮನಿರ್ದೇಶನಗೊಂಡ ದಿನದಿಂದ ಆರು ವರ್ಷ ಇರಲಿದೆ. ಈ ಪೈಕಿ ಒಂದು ಸ್ಥಾನಕ್ಕೆ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾಗಿರುವ ಎನ್.ಎಸ್. ಬೋಸರಾಜು ಅವರನ್ನು ಸರ್ಕಾರ ನಾಮನಿರ್ದೇಶನ ಮಾಡುವ ಸಾಧ್ಯತೆಯಿದೆ. ಯಾವುದೇ ಸದನದ ಸದಸ್ಯರಲ್ಲದ ಬೋಸರಾಜ ಅವರನ್ನು ಸಚಿವರನ್ನಾಗಿ ಮಾಡಲಾಗಿದ್ದು, ಆರು ತಿಂಗಳ ಒಳಗೆ ಅವರು ಯಾವುದಾದರೂ ಸದನದ ಸದಸ್ಯರಾಗಬೇಕಿದೆ. ಉಳಿದ ಎರಡು ಸ್ಥಾನಗಳಿಗೆ ಕಾಂಗ್ರೆಸ್‌ನಲ್ಲಿ ಭಾರಿ ಪೈಪೋಟಿ ಏರ್ಪಟ್ಟಿದೆ.



ತೀರದ ದಾಹ... ಬಿಸಿಲ ಝಳದಿಂದ ಕಂಗೆಟ್ಟ ಪ್ರಾಣಿಗಳು... ಹುಬ್ಬಳ್ಳಿಯ ಉಣಕಲ್ಲ– ಶಿವಳ್ಳಿ ರಸ್ತೆ ಬದಿಯಿರುವ ಕೃಷಿಹೊಂಡಕ್ಕೆ ಬುಧವಾರ ನುಗ್ಗಿದ ಕುರಿಗಳ ಹಿಂಡು ಬಾಯಾರಿಸಿಕೊಂಡ ಕ್ಷಣ ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ಎಚ್‌ಡಿಡಿಗೆ 'ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕಸಾಪ ನೀಡುವ 'ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿ'ಗೆ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಆಯ್ಕೆಯಾಗಿದ್ದಾರೆ.

ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ₹ 51 ಸಾವಿರ ನಗದು, ಫಲಕವನ್ನು ಒಳಗೊಂಡಿದೆ. 'ಈವರೆಗೆ 12 ಮಂದಿಗೆ ಈ ಪ್ರಶಸ್ತಿ ಪ್ರದಾನ ಮಾಡಲಾಗಿದೆ' ಎಂದು ಮಹೇಶ ಜೋಶಿ ತಿಳಿಸಿದ್ದಾರೆ.

ಕೊಂಡಕ್ಕೆ ಬಿದ್ದು 20 ಜನಕ್ಕೆ ಗಾಯ

ತುರುವೇಕೆರೆ (ತುಮಕೂರು): ತಾಲ್ಲೂಕಿನ ದಬ್ಬೇಘಟ್ಟ ಹೋಬಳಿಯ ಮಾವಿನಕೆರೆ ಚೌಡೇಶ್ವರಿ ಜಾತ್ರೆ ಅಂಗವಾಗಿ ಮಂಗಳವಾರ ತಡರಾತ್ರಿ ನಡೆದ ಅಗ್ನಿಕೊಂಡ ಉತ್ಸವದ ವೇಳೆ ಕೊಂಡದಲ್ಲಿ ಜಾರಿ ಬಿದ್ದು 20ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

34 ವರ್ಷದ ನಂತರ ನಡೆಯುತ್ತಿರುವ ಜಾತ್ರೆಗೆ ಅಪಾರ ಜನರು ಬಂದಿದ್ದರು.

ಭಾರಿ ಮಳೆ: ರಸ್ತೆ ಜಲಾವೃತ

ಪ್ರಜಾವಾಣಿ ವಾರ್ತೆ

ಕೆಜಿಎಫ್: ನಗರದಲ್ಲಿ ಬುಧವಾರ ಸಂಜೆ ಸುರಿದ ಭಾರಿ ಮಳೆಯಿಂದಾಗಿ ಹಲವಾರು ರಸ್ತೆಗಳು ಜಲಾವೃತವಾಗಿದ್ದು, ಮರಗಳು ನೆಲಕ್ಕುರುಳಿವೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ಕನಸವಾಡಿ ಹೋಬಳಿಯಲ್ಲಿ ಸಂಜೆ ಒಂದೂವರೆ ತಾಸು ಸುರಿದ ಮಳೆಗೆ ಹಳ್ಳಗಳು ತುಂಬಿ ಹರಿದಿವೆ.

ಚಿಕ್ಕಮಧುರೆ, ಕನಸವಾಡಿ, ಕನ್ನಮಂಗಲ, ಮಲ್ಲೋಹಳ್ಳಿ, ಚೆನ್ನದೇವಿ ಅಗ್ರಹಾರದ ಹಳ್ಳಕೊಳ್ಳಗಳು ತುಂಬಿ ಹರಿದಿವೆ. ಚಿಕ್ಕಮಧುರೆ ಕೆರೆಯಲ್ಲಿ ಒಂದು ಅಡಿಯಷ್ಟು ನೀರು ಹೆಚ್ಚಾಗಿದೆ.

ಕಲಬುರಗಿ: ಬೀದರ್‌ನಲ್ಲಿ ಮಧ್ಯಾಹ್ನ ಕೆಲ ಕಾಲ ಧಾರಾಕಾರ ಮಳೆಯಾಗಿದೆ. ಬೀದರ್ ತಾಲ್ಲೂಕಿನ ಅಮಲಾಪುರ, ಚಿಟ್ಟಾ, ಗೋಡಂಪಳ್ಳಿ, ಮಾಮನಕೇರಿ, ಹಳ್ಳದಕೇರಿ, ಚಿಕ್ಕಪೇಟೆ, ಮರಕಲ್ ಸೇರಿದಂತೆ ಹಲವೆಡೆ ಮಳೆಯಾಗಿದೆ. ಕಲಬುರಗಿ, ಕೊಪ್ಪಳ, ಯಾದಗಿರಿ ಜಿಲ್ಲೆಯ ಕೆಲವೆಡೆ ಉತ್ತಮ ಮಳೆ ಸುರಿಯಿತು.

ದೇಗುಲದ ಶಾಲೆಗಳಲ್ಲಿ ಬೆಳಿಗ್ಗೆ ಮಾತ್ರ ತರಗತಿ

ಕಟೀಲು ಕ್ಷೇತ್ರದಲ್ಲಿ ಜಲಕ್ಷಾಮ

ಪ್ರಜಾವಾಣಿ ವಾರ್ತೆ

ಮೂಲ್ಕಿ (ದಕ್ಷಿಣ ಕನ್ನಡ): ನಂದಿನಿ ನದಿ ಸಂಪೂರ್ಣ ಬತ್ತಿದ್ದು, ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಜಲಕ್ಷಾಮ ಉಂಟಾಗಿದೆ. ದೇವಸ್ಥಾನದ ದೈನಂದಿನ ಚಟುವಟಿಕೆಗೆ ಅಡ್ಡಿಯಾಗಿದೆ. ಅಲ್ಲದೇ ಕ್ಷೇತ್ರದ ಶಿಕ್ಷಣ ಸಂಸ್ಥೆಗಳ ಪ್ರಾಥಮಿಕ–ಪ್ರೌಢ ವಿಭಾಗಗಳಲ್ಲಿ ಬೆಳಿಗ್ಗೆ ಮಾತ್ರ ತರಗತಿ ನಡೆಸಿ ಮಧ್ಯಾಹ್ನದ ನಂತರ ರಜೆ ನೀಡಲಾಗುತ್ತಿದೆ.

ಭಕ್ತರು ದೇವಸ್ಥಾನದ ಒಳಗೆ ಪ್ರವೇಶಿಸುವಾಗ ಕೈ-ಕಾಲು ತೊಳೆಯುವ ನೀರನ್ನು ಬಂದ್ ಮಾಡಲಾಗಿದೆ. ಬೆಳಿಗ್ಗೆ ಗಂಜಿ, ಮಧ್ಯಾಹ್ನ ಹಾಗೂ ರಾತ್ರಿ ಸಮಯದಲ್ಲಿ ಅನ್ನಪ್ರಸಾದಕ್ಕೆ ಸ್ಟೀಲ್ ತಟ್ಟೆಗಳ ಬದಲಿಗೆ ಹಾಳೆತಟ್ಟೆ ಬಳಸಲಾಗುತ್ತಿದೆ.

ದೇವಸ್ಥಾನದ ಆವರಣದಲ್ಲಿನ ಮೂರು ಕೊಳವೆಬಾವಿಗಳು ಹಾಗೂ ಮೂರು ಬಾವಿಗಳು ಬತ್ತಿವೆ. ದೇವಸ್ಥಾನ, ಅನ್ನಪ್ರಸಾದ ತಯಾರಿ ಹಾಗೂ ಗೋಶಾಲೆಗೆ ನಿತ್ಯ 7 ಲಕ್ಷ ಲೀಟರ್ ನೀರಿನ ಅವಶ್ಯಕತೆ ಇದೆ. ಈಗ 4 ಲಕ್ಷ ಲೀಟರ್ ನೀರು ಸುತ್ತಮುತ್ತಲಿನ ದಾನಿಗಳ ಸಹಾಯದಿಂದ ಸಿಗುತ್ತಿದ್ದು, ಅದರಲ್ಲಿಯೇ ಎಲ್ಲವನ್ನು ಹೊಂದಿಸಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ನೀರು ಸಂಗ್ರಹಿಸಲೆಂದೇ ನಿತ್ಯ ನಾಲ್ಕು ಮಂದಿ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ.

'ಅತಿಥಿ ಗೃಹಕ್ಕೆ ಬರುವ ಭಕ್ತರಿಗೆ ನೀರಿನ ಸಮಸ್ಯೆ ಬಗ್ಗೆ ಮೊದಲೇ ಮಾಹಿತಿ ನೀಡುತ್ತೇವೆ. ಸಾರ್ವಜನಿಕ ಶೌಚಾಲಯಕ್ಕೆ ನೀರಿನ ಕೊರತೆಯಾಗದಂತೆ ನೋಡಿಕೊಂಡಿದ್ದೇವೆ. ನದಿಯಲ್ಲಿ ಬುಧವಾರ ಹೊಂಡ ತೋಡಿದ್ದು, ಅಲ್ಲಿ ಸಂಗ್ರಹವಾಗುವ ನೀರನ್ನು ಬಳಸಲು ಸಿದ್ಧತೆ ಮಾಡಿಕೊಂಡಿದ್ದೇವೆ' ಎಂದು ದೇವಾಲಯದ ಆನುವಂಶಿಕ ಮೊಕ್ತೇಸರ ಹರಿನಾರಾಯಣ ಆಸ್ರಣ್ಣ 'ಪ್ರಜಾವಾಣಿ'ಗೆ ತಿಳಿಸಿದರು.

ಕ್ಷೇತ್ರದ ವಿದ್ಯಾಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು, ಸಿಬ್ಬಂದಿ ಸೇರಿ ಸುಮಾರು 3 ಸಾವಿರ ಮಂದಿ ಇದ್ದಾರೆ. ನೀರಿನ ಕೊರತೆಯಿಂದ ಮಧ್ಯಾಹ್ನದ ಊಟದ ವ್ಯವಸ್ಥೆ ವ್ಯತ್ಯಯ ಆಗಿರುವುದರಿಂದ ಪ್ರಾಥಮಿಕ, ಇಂಗ್ಲಿಷ್ ಮಾಧ್ಯಮ ಶಾಲೆ, ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ನಂತರ ರಜೆ ನೀಡಲಾಗುತ್ತಿದೆ. ಪದವಿ ವಿದ್ಯಾರ್ಥಿಗಳು ನೇರವಾಗಿ ದೇವಸ್ಥಾನಕ್ಕೆ ಬಂದು ಊಟ ಮಾಡುವುದರಿಂದ ಅವರ ತರಗತಿ ಅವಧಿ ವ್ಯತ್ಯಯವಾಗಿಲ್ಲ.

'60 ವರ್ಷಗಳಲ್ಲಿ ಈ ರೀತಿಯ ಗಂಭೀರ ಸಮಸ್ಯೆ ಆಗಿರಲಿಲ್ಲ. ದೇವಸ್ಥಾನದ ಆಡಳಿತ ಮಂಡಳಿಯವರು ಈ ಬಗ್ಗೆ ಈಗಾಗಲೇ ಜಿಲ್ಲಾಧಿಕಾರಿ ಮೂಲಕ ಸರ್ಕಾರದ ಗಮನ ಸೆಳೆದಿದ್ದಾರೆ. ಕಿನ್ನಿಗೋಳಿ ಪಟ್ಟಣ ಪಂಚಾಯಿತಿಗೂ ಮನವಿ ಸಲ್ಲಿಸಲಾಗಿದೆ' ಎಂದು ದೇವಸ್ಥಾನದ ಸಿಬ್ಬಂದಿಯೊಬ್ಬರು ತಿಳಿಸಿದರು.

'ಕಟೀಲು ಶಾಲೆಯಲ್ಲಿ 20 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಇಷ್ಟೊಂದು ನೀರಿನ ಸಮಸ್ಯೆ ಯಾವತ್ತೂ ಆಗಿರಲಿಲ್ಲ' ಎಂದು ಕಟೀಲು ಶ್ರೀದುರ್ಗಾ ಪರಮೇಶ್ವರಿ ಪ್ರೌಢಶಾಲೆ ಉಪ ಪ್ರಾಂಶುಪಾಲ ಸೋಮಪ್ಪ ಅಲಂಗಾರು ಹೇಳಿದರು.



ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ನಂದಿನಿ ನದಿಯಲ್ಲಿ ನೀರಿನ ಕೊರತೆ ಎದುರಾಗಿದೆ

ಈ ಸಲದ ಬೇಸಿಗೆಯಲ್ಲಿ ಕುಡಿಯುವ ನೀರಿನ ಅಭಾವ ತೀವ್ರವಾಗಿದೆ. ಲಭ್ಯವಿದ್ದ ನೀರನ್ನೇ ಒಂದೂವರೆ ತಿಂಗಳುಗಳಿಂದ ಜತನವಾಗಿ ಬಳಸುತ್ತಿದ್ದೇವೆ
ಹರಿನಾರಾಯಣ ಆಸ್ರಣ್ಣ, ದೇವಸ್ಥಾನದ ಆನುವಂಶಿಕ ಮೊಕ್ತೇಸರ

ಕಟೀಲು ದೇವಸ್ಥಾನಕ್ಕೆ ಬರುವ ಭಕ್ತರಿಗೆ ಕುಡಿಯುವ ನೀರಿನ ಕೊರತೆ ಎದುರಾಗಿರುವುದು ಗಮನಕ್ಕೆ ಬಂದಿದೆ. ಪರ್ಯಾಯ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಿದ್ದೇವೆ
ಎಂ.ಎಲ್.ನಾಗರಾಜ್, ಕಿನ್ನಿಗೋಳಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ



ಸುಭಾಷಿತ

ನಮ್ಮ ಆಚಾರ ವಿಚಾರಗಳಿಂದ ಮಾತ್ರ ನಾವು ಉತ್ತಮರು, ಅಧಮರು ಎಂದೆನಿಸಿಕೊಳ್ಳುತ್ತೇವೆಯೇ ವಿನಾ ಜಾತಿಯಿಂದಲ್ಲ. -ಬಸವಣ್ಣ

ಕೃಷಿ ಕ್ಷೇತ್ರಕ್ಕೆ ಉತ್ಸಾಹ ತುಂಬಿದ ಆಶಾದಾಯಕ ಮುಂಗಾರು ಮುನ್ಸೂಚನೆ

ಕೆಲವು ಪ್ರತಿಕೂಲ ಸನ್ನಿವೇಶಗಳ ಹೊರತಾಗಿ ಪ್ರಸಕ್ತ ವರ್ಷದ ಮುಂಗಾರು ವಾಡಿಕೆಯಂತೆಯೇ ಇರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿರುವುದು ದೇಶದ ಕೃಷಿ ಕ್ಷೇತ್ರದ ಉತ್ಸಾಹವನ್ನು ಗರಿಗೆದರುವಂತೆ ಮಾಡಿದೆ. ನಾಲ್ಕು ವರ್ಷಗಳಿಂದಲೂ ದೇಶವು ವಾಡಿಕೆ ಅಥವಾ ವಾಡಿಕೆಗಿಂತ ಹೆಚ್ಚಿನ ಮಳೆಯನ್ನು ಕಾಣುತ್ತಿದ್ದು, ಈ ಋತುವಿನಲ್ಲೂ ಅದೇ ಪರಿಪಾಟ ಮುಂದುವರಿಯಲಿದೆ ಎನ್ನುವುದು ನಿರಾಳಭಾವ ಮೂಡಿಸುವಂತಹ ಮುನ್ಸೂಚನೆ. ಭಾರತದ ಪಾಲಿಗೆ 'ವಾಡಿಕೆಯ ಮುಂಗಾರು' ಅತ್ಯಂತ ಮಹತ್ವದ್ದು. ಏಕೆಂದರೆ, ಶೇಕಡ 52ರಷ್ಟು ಕೃಷಿ ಜಮೀನು ನೇರವಾಗಿ ಈ ಋತುವಿನ ಮಳೆಯನ್ನೇ ಆಧರಿಸಿದೆ. ಜಲಾಶಯಗಳು ಭರ್ತಿಯಾಗಿ ಕುಡಿಯುವ ನೀರಿನ ಸಂಗ್ರಹವನ್ನು ಖಚಿತಪಡಿಸಲು, ಜಲ ವಿದ್ಯುತ್ ಉತ್ಪಾದನೆಯ ಪ್ರಮಾಣವನ್ನು ಹೆಚ್ಚಿಸಲು ಈ ಅವಧಿಯ ಮಳೆ ತುಂಬಾ ಅಗತ್ಯ. ದೇಶದ ಒಟ್ಟು ಆಹಾರ ಉತ್ಪಾದನೆಯ ಶೇ 40ರಷ್ಟು ಪ್ರಮಾಣ ಮುಂಗಾರಿನಲ್ಲೇ ಉತ್ಪಾದನೆ ಆಗುವುದರಿಂದ ಆಹಾರ ಭದ್ರತೆಯ ದೃಷ್ಟಿಯಿಂದಲೂ ಈ ಅವಧಿಯಲ್ಲಿ ಸುರಿಯುವ ಮಳೆಯ ಮೇಲೆ ನಮ್ಮ ಅವಲಂಬನೆ ಹೆಚ್ಚಾಗಿದೆ. ಸಾಗರದ ಮೇಲ್ಮೈ ತಾಪಮಾನ ಹೆಚ್ಚಿ, ಮಳೆಯ ಮಾರುತಗಳನ್ನು ದುರ್ಬಲಗೊಳಿಸುವಂತಹ 'ಎಲ್ ನಿನೊ' ಪರಿಣಾಮದ ಕುರಿತೂ ಮುನ್ಸೂಚನೆ ಸಿಕ್ಕಿದೆ. ಹೀಗಾಗಿ ದೇಶದ ಕೆಲವು ಭಾಗಗಳಲ್ಲಿ ಮುಂಗಾರು ದುರ್ಬಲಗೊಳ್ಳುವ ಸಾಧ್ಯತೆಯೂ ಇದೆ ಎಂದು ಹೇಳಲಾಗಿದೆ. ಜೂನ್‌ನಿಂದ ಸೆಪ್ಟೆಂಬರ್‌ವರೆಗಿನ ಅವಧಿಯಲ್ಲಿ ವಾಡಿಕೆಯ ಸರಾಸರಿ ಶೇ 96ರಷ್ಟು ಮಳೆ ದೇಶದಲ್ಲಿ ಬೀಳಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದರೆ, ಖಾಸಗಿ ವಲಯದ ಸ್ಕೈಮೆಟ್, ಶೇ 20ರಷ್ಟು ಮಳೆ ಕೊರತೆ ಎದುರಾಗಲಿದೆ ಎಂದು ಭವಿಷ್ಯ ನುಡಿದಿದೆ. ಆದರೆ, ಈ ಆತಂಕವನ್ನು ದೂರ ಮಾಡುವಂತೆ ಮುಂಗಾರು ಪೂರ್ವ ಮಳೆ ಎಲ್ಲೆಡೆ ಸುರಿದಿದ್ದು, ಬಿತ್ತನೆಗೆ ಕೃಷಿ ಜಮೀನು ಹದಗೊಂಡಿದೆ. ಹೀಗಾಗಿ ಮುಂಗಾರಿನ ಆಗಮನ ಈಗ ನಾಲ್ಕು ದಿನ ತಡವಾಗುತ್ತಿದ್ದರೂ ಕೃಷಿಕರು ಧೃತಿಗೆಟ್ಟಿಲ್ಲ. ವಾಡಿಕೆ ಪ್ರಮಾಣದಲ್ಲಿ ಮಳೆ ಸುರಿದರೆ ಕೃಷಿ ಹಾಗೂ ಕೃಷಿ ಸಂಬಂಧಿ ಉದ್ಯಮಗಳ ಚಟುವಟಿಕೆಗಳು ಗರಿಗೆದರಲಿದ್ದು, ಹಣದುಬ್ಬರ ತಹಬಂದಿಗೆ ಬರುವ ಸಾಧ್ಯತೆ ಇದೆ. ಬೆಲೆ ಏರಿಕೆ ನಿಯಂತ್ರಣಕ್ಕೂ ಇದರಿಂದ ಅವಕಾಶವಾಗಲಿದೆ.



ರಾಜ್ಯದ ಎಲ್ಲ ಭಾಗಗಳಲ್ಲಿ ಬಿತ್ತನೆ ಬೀಜ, ರಸಗೊಬ್ಬರ ದಾಸ್ತಾನು ಸಮರ್ಪಕವಾಗಿ ಇರುವಂತೆ ನೋಡಿಕೊಳ್ಳುವ ಕೆಲಸವನ್ನು ಸರ್ಕಾರ ಸಮರೋಪಾದಿಯಲ್ಲಿ ಮಾಡಬೇಕಾಗಿದೆ

ಮುಂಗಾರು ಅವಧಿಯಲ್ಲಿನ ಸರಾಸರಿ ಮಳೆ ಪ್ರಮಾಣ ವಾಡಿಕೆಯಂತಿದ್ದರೂ ಕೆಲ ಭಾಗಗಳಲ್ಲಿ ಇದ್ದಕ್ಕಿದ್ದಂತೆ ವಿಪರೀತ ಮಳೆ ಸುರಿಯುವ, ಭರ್ತಿ ಮಳೆಗಾಲದಲ್ಲೂ ದೀರ್ಘಕಾಲದವರೆಗೆ 'ಶುಷ್ಕ ದಿನ'ಗಳನ್ನು ಕಾಣುವ ಸಾಧ್ಯತೆಯೂ ಇದೆ ಎಂದು ಅಂದಾಜಿಸಲಾಗಿದೆ. ಮುಂಗಾರಿನ ಆರಂಭದ ಜೂನ್ ತಿಂಗಳಿನಲ್ಲಿ ಮಳೆಯ ಮಾರುತಗಳು ದುರ್ಬಲವಾಗಲಿವೆ. ಜುಲೈ ತಿಂಗಳಿನಲ್ಲಿ ಹೆಚ್ಚಿನ ಮಳೆ ಸುರಿಯುವ ಸಾಧ್ಯತೆಯಿದೆ ಎಂದೂ ಲೆಕ್ಕ ಹಾಕಲಾಗಿದೆ. ಮಳೆಗಾಲದ ಯಾವುದೋ ಕೆಲವು ದಿನಗಳಲ್ಲಿ ಇಡೀ ಋತುವಿನ ಮಳೆ ಸುರಿದು, ಮಿಕ್ಕ ದಿನಗಳು ಶುಷ್ಕವಾಗಿ ಉಳಿದರೆ ಕೃಷಿ ಚಟುವಟಿಕೆಗಳು ದಿಕ್ಕು ತಪ್ಪಲಿವೆ. ಆದರೆ, ಈ ಲೆಕ್ಕಾಚಾರ ಏನೇ ಇದ್ದರೂ ಇಡೀ ದೇಶಕ್ಕೆ ಅನ್ವಯವಾಗುವಂಥದ್ದು. ರಾಜ್ಯದಲ್ಲಿ ಆಶಾದಾಯಕ ಮುಂಗಾರಿನ ಮುನ್ಸೂಚನೆ ಸಿಕ್ಕಿದೆ. ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ ಸಿದ್ಧತೆ ಮಾಡಿಕೊಳ್ಳಲು ತುಂಬಾ ಕಡಿಮೆ ಸಮಯ ಸಿಕ್ಕಿದೆ. ರಾಜ್ಯದ ಎಲ್ಲ ಭಾಗಗಳಲ್ಲಿ ಬಿತ್ತನೆ ಬೀಜ, ರಸಗೊಬ್ಬರ ದಾಸ್ತಾನು ಸಮರ್ಪಕವಾಗಿ ಇರುವಂತೆ ನೋಡಿಕೊಳ್ಳುವುದು ಸರ್ಕಾರದ ಮುಂದಿರುವ ಪ್ರಮುಖ ಸವಾಲಾಗಿದೆ. ಈ ಕೆಲಸವನ್ನು ಸಮರೋಪಾದಿಯಲ್ಲಿ ಮಾಡಬೇಕಿದೆ.

ಮಳೆಯ ಮುನ್ಸೂಚನೆಗೆ ಬಳಕೆಯಾಗುತ್ತಿರುವ ತಂತ್ರಜ್ಞಾನ ನಿರಂತರವಾಗಿ ಸುಧಾರಣೆ ಆಗುತ್ತಿದೆ. ಹವಾಮಾನ ಮುನ್ಸೂಚನೆಗಳನ್ನು ಪ್ರದೇಶವಾರು, ಜಿಲ್ಲಾವಾರು ವಿಭಜಿಸಿ ನೋಡಲೂ ಇದರಿಂದ ಸಾಧ್ಯವಾಗಿದೆ. ಇಲಾಖೆಯಿಂದ ದೀರ್ಘಾವಧಿ, ವಿಸ್ತರಿತ ಅವಧಿ, ಅಲ್ಪಾವಧಿ ಮತ್ತು ಅಲ್ಪ-ಮಧ್ಯಮಾವಧಿ ಮುನ್ಸೂಚನೆ ಸಿಗುತ್ತದೆ. ಹವಾಮಾನ ಬದಲಾವಣೆಯ ಪರಿಣಾಮಗಳು ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತಿರುವ ಈ ಸಂದರ್ಭದಲ್ಲಿ, ರಾಜ್ಯದಾದ್ಯಂತ ಮಳೆ ಪ್ರಮಾಣದಲ್ಲಿ ಆಗಬಹುದಾದ ವ್ಯತ್ಯಾಸವನ್ನು ನಿಖರವಾಗಿ ಗುರುತಿಸಬೇಕು. ಅದಕ್ಕೆ ತಕ್ಕಂತೆ ರೈತರಿಗೆ ಮುನ್ಸೂಚನೆಗಳನ್ನೂ ಕೊಡಬೇಕು. ಅತಿವೃಷ್ಟಿ ಇಲ್ಲವೆ ಅನಾವೃಷ್ಟಿಯಿಂದ ಬೆಳೆಹಾನಿ ತಪ್ಪಿಸುವಂತೆ ನೋಡಿಕೊಳ್ಳುವಲ್ಲಿಯೂ ತಂತ್ರಜ್ಞಾನವನ್ನು ದುಡಿಸಿಕೊಳ್ಳಬೇಕು. ಪ್ರತಿ ಜಿಲ್ಲೆಯ ಅಗತ್ಯಗಳಿಗೆ ತಕ್ಕಂತೆ ಕ್ರಿಯಾಯೋಜನೆ ರೂಪಿಸಬೇಕು. ಬೇಸಿಗೆಯಲ್ಲಿ ನೀರಿನ ಕೊರತೆ ಎದುರಾಗದಂತೆ ನೋಡಿಕೊಳ್ಳಲು ಕೆರೆ-ಕಟ್ಟೆಗಳ ಹೂಳು ತೆಗೆಸಿ, ಹೆಚ್ಚಿನ ಮಳೆ ನೀರು ಸಂಗ್ರಹಕ್ಕೆ ವ್ಯವಸ್ಥೆ ಮಾಡಬೇಕು. ಅಲ್ಪಾವಧಿ ಮತ್ತು ಅಲ್ಪ-ಮಧ್ಯಮಾವಧಿ ಮುನ್ಸೂಚನೆಗಳನ್ನು ರೈತರಿಗೆ ದಾಟಿಸಿ, ಅವರು ವಹಿಸಬೇಕಾದ ಎಚ್ಚರಿಕೆ ಕುರಿತು ಅರಿವು ಮೂಡಿಸಬೇಕು. ಪ್ರಕೃತಿಯ ಸವಾಲುಗಳನ್ನು ಸಾಧ್ಯವಾದಷ್ಟು ದಿಟ್ಟವಾಗಿ ಎದುರಿಸಲು ಅವರಲ್ಲಿ ಬಲವನ್ನೂ ತುಂಬಬೇಕು.

ದಿನದ ಟ್ವೀಟ್

ಅಚ್ಚರಿಗೆ ಕಾರಣವಿಲ್ಲ



ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳುವ ಸಾಧ್ಯತೆ ಬಗ್ಗೆ ಜೆಡಿಎಸ್ ಪರಿಶೀಲಿಸುತ್ತಿದೆ ಎಂದಾದರೆ ಅದರಲ್ಲಿ ಅಚ್ಚರಿಪಡುವುದೇನಿದೆ? ಪಕ್ಷದ ಉಳಿವಿಗಾಗಿ ಅದು ರಾಜಕೀಯವಾಗಿ ವಿವೇಕದ ನಡೆ ಎನ್ನಿಸಿಕೊಳ್ಳುವುದಾದರೆ, ಆ ಪಕ್ಷದ ಮುಖ್ಯಸ್ಥ ಎಚ್.ಡಿ.ದೇವೇಗೌಡ ಅವರು ಅಗತ್ಯವೇನಿದೆಯೋ ಅದನ್ನು ಮಾಡುತ್ತಾರೆ. ತಮ್ಮ ಉಳಿವಿಗಾಗಿ ಯಾವುದು ಅತ್ಯಂತ ಸೂಕ್ತವೋ ಅದನ್ನು ಎಲ್ಲ ಪಕ್ಷಗಳೂ ಮಾಡುತ್ತವೆ.

ಅನುಷಾ ರವಿ ಸೂದ್, ಪತ್ರಕರ್ತೆ

ಕಿಡಿನುಡಿ



ಗ್ಯಾರಂಟಿ ಯೋಜನೆಗಳ ಬಗ್ಗೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಒಂದರ ನಂತರ ಒಂದು ಷರತ್ತು ವಿಧಿಸುತ್ತಿರುವುದನ್ನು ನೋಡಿದರೆ, ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಅವುಗಳ ಬಗ್ಗೆ ಭರವಸೆ ಕೊಡುವ ಮುನ್ನ ಯಾವುದೇ ಹೋಂವರ್ಕ್ ಮಾಡಿಕೊಂಡಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಗೌತಮ್ ಮಾಚಯ್ಯ, ಪತ್ರಕರ್ತ

25 ವರ್ಷಗಳ ಹಿಂದೆ — ಸೋಮವಾರ, 8-6-1998

• ಹೊಸ ಮುಖಗಳಿಗೆ ಆಸ್ಪದ ಕೊಟ್ಟ ಉಪಚುನಾವಣೆ

ಬೆಂಗಳೂರು, ಜೂನ್ 7– ಈ ಬಾರಿಯ ಉಪಚುನಾವಣೆಯಲ್ಲಿ ಹೊಸ ಮುಖಗಳೇ ಆಯ್ಕೆಯಾಗಿ, ಇದೇ ಪ್ರಥಮ ಬಾರಿಗೆ ವಿಧಾನಸಭೆ ಪ್ರವೇಶಿಸುತ್ತಿರುವುದು ವಿಶೇಷವಾಗಿದೆ.

ವಿಧಾನಸಭೆಯ ಏಳು ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಆಯ್ಕೆಯಾಗಿರುವ ಏಳು ಮಂದಿಯಲ್ಲಿ ಕೆ.ಆರ್.ಪ್ರಭಾವತಿ (ಮಂಡ್ಯ), ಎಸ್.ಎಸ್.ಮಲ್ಲಿಕಾರ್ಜುನ (ದಾವಣಗೆರೆ) ಮತ್ತು ವಿಲಾಸಬಾಬು ಅಲಮೇಲಕರ (ಬಳ್ಳೊಳ್ಳಿ) ಅವರು ಹೊಸದಾಗಿ ರಾಜಕೀಯಕ್ಕೆ ಪದಾರ್ಪಣೆ ಮಾಡಿ ಶಾಸಕರಾಗಿದ್ದಾರೆ. ಸ್ಪರ್ಧಿಸಿದ್ದ ಮೂವರು ಮಹಿಳೆಯರಲ್ಲಿ ಗೆದ್ದ ಏಕೈಕ ಮಹಿಳೆ ಪ್ರಭಾವತಿ.

• ಸರಗಳ್ಳತನಕ್ಕೆ ಮಹಿಳೆಯರಿಬ್ಬರ ಭೀಕರ ಕೊಲೆ

ತುಮಕೂರು, ಜೂನ್ 7– ಮೋಟರ್ ಸೈಕಲ್‌ನಲ್ಲಿ ಬಂದ ಅಪರಿಚಿತ ದುಷ್ಕರ್ಮಿಗಳು ಕಳೆದ ರಾತ್ರಿ ನಗರದ ಇಬ್ಬರು ಮಹಿಳೆಯರ ಕೊಲೆಗೈದು ಕತ್ತಿನಲ್ಲಿದ್ದ ಚಿನ್ನದ ಮಾಂಗಲ್ಯಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಇದೇ ರೀತಿಯಲ್ಲಿ ಹಲ್ಲೆಗೀಡಾದ ಇನ್ನೊಬ್ಬ ಮಹಿಳೆ ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ. ಈ ಸರಣಿ ಹಲ್ಲೆಯಿಂದ ನಗರದ ಜನ ತಲ್ಲಣಗೊಂಡಿದ್ದಾರೆ.

50 ವರ್ಷಗಳ ಹಿಂದೆ — ಶುಕ್ರವಾರ, 8-6-1973

• ಉದ್ಯಮ ಸಮಿತಿ ವರದಿ ಅಸಂಗತ ಅಭಿಪ್ರಾಯದ 'ಕಾಗದದ ಚೂರು'

ಬೆಂಗಳೂರು, ಜೂನ್ 7– ರಾಜ್ಯ ಕೃಷಿ ಕೈಗಾರಿಕಾ ಕಾರ್ಪೊರೇಷನ್‌ನ ವ್ಯವಹಾರದಲ್ಲಿ ತಾವು ಹಸ್ತಕ್ಷೇಪ ಮಾಡಿರುವುದಾಗಿ ಆಪಾದಿಸಿ, ಸರ್ಕಾರಿ ಕ್ಷೇತ್ರದ ಉದ್ದಿಮೆಗಳಿಗೆ ಸಂಬಂಧಿಸಿದ ವಿಧಾನಮಂಡಲ ಸಮಿತಿ ಸಲ್ಲಿಸಿದ ವರದಿಯನ್ನು ಅಸಂಗತ ಅಭಿಪ್ರಾಯಗಳ 'ಕಾಗದದ ಚೂರು' ಎಂದು ಕೃಷಿ ಮಂತ್ರಿ ಕೆ.ಎಚ್.ಪಾಟೀಲರು ಇಂದು ವಿಧಾನ ಪರಿಷತ್ತಿನಲ್ಲಿ ಸಾರಿದರು.

ರಾಜಕೀಯ ವಿರೋಧಿಗಳು ತಮ್ಮ ವಿರುದ್ಧ 'ಜನರಲ್ಲಿ ಅಪನಂಬಿಕೆ ಹುಟ್ಟಿಸಲು' ಮಾಡಿದ ಈ ವರದಿ 'ಅಧಿಕೃತ ವರದಿಯೇ ಅಲ್ಲ' ಎಂದು ಹೇಳಿದ ಸಚಿವರು, ಗದಗ ಸಹಕಾರಿ ಹತ್ತಿ ಗಿರಣಿ 15 ಲಕ್ಷ ರೂಪಾಯಿಗಳ ಷೇರನ್ನು ಕಾರ್ಪೊರೇಷನ್‌ನಲ್ಲಿ ಹೂಡಿದುದರಲ್ಲಿ ತಾನು ಯಾವ ನಿಯಮಗಳನ್ನು ಮುರಿದಿದ್ದೇನೆ ಎಂದು, ಸದನದಲ್ಲಿ ಟೀಕಿಸಿ ಮಾತನಾಡಿದ ಸದಸ್ಯರಿಗೆ ಸವಾಲು ಹಾಕಿದರು.

• ಹಕ್ಕುಚ್ಯುತಿ ಸೂಚನೆಗೆ ನಿರಾಕರಣೆ

ಬೆಂಗಳೂರು, ಜೂನ್ 7– ಸರ್ಕಾರಿ ಉದ್ಯಮಗಳಿಗೆ ಸಂಬಂಧಿಸಿದ ವಿಧಾನ ಮಂಡಲದ ಸಮಿತಿಯ ಅಧ್ಯಕ್ಷರಿಂದ ವಿವರಣೆ ಕೇಳಲಾಗಿದೆ ಎಂಬ ವರದಿಯನ್ನು ಮುಖ್ಯಮಂತ್ರಿ ಅವರು ನಿರಾಕರಿಸಿರುವುದರಿಂದ ಹಕ್ಕುಚ್ಯುತಿ ನಿರ್ಣಯವನ್ನು ಪ್ರಸ್ತಾಪಿಸಲು ಅನುಮತಿ ನೀಡುವುದಿಲ್ಲ ಎಂದು ಸಭಾಪತಿ ಶ್ರೀ ಗಾಂವಕರ್ ಅವರು ಇಂದು ತೀರ್ಮಾನ ನೀಡಿದರು.

ಮುಖ್ಯಮಂತ್ರಿ ಅವರು ಸಮಿತಿಯ ಅಧ್ಯಕ್ಷರಿಂದ ವಿವರಣೆ ಕೇಳಿರುವುದರಿಂದ ಸದನದ ಹಕ್ಕಿಗೆ ಚ್ಯುತಿ ಉಂಟಾಗಿದೆ ಎಂದು ಹೇಳಿ, ವಿರೋಧ ಪಕ್ಷದ ನಾಯಕ ಶ್ರೀ ರಾಮಕೃಷ್ಣ ಹೆಗಡೆ ಅವರು ಜೂನ್ 4ರಂದು ಹಕ್ಕುಚ್ಯುತಿ ಸೂಚನೆ ಕಳುಹಿಸಿದ್ದರು.

ಜಗತ್ತಿನ ಅತಿ ದೊಡ್ಡ ಹಸಿರು ಗೋಡೆ ಆಫ್ರಿಕಾದಲ್ಲಿ ಸಜ್ಜಾಗುತ್ತಿದೆ. ನಮಗೂ ಅಂಥದ್ದೊಂದು ಬೇಕು

ಖಂಡ್ರೆ ಗಮನಕ್ಕೆ ಹಸಿರು ಗೋಡೆ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಖಗೋಳವಿಜ್ಞಾನಿ ಪರ್ಸಿವಲ್ ಲೊವೆಲ್ ಎಂಬಾತ 1901ರಲ್ಲಿ ಒಂದು ಗುಡ್ಡದ ಮೇಲೆ ಟೆಲಿಸ್ಕೋಪ್ ಹೂಡಿಕೊಂಡು ಮಂಗಳಗ್ರಹವನ್ನು ನೋಡುತ್ತಿದ್ದ. ಅಲ್ಲಿ ಆತನಿಗೆ ನೀರಿನ ಕಾಲುವೆಗಳನ್ನು ಹೋಲುವ ಅಸ್ಪಷ್ಟ ಗೀರುಗಳು ಕಂಡವು. ಒಟ್ಟೂ 183 ಕಾಲುವೆಗಳನ್ನೂ ಮಂಗಳನ ನೆತ್ತಿಯ ಮೇಲೆ ಹಿಮವನ್ನೂ ಗುರುತಿಸಿದ. ಆ ಕೆಂಪುಗ್ರಹದಲ್ಲಿ ಭೀಕರ ಬರಗಾಲ ಇದೆಯೆಂದೂ ಅಲ್ಲಿನ ಜೀವಿಗಳು ಬದುಕುಳಿಯಲೆಂದು ಹೇಗೋ ಕಷ್ಟಪಟ್ಟು ಕಾಲುವೆ ತೋಡುತ್ತಿವೆಯೆಂದೂ ಊಹಿಸಿ 'ವೈಜ್ಞಾನಿಕ' ಲೇಖನವನ್ನು ಬರೆದ. ಮುಂದೆ, ಇನ್ನಷ್ಟು ಸುಧಾರಿತ ಟೆಲಿಸ್ಕೋಪ್‌ಗಳು ಬಂದಮೇಲೆ ಲೊವೆಲ್‌ನ ಊಹೆ ನಿಜವಲ್ಲ, ಅಲ್ಲಿ ಜೀವಿಗಳಿಲ್ಲ ಎಂಬುದು ಗೊತ್ತಾಯಿತು. ಆದರೆ ಕಲ್ಪನಾ ಸಾಹಿತ್ಯದಲ್ಲಿ ಮಂಗಳನ ಆ ನತದೃಷ್ಟ ಜೀವಿಗಳ ಕತೆಗಳು ಬರುತ್ತಲೇ ಹೋದವು. ಅಲ್ಲಿನ ಜೀವಿಗಳು ನೀರಿಗಾಗಿ ಪೃಥ್ವಿಯ ಕಡೆ ವಲಸೆ ಬಂದಿದ್ದರ ಬಗ್ಗೆ ಕೂಡ ಕತೆಗಳು ಹೆಣೆದುಕೊಂಡವು.

ಈಗ ನಾವೇ ನಮ್ಮ ಭೂಗ್ರಹವನ್ನು ಬಿಟ್ಟು ಬೇರೆ ಕಡೆ ವಲಸೆ ಹೋಗಬೇಕಾಗಿ ಬಂದೀತೆಂದು ಕತೆ ಬರೆಯುವ ಮಟ್ಟಕ್ಕೆ ನಮ್ಮ ಭೂಮಿಯು ಬಿಸಿಪ್ರಳಯದ ಕಡೆ ವಾಲುತ್ತಿರುವಂತಿದೆ. ಆದರೆ ಹಾಗಾಗಲು ಬಿಡಕೂಡದು ಎಂದು ಜಾಗತಿಕ ಮಟ್ಟದ ಚಿಂತನೆಗಳು ನಡೆಯುತ್ತಿವೆ. ಮಂಗಳ ಲೋಕದ ಕಲ್ಪನಾಕತೆಗಳ ಮಾದರಿಯಲ್ಲೇ ಕೆಲವು ಅಸಲೀ ಕೆಲಸಗಳೂ ನಮ್ಮಲ್ಲಿ ನಡೆಯತೊಡಗಿವೆ. ಅದನ್ನೀಗ ನೆನಪಿಸಲು ಕಾರಣ ಏನೆಂದರೆ, ಪ್ರತಿವರ್ಷ ಜೂನ್ 17ನ್ನು 'ಮರುಭೂಮಿ ಮತ್ತು ಬರಗಾಲವನ್ನು ಹಿಮ್ಮೆಟ್ಟಿಸುವ ಅಂತಾರಾಷ್ಟ್ರೀಯ ದಿನ' ಎಂದು ಆಚರಿಸಬೇಕೆಂದು ವಿಶ್ವಸಂಸ್ಥೆ ಕರೆ ಕೊಟ್ಟಿದೆ, 1995ರಿಂದ ಕರೆ ಕೊಡುತ್ತಲೇ ಬಂದಿದೆ.

ಮರುಭೂಮಿಯ ವಿಸ್ತರಣೆಯನ್ನು ಹಿಮ್ಮೆಟ್ಟಿಸಲೆಂದು 'ದ ಗ್ರೇಟ್ ಗ್ರೀನ್ ವಾಲ್ (ಮಹಾ ಹಸಿರು ಗೋಡೆ) ಹೆಸರಿನ ಯೋಜನೆಯೊಂದು ಉತ್ತರ ಆಫ್ರಿಕಾದ ಸಹಾರಾ ಮರುಭೂಮಿಯಲ್ಲಿ ಜಾರಿಯಲ್ಲಿದೆ. ಆ ಮಹಾಖಂಡದ ಪಶ್ಚಿಮ ತುದಿಯ ಸೆನೆಗಲ್ ದೇಶದಿಂದ ಹಿಡಿದು ಪೂರ್ವ ತುದಿಯ ಜಿಬೂಟಿಯವರೆಗೆ, ಹನ್ನೊಂದು ರಾಷ್ಟ್ರಗಳ 7777 ಕಿಲೊಮೀಟರ್ ಉದ್ದದ 15 ಕಿಲೊಮೀಟರ್ ಅಗಲದ, ಗಿಡಮರಗಳ ಗೋಡೆ ಇದು. ವಿಮಾನವೊಂದು ಗಂಟೆಗೆ 350 ಕಿ.ಮೀ. ವೇಗದಲ್ಲಿ ಸಾಗುತ್ತಿದ್ದರೆ ಈ ತುದಿಯಿಂದ ಆ ತುದಿ ತಲುಪಲು 20 ಗಂಟೆ ಬೇಕು. ಸಹಾರಾ ಅಂದರೆ ಗೊತ್ತಲ್ಲ, ಜಗತ್ತಿನ ಅತಿ ದೊಡ್ಡ ಮರುಭೂಮಿ. ಹಿಂದೊಮ್ಮೆ ಅರಣ್ಯಗಳಿದ್ದ ಈ ವಿಶಾಲ ಭೂಪ್ರದೇಶ ಪ್ರತಿ 41 ಸಾವಿರ ವರ್ಷಗಳಿಗೊಮ್ಮೆ ತನ್ನ ಲಕ್ಷಣಗಳನ್ನು ಬದಲಿಸಿಕೊಳ್ಳುತ್ತದೆ. ಇನ್ನು 15 ಸಾವಿರ ವರ್ಷಗಳ ನಂತರ ಮತ್ತೆ ಅಲ್ಲಿ ತಂತಾನೇ ಅರಣ್ಯ ತಲೆಯೆತ್ತುತ್ತದೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಈಗಂತೂ ಅದು 92 ಲಕ್ಷ ಚ.ಕಿ.ಮೀ. ವಿಸ್ತಾರದ ಘೋರ ಮರುಭೂಮಿ. ಇಡೀ ಭಾರತಕ್ಕಿಂತ ಮೂರು ಪಟ್ಟು ದೊಡ್ಡದು.

ಜಗತ್ತಿನ ನಾನಾ ಭಾಗಗಳಲ್ಲಿ ಮರುಭೂಮಿಗಳು ವಿಸ್ತರಿಸುತ್ತಿವೆ. ಮನುಷ್ಯನಿಂದಾಗಿ ಈಗೀಗ ಶೀಘ್ರವಾಗಿ ವಿಸ್ತರಿಸುತ್ತಿವೆ. ಅದಕ್ಕೆ ತಡೆಯೊಡ್ಡಲೆಂದೇ ವಿಶ್ವಸಂಸ್ಥೆಯ 'ಯುಎನ್‌ಸಿಸಿಡಿ' ಹೆಸರಿನ ಅಂಗಸಂಸ್ಥೆ ಅಸ್ತಿತ್ವಕ್ಕೆ ಬಂದಿದ್ದು, ಅದರ ನೆರವಿನಲ್ಲಿ ಜೀನ್-ಮಾರ್ಕ್ ಸಿನ್ನಸ್ವಾಮಿ ಎಂಬ ಪರಿಸರ ಎಂಜಿನಿಯರ್ ದಿಗ್ದರ್ಶನದಲ್ಲಿ ಈ ಮಹಾಗೋಡೆಯ ನಿರ್ಮಾಣ ಕೆಲಸ ನಡೆಯುತ್ತಿದೆ. ಸಹಾರಾ ಮರುಭೂಮಿ ಇನ್ನಷ್ಟು ವಿಸ್ತರಿಸದಂತೆ ಈ ಹಸಿರು ಪಟ್ಟಿಯನ್ನು ನಿರ್ಮಿಸಲು ಹೊರಟಿದ್ದು, ಹನ್ನೊಂದು ರಾಷ್ಟ್ರಗಳನ್ನು ಅದಕ್ಕೆಂದೇ ಅಣಿಗೊಳಿಸಿದ್ದು, ಕೆಲಸ ನಿರಂತರ ಸಾಗುವಂತೆ ನೋಡಿಕೊಂಡು ಬಂದಿದ್ದು ಒಂದು ಮಹಾ ಸಾಹಸವೇ ಹೌದು. ಬಂಡವಾಳವೇನೊ ವಿಶ್ವಬ್ಯಾಂಕ್, ವಿಶ್ವ ಪರಿಸರ ನಿಧಿ, ಆಫ್ರಿಕನ್ ಸಂಘದಿಂದ ಬರುತ್ತದೆ. ಆದರೆ ಎತ್ತಿನಹೊಳೆ ಕಾಲುವೆಯ ಹಾಗೆ ಯಂತ್ರಗಳ ನೆರವಿನಿಂದ ಮಾಡುವ ಕೆಲಸ ಇದಲ್ಲ. ಅದಕ್ಕೆ ಸ್ಥಳೀಯ ಬಡಜನರನ್ನೇ ತೊಡಗಿಸಬೇಕು. ನೀರು ನೆರಳಿಲ್ಲದ ರಣಸೆಕೆಯ ನೆಲದಲ್ಲಿ ಬದುಕಲಾಗದೇ ನಗರಗಳತ್ತ ಗುಳೆ ಹೋಗುತ್ತಿರುವುದನ್ನು ತಡೆಯಬೇಕು. ಯಾರೋ ಒಡ್ಡುವ ಕಾಸಿಗಾಗಿ ಗನ್ ಹಿಡಿದು ಯಾವುದೋ ಮಾಫಿಯಾ ಗ್ಯಾಂಗನ್ನು ಸೇರಲು ಹೊರಟವರನ್ನು ಇತ್ತ ತಿರುಗಿಸಬೇಕು. 'ಇದರಲ್ಲಿ ನನಗೇನು ಪಾಲಿದೆ?' ಎಂದು ಅಡ್ಡಗಾಲು ಹಾಕುವ ಮುಖಂಡರ ಮನವೊಲಿಸಿ ಹಣದ ಸದ್ವಿನಿಯೋಗ ಆಗುವಂತೆ ನೋಡಿಕೊಳ್ಳಬೇಕು. ಜನರು ನಿರ್ಮಿಸುವ ಹಸಿರು ವನವೇ ಜನರಿಗೆ ಆಹಾರವನ್ನೂ ನೀಡಬೇಕು, ಅಡುಗೆಗೆ ಸೌದೆಯನ್ನೂ, ಮನೆಗೆ ಹೊದಿಕೆಯನ್ನೂ ಒದಗಿಸಬೇಕು, ನೆಲದ ತೇವಾಂಶವನ್ನೂ ಅಂತರ್ಜಲವನ್ನೂ ಜೀವಿವೈವಿಧ್ಯವನ್ನೂ ಹೆಚ್ಚಿಸಬೇಕು, ಹೊಸ ಹಸಿರು ನೆಲದ ಸ್ವಾಮಿತ್ವವೂ ಅವರಿಗೇ ಸಿಗುವಂತಾಗಬೇಕು. ಹಳತು ಹೋಗಿ ಹೊಸ ಸರ್ಕಾರ ಬಂದರೂ ಸರ್ವಾಧಿಕಾರಿ ಬಂದರೂ ಯೋಜನೆ ಕುಂಟದಂತೆ ಸಕಲೆಂಟು ಸವಾಲುಗಳನ್ನು ಎದುರಿಸುತ್ತಲೇ ಮುನ್ನಡೆಯಬೇಕು. ಮುನ್ನಡೆಯುತ್ತಿದೆ.

ನಮ್ಮ ದೇಶದಲ್ಲೂ ಇಂಥದ್ದೊಂದು 'ಅರಾವಳಿ ಗ್ರೇಟ್ ಗ್ರೀನ್ ವಾಲ್' ಯೋಜನೆಗೆ ಕಳೆದ ಮಾರ್ಚ್ ತಿಂಗಳಲ್ಲಿ ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಹಸಿರು ನಿಶಾನೆ ತೋರಿಸಿದ್ದಾರೆ. ವಿಶ್ವಸಂಸ್ಥೆಯ ಎಫ್‌ಎಒ (ಆಹಾರ ಮತ್ತು ಕೃಷಿ ಸಂಘಟನೆ) ನೆರವಿನಿಂದ ಗುಜರಾತ್, ರಾಜಸ್ಥಾನ, ಹರಿಯಾಣ ಮತ್ತು ದೆಹಲಿಯ ನಡುವೆ ಮರುಭೂಮಿ ಮುನ್ನುಗ್ಗದಂತೆ, ಬರಗಾಲ ತಲೆಯೆತ್ತದಂತೆ ಐದು ಕಿಲೊಮೀಟರ್ ಅಗಲದ 60 ಲಕ್ಷ ಹೆಕ್ಟೇರ್‌ನಲ್ಲಿ ಹಸಿರಿನ ಸಂವರ್ಧನೆಯ ಕೆಲಸ ಆರಂಭವಾಗಿದೆ.



ಇನ್ನು ಮುಂದಿನ ಸಂಗತಿಗಳು ಎಂಜಿನಿಯರಿಂಗ್ ಡಿಗ್ರಿ ಪಡೆದಿರುವ ಕರ್ನಾಟಕದ ಪರಿಸರ ಸಚಿವ ಈಶ್ವರ ಖಂಡ್ರೆಯವರ ಖಾಸಾ ಗಮನಕ್ಕೆ:

ಭಾರತದ ಎರಡನೇ ಅತಿದೊಡ್ಡ ಮರುಭೂಮಿ ಕರ್ನಾಟಕದಲ್ಲಿ ಸೃಷ್ಟಿಯಾಗುತ್ತಿದೆ ಎಂದು ವಿಜ್ಞಾನಿಗಳು ಪದೇ ಪದೇ ಹೇಳುತ್ತ ಬಂದಿದ್ದಾರೆ. ಉತ್ತರ ಕರ್ನಾಟಕದ ಆರು ಜಿಲ್ಲೆಗಳಲ್ಲಿ ಅಂತರ್ಜಲ ಕುಸಿಯುತ್ತ, ನೆಲದ ತೇವಾಂಶ ಆರುತ್ತ, ಗಿಡಮರಗಳು ಕಣ್ಮರೆಯಾಗುತ್ತ ಸಾಗಿವೆ. ಇಲ್ಲೂ ಮರುಭೂಮಿ ತಡೆಯಲೆಂದು ಅಂಥದ್ದೊಂದು ವಿಸ್ತಾರದ ಯೋಜನೆ ಸಾಧ್ಯವಾದೀತೆ? ಜನರಿಗೆ ಸೂಕ್ತ ಪ್ರೇರಣೆ ನೀಡಿದರೆ ಯಾವ ವಿಶೇಷ ಅನುದಾನವಿಲ್ಲದೆ ಹಸಿರೀಕರಣ ಸಾಧ್ಯವೆಂದು ಮಹಾರಾಷ್ಟ್ರದಲ್ಲಿ ಅಮೀರ್ ಖಾನ್ ನೇತೃತ್ವದ 'ಪಾನಿ ಫೌಂಡೇಶನ್' ತಂಡ ತೋರಿಸುತ್ತ ಬಂದಿದೆ. ಚುನಾವಣೆಯಲ್ಲಿ ಬಳಸುವ ಸೋಶಿಯಲ್ ಎಂಜಿನಿಯರಿಂಗ್ ತಂತ್ರಗಳಿಗಿಂತ ಭಿನ್ನಬಗೆಯ ವಶೀಕರಣದ ಎಂಜಿನಿಯರಿಂಗ್ ತಂತ್ರ ಇದಕ್ಕೆ ಬೇಕು. ಕಲಬುರಗಿಯ ನೆಲ ಮರುಭೂಮಿ ಆಗದಂತೆ ತಡೆಯಲೆಂದು ರಾಜೇಂದ್ರ ಸಿಂಗರಂಥ ಜಲತಜ್ಞರ, ವಿಜ್ಞಾನಿಗಳ, ಕಾಲೇಜು-ವಿಶ್ವವಿದ್ಯಾಲಯ ಉಪನ್ಯಾಸಕರ, ಕುಲಪತಿಗಳ ಮತ್ತು ಮಠಾಧೀಶರ ನೆರವಿನಲ್ಲಿ ಕಳೆದ ಹತ್ತು ವರ್ಷಗಳಿಂದ ಜಲಜಾಗೃತಿಗೆ ಶ್ರಮಿಸಿದ ಬಿ.ಆರ್.ಪಾಟೀಲರು ಈಗ ಆಳಂದದ ಶಾಸಕರಾಗಿ ಗೆದ್ದು ಬಂದಿದ್ದಾರೆ. ಅವರಂಥವರ ಸಲಹೆ ಪಡೆಯಬೇಕು.

ಆಫ್ರಿಕಾದಲ್ಲಿ 'ಗ್ರೇಟ್ ಗ್ರೀನ್ ವಾಲ್' ನಿರ್ಮಾಣವನ್ನು ಮುನ್ನಡೆಸುತ್ತಿರುವ ಸಿನ್ನಸ್ವಾಮಿ (ಚಿನ್ನಸ್ವಾಮಿ) ಭಾರತೀಯ ಮೂಲದವರೇ ಆಗಿದ್ದು, ಭಾರತದ ಪರಿಸರ ಸಂವರ್ಧನ ಯೋಜನೆಗಳ ವೀಕ್ಷಣೆಗೆಂದು ಆಗಾಗ ಇಲ್ಲಿಗೆ ಬರುತ್ತಿರುತ್ತಾರೆ. ಅದಕ್ಕಿಂತ ಮುಖ್ಯ ಸಂಗತಿ ಇನ್ನೊಂದಿದೆ: ಬರಗಾಲದಿಂದಾಗಿ ಜನರು ಗುಳೆ ಹೊರಡುವುದನ್ನು ತಪ್ಪಿಸಲೆಂದು ಹಾಗೂ ಈ ಜಾಗತಿಕ ಹಸಿರೀಕರಣ ಯೋಜನೆಗೆ ಪ್ರೇರಣೆ ನೀಡಲೆಂದು ಬೆಂಗಳೂರಿನವರೇ ಆದ ವಿಶ್ವಮಾನ್ಯ ಗಾಯಕ ರಿಕಿ ಕೇಜ್ ಅವರನ್ನೇ ಸದ್ಭಾವನಾ ರಾಜದೂತನನ್ನಾಗಿ ವಿಶ್ವಸಂಸ್ಥೆ ನೇಮಕ ಮಾಡಿದೆ. ಅವರ ಇಳೆಮಳೆಯ ಹಾಡುಗಳೇ ಅದೆಷ್ಟೊ ರಾಷ್ಟ್ರಗಳಲ್ಲಿ ಹಸಿರು ಗೋಡೆಯ ನಿರ್ಮಾಣಕ್ಕೆ ಭೂಮಿಗೀತೆಯಾಗಿ ಜನರನ್ನು ಸಜ್ಜುಗೊಳಿಸುತ್ತಿವೆ. ನಮ್ಮಲ್ಲಿ ಮರುಭೂಮಿಗಳು ನಾನಾ ರೂಪಗಳಲ್ಲಿ ಮಲೆನಾಡಿನಲ್ಲೂ ನೆಲದಾಳದಲ್ಲೂ ವಿಸ್ತರಿಸುತ್ತಿವೆ. ಜೂನ್ 17ನ್ನು ಮರುಭೂಮಿಯ ತಡೆಗೋಡೆಯ ದಿನವೆಂದು ಆಚರಿಸಿರೆಂದು ವಿಶ್ವಸಂಸ್ಥೆ ಕಳೆದ 27 ವರ್ಷಗಳಿಂದ ಕರೆ ಕೊಡುತ್ತ ಬಂದಿದೆ. ಒಮ್ಮೆಯಾದರೂ ಆ ಕರೆಗೆ ಓಗೊಡೋಣವೇ?

ಈ ವರ್ಷದ ಮರುಭೂಮಿ ತಡೆಗಟ್ಟುವ ದಿನಕ್ಕೆ 'ಅವಳ ಭೂಮಿ, ಅವಳ ಹಕ್ಕು' ಎಂಬ ಘೋಷವಾಕ್ಯವನ್ನು ವಿಶ್ವಸಂಸ್ಥೆ ನೀಡಿದೆ. ಬೆಂಗಳೂರಿನ ಸಿಮೆಂಟ್ ಕಾಂಕ್ರೀಟ್ ಗೋಡೆಗಳನ್ನು ನಿರ್ಮಿಸುವ ಶ್ರಮಿಕರಲ್ಲಿ ಉತ್ತರ ಕರ್ನಾಟಕದಿಂದ ಗುಳೆ ಬಂದ ಸಣಕಲು ಮಹಿಳೆಯರೇ ಹೆಚ್ಚಾಗಿ ಕಾಣುತ್ತಿರುತ್ತಾರೆ. ಅವಳು ಬಿಟ್ಟುಬಂದ ಭಣಭೂಮಿಯಲ್ಲಿ ಅವಳೇ ಹಸಿರು ಉಕ್ಕಿಸುವಂತೆ ಮಾಡಲು ಸಾಧ್ಯವಿದೆ ತಾನೆ?

ಚುರುಮುರಿ



ಭಾಷಣ ಓಕೆ!

• ಗುರು ಪಿ.ಎಸ್.

'ಹಾಳಾಗೋಯ್ತು, ಎಲ್ಲ ಹಾಳಾಗೋಯ್ತು' ಪಾರ್ಕ್‌ನಲ್ಲಿ ಸೇರಿದ್ದ 10-15 ಜನರ ಮುಂದೆ ಭಯಂಕರ ಭಾಷಣ ಮಾಡ್ತಿದ್ದ ಲೋಕಲ್ ಲೀಡರ್ ಮುದ್ದಣ್ಣ.

'ಹೌದಾ ಅಣ್ಣ, ಅಕ್ಕಿ, ಕರೆಂಟ್ ಫ್ರೀ ಕೊಟ್ರೆ, ಲೇಡೀಸ್‌ಗೆ ಬಸ್ ಟಿಕೆಟ್ ಫ್ರೀ ಮಾಡಿದ್ರೆ, ಮೇಲೆ ಎರಡೆರಡು ಸಾವಿರ ರೂಪಾಯಿನೂ ಕೊಟ್ರೆ ರಾಜ್ಯ ಹಾಳಾಗೋಗುತ್ತಾ' ಕೇಳ್ದ ಅಸಿಸ್ಟೆಂಟ್ ವಿಜಿ.

'ಇಲ್ವೇನೋ ಮತ್ತೆ, ನಮ್ ಜನಗೋಳು ಆಗಲೇ ಸೋಂಬೇರಿಗಳಾಗವ್ರೆ, ಇನ್ನು ಇವೆಲ್ಲ ಬಿಟ್ಟಿಯಾಗಿ ಕೊಟ್ರೆ ಹಾಳಾಗಲ್ವ, ನಮ್ ರಾಜ್ಯದ ಎಕಾನಮಿ ಏನಾಗಬೇಕು' ಉಗ್ರ ಭಾಷಣ ಮುಂದುವರಿಸಿದ ಮುದ್ದಣ್ಣ, ಜೊತೆಗಿದ್ದವರೂ ಜೋರಾಗಿ ಚಪ್ಪಾಳೆ ತಟ್ಟಿದ್ರು.

ಭಾಷಣ ಕೇಳಿ ಸೀದಾ ಮನೆಗೆ ಬಂದ ವಿಜಿ, 'ನೋಡೇ, ಸರ್ಕಾರ ಕೊಡೋ ಈ ಬಿಟ್ಟಿ ಭಾಗ್ಯ ಎಲ್ಲ ನಮಗೆ ಬೇಡ. ನೀನು ಇನ್ನು ಈ ಬಿಟ್ಟಿ ಯೋಜನೆಗಳ ಬಗ್ಗೆ ಆಸೆ ಇಟ್ಕೊಬೇಡ' ಎಂದು ಹೆಂಡ್ತಿಗೆ ಹೇಳ್ತಿದ್ದಂಗೆ ಒಳಗಡೆಯಿಂದ ಲಟ್ಟಣಿಗೆ ಶರವೇಗದಲ್ಲಿ ಬಂದು ಕಾಲಿಗೆ ಬಿತ್ತು!

'ಅದೆಲ್ಲ ದೊಡ್ಡ ಶ್ರೀಮಂತರಿಗೆ ಸರಿ. ನಿಮಗೆ ಬರೋ ಸಂಬಳದಲ್ಲಿ ಡೈಲಿ ಹಾಲು, ಮೊಸರು ತಗೋಳೋಕೇ ಆಗಲ್ಲ ನಮಗೆ. ಮರ್ಯಾದೆಯಿಂದ ನಾಳೆನೇ ಹೋಗಿ ಸೇವಾ ಸಿಂಧು ಪೋರ್ಟಲ್‌ನಲ್ಲಿ ಎಲ್ಲದಕ್ಕೂ ಅರ್ಜಿ ಹಾಕಿ, ಹಾಗೇ ರೇಷನ್ ಕಾರ್ಡ್ ಮಾಡಿಸಿ' ಎಂದು ಪತ್ನಿ ಆದೇಶಿಸಿದಳು.

ಮರುದಿನ ಸೈಬರ್ ಸೆಂಟರ್ ಮತ್ತು ಫುಡ್ ಡಿಪಾರ್ಟ್‌ಮೆಂಟ್ ಆಫೀಸ್‌ಗಳೆರಡರ ಮುಂದೆಯೂ ಉದ್ದನೆಯ ಸಾಲು ನೋಡಿ ವಿಜಿಗೆ ತಲೆ ಸುತ್ತಿದಂತಾಯ್ತು, ಆದರೂ ಕ್ಯೂನಲ್ಲಿ ನಿಂತ.

ತಲೆಗೆ ಟವೆಲ್ ಸುತ್ಕೊಂಡು ನಿಂತಿದ್ದ ಒಬ್ಬನ್ನ ಕಂಡು, ಎಲ್ಲೋ ನೋಡಿದಂತಿದೆಯಲ್ಲ ಅಂದ್ಕೊಂಡು ಮುಂದೆ ಹೋದ, 'ಮುದ್ದಣ್ಣ ನೀವು! ಏನಣ್ಣೋ ನೀವಿಲ್ಲಿ! ನಿನ್ನೆ ಏನೇನೋ ಭಾಷಣ ಮಾಡ್ತಿದ್ರಿ'.

ಮುಖ ಹುಳ್ಳಗೆ ಮಾಡ್ಕೊಂಡು ಮುದ್ದಣ್ಣ ಹೇಳ್ದ, 'ಭಾಷಣ ಬೇರೆ, ಬದುಕೇ ಬೇರೆ'.

ಸಂಗತ

ವಾರದ ಸಂತೆ: ಬದಲಾವಣೆಗೆ ಮುನ್ನುಡಿ

ಗ್ರಾಮಭಾರತದ ಆರ್ಥಿಕ ಬೇರು ಬಲಪಡಿಸುವಲ್ಲಿ ಸಂತೆ ಮಹತ್ವದ ಪಾತ್ರ ವಹಿಸುತ್ತದೆ ಎಂಬುದನ್ನು ಗ್ರಾಮಸ್ಥರು ಅರಿತುಕೊಳ್ಳಬೇಕು

• ಮಲ್ಲಿಕಾರ್ಜುನ ಹೆಗ್ಗಳಗಿ

ಬಾಗಲಕೋಟೆ ಜಿಲ್ಲೆಯ ಕಜಿಡೋಣಿ ಗ್ರಾಮಕ್ಕೆ ಸ್ನೇಹಿತರನ್ನು ಭೇಟಿಯಾಗುವ ಸಲುವಾಗಿ ಈಚೆಗೆ ಹೋಗಿದ್ದೆ. ಈ ಗೆಳೆಯರು ತಮ್ಮ ಗ್ರಾಮದಲ್ಲಿ ಹೊಸದಾಗಿ ವಾರದ ಸಂತೆ ಪ್ರಾರಂಭಿಸಿದ ಖುಷಿಯಲ್ಲಿದ್ದರು.

ವಾರದ ಸಂತೆಯು ಕಜಿಡೋಣಿ ಗ್ರಾಮಕ್ಕೆ ಹೊಸ ಚೈತನ್ಯ, ಕೆಲಸ, ವ್ಯಾಪಾರ, ಆರ್ಥಿಕ ಅನುಕೂಲ ತಂದುಕೊಟ್ಟಿರುವುದು ಅವರ ಪ್ರತಿ ಮಾತಿನಲ್ಲಿ ವ್ಯಕ್ತವಾಗುತ್ತಿತ್ತು. ವಾರದ ಸಂತೆಯು ಗ್ರಾಮಗಳಿಗೆ ಹೊಸ ಅವಕಾಶಗಳ ಅಂಬರ ತೆರೆದು ತೋರಿಸುತ್ತದೆ ಎನ್ನುವುದಕ್ಕೆ ಕಜಿಡೋಣಿ ಒಂದು ಉದಾಹರಣೆಯಾಗಿದೆ.

ಸಂತೆಯ ಪರಿಕಲ್ಪನೆ ಹೊಸದೇನಲ್ಲ. ಹಳಗನ್ನಡ ಕಾವ್ಯದಲ್ಲಿ, ವಚನಗಳಲ್ಲಿ ಸಂತೆಯ ಉಲ್ಲೇಖವನ್ನು ಕಾಣಬಹುದಾಗಿದೆ. 'ನಾ ಸಂತೆಗೆ ಹೋಗಿನಿ, ಆಕೆ ತಂದಿದ್ದಳು ಬೆಣ್ಣಿ' ಎಂಬ ಹಳೆಯ ಜಾನಪದ ಹಾಡು ಈಗಲೂ ಕಾರ್ಯಕ್ರಮಗಳಲ್ಲಿ ರಮ್ಯವಾಗಿ ಕೇಳಿಸುತ್ತದೆ. ಆದರೆ ಬಹಳಷ್ಟು ಹಳ್ಳಿಗಳಲ್ಲಿ ವಾರದ ಸಂತೆ ನಡೆಯುವುದಿಲ್ಲ. ಹಳ್ಳಿಗಳ ಸರ್ವತೋಮುಖ ಅಭಿವೃದ್ಧಿಗೆ ವೇಗ ಒದಗಿಸುವ ಸಂತೆ ನಡೆಸುವ ಬಗ್ಗೆ ಗ್ರಾಮಸ್ಥರು ಆಸಕ್ತಿ ವಹಿಸುವುದು ಬಹಳ ಅವಶ್ಯವಾಗಿದೆ.

ಅಣೆಕಟ್ಟುಗಳು, ಕೈಗಾರಿಕೆಗಳು ಹಾಗೂ ವಿವಿಧ ಯೋಜನೆಗಳಿಂದಾಗಿ ಸ್ಥಳಾಂತರಗೊಂಡ ಜನರಿಂದ ಹೊಸ ಊರುಗಳು ಹುಟ್ಟಿಕೊಂಡಿವೆ. ಒಂದೇ ಸಮಾಜದ ಜನರು ಹೊಸ ಹೊಸ ತಾಂಡಾಗಳನ್ನು ನಿರ್ಮಿಸಿಕೊಂಡಿದ್ದಾರೆ (ಉದಾಹರಣೆಗೆ, ಲಂಬಾಣಿ ತಾಂಡಾಗಳು). ಈ ಎಲ್ಲ ಜನವಸತಿ ಪ್ರದೇಶಗಳಲ್ಲಿ ವಾರದ ಸಂತೆ ಆರಂಭಿಸುವುದರಿಂದ ಜನಜೀವನಕ್ಕೆ ಬಹಳ ಅನುಕೂಲವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಗ್ರಾಮೀಣ ಮಹಿಳೆಯರಿಗೆ ಸಂತೆ ಹೊಸ ಉದ್ಯೋಗಾವಕಾಶವನ್ನು ಕಲ್ಪಿಸುತ್ತದೆ ಮತ್ತು ಮಹಿಳಾ ಸಬಲೀಕರಣಕ್ಕೆ ಇದು ಸರಳ ಮೆಟ್ಟಿಲು ಸಹ ಆಗುತ್ತದೆ.

ಹಳ್ಳಿಗಳಲ್ಲಿ ವಾರದ ಸಂತೆ ಆರಂಭಿಸುವುದು ಅತ್ಯಂತ ಸರಳ ಪ್ರಕ್ರಿಯೆಯಾಗಿದೆ. ಸಂತೆಯನ್ನು ಆರಂಭಿಸುವ ಮತ್ತು ನಿರ್ವಹಿಸುವ ಪೂರ್ಣ ಅಧಿಕಾರ ಗ್ರಾಮ ಪಂಚಾಯಿತಿಗೆ ಇದೆ. ಗ್ರಾಮ ಪಂಚಾಯಿತಿಯ ಸದಸ್ಯರು ಸಭೆ ನಡೆಸಿ, ವಾರದಲ್ಲಿ ಒಂದು ನಿಗದಿತ ದಿನದಂದು ಗ್ರಾಮದ ವಿಶಾಲ ಸ್ಥಳದಲ್ಲಿ ಸಂತೆ ನಡೆಸುವ ಬಗ್ಗೆ ನಿರ್ಧರಿಸಬೇಕು. ಈ ನಿರ್ಧಾರವನ್ನು ತಮ್ಮ ವ್ಯಾಪ್ತಿಯಲ್ಲಿ ಬರುವ ಎಪಿಎಂಸಿಗೆ ಮತ್ತು ತಹಶೀಲ್ದಾರರಿಗೆ ಲಿಖಿತವಾಗಿ ತಿಳಿಸಬೇಕು. ತಹಶೀಲ್ದಾರ್ ಶಾಂತಿ, ಶಿಸ್ತು, ಸ್ವಚ್ಛತೆ ಕಾಪಾಡುವ ಸೂಚನೆಗಳನ್ನು ನೀಡಿ ಒಪ್ಪಿಗೆ ಪತ್ರ ನೀಡುತ್ತಾರೆ. ಪಂಚಾಯಿತಿಯವರು ಡಂಗುರ ಸಾರಿ, ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ, ಕರಪತ್ರಗಳನ್ನು ಹಂಚಿ, ಸಂತೆ ನಡೆಸುವ ಬಗ್ಗೆ ಪ್ರಚಾರ ಮಾಡಬೇಕು.

ಬೇರೆ ಸ್ಥಳದಿಂದ ಬಂದು ವ್ಯಾಪಾರ ಮಾಡುವವರಿಗೆ ಕೆಲವು ವಾರ ಪ್ರವಾಸದ ಖರ್ಚು, ಊಟದ ವ್ಯವಸ್ಥೆ ಮಾಡಬೇಕು. ವ್ಯಾಪಾರ ವಹಿವಾಟು ಚೆನ್ನಾಗಿ ಬೆಳೆದ ಮೇಲೆ ವ್ಯಾಪಾರಸ್ಥರಿಂದ ಸ್ವಲ್ಪ ಬಾಡಿಗೆಯನ್ನು ಪಂಚಾಯಿತಿ ವಸೂಲು ಮಾಡಬಹುದು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ, ಸಂತೆಯಲ್ಲಿ ಭಾಗವಹಿಸುವ ವ್ಯಾಪಾರಸ್ಥರಿಗೆ ಶೆಡ್ಡುಗಳು, ವ್ಯಾಪಾರ ವಹಿವಾಟಿಗೆ ಬೇಕಾಗುವ ಇತರ ಅನುಕೂಲಗಳನ್ನು ಕಲ್ಪಿಸಲು ಅವಕಾಶವಿದೆ.

ಕೆಲವು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಎರಡು ಅಥವಾ ಮೂರು ಹಳ್ಳಿಗಳು ಬರುತ್ತವೆ. ತನ್ನ ವ್ಯಾಪ್ತಿಯ ಎಲ್ಲಾ ಹಳ್ಳಿಗಳಲ್ಲಿ ಸಂತೆ ಆರಂಭಿಸಲು ಪಂಚಾಯಿತಿಗೆ ಅಧಿಕಾರವಿದೆ.

ಗ್ರಾಮಸ್ಥರು ಬೇರೆ ಊರುಗಳಿಗೆ ಹೋಗಿ ಸಂತೆ ಮಾಡಿಕೊಂಡು ಬರುವುದಕ್ಕೆ ಒಂದು ದಿನ ವ್ಯರ್ಥವಾಗುತ್ತದೆ. ಸಂಚಾರಕ್ಕೆ ಖರ್ಚು ಮಾಡಬೇಕಾಗುತ್ತದೆ. ತಮ್ಮ ಗ್ರಾಮದಲ್ಲೇ ಸಂತೆ ನಡೆದರೆ ಸುಲಭವಾಗಿ ಸಮಯ ಹೊಂದಿಸಿಕೊಳ್ಳಬಹುದು.

ಈಗ ಆನ್‌ಲೈನ್ ವ್ಯಾಪಾರ ಜೋರಾಗಿ ನಡೆಯುತ್ತಿದೆ. ಅದು ಆಕರ್ಷಕವಾಗಿಯೂ ಕಾಣುತ್ತಿದೆ. ಆದರೆ ಸಂತೆಯಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿ ವಸ್ತುಗಳನ್ನು ಪರಿಶೀಲಿಸಿ, ಬೆಲೆಯನ್ನು ಚೌಕಾಸಿ ಮಾಡಿ, ತಮಗೆ ಬೇಕಾದಷ್ಟನ್ನು ಮಾತ್ರ ಖರೀದಿಸುವ ಕ್ರಿಯೆ ನಿಜಕ್ಕೂ ಚೇತೋಹಾರಿಯಾದದ್ದು.



ಸಂತೆ ಸ್ಥಳೀಯ ರೈತರಿಗೆ ವರದಾನವಾಗುತ್ತದೆ. ತಾವು ಬೆಳೆದ ಉತ್ಪನ್ನಗಳನ್ನು ನೇರವಾಗಿ ಮಾರಾಟಮಾಡುವುದಕ್ಕೆ ಅವಕಾಶ ದೊರೆಯುತ್ತದೆ. ರೈತ ದುಡಿದದ್ದೆಲ್ಲ ಮಧ್ಯವರ್ತಿಗಳ ಪಾಲು ಎನ್ನುವ ಮಾತೊಂದು ಇದೆ. ಗ್ರಾಮೀಣ ಸಂತೆಯಿಂದ ಮಧ್ಯವರ್ತಿಗಳ ಹಾವಳಿಯನ್ನು ಸುಲಭವಾಗಿ ತಪ್ಪಿಸಬಹುದು. ಗ್ರಾಹಕರಿಗೂ ತಾಜಾ ಹಣ್ಣು, ಹಾಲು, ಕಾಯಿಪಲ್ಲೆ ದೊರೆಯುತ್ತವೆ.

ಹಳ್ಳಿಗಳ ಸಂತೆಯಲ್ಲಿ ₹ 50 ಲಕ್ಷದಿಂದ ಎರಡು ಕೋಟಿಯವರೆಗೆ ವ್ಯವಹಾರ ನಡೆಯುವ ಮಾಹಿತಿ ಇದೆ. ಕಜಿಡೋಣಿಯ ಪ್ರಗತಿಪರ ರೈತ ಬಸಪ್ಪ ಅವರು ಹೇಳುವಂತೆ, 'ನಾನು 260 ಮಾವಿನ ಮರಗಳನ್ನು ಬೆಳೆಸಿದ್ದೇನೆ. ಹಣ್ಣುಗಳನ್ನು ಏಜೆಂಟರು ಖರೀದಿಸಿ ಬೇರೆ ನಗರಗಳಿಗೆ ಕಳಿಸುತ್ತಿದ್ದರು. ಈಗ ನಮ್ಮೂರ ಸಂತೆಯಲ್ಲಿಯೇ ಮಾರುತ್ತಿದ್ದೇನೆ. ಹೆಚ್ಚಿಗೆ ಆದಾಯ ಬರುತ್ತಿದೆ ಮಾತ್ರವಲ್ಲ, ನಮ್ಮ ಹಣ್ಣಿನ ರುಚಿಯ ಬಗ್ಗೆ ಇಡೀ ಗ್ರಾಮ ಮೆಚ್ಚುಗೆ ಮಾತು ಹೇಳುತ್ತಿದೆ. ಇದು ನಮ್ಮೂರ ಸಂತೆಯಿಂದ ಪಡೆದ ಸಂಭ್ರಮ'.

ಸಂತೆಯಿಂದ ಗ್ರಾಮದ ಗುಡಿ ಕೈಗಾರಿಕೆ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಸಹಜವಾಗಿ ಆರಂಭವಾಗುತ್ತದೆ. ಗ್ರಾಮದ ಕುಶಲಕರ್ಮಿಗಳಿಗೆ ಉದ್ಯೋಗ ದೊರೆಯುತ್ತದೆ. ಭಾರತದ ಆತ್ಮ ಹಳ್ಳಿಗಳಲ್ಲಿದೆ ಎಂದು ಗಾಂಧೀಜಿ ಹೇಳುತ್ತಿದ್ದರು. ಗ್ರಾಮಭಾರತದ ಆರ್ಥಿಕ ಬೇರು ಬಲಪಡಿಸುವಲ್ಲಿ ಸಂತೆ ಮಹತ್ವದ ಪಾತ್ರ ವಹಿಸುತ್ತದೆ ಎಂಬುದನ್ನು ಗ್ರಾಮಸ್ಥರು ಅರಿತುಕೊಳ್ಳಬೇಕು.

ನಿಮ್ಮ ಹಳ್ಳಿಯಲ್ಲಿ ಸಂತೆ ನಡೆಯುವುದಿಲ್ಲವೇ? ಹಾಗಿದ್ದರೆ ತಡಮಾಡದೆ ಸಂತೆ ಆರಂಭಕ್ಕೆ ಮುಂದಾಗಿ. ಹೆಚ್ಚು ಖರ್ಚು, ಶ್ರಮವಿಲ್ಲದೆ ಬಹು ದೊಡ್ಡ ಬದಲಾವಣೆಗೆ ಮುನ್ನುಡಿ ಬರೆಯಬಹುದು.

ವಾಚಕರ ವಾಣಿ

ಕಲಾಕ್ಷೇತ್ರದ ಮಹತ್ವ ಉಳಿಯುವುದೇ?

ಬಿ.ಜಯಶ್ರೀ ಅವರ 'ಸ್ಪಂದನ' ತಂಡ ಇತ್ತೀಚೆಗೆ ತನ್ನ 50ರ ಸಂಭ್ರಮವನ್ನು ಎಪ್ಪತ್ತರ ದಶಕದ ಸಮಕಾಲೀನ ತಂಡಗಳ ಜೊತೆ ಸರಳವಾಗಿ ಆಚರಿಸಿಕೊಂಡಿತು. ಈ ಸಡಗರದಲ್ಲಿ ಭಾಗಿಯಾಗಿದ್ದ ರಂಗತಂಡಗಳ ಹಿರಿಯ ಸದಸ್ಯರು ಎಪ್ಪತ್ತು, ಎಂಬತ್ತರ ದಶಕದ ಪ್ರಯೋಗಗಳನ್ನು, ಏಳುಬೀಳುಗಳನ್ನು ಮೆಲುಕು ಹಾಕುತ್ತಲೇ ಸಮಕಾಲೀನ ರಂಗಚಟುವಟಿಕೆಗಳ ಬಗ್ಗೆಯೂ ಮಾತನಾಡಿದರು. ಅಂದು ಎಲ್ಲಾ ತಂಡಗಳ ರಂಗಚಟುವಟಿಕೆಯ ಮುಖ್ಯ ಕೇಂದ್ರವಾಗಿದ್ದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ.

ಇಂದು ಬೆಂಗಳೂರು ನಗರ ಬೃಹತ್ತಾಗಿ ಬೆಳೆದಿದೆ. ನಾಲ್ಕಾರು ರಂಗಮಂದಿರಗಳು ತಲೆಎತ್ತಿವೆ. ಪ್ರತಿದಿನವೂ ನಾಟಕ ಪ್ರದರ್ಶನಗಳು ನಡೆಯುತ್ತಿವೆ. ಹೊಸದಾಗಿ ರಂಗತಂಡಗಳು ಹುಟ್ಟಿಕೊಂಡಿವೆ. ಪ್ರಯೋಗಶೀಲತೆಯೂ ಚೇತೋಹಾರಿಯಾಗಿದೆ. ಆದರೆ ಕಲಾಕ್ಷೇತ್ರ ಕತ್ತಲಲ್ಲಿ ಮುಳುಗಿದೆ. ನಿರಂತರ ರಂಗಚಟುವಟಿಕೆಗಳ ಕೇಂದ್ರವಾಗಿದ್ದ ಕಲಾಕ್ಷೇತ್ರ ಇಂದು ಜಯಂತಿಗಳ ವೇದಿಕೆಯಾಗಿದೆ. ವೃತ್ತಿಪರ ಕಾಲೇಜುಗಳ ಗ್ರ್ಯಾಜುಯೇಷನ್ ಡೇ, ಟಿ.ವಿ. ಚಾನೆಲ್‌ಗಳ ರಿಯಾಲಿಟಿ ಷೋ, ಅಭಿನಂದನಾ ಕಾರ್ಯಕ್ರಮದಂತಹವುಗಳಿಗೆ ವೇದಿಕೆಯಾಗುತ್ತಿದೆ. ಇನ್ನು ಇರುವ 13 ಅಕಾಡೆಮಿಗಳ ಪ್ರಶಸ್ತಿ ಪ್ರದಾನದಂತಹ ಸರ್ಕಾರಿ ಸಮಾರಂಭಗಳಿಗೂ ಇದೇ ಕಲಾಕ್ಷೇತ್ರ ಬಳಕೆಯಾಗುತ್ತಿದೆ. ತಿಂಗಳಲ್ಲಿ 20 ದಿನಗಳನ್ನು ನಾಟಕಗಳಿಗೆ ಕಾದಿರಿಸಬೇಕೆಂಬ ಮಾರ್ಗಸೂಚಿ ಇದ್ದರೂ ಅನ್ಯ ಕಾರ್ಯಕ್ರಮಗಳೇ ನಡೆಯುತ್ತವೆ. ಇನ್ನು ಬಾಡಿಗೆ, ಠೇವಣಿ ಹೆಚ್ಚಳ, ಆನ್‌ಲೈನ್ ಬುಕಿಂಗ್ ಹೆಸರಿನಲ್ಲಿ, ನಾಟಕ ತಂಡಗಳ ಮೂಲಕ ಮಾಡಿಸದೆ ವ್ಯಕ್ತಿಗತವಾಗಿ ಬುಕ್ ಮಾಡಲು ಅವಕಾಶ ಕಲ್ಪಿಸಿರುವ ಬಗ್ಗೆ ಹಿರಿಯ ಸಂಘಟಕರು ಕಳವಳ ವ್ಯಕ್ತಪಡಿಸಿದ್ದು ಕಲಾಕ್ಷೇತ್ರಕ್ಕೆ ಒದಗಿರುವ ದುಃಸ್ಥಿತಿಯನ್ನು ತೋರುತ್ತಿತ್ತು. ಈ ನಡುವೆ, ಅಧಿಕಾರಿಗಳು ಮೌಖಿಕವಾಗಿ ಹೊರಡಿಸುವ ಆದೇಶಗಳು ಎಷ್ಟು ಕಲಾವಿದ ವಿರೋಧಿಯಾಗಿವೆ ಎಂದರೆ, ಕಲಾವಿದರು ತಮ್ಮ ಕಾರ್ಯಕ್ರಮದ ಸಂದರ್ಭದಲ್ಲಿ ಗ್ರೀನ್ ರೂಮ್ ಬಳಿಯಲ್ಲಿ ತಿಂಡಿ ತಿನ್ನಕೂಡದು, ಕಾಫಿ ಕುಡಿಯಬಾರದು ಎಂಬ ನಿಬಂಧನೆಗಳನ್ನು ಹೇರಿರುವುದು ಇತ್ತೀಚಿನ ವಿದ್ಯಮಾನ. ಮೇಕಪ್ ಮಾಡಿಕೊಂಡು, ವೇಷಭೂಷಣ ಧರಿಸಿ ಕ್ಯಾಂಟೀನ್ ಬಳಿಯೇ ಹೋಗಬೇಕೆಂಬ ಫರ್ಮಾನು... ಇದೆಲ್ಲವನ್ನೂ ನೋಡಿದರೆ, ಕಲಾಕ್ಷೇತ್ರ ಕಲಾವಿದರ ಕೈ ತಪ್ಪುತ್ತಿದೆ ಎಂಬ ಕಳವಳ ನಿಜಕ್ಕೂ ವಾಸ್ತವವೆನಿಸುತ್ತಿದೆ. ಈ ಬಗ್ಗೆ ಸರ್ಕಾರವು ಕಲಾವಿದರ ಪರವಾಗಿ, ಕಲಾಕ್ಷೇತ್ರದ ಮಹತ್ವವನ್ನು ಉಳಿಸಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಮುಂದಾಗಬಹುದೇ?

ಶಶಿಧರ ಭಾರಿಘಾಟ್, ಬೆಂಗಳೂರು

ಸರ್ಕಾರಿ... ಅಚ್ಚರಿ!

ಬೈಲಹೊಂಗಲದ
ಸರ್ಕಾರಿ ಪಿಯು ಕಾಲೇಜು
ಪ್ರವೇಶಕ್ಕೆ ಭಾರಿ ಬೇಡಿಕೆಯಂತೆ!
(ಪ್ರ.ವಾ., ಜುಲೈ 6)
ಭಾನುವಾರವೂ
ವಿಶೇಷ ತರಗತಿ ನಡೆಸುವ
ಇಲ್ಲಿನ ಉಪನ್ಯಾಸಕರ
ವೃತ್ತಿ ಪ್ರೀತಿ ಅಕ್ಷರಶಃ
ಇತರರಿಗೂ ಮಾದರಿ!
ವಿದ್ಯಾರ್ಥಿಗಳ ಕೊರತೆಯಿಂದ
ಖಾಲಿ ಖಾಲಿಯಾಗಿರುವ
ಶಾಲಾ ಕಾಲೇಜುಗಳಿಗಂತೂ
ಇದೊಂದು ಉತ್ತಮ ಪಾಠ!

ಮ.ಗು.ಬಸವಣ್ಣ, ನಂಜನಗೂಡು

ಗೃಹಲಕ್ಷ್ಮಿ ಎಂದರೆ ಗಂಡನ ಅಡಿಯಾಳೇ?

ಗಂಡ ಆದಾಯ ತೆರಿಗೆ ಪಾವತಿಸುತ್ತಿದ್ದರೆ ಅಂತಹ ಗೃಹಿಣಿಯರಿಗೆ ಗೃಹಲಕ್ಷ್ಮಿ ಯೋಜನೆಯ ಭಾಗ್ಯವಿಲ್ಲ ಎಂಬ ಸರ್ಕಾರದ ನಿಯಮಾವಳಿಯ ಹಿಂದಿರುವ ತರ್ಕ ಅರ್ಥವಾಗುತ್ತಿಲ್ಲ. ಅಂತಹ ಗೃಹಿಣಿಯರು ಸ್ವಂತಿಕೆಯನ್ನು ಬಿಟ್ಟು ಗಂಡನ ದುಡಿಮೆಯಲ್ಲಿ ತಮಗೂ ಪಾಲು ಬೇಕೆಂದು ಅಂಗಲಾಚಬೇಕೇ ಅಥವಾ ದುಡಿಯುವ ಗಂಡನನ್ನು ಅವಲಂಬಿಸಿ ಅವನ ಹಂಗಿನಲ್ಲಿ ಅಸಹಾಯಕರಾಗಿ ಬಾಳಬೇಕೇ? ಸರ್ಕಾರದ ಈ ನಿಯಮಾವಳಿಯ ಹಿಂದೆ ಕುಟುಂಬದ ಪುರುಷರು ತಾವು ದುಡಿವ ಮೊತ್ತದಲ್ಲಿ ಅರ್ಧಪಾಲನ್ನು ಗೃಹಿಣಿಗೆ ನೀಡಿಯೇ ತೀರುತ್ತಾರೆ ಎಂಬ ಪೂರ್ವಗ್ರಹವಿದೆಯೋ ಅಥವಾ ನೀಡಿಯೇ ತೀರಬೇಕು ಎಂಬ ಆಗ್ರಹವಿದೆಯೋ?

ಆರ್ಥಿಕವಾಗಿ ಸಮೃದ್ಧವಾಗಿರುವ ಕುಟುಂಬಗಳ ಮಹಿಳೆಯರಿಗೆ ಭಾಗ್ಯ ಯೋಜನೆಯನ್ನು ಜಾರಿಗೊಳಿಸುವ ಮುನ್ನ ಅಂತಹ ಮಹಿಳೆಯರಿಂದ 'ನನಗೆ ಯೋಜನೆಯ ಅಗತ್ಯವಿದೆ. ಕುಟುಂಬದಿಂದ ಆರ್ಥಿಕ ಬೆಂಬಲ ದೊರಕುತ್ತಿಲ್ಲ. ಹಾಗಾಗಿ ನನ್ನನ್ನು ಭಾಗ್ಯ ಯೋಜನೆಯ ಫಲಾನುಭವಿಯನ್ನಾಗಿ ಪರಿಗಣಿಸಿ' ಎಂಬ ಮುಚ್ಚಳಿಕೆ ಪಡೆಯುವುದು ಸೂಕ್ತ ಕ್ರಮವಾಗಿದೆ. ಹಾಗಲ್ಲದೆ ಗೃಹಿಣಿಯರೆಲ್ಲರೂ ದುಡಿವ ತಮ್ಮ ಗಂಡಂದಿರಿಂದ ದುಡಿಮೆಯ ಪಾಲು ಪಡೆಯುತ್ತಾರೆಂಬ ಪೂರ್ವಗ್ರಹ ಮತ್ತು ಪಡೆಯತಕ್ಕದ್ದೆಂಬ ಆಗ್ರಹ ಪುರುಷ ದುರಭಿಮಾನದ್ದಾಗಿದೆ, ಸ್ತ್ರೀವಿರೋಧಿ ಮನಃಸ್ಥಿತಿಯಾಗಿದೆ. ಕೌಟುಂಬಿಕ ಜಟಿಲತೆ, ಸಂಕೀರ್ಣತೆಗಳಿಗೆ ಅಸೂಕ್ಷ್ಮರಾದವರು ಮಾತ್ರ ಇಂತಹ ನಿಯಮಾವಳಿಯನ್ನು ಹೇರಬಲ್ಲರು.

ಡಾ. ಟಿ.ಎನ್.ವಾಸುದೇವಮೂರ್ತಿ, ಬೆಂಗಳೂರು

ಸಾಗರ ಮಲಿನಗೊಳಿಸುವ ಮುಠ್ಠಾಳರಾಗದಿರೋಣ

ಯುಟ್ಯೂಬ್‌ನಲ್ಲಿ ವಿಡಿಯೊ ಒಂದನ್ನು ನೋಡುತ್ತಿದ್ದೆ. ಮೀನುಗಾರ ಹಿಡಿದ ಮೀನು ಕತ್ತರಿಸಿದಾಗ ಅದು ಪ್ಲಾಸ್ಟಿಕ್ ಚೂರುಗಳನ್ನು ನುಂಗಿದ್ದು ಕಂಡುಬಂತು. ಆಮೆಯೊಂದು ತೇಲುತ್ತಿದ್ದುದನ್ನು ಕಂಡ ಹಡಗಿನಲ್ಲಿನ ಪ್ರಯಾಣಿಕರು ಕೊಕ್ಕೆ ಬಳಸಿ ಅದನ್ನು ತೆಗೆದಾಗ, ಅದು ಪ್ಲಾಸ್ಟಿಕ್ ಚೀಲವೊಂದರಲ್ಲಿ ಸಿಕ್ಕಿ ಈಜಲು ಕಷ್ಟಪಡುತ್ತಿದ್ದುದು ತಿಳಿಯಿತು. ತಿಮಿಂಗಿಲದ ವಾಂತಿಗೆ ಕೋಟಿ ಬೆಲೆಯೆಂದು ತಿಳಿದು ದೂರದ ಮಿಂಚುವ ವಸ್ತುವೊಂದನ್ನು ಹುಡುಕಿಕೊಂಡು ಹೊರಟವನಿಗೆ ದೊರಕಿದ್ದು ಹಡಗಿನಿಂದ ಸೋರಿದ ತೈಲ. ವಿಶ್ವ ಸಾಗರ ದಿನದ (ಜೂನ್ 8) ಈ ಸಂದರ್ಭದಲ್ಲಿ, ಸಾಗರ ಕಲುಷಿತವಾಗಲು ಇರುವ ಇನ್ನೂ ನೂರಾರು ಕಾರಣಗಳನ್ನು ನಾವು ಅರಿಯಬೇಕಾಗಿದೆ.

ಪ್ರವಾಸದ ಮೋಜಿನಲ್ಲಿ ದೋಣಿ ವಿಹಾರಕ್ಕೆ ಹೋದವರು ಸಾಗರದಲ್ಲಿ ಮಲ-ಮೂತ್ರ ಮಾಡುವುದು, ಚಿಪ್ಸ್, ತಂಪುಪಾನೀಯ ಸೇವಿಸಿ ಬಾಟಲಿ, ಪ್ಲಾಸ್ಟಿಕ್ ಕವರ್ ಎಸೆಯುವುದು ನಡೆದೇ ಇದೆ. ಇದರೊಂದಿಗೆ ಎಗ್ಗಿಲ್ಲದೆ ನಡೆಯುವ ಮೀನುಗಾರಿಕೆ, ವಿದ್ಯುತ್ ಉತ್ಪಾದನೆ, ತೈಲ ಹೊರತೆಗೆಯುವುದು ಕೂಡ ಸಾಗರವನ್ನು ದೋಚುತ್ತಿವೆ ಎಂದು ಒಮ್ಮೊಮ್ಮೆ ಅನ್ನಿಸುವುದು ಸುಳ್ಳಲ್ಲ. ಸಾಗರದಲ್ಲಿ ನಡೆಯುವ ಕೆಲವು ಅನೈತಿಕ ಚಟುವಟಿಕೆಗಳಿಂದ ಮೀನಿನ ಪ್ರಮಾಣ, ಹವಳದ ದಂಡೆಗಳ ಕ್ಷೀಣತೆ, ವಿವಿಧ ಜಾತಿಯ ಸಸ್ಯವರ್ಗ ಅವನತಿಯತ್ತ ಸಾಗುತ್ತಿವೆ. ಸಾಗರವು ವಿವಿಧ ಬಗೆಯಿಂದ ದೇಶಕ್ಕೆ ಆದಾಯ ತರಬಲ್ಲ ಅತಿ ದೊಡ್ಡ ಮೂಲಗಳಲ್ಲಿ ಒಂದು. ಸಾಗರವನ್ನು ರಕ್ಷಿಸಲು ನಾವು ಅದಕ್ಕಿಂತ ಬಲಶಾಲಿ ಅಲ್ಲದಿರಬಹುದು, ಆದರೆ ಅದನ್ನು ಮಲಿನ ಮಾಡುವ ಮುಠ್ಠಾಳರಾಗಬಾರದು ಅಷ್ಟೇ.

ಬಸನಗೌಡ ಪಾಟೀಲ, ಯರಗುಪ್ಪಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಉಚಿತ ವಿದ್ಯುತ್: ಎಲ್ಲೆಡೆ ಚರ್ಚೆ

ಕರ್ನಾಟಕ ಸರ್ಕಾರದ ಉಚಿತ ವಿದ್ಯುತ್ ಯೋಜನೆ ಈಗ ಚರ್ಚೆಯಲ್ಲಿದೆ. ಕೆಲವರು ಈ ಯೋಜನೆಯನ್ನು ಸ್ವಾಗತಿಸಿದ್ದರೆ, ಕೆಲವರು ವಿರೋಧಿಸುತ್ತಿದ್ದಾರೆ. ಮನೆ ಬಳಕೆ ಗ್ರಾಹಕರಿಗೆ ಉಚಿತ ವಿದ್ಯುತ್ ನೀಡುತ್ತಿರುವ ರಾಜ್ಯಗಳಲ್ಲಿ ಕರ್ನಾಟಕವೇ ಮೊದಲಲ್ಲ. ಇನ್ನೂ ನಾಲ್ಕು ರಾಜ್ಯಗಳಲ್ಲಿ ಮತ್ತು ದೆಹಲಿಯಲ್ಲಿ ಇಂತಹ ಯೋಜನೆ ಈಗಾಗಲೇ ಜಾರಿಯಲ್ಲಿದೆ

ಪ್ರಜಾವಾಣಿ ವಾರ್ತೆ

ಮನೆ ಬಳಕೆ ಗ್ರಾಹಕರಿಗೆ ಉಚಿತ ವಿದ್ಯುತ್ ನೀಡುವಂತಹ ಪರಿಕಲ್ಪನೆಯನ್ನು ದೇಶದಲ್ಲಿ ಮೊದಲು ಪ್ರತಿಪಾದಿಸಿದ್ದು ಎಎಪಿ. ದೆಹಲಿಯಲ್ಲಿ 2013ರಲ್ಲಿ ಸರ್ಕಾರ ರಚಿಸಿದ್ದಾಗಲೇ ಅಂತಹ ಯೋಜನೆಯನ್ನು ಎಎಪಿ ಘೋಷಿಸಿತ್ತು. ಆದರೆ, ಸರ್ಕಾರ ಪತನವಾದ ಕಾರಣ ಯೋಜನೆಯೂ ಸ್ಥಗಿತವಾಗಿತ್ತು. ನಂತರ ಸರ್ಕಾರ ರಚಿಸಿದಾಗ ಆ ಯೋಜನೆಯನ್ನು ಎಎಪಿ ಜಾರಿಗೆ ತಂದಿತು ಮತ್ತು ಈವರೆಗೆ ಆ ಯೋಜನೆಯಲ್ಲಿ ಹಲವು ಬದಲಾವಣೆ ತಂದಿದೆ. ಆದರೆ, ಉಚಿತ ವಿದ್ಯುತ್ ಕೊಡುಗೆ ಎನ್ನುವುದು ಈಗ ಚುನಾವಣಾ ವಿಷಯವಾಗಿದೆ.

ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದರೆ ತಿಂಗಳಿಗೆ 300 ಯೂನಿಟ್ ವಿದ್ಯುತ್ ಉಚಿತವಾಗಿ ನೀಡುತ್ತೇವೆ ಎಂದು ಘೋಷಿಸಿದ್ದ ಎಎಪಿ, ಸರ್ಕಾರ ರಚನೆ ನಂತರ ಅದನ್ನು ಜಾರಿಗೆ ತಂದಿತು. ಛತ್ತೀಸಗಡದಲ್ಲಿ ಅಧಿಕಾರದಲ್ಲಿ ಇರುವ ಕಾಂಗ್ರೆಸ್ ಸರ್ಕಾರ 2019ರಿಂದಲೇ ಅಂತಹ ಯೋಜನೆಯನ್ನು ಆರಂಭಿಸಿದೆ. ಉಚಿತ ಕೊಡುಗೆಗಳನ್ನು ವಿರೋಧಿಸುವ ಬಿಜೆಪಿ, ಹಿಮಾಚಲ ಪ್ರದೇಶದಲ್ಲಿ ಅಧಿಕಾರದಲ್ಲಿ ಇದ್ದಾಗ ಉಚಿತ ವಿದ್ಯುತ್ ಯೋಜನೆಯನ್ನು ಜಾರಿಗೆ ತಂದಿತ್ತು. ಅಲ್ಲಿನ ಇಂದಿನ ಕಾಂಗ್ರೆಸ್ ಸರ್ಕಾರ ಯೋಜನೆಯನ್ನು ಮುಂದುವರಿಸಿದೆ.

ಉಚಿತ ವಿದ್ಯುತ್ 'ಗ್ಯಾರೆಂಟಿ' ನೀಡಿದ್ದ ಕಾಂಗ್ರೆಸ್, ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬಂದ ನಂತರ, ಉಚಿತ ವಿದ್ಯುತ್ ನೀಡುವುದಾಗಿ ಘೋಷಣೆ ಮಾಡಿದೆ. ರಾಜಸ್ಥಾನ ಸರ್ಕಾರ ಉಚಿತ ವಿದ್ಯುತ್ ನೀಡುವುದಾಗಿ ಘೋಷಣೆ ಮಾಡಿದೆ. ಮಧ್ಯಪ್ರದೇಶದಲ್ಲಿ ವಿಧಾನಸಭಾ ಚುನಾವಣೆಗೆ ಈಗಾಗಲೇ ಸಿದ್ಧತೆ ಆರಂಭಿಸಿರುವ ಕಾಂಗ್ರೆಸ್, ಅಧಿಕಾರಕ್ಕೆ ಬಂದರೆ ಉಚಿತ ವಿದ್ಯುತ್ ಯೋಜನೆ ಜಾರಿಗೆ ತರುತ್ತೇವೆ ಎಂದು ಭರವಸೆ ಕೊಟ್ಟಿದೆ.

ದೆಹಲಿ, ಛತ್ತೀಸಗಡ ಮತ್ತು ಪಂಜಾಬ್‌ನಲ್ಲಿ ಉಚಿತ ವಿದ್ಯುತ್ ಯೋಜನೆ ಜಾರಿಯಲ್ಲಿದೆ. ಉಚಿತ ವಿದ್ಯುತ್ ಯೋಜನೆಯ ವೆಚ್ಚವನ್ನು ಸರ್ಕಾರಗಳೇ ಭರಿಸುತ್ತಿವೆ. ಆದರೆ, ಯೋಜನೆಯಿಂದ ಆಗಿರುವ ಆರ್ಥಿಕ ಮತ್ತು ಸಾಮಾಜಿಕ ಪರಿಣಾಮಗಳೇನು ಎಂಬುದರ ಬಗ್ಗೆ ಎಲ್ಲಿಯೂ ಅಧ್ಯಯನ ನಡೆದಿಲ್ಲ. ಪಂಜಾಬ್‌ನಲ್ಲಿ ಈ ಯೋಜನೆಯ ವೆಚ್ಚವನ್ನು ಭರಿಸಲು ರಾಜ್ಯ ಸರ್ಕಾರ ವಿಳಂಬ ಮಾಡುತ್ತಿದೆ ಎಂಬ ವರದಿಯಷ್ಟೇ ಲಭ್ಯವಿದೆ. ಇದರಿಂದ ವಿದ್ಯುತ್ ಉತ್ಪಾದನೆ ಮತ್ತು ಪೂರೈಕೆ ಮೇಲೆ ಆಗುತ್ತಿರುವ ಪರಿಣಾಮದ ಬಗ್ಗೆ ಯಾವುದೇ ಮಾಹಿತಿ ಲಭ್ಯವಿಲ್ಲ.

ಉಚಿತ ವಿದ್ಯುತ್ ನೀಡುತ್ತಿರುವುದರಿಂದ ಫಲಾನುಭವಿಗಳಿಗೆ ಆಗುತ್ತಿರುವ ಪ್ರಯೋಜನವೇನು? ಉಚಿತ ವಿದ್ಯುತ್ ನೀಡಿದ್ದರಿಂದ ವಿದ್ಯುತ್ ಬಳಕೆಯಲ್ಲಿ ಏರಿಕೆಯಾಗಿದೆಯೇ? ಇದರಿಂದ ರಾಜ್ಯ ಸರ್ಕಾರಗಳಿಗೆ ಮತ್ತಷ್ಟು ಹೊರೆಯಾಗುತ್ತಿದೆಯೇ? ಅಂತಹ ಹೊರೆಯನ್ನು ತಗ್ಗಿಸಲು ರಾಜ್ಯ ಸರ್ಕಾರಗಳು ಕ್ರಮ ತೆಗೆದುಕೊಂಡಿವೆಯೇ ಎಂಬುದರ ಬಗ್ಗೆ ಯಾವುದೇ ಅಧ್ಯಯನ ನಡೆದಿಲ್ಲ. ಈ ಹೊರೆಯನ್ನು ಭರಿಸಲು ರಾಜ್ಯ ಸರ್ಕಾರಗಳು ಮಾಡಿಕೊಂಡಿರುವ ವ್ಯವಸ್ಥೆ ಏನು ಎಂಬುದರ ಮಾಹಿತಿಯೂ ಲಭ್ಯವಿಲ್ಲ. ಆದರೆ, ಇಂತಹ ಹೊರೆಯನ್ನು ತಗ್ಗಿಸುವ ಸಲುವಾಗಿ ದೆಹಲಿ ಸರ್ಕಾರ ಮಾತ್ರ ಉಚಿತ ವಿದ್ಯುತ್ ಯೋಜನೆಯ ಷರತ್ತುಗಳನ್ನು ಕಠಿಣಗೊಳಿಸುತ್ತಾ ಬಂದಿದೆ.

ಪಂಜಾಬ್

ಪಂಜಾಬ್‌ನಲ್ಲಿ ಅಧಿಕಾರಕ್ಕೆ ಬಂದರೆ, ಪ್ರತಿ ಮನೆಗೆ ತಿಂಗಳಿಗೆ 300 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡುವುದಾಗಿ ಎಎಪಿ ಘೋಷಿಸಿತ್ತು. ಚುನಾವಣೆಯಲ್ಲಿ ಗೆದ್ದು, ಸರ್ಕಾರ ರಚಿಸಿದ ಬೆನ್ನಲ್ಲೇ ಯೋಜನೆಯನ್ನು ಜಾರಿಗೆ ತರಲಾಗಿತ್ತು.

300 ಯೂನಿಟ್
ರಾಜ್ಯದ ಪ್ರತಿ ಮನೆಗೆ ಪ್ರತಿ ತಿಂಗಳಿಗೆ ಸಿಗುವ ಉಚಿತ ವಿದ್ಯುತ್‌ನ ಪ್ರಮಾಣ

51 ಲಕ್ಷ
ಈ ಯೋಜನೆಯ ಪ್ರಯೋಜನ ಪಡೆಯುತ್ತಿರುವ ರಾಜ್ಯದ ಕುಟುಂಬಗಳ ಸಂಖ್ಯೆ

₹49 ಕೋಟಿ
ಉಚಿತ ವಿದ್ಯುತ್ ಯೋಜನೆಯಿಂದ ರಾಜ್ಯ ಸರ್ಕಾರಕ್ಕೆ ತಗುಲಿತ್ತಿರುವ ಪ್ರತಿದಿನದ ವೆಚ್ಚ

ದೆಹಲಿ


- 2013ರ ಡಿಸೆಂಬರ್‌ನಲ್ಲಿ ದೆಹಲಿಯ ವಿಧಾನಸಭೆ ಚುನಾವಣೆಯಲ್ಲಿ ಮೊದಲ ಬಾರಿಗೆ ಗೆದ್ದು ಸರ್ಕಾರ ರಚಿಸಿದ್ದ ಎಎಪಿ ತಿಂಗಳಲ್ಲಿ 400 ಯೂನಿಟ್‌ವರೆಗಿನ ಗೃಹಬಳಕೆ ವಿದ್ಯುತ್ ದರದ ಮೇಲೆ ಶೇ 50 ಸಹಾಯಧನ ಘೋಷಿಸಿತ್ತು
- 2015ರ ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಎರಡನೇ ಬಾರಿಗೆ ಚುನಾಯಿತಗೊಂಡು ಸರ್ಕಾರ ರಚಿಸಿದ ಎಎಪಿ, ತಿಂಗಳಿಗೆ 200 ಯೂನಿಟ್ ಗೃಹಬಳಕೆಯ ವಿದ್ಯುತ್ ಅನ್ನು ಉಚಿತವಾಗಿ ನೀಡುವ ಮತ್ತು 201ರಿಂದ 400 ಯೂನಿಟ್‌ವರೆಗಿನ ಗೃಹಬಳಕೆಯ ವಿದ್ಯುತ್‌ಗೆ ಶೇ 50 ಸಹಾಯಧನ ನೀಡುವ ಯೋಜನೆಯನ್ನು ಜಾರಿಗೊಳಿಸಿತು
- 2022–23ನೇ ಸಾಲಿನಲ್ಲಿ ದೆಹಲಿ ವಿದ್ಯುತ್ ಸಹಾಯಧನ ಯೋಜನೆಗೆ ತಿದ್ದುಪಡಿ ತಂದು 'ಸ್ವಯಂಪ್ರೇರಿತ ಸಹಾಯಧನ ಯೋಜನೆ'ಯನ್ನು ಜಾರಿಗೊಳಿಸಲಾಯಿತು. ಉಚಿತ ವಿದ್ಯುತ್ ಅಥವಾ ಸಹಾಯಧನ ಪಡೆಯಲಿಚ್ಛಿಸುವವರು ಅರ್ಜಿ ಸಲ್ಲಿಸುವಂತೆ ಹೇಳಲಾಯಿತು. ಈ ನಿಯಮವು 2022ರ ಅಕ್ಟೋಬರ್‌ನಲ್ಲಿ ಜಾರಿಗೆ ಬಂದಿತು
- ಈ ಮಧ್ಯೆ, ಉಚಿತ ವಿದ್ಯುತ್ ಯೋಜನೆಯನ್ನು ನಿಲ್ಲಿಸಲಾಗುವುದು ಎಂಬ ಮಾತುಗಳೂ ಕೇಳಿಬಂದವು. ಆದರೆ, ಈಗಾಗಲೇ ಅರ್ಜಿ ಸಲ್ಲಿಸಿರುವವರಿಗೆ 2024ರ ಏಪ್ರಿಲ್‌ವರೆಗೆ ಉಚಿತ ವಿದ್ಯುತ್ ಮತ್ತು ಸಹಾಯಧನ ನೀಡಲಾಗುವುದು ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಏಪ್ರಿಲ್‌ನಲ್ಲಿ ಘೋಷಿಸಿದರು

200 ಯೂನಿಟ್‌ವರೆಗೆ ಉಚಿತ ವಿದ್ಯುತ್

201-400 ಯೂನಿಟ್‌ವರೆಗೆ
ಶೇ 50 ಸಹಾಯಧನ, ಶುಲ್ಕದ ಮಿತಿ ₹850

48 ಲಕ್ಷ
ಫಲಾನುಭವಿಗಳು

₹3,250 ಕೋಟಿ
ಈ ಯೋಜನೆಗೆ ಬಜೆಟ್ ಅನುದಾನ



ಹಿಮಾಚಲ ಪ್ರದೇಶ

ಹಿಮಾಚಲ ಪ್ರದೇಶದಲ್ಲಿ ಈ ಹಿಂದೆ ಇದ್ದ ಬಿಜೆಪಿ ಸರ್ಕಾರವೇ ಉಚಿತ ವಿದ್ಯುತ್ ಯೋಜನೆಯನ್ನು ಜಾರಿಗೆ ತಂದಿತ್ತು. 2022ರ ಅಕ್ಟೋಬರ್‌ನಲ್ಲಿ ರಾಜ್ಯ ವಿಧಾನಸಭಾ ಚುನಾವಣೆ ನಿಗದಿಯಾಗಿತ್ತು. ಚುನಾವಣೆ ಘೋಷಣೆಯಾಗುವುದಕ್ಕೂ ಮುನ್ನವೇ, 2022ರ ಆಗಸ್ಟ್‌ನಲ್ಲಿ ಬಿಜೆಪಿ ಸರ್ಕಾರದ ಮುಖ್ಯಮಂತ್ರಿ ಜೈರಾಮ್ ಠಾಕೂರ್ ಉಚಿತ ವಿದ್ಯುತ್ ಘೋಷಣೆಯನ್ನು ಜಾರಿಗೊಳಿಸಿದರು. ಆದರೆ, ಚುನಾವಣೆಯಲ್ಲಿ ಬಿಜೆಪಿ ಅಧಿಕಾರ ಕಳೆದುಕೊಂಡಿತು. ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಯೋಜನೆಯನ್ನು ಮುಂದುವರಿಸಿತು

125 ಯೂನಿಟ್
ಈ ಯೋಜನೆ ಅಡಿ ಪ್ರತಿ ಮನೆಗೆ ದೊರೆಯುವ ಉಚಿತ ವಿದ್ಯುತ್‌ನ ಪ್ರಮಾಣ

35 ಲಕ್ಷ
ಈ ಯೋಜನೆಯ ಫಲಾನುಭವಿ ಕುಟುಂಬಗಳ ಸಂಖ್ಯೆ

300 ಯೂನಿಟ್
ಹೊಸ ಯೋಜನೆ ಅಡಿ ಪ್ರತಿ ಮನೆಗೆ ನೀಡುತ್ತೇವೆ ಎಂದು ಕಾಂಗ್ರೆಸ್ ಸರ್ಕಾರ ಘೋಷಿಸಿರುವ ಉಚಿತ ವಿದ್ಯುತ್‌ನ ಪ್ರಮಾಣ. ಇದಕ್ಕೆ ಅಗತ್ಯವಿರುವಷ್ಟು ವಿದ್ಯುತ್ ಅನ್ನು ರಾಜ್ಯದಲ್ಲೇ ಉತ್ಪಾದನೆ ಮಾಡಲಾಗುತ್ತದೆ. ಆನಂತರವಷ್ಟೇ ಉಚಿತ ವಿದ್ಯುತ್‌ನ ಪ್ರಮಾಣವನ್ನು 300 ಯೂನಿಟ್‌ವರೆಗೆ ಹೆಚ್ಚಿಸಲಾಗುತ್ತದೆ ಎಂದು ರಾಜ್ಯ ಸರ್ಕಾರ ಹೇಳಿದೆ

ರಾಜಸ್ಥಾನ

ರಾಜಸ್ಥಾನದ ರಾಜಕಾರಣದಲ್ಲಿ ಎರಡು ಪ್ರಮುಖ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ಹಿಂದಿನ ಚುನಾವಣೆ ವೇಳೆ ಉಚಿತ ವಿದ್ಯುತ್‌ನ ಆಶ್ವಾಸನೆ ನೀಡಿರಲಿಲ್ಲ. ಈಗ ಮುಂದಿನ ಚುನಾವಣೆಗೆ ಸಿದ್ಧತೆ ನಡೆಸಿರುವ ಕಾಂಗ್ರೆಸ್ ಸರ್ಕಾರವು ಉಚಿತ ವಿದ್ಯುತ್ ಯೋಜನೆಯನ್ನು ತಿಂಗಳ ಹಿಂದಷ್ಟೇ ಘೋಷಿಸಿದೆ. ಹಿಮಾಚಲ ಪ್ರದೇಶ ಮತ್ತು ಕರ್ನಾಟಕದಲ್ಲಿ ಕಾಂಗ್ರೆಸ್ ಉಚಿತ ವಿದ್ಯುತ್ ಭರವಸೆ ನೀಡಿದ್ದು ಹಾಗೂ ಅಧಿಕಾರಕ್ಕೆ ಬಂದ ನಂತರ ಅದನ್ನು ಜಾರಿಗೊಳಿಸಿವೆ. ಇದು ಜನಪರವಾದ ಯೋಜನೆಯಾಗಿದ್ದು, ಹೀಗಾಗಿ ರಾಜ್ಯದಲ್ಲೂ ಜಾರಿಗೆ ತರಲು ನಿರ್ಧರಿಸಲಾಯಿತು ಎಂದು ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಹೇಳಿದ್ದರು.

100 ಯೂನಿಟ್‌ವರೆಗೆ
ಎಲ್ಲಾ ಸ್ವರೂಪದ ಗ್ರಾಹಕರಿಗೆ ಸಂಪೂರ್ಣ ಉಚಿತ ವಿದ್ಯುತ್. ಇದು ಮನೆಬಳಕೆ ಮತ್ತು ವಾಣಿಜ್ಯ ಬಳಕೆ ಗ್ರಾಹಕರಿಗೂ ಅನ್ವಯವಾಗುತ್ತದೆ

100-200
ಯೂನಿಟ್ ಬಳಸುವ ಗ್ರಾಹಕರಿಗೆ ನಿಶ್ಚಿತ ಶುಲ್ಕ, ಬಳಕೆದಾರರ ಶುಲ್ಕ, ಸರ್ಚಾರ್ಜ್ ರದ್ದು

- ವಾಣಿಜ್ಯ ಬಳಕೆದಾರರಿಗೂ ಈ ಯೋಜನೆಯನ್ನು ವಿಸ್ತರಿಸಿದ್ದು ಇಲ್ಲಿನ ವಿಶೇಷ. ಇದರಿಂದ ಸಣ್ಣ ಹೋಟೆಲ್, ಗುಡಿ ಕೈಗಾರಿಕೆಗಳಿಗೆ ಹೆಚ್ಚು ಅನುಕೂಲವಾಗುತ್ತದೆ ಎಂಬುದು ಸರ್ಕಾರದ ವಾದ

ಮಹಾರಾಷ್ಟ್ರ


ಮಹಾರಾಷ್ಟ್ರದಲ್ಲಿ 2019ರ ನವೆಂಬರ್‌ನಲ್ಲಿ ಅಸ್ತಿತ್ವಕ್ಕೆ ಬಂದ ಮಹಾ ವಿಕಾಸ ಆಘಾಡಿ ಸರ್ಕಾರವು ಮನೆ ಬಳಕೆ ಗ್ರಾಹಕರಿಗೆ 100 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡುವ ಬಗ್ಗೆ ಪ್ರಸ್ತಾವ ಇರಿಸಿತ್ತು. ಆದರೆ, ಇದಕ್ಕೆ ಆರ್ಥಿಕ ತಜ್ಞರು ಮತ್ತು ಉದ್ಯಮ ವಲಯದಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಆನಂತರ ಈ ಯೋಜನೆ ಕಾರ್ಯಸಾಧುವಲ್ಲ, ಹೀಗಾಗಿ ಜಾರಿಗೆ ತರುವುದಿಲ್ಲ ಎಂದು ಸರ್ಕಾರ 2020ರಲ್ಲಿ ಸ್ಪಷ್ಟಪಡಿಸಿತ್ತು.

ಛತ್ತೀಸಗಢ

- ಜನಸಾಮಾನ್ಯರಿಗೆ ವಿದ್ಯುತ್ ಶುಲ್ಕದ ಹೊರೆ ತಗ್ಗಿಸುವುದಕ್ಕಾಗಿ ಈ ಹಿಂದಿನ ಬಿಜೆಪಿ ಸರ್ಕಾರವು 2018 ಆಗಸ್ಟ್‌ನಲ್ಲಿ 'ಸಹಜ್ ಬಿಜ್ಲಿ ಬಿಲ್ ಯೋಜನೆ'ಯನ್ನು ಜಾರಿಗೆ ತಂದಿತು. ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬಗಳನ್ನು ಗಮನದಲ್ಲಿರಿಸಿಕೊಂಡು ಈ ಯೋಜನೆಯನ್ನು ಜಾರಿಗೆ ತರಲಾಗಿತ್ತು
- 2018ರ ವಿಧಾನಸಭೆ ಚುನಾವಣೆಯಲ್ಲಿ ಗೆದ್ದು ಸರ್ಕಾರ ರಚಿಸಿದ ಕಾಂಗ್ರೆಸ್ ಸರ್ಕಾರವು 'ಗಢ್ಬೋ ನವ ಛತ್ತೀಸಗಢ' ಘೋಷಣೆಯಡಿ 'ಅರ್ಧ ವಿದ್ಯುತ್ ಶುಲ್ಕ ಯೋಜನೆ'ಯನ್ನು 2019ರ ಮಾರ್ಚ್ 1ರಿಂದ ಜಾರಿಗೆ ತಂದಿತು
- ಈ ಯೋಜನೆ ಅಡಿ, 400 ಯೂನಿಟ್‌ವರೆಗಿನ ವಿದ್ಯುತ್ ಬಳಕೆಗೆ ಒಟ್ಟು ವಿದ್ಯುತ್ ಶುಲ್ಕದ ಅರ್ಧದಷ್ಟನ್ನು ಮಾತ್ರವೇ ಗ್ರಾಹಕರು ಪಾವತಿಸಬೇಕು. ಈ ಯೋಜನೆಯನ್ನು ಬಿಪಿಎಲ್ ಹಾಗೂ ಮಧ್ಯಮ ವರ್ಗವನ್ನು ಗಮನದಲ್ಲಿರಿಸಿಕೊಂಡು ರೂಪಿಸಲಾಗಿತ್ತು

ಆಧಾರ: ಆಯಾ ರಾಜ್ಯ ಸರ್ಕಾರಗಳ ರಾಜ್ಯಪತ್ರಗ?ಳು, ಅಧಿಸೂಚನೆಗಳು, ಪಿಟಿಐ

'ಆದಿಪುರುಷ್' ಟ್ರೇಲರ್ ಬಿಡುಗಡೆ



ಪ್ರಭಾಸ್ ನಟನೆಯ ಬಹು ನಿರೀಕ್ಷಿತ 'ಆದಿಪುರುಷ್' ಚಿತ್ರದ ಕೊನೆ ಟ್ರೇಲರ್ ತಿರುಪತಿಯಲ್ಲಿ ನಡೆದ ಸಮಾರಂಭದಲ್ಲಿ ಬಿಡುಗಡೆಗೊಂಡಿದೆ. ನಟ ಪ್ರಭಾಸ್ ಸೇರಿದಂತೆ ಚಿತ್ರತಂಡ ಸಾವಿರಾರು ಅಭಿಮಾನಿಗಳ ನಡುವೆ ಟ್ರೇಲರ್ ಬಿಡುಗಡೆಗೊಳಿಸಿತು.

ರಾಮಾಯಣದ ಕಥಾಹಂದರವುಳ್ಳ ಚಿತ್ರದಲ್ಲಿ ಪ್ರಭಾಸ್ 'ರಾಮನಾಗಿ' ನಟಿಸಿದ್ದಾರೆ. ಚಿತ್ರವು ರಾಮಾಯಣದಲ್ಲಿನ ಸೀತೆಯ ಅಪಹರಣದ ಭಾಗವನ್ನು ಮುಖ್ಯ ಕಥೆಯಾಗಿ ಹೊಂದಿದ್ದು, ರಾಮ–ರಾವಣರ ಯುದ್ಧವೇ ಚಿತ್ರ ಆಕರ್ಷಣೆ ಎಂಬುದು ಟ್ರೇಲರ್‌ನಿಂದ ತಿಳಿಯುತ್ತಿದೆ. 'ನಿನ್ನ ಅನ್ಯಾಯದ ಹತ್ತು ತಲೆಗಳನ್ನು ತುಳಿದುಹಾಕಲು, ನನ್ನ ಜಾನಕಿಯನ್ನು ರಕ್ಷಿಸಿಕೊಳ್ಳಲು ಬರುತ್ತಿರುವೆ. ಭರತಖಂಡದಲ್ಲಿ ಪರಸ್ತ್ರೀಯ ಮೇಲೆ ಕೈ ಹಾಕಬೇಕು ಎಂದುಕೊಳ್ಳುವ ದುಷ್ಟರಿಗೆ ಈ ಅಧ್ಯಾಯ ಪಾಠವಾಗಬೇಕು' ಎಂಬ ಸಂಭಾಷಣೆ ಟ್ರೇಲರ್ ನಲ್ಲಿದೆ.

'ರಾಮನಾಗಿ ಪ್ರಭಾಸ್, ಸೀತೆಯಾಗಿ ಕೃತಿ ಸನೋನ್, ರಾವಣನಾಗಿ ಸೈಫ್ ಅಲಿಖಾನ್, ಹನುಮಂತನಾಗಿ ದೇವದತ್ತ ನಾಗೆ ನಟಿಸಿದ್ದಾರೆ. 'ತಾನಾಜಿ' ಸಿನಿಮಾಕ್ಕಾಗಿ ರಾಷ್ಟ್ರ ಪ್ರಶಸ್ತಿ ವಿಜೇತ ಓಂ ರಾವುತ್ ಚಿತ್ರ ನಿರ್ದೇಶಿಸಿದ್ದು, 'ಟಿ' ಸೀರೀಸ್‌ನ ಭೂಷಣ್‌ಕುಮಾರ್ ನಿರ್ಮಾಣ ಮಾಡಿದ್ದಾರೆ. ವಾಲ್ಮೀಕಿ ಬರೆದ ರಾಮಾಯಣದ ಅಂಶಗಳನ್ನು ಚಿತ್ರದಲ್ಲಿ ಬಳಸಲಾಗಿದೆ. ಬಹುಪಾಲು ಗ್ರಾಫಿಕ್ಸ್‌ನಿಂದ ಕೂಡಿರುವ ಚಿತ್ರ ನೋಡುಗನ ಪಾಲಿಗೆ ದೃಶ್ಯವೈಭವವಾಗಿರಲಿದೆ ಎಂಬ ಮುನ್ಸೂಚನೆಯನ್ನು ಟ್ರೇಲರ್ ನೀಡಿದೆ.

ಸಿನಿಮಾವು ಜೂನ್ 16ರಂದು ವಿಶ್ವದಾದ್ಯಂತ ಕನ್ನಡ ಸೇರಿದಂತೆ ಹಿಂದಿ, ತೆಲುಗು, ತಮಿಳು ಹಾಗೂ ಮಲೆಯಾಳಂ ಭಾಷೆಗಳಲ್ಲಿ 3ಡಿ ಮಾದರಿಯಲ್ಲಿ ತೆರೆಗೆ ಬರುತ್ತಿದೆ.

ವೈದ್ಯಕೀಯ ಸಂಘರ್ಷದ 'ಮಧುರಕಾವ್ಯ'



ರಾಜ್‌ಕುಮಾರ್, ಯಶೋಧ, ಮಧುಸೂಧನ್

ಆಯುರ್ವೇದ ಮತ್ತು ಅಲೋಪಥಿ ವೈದ್ಯಪದ್ಧತಿಯ ನಡುವೆ ನಡೆಯುವ ಸಂಘರ್ಷದ ಕಥಾವಸ್ತುವನ್ನಿಟ್ಟು ಕೊಂಡು ಸಿದ್ಧಗೊಂಡಿರುವ 'ಮಧುರಕಾವ್ಯ' ಚಿತ್ರದ ಟೀಸರ್ ಇತ್ತೀಚೆಗಷ್ಟೆ ಬಿಡುಗಡೆಗೊಂಡಿದೆ.


ಈ ಹಿಂದೆ ಕಿರುಚಿತ್ರಗಳನ್ನು ನಿರ್ದೇಶನ ಮಾಡಿದ್ದ ಮಧುಸೂದನ್ ಕ್ಯಾತನಹಳ್ಳಿ ಚಿತ್ರವನ್ನು ನಿರ್ದೇಶಿಸಿ, ನಾಯಕರಾಗಿ ನಟಿಸಿದ್ದಾರೆ. ಜೊತೆಗೆ ನಿರ್ಮಾಪಕ ಕೂಡ ಅವರೇ. 'ನಾನು ನಾಟಿ ವೈದ್ಯ. ಈಗ ನಾಟಿ ವೈದ್ಯ ಪದ್ಧತಿಯನ್ನು ಅಲೋಪಥಿಯವರು ಹೇಗೆ ಹತ್ತಿಕ್ಕುತ್ತಿದ್ದಾರೆ, ಪಾರಂಪರಿಕವಾಗಿ ಜನರ ಸೇವೆ ಮಾಡಿಕೊಂಡು ಬಂದಿರುವ ನಾಟಿ ವೈದ್ಯರನ್ನು ಹೇಗೆ ತುಳಿಯುತ್ತಿದ್ದಾರೆ ಎಂಬುದು ಚಿತ್ರದ ಕಥೆ. ಹಿಂದಿನಿಂದ ಬಂದಿರುವ ಆಯುರ್ವೇದವನ್ನು ಉಳಿಸಬೇಕು, ನಾಟಿ ವೈದ್ಯ ಪದ್ಧತಿ ಬೆಳೆಸಬೇಕು ಎಂಬ ಸದುದ್ದೇಶ ಇಟ್ಟುಕೊಂಡು ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದೇವೆ' ಎಂದರು ಮಧುಸೂದನ್.

ಉಡುಪಿ, ಮಂಗಳೂರು, ಶಿರಸಿ ಸುತ್ತಮುತ್ತ ಚಿತ್ರಕ್ಕೆ ಚಿತ್ರೀಕರಣ ನಡೆದಿದ್ದು, ಚಿತ್ರ ಸೆನ್ಸಾರ್ ಹಂತದಲ್ಲಿದೆ. ಸತೀಶ್ ಮೌರ್ಯ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ. ಬಹುತೇಕ ಹೊಸಬರ ತಾರಾಗಣ ಚಿತ್ರದಲ್ಲಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಈಚೆಗೆ ಸಂಭವಿಸಿದ ಬಾಲೇಶ್ವರ ರೈಲು ದುರಂತದಲ್ಲಿ ಮುಸ್ಲಿಂ ಸಮುದಾಯಕ್ಕೆ ಸೇರಿರುವ ಸ್ಟೇಷನ್ ಮಾಸ್ಟರ್ ಒಬ್ಬರ ಕೈವಾಡವಿದೆ ಎಂಬ ಮಾಹಿತಿಯು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ವ್ಯಕ್ತಿಯೊಬ್ಬರ ಚಿತ್ರದೊಂದಿಗೆ ಈ ಕುರಿತ ಮಾಹಿತಿಯನ್ನು ಹಂಚಿಕೊಳ್ಳಲಾಗಿದೆ. 'ದುರಂತ ನಡೆದ ಸ್ಥಳಕ್ಕೆ ಸಮೀಪದಲ್ಲಿರುವ ಬಹನಾಗಾ ಬಜಾರ್ ರೈಲು ನಿಲ್ದಾಣದ ಸ್ಟೇಷನ್ ಮಾಸ್ಟರ್ ಷರೀಫ್ ಅಲಿ ಎಂಬುವವರು ಅಪಘಾತದ ತನಿಖೆ ಆರಂಭವಾದ ಬಳಿಕ ತಲೆಮರೆಸಿಕೊಂಡಿದ್ದಾರೆ. ಇನ್ನು ಮುಂದೆ ಉದ್ಯೋಗ ನೇಮಕಾತಿ ಮಾಡುವ ವೇಳೆ ಹೆಸರನ್ನೂ ಕಡ್ಡಾಯವಾಗಿ ಪರೀಕ್ಷಿಸಬೇಕು' ಎಂದು ಅಡಿಬರಹ ಬರೆಯಲಾಗಿದೆ. ಆದರೆ, ಇದು ಸುಳ್ಳು ಸುದ್ದಿ.



ಜಾಲತಾಣದಲ್ಲಿ ಹರಿದಾಡುತ್ತಿರುವ ಈ ಮಾಹಿತಿಯು ಸುಳ್ಳು ಎಂದು 'ದಿ ಲಾಜಿಕಲ್ ಇಂಡಿಯನ್' ವೇದಿಕೆ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ಬಹನಾಗಾ ಬಜಾರ್ ರೈಲು ನಿಲ್ದಾಣದ ಸ್ಟೇಷನ್ ಮಾಸ್ಟರ್ ಹೆಸರು ಎಸ್.ಬಿ.ಮೊಹಾಂತಿ. ಅವರು ತಲೆಮರೆಸಿಕೊಂಡಿಲ್ಲ' ಎಂದು ಒಡಿಶಾದ ಇಬ್ಬರು ಐಪಿಎಸ್ ಅಧಿಕಾರಿಗಳು ದೃಢಪಡಿಸಿದ್ದಾರೆ. ದುರಂತ ಸಂಭವಿಸಿದಾಗಿನಿಂದ ಮೊಹಾಂತಿ ಅವರು ರಕ್ಷಣಾ ಕಾರ್ಯದಲ್ಲಿ ತೊಡಗಿದ್ದರು ಎಂದು ಇಂಡಿಯಾ ಟುಡೆ ಪತ್ರಿಕೆಯು ಜೂನ್ 5ರಂದು ವರದಿ ಮಾಡಿತ್ತು. ಜಾಲತಾಣಗಳಲ್ಲಿ ಹಂಚಿಕೆಯಾಗಿರುವ ಚಿತ್ರವನ್ನು 'ಗೂಗಲ್ ರಿವರ್ಸ್ ಇಮೇಜ್ ಸರ್ಚ್' ಬಳಸಿ ಪರಿಶೀಲಿಸಿದ ವೇಳೆ ಅದು ಆಂಧ್ರಪ್ರದೇಶದ ಬೊರ್ರಾ ಗುಲ್ಲು ರೈಲು ನಿಲ್ದಾಣದಲ್ಲಿ 19 ವರ್ಷಗಳ ಹಿಂದೆ ತೆಗೆಯಲಾದ ಚಿತ್ರ ಎಂಬುದು ತಿಳಿದುಬಂದಿದೆ ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ತಿಳಿಸಲಾಗಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜೂನ್ 8, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಪಂಚಮಿ ಗಂ. 18-59, ನಕ್ಷತ್ರ: ಶ್ರವಣ ಗಂ. 18-59 ಯೋಗ: ಐಂದ್ರ ಗಂ. 18-59 ಕರಣ: ಕೌಲವ ಗಂ. 18-24, ವೃಷಭ ಮಾಸದ 24 ನೇ ದಿನ, ಮಳೆನಕ್ಷತ್ರ: ರೋಹಿಣಿ 4. ರಾಹುಕಾಲ : ಮಧ್ಯಾಹ್ನ 01-30 – 03-00, ಸೂರ್ಯೋದಯ : 06-07 ಸೂರ್ಯಾಸ್ತ : 06-52, ಮುಸ್ಲಿಂ ದಿನಾಂಕ : 19 ಜುಲ್ಕಾಯದ್, ದಿನ ವಿಶೇಷ : ಕೋರ್ಪಸ್ ಕ್ರಿಸ್ಟಿ (ಗುರುವಾರ) (ಕ್ರಿಶ್ಚಿಯನ್) ಅದೃಷ್ಟ ಸಂಖ್ಯೆ : 9, 10

ಮೇಷ: ಆತ್ಮವಿಶ್ವಾಸದಿಂದ ಎಲ್ಲವನ್ನೂ ಸಾಧಿಸಲಿದ್ದೀರಿ. ಅವಿವಾಹಿತರು ಅಸ್ಪಷ್ಟ ನಿಲುವನ್ನು ಹೋಗಲಾಡಿಸಿದಲ್ಲಿ ಕಂಕಣಬಲದ ಸಾಧ್ಯತೆ ಇರುತ್ತದೆ. ಹಣಕಾಸಿನ ವಿಚಾರದಲ್ಲಿ ಎಚ್ಚರಿಕೆಯಿಂದಿದ್ದರೆ ಎಲ್ಲವನ್ನೂ ನಿಭಾಯಿಸಬಹುದು.

ವೃಷಭ: ಹೊಂದಾಣಿಕೆ ಜಗದ ನಿಯಮ. ಮನೋಭಾವವನ್ನು ಬದಲಿಸಿಕೊಳ್ಳಬೇಕಾಗುತ್ತದೆ. ವೃತ್ತಿ ಜೀವನಕ್ಕೆ ಸಂಬಂಧಪಟ್ಟಂತಹ ವಿಚಾರದಲ್ಲಿ ನಿರ್ಣಯ ಕೈಗೊಳ್ಳಲು ಆಪ್ತರೊಬ್ಬರ ಸಲಹೆ ಕೇಳುವಿರಿ.

ಮಿಥುನ: ವ್ಯವಹಾರಗಳ ವಿಷಯಕ್ಕೆ ಸಂಬಂಧಿಸಿದಂತೆ ಪಾಲುದಾರರೊಂದಿಗೆ ಜರೂರಿನಲ್ಲಿ ಚರ್ಚೆ ನಡೆಸಬೇಕಾದ ಪರಿಸ್ಥಿತಿ ಎದುರಾಗಲಿದೆ. ಖಾಸಗಿ ಗುಮಾಸ್ತ ಕೆಲಸದಲ್ಲಿದ್ದವರಿಗೆ ಪೂರ್ಣ ವಿರಾಮ ಸಿಗುವಂತೆ ಆಗಬಹುದು.

ಕರ್ಕಾಟಕ: ವೃತ್ತಿರಂಗದ ಕೆಲವು ಸೂಕ್ಷ್ಮ ವಿಚಾರಗಳನ್ನು ಅರ್ಥಮಾಡಿಕೊಂಡರೆ ಉತ್ತಮ. ಕುಟುಂಬ ವರ್ಗದಲ್ಲಿ ಸಲಹೆಗಳಿಗೆ ಆದ್ಯತೆ ದೊರೆಯಲಿದೆ. ಮನೆಯಲ್ಲಿ ಮದುವೆ ಸಮಾರಂಭಗಳು ಜರುಗುವ ಸಾಧ್ಯತೆ ಇದೆ.

ಸಿಂಹ: ಗಣ್ಯ ವ್ಯಕ್ತಿಗಳ ಸಹಾಯದಿಂದ ಬಂದಂಥ ಸಮಸ್ಯೆಗಳನ್ನು ಉತ್ತಮವಾಗಿ ಜಯಿಸುವಿರಿ. ವಂಶಪಾಂಪರಿಕವಾಗಿ ಬಂದ ವ್ಯಾಪಾರ ವ್ಯವಹಾರ ಅಥವಾ ವೃತ್ತಿಯಲ್ಲಿ ಈ ದಿನ ಮತ್ತಷ್ಟು ಏಳಿಗೆ ಕಾಣಲಿದೆ.

ಕನ್ಯಾ: ರಿಯಲ್ ಎಸ್ಟೇಟ್‌ದಾರರಿಗೆ ಉತ್ತಮ ಧನಲಾಭವಿರುವ ಅವಕಾಶಗಳಿಂದ ವ್ಯವಹಾರಗಳು ವೃದ್ಧಿಗೊಳ್ಳಲಿದೆ. ಪೊಲೀಸ್ ವೃತ್ತಿಯಲ್ಲಿರುವವರಿಗೆ ಮಹತ್ವದ ಕಾರ್ಯಾಚರಣೆಗಾಗಿ ದೂರದ ಸಂಚಾರ ಕಂಡುಬರಲಿದೆ.

ತುಲಾ: ಅಗತ್ಯ ವಸ್ತುಗಳ ಖರೀದಿಗೆ ಹಣ ವಿನಿಯೋಗ ಆಗುವುದು. ರಾಜಕಾರಣಿಗಳೊಂದಿಗೆ ಅಧಿಕವಾಗಿ ಬೆಳೆಸಿಕೊಂಡ ಒಡನಾಟವು ಕಾರಾಗೃಹ ವಾಸದಂತಹ ಅಪಾಯದ ಪರಿಸ್ಥಿತಿ ತಂದೊಡ್ಡಲಿದೆ.

ವೃಶ್ಚಿಕ: ಪ್ರಾರಂಭಿಸಿದ ಎಲ್ಲಾ ಕೆಲಸಗಳಲ್ಲಿಯೂ ಯಶಸ್ಸು, ಅಭಿವೃದ್ಧಿಗಳಿಂದ ಮನಸ್ಸಿಗೆ ಸಂತೋಷ ಸಿಗಲಿದೆ. ಧನಾದಾಯಕ್ಕೆ ಅಡ್ಡಿ ಆತಂಕಗಳು ಇರುವುದಿಲ್ಲ. ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಕೆಲಸವಿರಲಿದೆ.

ಧನು: ಔದ್ಯೋಗಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಡ್ತಿ ದೊರೆಯುವ ಸಂಭವವಿದೆ. ಧಾರ್ಮಿಕವಾಗಿ ಹೆಚ್ಚಿನ ಏಕಾಗ್ರತೆ ಹಾಗೂ ಉತ್ತಮ ರೀತಿಯಲ್ಲಿನ ಧ್ಯಾನಗಳಿಂದ ಮಾನಸಿಕವಾಗಿ ಸದೃಢರಾಗುವಿರಿ.

ಮಕರ: ಕಾರ್ಯಕ್ಷೇತ್ರದಲ್ಲಿ ಸ್ಥಾನಮಾನ, ಗೌರವ ತೋರಿಬರುವುದು. ಆಸ್ತಿ ಕೊಳ್ಳುವುದರಲ್ಲಾಗಲೀ, ಮನೆ ಕಟ್ಟುವ ವಿಚಾರದಲ್ಲಾಗಲೀ ಅದೃಷ್ಟವು ನಿಮ್ಮ ಪಾಲಿಗೇ ಇರುತ್ತದೆ. ಒಪ್ಪಂದ ಬಹಳ ಸುಲಭವಾಗುವುದು.

ಕುಂಭ: ಕೆಲಸದ ಒತ್ತಡದಿಂದ ದೇಹಾಯಾಸ ಎದುರಾಗಿ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ. ಮಾಡುವ ಕೆಲಸ ಕಾರ್ಯಗಳಿಂದ ಗೌರವಕ್ಕೆ ಚ್ಯುತಿ ಬಾರದಂತೆ ಕಾಪಾಡಿಕೊಳ್ಳಿ.

ಮೀನ: ಆಭರಣ ಖರೀದಿ ಅಥವಾ ಆಸ್ತಿ ಖರೀದಿ ಮಾಡುವ ವಿಚಾರದ ಬಗ್ಗೆ ಹೆಂಡತಿ ಮಕ್ಕಳೊಂದಿಗೆ ಚರ್ಚೆ ನಡೆಯಲಿದೆ. ಸಂಸಾರ ನಿರ್ವಹಣೆ ಮಾಡುವುದು ಸುಲಭವಲ್ಲ ಎಂದು ಅನಿಸಲಿದೆ.

ಬೆರಗಿನ ಬೆಳಕು



ಗುರುರಾಜ ಕರಜಗಿ

ಅಹಂಕಾರ ನಾಶದಿಂದ ಮೌನ

ನಾನು ನಾನೇ ನಾನೆನುತ್ತೆ ಕಿರಿಕೊಡದ ನೀರ್ |
ಗಾನಗೆಯ್ವುದು ಹೆಮ್ಮೆಯಿಂ ಕಡಲ ಮರೆತು ||
ನೂನದಿಂದೆಲ್ಲವೆನುವಬ್ಧಿಯೊಳಗದನಿರಿಸೆ |
ಮೌನವದು ಮಣ್ಕರಗಿ – ಮಂಕುತಿಮ್ಮ || 901 |

ಪದ-ಅರ್ಥ: ನಾನೆನುತ್ತೆ = ನಾನು + ಎನುತ್ತೆ, ನೂನದಿಂದೆಲ್ಲವೆನುವಬ್ಧಿಯೊಳಗದನಿರಿಸೆ = ನೂನದಿಂದ (ತಾತ್ವಿಕವಾಗಿ, ಸತ್ಯವಾಗಿ) + ಎಲ್ಲ + ಎನುವ + ಅಬ್ಧಿಯೊಳಗೆ(ಸಮುದ್ರದೊಳಗೆ) + ಅದನು + ಇರಿಸೆ, ಮಣ್ಕರಗಿ = ಮಣ್ಣು + ಕರಗಿ.

ವಾಚ್ಯಾರ್ಥ: ಚಿಕ್ಕ ಕೊಡದಲ್ಲಿಯ ನೀರು ಅಹಂಕಾರದಿಂದ, ನಾನು, ನಾನೇ ಎಂದು ಕಡಲನ್ನು ಮರೆತು ಶಬ್ದ ಮಾಡುತ್ತದೆ. ಅದೇ ಮಣ್ಣಿನ ಕೊಡವನ್ನು ಸಮುದ್ರದಲ್ಲಿ ಮುಳುಗಿಸಿದರೆ, ಮಣ್ಣು ಕರಗಿ, ಅಹಂಕಾರ ಕಳೆದುಕೊಂಡು ಮೌನವಾಗುತ್ತದೆ.


ವಿವರಣೆ: ಶ್ರೀರಾಮಕೃಷ್ಣರು ಹೇಳಿದ ಸುಂದರ ಕಥೆಗಳು ಮನೋಜ್ಞವಾದವುಗಳು. ಜೀವನದ ಅನೇಕ ಪ್ರಸಂಗಗಳಲ್ಲಿ ಅವರ ಕಥೆಗಳು ನೆಮ್ಮದಿಯನ್ನು ನೀಡುವುದರೊಂದಿಗೆ ಅಧ್ಯಾತ್ಮಿಕ ದರ್ಶನ ಮಾಡಿಸುತ್ತವೆ. ಅವರದೊಂದು ಕಥೆ ಈ ಕಗ್ಗಕ್ಕೆ ಪ್ರಸ್ತುತವಾದದ್ದು. ಒಮ್ಮೆ ಒಂದು ಉಪ್ಪಿನಿಂದ ಮಾಡಿದ ಗೊಂಬೆಗೆ ಅಹಂಕಾರ ಬಂತು. ತಾನು ತುಂಬ ದೊಡ್ಡವ, ತನಗಿಂತ ದೊಡ್ಡದಾದದ್ದು ಪ್ರಪಂಚದಲ್ಲಿ ಯಾವುದೂ ಇಲ್ಲ ಎಂದು ಹೆಮ್ಮೆಯಿಂದ ಮೆರೆಯತೊಡಗಿತು. ಅದಕ್ಕೆ ಯಾರೋ ಸಮುದ್ರದ ಬಗ್ಗೆ ಹೇಳಿದರು. ಅದರಷ್ಟು ವಿಸ್ತಾರ ಮತ್ತು ಆಳವಾದದ್ದು ಮತ್ತಾವುದೂ ಇಲ್ಲ ಎಂದು ವರ್ಣಿಸಿದರು. ಉಪ್ಪಿನ ಗೊಂಬೆಯ ಅಹಂಕಾರಕ್ಕೆ ಪೆಟ್ಟಾಯಿತು. ಅದಾವುದು ಸಮುದ್ರ? ಅದರ ಆಳ ಎಷ್ಟಿದೆಯೆಂಬುದನ್ನು ನೋಡಿಯೇ ಬಿಡುತ್ತೇನೆ ಎಂದುಕೊಂಡಿತು. ಮರಳಿ ಬಂದು ಉಳಿದವರಿಗೆ ಸಮುದ್ರದ ಆಳವನ್ನು ವಿವರಿಸುವುದು ಅದರ ಆಲೋಚನೆ. ಉಪ್ಪಿನ ಗೊಂಬೆ ಸಮುದ್ರದ ನೀರಿಗಿಳಿಯಿತು. ನಿಧಾನಕ್ಕೆ ತಳಕ್ಕೆ ಇಳಿಯತೊಡಗಿತು. ಇಳಿದಂತೆ, ಕರಗುತ್ತ ಹೋಗಿ, ತನ್ನ ಅಸ್ತಿತ್ವವನ್ನೇ ಮರೆತು ಸಮುದ್ರದಲ್ಲಿ ಒಂದಾಗಿ, ತಾನೇಸಮುದ್ರ ಎಂಬುದನ್ನರಿತಿತು. ಈ ಕಗ್ಗದ ಧ್ವನಿಯೂ ಅದೇ. ಪುಟ್ಟ ಮಣ್ಣಿನ ಮಡಕೆಯಲ್ಲಿದ್ದ ನೀರು ಅಹಂಕಾರದಿಂದ ನಾನು, ನಾನು ಎನ್ನುತ್ತ ಶಬ್ದ ಮಾಡುತ್ತದಂತೆ. ಯಾಕೆಂದರೆ ಅದಕ್ಕೆ ಹೊರಗಿನ ಪ್ರಪಂಚದ ವಿಸ್ತಾರ, ಆಳ ಗೊತ್ತಿಲ್ಲ. ಮಡಕೆಯಲ್ಲಿಯ ನೀರಿಗೆ ಸಮುದ್ರ ಎಂಬುದೊಂದಿದೆ ಎಂಬುದೇ ತಿಳಿದಿಲ್ಲ. ಮಡಕೆಯನ್ನು ನಿಜವಾದ ಸಮುದ್ರದಲ್ಲಿ ಮುಳುಗಿಸಿ ಇಟ್ಟರೆ, ಕ್ಷಣದಲ್ಲಿ ಮಡಕೆಯ ಮಣ್ಣು ಕರಗಿ ಹೋಗಿ, ನೀರು ಸಮುದ್ರದ ವೈಶಾಲ್ಯತೆಯಲ್ಲಿ ಕರಗಿ, ಮೌನವಾಗುತ್ತದೆ. ನಾವು ಮನುಷ್ಯರು ಮಡಕೆಯ ನೀರಿನಂತೆ. ನಾನು, ನಾನು ಎಂಬ ಅಹಂಕಾರದಿಂದ ಮೆರೆಯುತ್ತೇವೆ. ಎಲ್ಲ ಜೀವಾತ್ಮಗಳ ಸಮುದ್ರದಂತಿರುವ ಪರಮಾತ್ಮನ ಇರುವನ್ನೇ ಮರೆತು ಹಾರಾಡುತ್ತೇವೆ. ತಾತ್ಕಾಲಿಕವಾದ, ಪುಟ್ಟ ಅಧಿಕಾರ ಅಮಲನ್ನು ಏರಿಸುತ್ತದೆ. ಭಗವಂತನ ಕೃಪೆಯಿಂದಲೋ, ಬದುಕಿನಲ್ಲಿ ಬೀಳುವ ಪೆಟ್ಟುಗಳೋ ಅಹಂಕಾರವನ್ನು ಕರಗಿಸಬಹುದು. ಆಗ ಮನದಲ್ಲಿ ಚಿಂತನೆಯ ಮೌನ ಒಡಮೂಡುತ್ತದೆ. ಮೌನ ದೊರಕುವುದೆ ಅಹಂಕಾರವೆಂಬ ಮಣ್ಣು ಕರಗಿದಾಗ.

ಪದಬಂಧ 5343

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಡುವೆ ಪಾದವನ್ನಿರಿಸಿ ತಪ್ಪು ಹೊರಿಸುವುದು(4)
3.ಪರದಲ್ಲೇ ಗೊತ್ತು ಹಚ್ಚುವವನು (4)
5.ತಾರ ನುಡಿಸಿದ ತಂತಿ ವಾದ್ಯ (3)
7.ಇದು ಬೇರೆಯವರ ಹಣ (4)
9.ಪುಂಡಾಡಿಕೆ ಮಾಡುವವ ತಿರುಗಿದ್ದಾನಲ್ಲಾ? (2)
10.ವರ್ಣನೆಯಲ್ಲಿರುವ ಬಣ್ಣ (2)
11.ವಾರದ ಕೊನೆಗೆ ಧರಿಸಿದ ಯಜ್ಞೋಪವೀತ (4)
14.ಸಂತನಿಂದ ಮುಂದುವರೆದ ವಂಶ (3)
16.ಗರತಿ ಸೇರಿರುವ ಇಯತ್ತೆ (4)
17.ಅಳತೆಗೆ ಮೀರಿದ ಸ್ಥಿತಿ (4)

ಮೇಲಿಂದ ಕೆಳಕ್ಕೆ
1.ಆಲದ ಮರದ ಬಳಿಯಿರುವ ಸೋಮಾರಿ(3)
2.ಸಡಗರದಿಂದ ಆಚರಿಸಿದ ನಾಡಹಬ್ಬ (3)
3.ಈ ಪರಿ ಹಾರವನ್ನಿಟ್ಟು ಹೋಗಲಾಡಿಸುವುದು (4)
4.ರಜದಲ್ಲಿ ಕಳೆದ ಇರುಳು (3)
6.ಹುಂಜಕೂಗಿದಾಗ ಕಾಣಿಸಿದ್ದುನಕ್ಷತ್ರಗಳ ಗುಂಪು (4)
7.ದರವುಳ್ಳ ಮಡಿಕೆ (3)
8.ಅದೇ ತಾನೆ ಕಡೆದ ಬೆಣ್ಣೆ (4)
12.ವಾಚನ ಮಾಡುತ್ತಿರುವ ಬೃಹಸ್ಪತಿ (4)
13.ಪಾಂಡಿತ್ಯ ತೋರುತ್ತಿರುವ ವಿದ್ವಾಂಸ (3)
14.ಸಂಗಾತಿ ಹೇಳಿದ ವಿಷಯ (3)
15.ತಿರುಬೋಕಿಯನ್ನು ಹಿಡಿದಿರುವ ಭಿಕ್ಷುಕ (3)



5342ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಳಗ 4.ಒಮ್ಮತ 6.ಹಯವದನ 7.ರವಿ 9.ಕಡ 10.ಕಾಡು 11.ಣಿವಾ 12.ವಾರ 13.ಟಆ 18.ನಯವಂಚಕ 19.ನಡುಕ 20.ರಿವಾಜು

ಮೇಲಿಂದ ಕೆಳಕ್ಕೆ:
1.ಬಡಿವಾರ 2.ಗಹನ 3.ಕವನ 4.ಒನಪು 5.ತಡಬಡ 8.ವಿಕಾರ 9.ಕವಾಟ 12.ವಾತಾಯನ 14.ಆಜುಬಾಜು 15.ಶುನಕ 16.ಲವಂಗ 17.ಮಂಕರಿ

ಸುಡೊಕು 5729

	7			9	8		6	
1		9	6			5		3
	6		5		2		9	
9		2				3		6
	4			5			7	
8		7	2		4	1		9
		6	4		5		2	
				2		7		4
		4	1		9		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.


5728 ಸುಡೊಕು

6	4	2	9	5	7	1	8	3
8	9	5	1	3	6	2	4	7
7	1	3	2	8	4	6	5	9
3	2	6	5	4	9	7	1	8
9	8	7	6	1	2	4	3	5
1	5	4	3	7	8	9	6	2
5	7	9	8	6	1	3	2	4
2	6	8	4	9	3	5	7	1
4	3	1	7	2	5	8	9	6



ಷೇರುಪೇಟೆ ವಹಿವಾಟು

350



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,599
ಇಂದಿನ ಅಂತ್ಯ	18,726
▲	127
ದಿನದ ಗರಿಷ್ಠ	18,738

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹302-498
ದ್ವಿತಳಿ (ಬಿ.ವಿ)	₹235-646

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹572

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590(1580)
ಸೋಯಾ (ರಿಫೈನ್ಡ್)	₹890(885)
ಸೂರ್ಯಕಾಂತಿ (ರಿಫೈನ್ಡ್)	₹890(890)
ಪಾಮೋಲಿನ್	₹830(828)

ತಿಪಟೂರು ಕೊಬ್ಬರಿ

ಕನಿಷ್ಠ	₹7800
ಗರಿಷ್ಠ	₹ 8856
ಮಾದರಿ	₹ 8850
ಒಟ್ಟು ಆವಕ (ಚೀಲ)	2706

ಮಾರುಕಟ್ಟೆಗೆ ಮಾರುತಿ ಜಿಮ್ನಿ



ಮಾರುತಿ ಸುಜುಕಿ ಜಿಮ್ನಿ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಜಿಮ್ನಿ ಎಸ್‌ಯುವಿ ವಾಹನವನ್ನು ಬುಧವಾರ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ದೆಹಲಿಯಲ್ಲಿ ಇದರ ಬೆಲೆ ₹12.74 ಲಕ್ಷದಿಂದ ₹15.05 ಲಕ್ಷದವರೆಗೆ (ಎಕ್ಸ್ ಷೋರೂಂ) ಇದೆ.

ಮ್ಯಾನ್ಯುವಲ್ ಹಾಗೂ ಆಟೊಮ್ಯಾಟಿಕ್ ಅವತರಣಿಕೆಗಳಲ್ಲಿ ಇದು ಲಭ್ಯವಿದೆ. ಐದು ಬಾಗಿಲುಗಳು, 1.5 ಲೀಟರ್ ಪೆಟ್ರೋಲ್ ಎಂಜಿನ್ ಇರುವ ಈ ವಾಹನವನ್ನು ಕಂಪನಿಯು ನೆಕ್ಸಾ ಮಳಿಗೆಗಳ ಮೂಲಕ ಮಾರಾಟ ಮಾಡಲಿದೆ.

'ದೇಶದಲ್ಲಿ ಎಸ್‌ಯುವಿ ತಯಾರಿಸುವ ಅತಿದೊಡ್ಡ ಕಂಪನಿಯಾಗುವ ಗುರಿ ತಲುಪುವಲ್ಲಿ ಈ ಮಾದರಿಯು ಮಹತ್ವದ ಪಾತ್ರ ವಹಿಸಲಿದೆ' ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಹಿಸಾಶಿ ತಕೆಯುಚಿ ಭರವಸೆ ವ್ಯಕ್ತಪಡಿಸಿದ್ದಾರೆ.

ಐದು ಬಾಗಿಲುಗಳ ಜಿಮ್ನಿ ವಾಹನವನ್ನು ಕಂಪನಿ ಮೊದಲು ಬಿಡುಗಡೆ ಮಾಡುತ್ತಿರುವುದು ಭಾರತದಲ್ಲಿ. ಇದರ ಇಂಧನ ದಕ್ಷತೆಯು ಪ್ರತಿ ಲೀಟರ್‌ಗೆ ಗರಿಷ್ಠ 16.94 ಕಿ.ಮೀ. ಎಸ್‌ಯುವಿ ಮಾರುಕಟ್ಟೆಯಲ್ಲಿ ಶೇಕಡ 25ರಷ್ಟು ಪಾಲು ಹೊಂದುವ ಗುರಿಯನ್ನು ಮಾರುತಿ ಸುಜುಕಿ ಹೊಂದಿದೆ.

'ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸಲು ನೆರವಾಗಲಿದೆ ಎ.ಐ.'

ಕಲಿಕೆಗೆ ಕೃತಕ ಬುದ್ಧಿಮತ್ತೆ ಬಳಕೆ

ನವದೆಹಲಿ (ಪಿಟಿಐ): ಆನ್‌ಲೈನ್ ಮೂಲಕ ಶೈಕ್ಷಣಿಕ ಕೋರ್ಸ್‌ಗಳನ್ನು ಒದಗಿಸುತ್ತಿರುವ ಬೈಜುಸ್ ಕಂಪನಿಯು ಹೊಸ ವಸ್ತುವಿಷಯವನ್ನು ಸೃಷ್ಟಿಸುವ ಸಾಮರ್ಥ್ಯವಿರುವ ಕೃತಕ ಬುದ್ಧಿಮತ್ತೆಯನ್ನು ತನ್ನ ಕಲಿಕಾ ಮಾದರಿಗಳಲ್ಲಿ ಅಳವಡಿಕೆ ಮಾಡಿದೆ. ಆದರೆ, ಹೊಸ ತಂತ್ರಜ್ಞಾನಗಳು ಶಿಕ್ಷಕರ ಅಗತ್ಯವನ್ನು ಇಲ್ಲವಾಗಿಸುವುದಿಲ್ಲ ಎಂದು ಹೇಳಿದೆ.

ಮುಖ್ಯಾಂಶಗಳು
- ಅತ್ಯಾಧುನಿಕ ಎ.ಐ. ಬಳಕೆ ಆರಂಭಿಸಿದ ಬೈಜುಸ್
- ಗಣಿತದ ಸಂಕೀರ್ಣ ಸಮಸ್ಯೆ ಬಗೆಹರಿಸಬಲ್ಲ ಎ.ಐ.
- ಎ.ಐ.ನಿಂದ ಶಿಕ್ಷಕರಿಗೆ ನೆರವು: ಬೈಜುಸ್

ವಿದ್ಯಾರ್ಥಿಗಳು ಕಲಿಯುವ ರೀತಿ ಹೇಗಿರುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಕಂಪನಿಯು ಮೂರು ಬಗೆಯ ಕೃತಕ ಬುದ್ಧಿಮತ್ತೆ ಮಾದರಿಗಳನ್ನು ಅಳವಡಿಸಿಕೊಂಡಿದೆ. ಇವು ವಿದ್ಯಾರ್ಥಿಗಳಿಗೆ ಕಲಿಕೆಯನ್ನು ಉತ್ತಮ ಆಗಿಸಿಕೊಳ್ಳುವ ವಿಧಾನವೊಂದನ್ನು ತಾವಾಗಿಯೇ ರೂಪಿಸಿಕೊಡಲಿವೆ.

ಕೃತಕ ಬುದ್ಧಿಮತ್ತೆಯನ್ನು ಅಳವಡಿಸಿಕೊಳ್ಳುತ್ತಿರುವುದು ಶಿಕ್ಷಕರಿಗೆ ಈಗ ಇರುವ ಸ್ಥಾನವನ್ನು ಮುಂದೆ ಇಲ್ಲವಾಗಿಸುವ ಉದ್ದೇಶದಿಂದ ಅಲ್ಲ. ಬದಲಿಗೆ, ಕಂಪನಿಯ ಸಾಮರ್ಥ್ಯವನ್ನು ಹೆಚ್ಚಿಸಿ, ಶಿಕ್ಷಕರಿಗೆ ಇನ್ನಷ್ಟು ಉತ್ತಮವಾದ ಗುರಿಗಳ ಮೇಲೆ ಗಮನ ಕೊಡಲು ನೆರವಾಗುವ ಉದ್ದೇಶದಿಂದ ಇದನ್ನು ಅಳವಡಿಸಲಾಗಿದೆ ಎಂದು ಕಂಪನಿಯ ಸಹ ಸಂಸ್ಥಾಪಕಿ ದಿವ್ಯಾ ಗೋಕುಲನಾಥ್ ಹೇಳಿದ್ದಾರೆ.

'ಶಿಕ್ಷಕರು ತರಗತಿಗಳಲ್ಲಿ ಮಾಡುವ ಕೆಲಸಕ್ಕೆ ಅಥವಾ ಬೈಜುಸ್ ಕಂಪನಿಯ ಟ್ಯೂಷನ್ ಕೇಂದ್ರಗಳಲ್ಲಿ ಮಾಡುವ ಕೆಲಸಕ್ಕೆ ಯಾವ ಕೃತಕ ಬುದ್ಧಿಮತ್ತೆಯೂ ಸಾಟಿಯಲ್ಲ. ಆದರೆ, ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ಶಿಕ್ಷಕರಿಗೆ ನೆರವು ನೀಡಬಲ್ಲದು' ಎಂದು ಅವರು ವಿವರಿಸಿದ್ದಾರೆ.

ಕಂಪನಿಯು ಬಳಕೆಗೆ ತಂದಿರುವ ಮ್ಯಾತ್‌ಜಿಪಿಟಿ ಮಾದರಿಯು ಗಣಿತದ ಸಂಕೀರ್ಣ ಸಮಸ್ಯೆಗಳನ್ನು ಕೂಡ ನಿಖರವಾಗಿ ಪರಿಹರಿಸಬಲ್ಲದು. ಇದು ವಿದ್ಯಾರ್ಥಿಗಳಿಗೆ ಅಭ್ಯಾಸಕ್ಕೆ ನೆರವಾಗಲು ತಾನಾಗಿಯೇ ಪ್ರಶ್ನೆಗಳನ್ನು ಕೇಳಬಲ್ಲದು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು	475
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40500
ಹಳತು	48000-53000
ಕಾರ್ಕಳ	
ಹೊಸತು	30000-40500
ಹಳತು	40000-53000
ಕುಮಟಾ	
ಚಿಪ್ಪು	29909-33299
ಕೋಕ	20999-32899
ಫ್ಯಾಕ್ಟರಿ	14606-22779
ಹಳೆಚಾಲಿ	36599-39409
ಹೊಸಚಾಲಿ	35899-37709
ಪುತ್ತೂರು	
ಹೊಸತು	33500-40500
ಶಿವಮೊಗ್ಗ	
ಬೆಟ್ಟೆ	45500-52569
ಗೊರಬಲು	17009-37000
ರಾಶಿ	38000-50099
ಸರಕು	54069-82769
ಸಿದ್ದಾಪುರ	
ಬಿಳಿಗೋಟು	29019-32969
ಚಾಲಿ	35399-37899
ಕೋಕ	27891-32619
ಕೆಂಪುಗೋಟು	31199-32319
ರಾಶಿ	44009-48239
ತಟ್ಟಿಬೆಟ್ಟೆ	37369-38469
ಶಿರಸಿ	
ಬೆಟ್ಟೆ	34589-46899
ಬಿಳಿಗೋಟು	23699-33609
ಚಾಲಿ	35318-38301
ಕೆಂಪುಗೋಟು	26496-36499
ರಾಶಿ	40599-47898

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15400	15250	15100	183.10ಸೆಂಟ್ಸ್
ಎಸಿ	7980	8000	7650	
ಆರ್‌ಪಿ	10600	10850	10675	ಲಂಡನ್
ಆರ್‌ಸಿ	6050	240on OT	5900	2607ಡಾಲರ್ಸ್

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹152
ಆರ್‌ಎಸ್‌ಎಸ್-5	₹147
ಗುಡ್ ಲಾಟ್	₹128

ಮುಂಬೈ ಧಾರಣೆ

ಶೇಂಗಾ

7-6-2023

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10900-10950
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12200-12300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600(1590)
ಒಂದು ವಾರದ ಡೆಲಿವರಿ	1595(1585)
ಸೋಯಾ ಕಚ್ಚಾ	850(840)
ಪಾಮ್ ವಾರದ ಡೆಲಿವರಿ	828(826)
ಸೂರ್ಯಕಾಂತಿ ಎಣ್ಣೆ ಕಚ್ಚಾ	790(790)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,750(59,900)
ಬೆಳ್ಳಿ ಕೆ.ಜಿ 71,850 (71,950)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಭತ್ತದ ಎಂಎಸ್‌ಪಿ ಕ್ವಿಂಟಲ್‌ಗೆ ₹143 ಹೆಚ್ಚಳ

ಒಂದನೇ ಪುಟದಿಂದ...

'ಕೇಂದ್ರ ಸರ್ಕಾರದ ಬೆಲೆ ಸಲಹಾ ಸಂಸ್ಥೆಯಾಗಿರುವ ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ (ಸಿಎಸಿಪಿ) ಶಿಫಾರಸುಗಳನ್ನು ಆಧರಿಸಿ ಕಾಲಕಾಲಕ್ಕೆ ಎಂಎಸ್‌ಪಿ ನಿಗದಿಪಡಿಸಲಾಗುತ್ತಿದೆ. ಈ ಬಾರಿಯ ಮುಂಗಾರು ಬೆಳೆಗೆ ನಿಗದಿಪಡಿಸಿರುವ ಎಂಎಸ್‌ಪಿಯು ಕಳೆದ ವರ್ಷಕ್ಕೆ ಹೋಲಿಸಿದರೆ ಗರಿಷ್ಠ ಮಟ್ಟದ್ದಾಗಿದೆ' ಎಂದು ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಪೀಯೂಷ್ ಗೋಯಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

'ಚಿಲ್ಲರೆ ಹಣದುಬ್ಬರ ಪ್ರಮಾಣ ಇಳಿಮುಖ ಆಗಿರುವ ಸಂದರ್ಭದಲ್ಲಿ ಎಂಎಸ್‌ಪಿ ಹೆಚ್ಚಿಸಿರುವುದರಿಂದ ರೈತರಿಗೆ ಅನುಕೂಲ ಆಗಲಿದೆ. ಎ ಗ್ರೇಡ್‌ನ ಭತ್ತದ ಎಂಎಸ್‌ಪಿ ಪ್ರತಿ ಕ್ವಿಂಟಲ್‌ಗೆ ₹2,060ರಿಂದ ₹2,203ಕ್ಕೆ ಏರಿಕೆ ಆಗಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.



ಸಾಂಕೇತಿಕ ಚಿತ್ರ

ಹೆಸರುಕಾಳಿನ ಎಂಎಸ್‌ಪಿಯನ್ನು 2023–24ನೇ ಬೆಳೆ ವರ್ಷಕ್ಕೆ ಗರಿಷ್ಠ ಶೇ 10.4ರಷ್ಟು ಹೆಚ್ಚಿಸಲಾಗಿದೆ. ಇದರಿಂದ ಪ್ರತಿ ಕ್ವಿಂಟಲ್ ಎಂಎಸ್‌ಪಿ ₹8,558ಕ್ಕೆ ತಲುಪಿದೆ. ಕಳೆದ ಬಾರಿ ಇದು ಕ್ವಿಂಟಲ್‌ಗೆ ₹7,755 ಇತ್ತು.

ಜೋಳ (ಹೈಬ್ರಿಡ್) ಮತ್ತು ಮಾಲದಂಡಿ ಜೋಳದ ಎಂಎಸ್‌ಪಿಯನ್ನು ಕ್ರಮವಾಗಿ ಶೇ 7 ಮತ್ತು ಶೇ 7.85ರಷ್ಟು ಹೆಚ್ಚಿಸಲಾಗಿದೆ. ಮೆಕ್ಕೆ ಜೋಳದ ಮೇಲಿನ ಎಂಎಸ್‌ಪಿ ಶೇ 6.5ರಷ್ಟು ಏರಿಕೆ ಮಾಡಲಾಗಿದ್ದು, ಕ್ವಿಂಟಲ್‌ಗೆ ₹2,090ಕ್ಕೆ ತಲುಪಿದೆ. ರಾಗಿ ಮೇಲಿನ ಎಂಎಸ್‌ಪಿ ಶೇ 7.49ರಷ್ಟು ಹೆಚ್ಚಾಗಿ ₹3,846ಕ್ಕೆ ತಲುಪಿದೆ.

ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೊಗೆ ಹೊರಟಿದ್ದ ವಿಮಾನ

ರಷ್ಯಾದಲ್ಲಿ ಏರ್ ಇಂಡಿಯಾ ವಿಮಾನ ತುರ್ತು ಭೂಸ್ಪರ್ಶ

ವಾಷಿಂಗ್ಟನ್ (ಪಿಟಿಐ): ಸ್ಯಾನ್ ಫ್ರಾನ್ಸಿಸ್ಕೊಗೆ ಹೊರಟಿದ್ದ ಏರ್ ಇಂಡಿಯಾ ವಿಮಾನವೊಂದು (ಎಐ 173) ಎಂಜಿನ್‌ನಲ್ಲಿ ಕಂಡು ಬಂದ ದೋಷದಿಂದಾಗಿ ರಷ್ಯಾದ ಮಾಗದಾನ್ ಪಟ್ಟಣದಲ್ಲಿ ತುರ್ತು ಭೂಸ್ಪರ್ಶ ಮಾಡಿದೆ. 216 ಪ್ರಯಾಣಿಕರು ಹಾಗೂ 16 ಜನ ಸಿಬ್ಬಂದಿ ಇದ್ದ ಬೋಯಿಂಗ್ ವಿಮಾನ ಸುರಕ್ಷಿತವಾಗಿ ಇಳಿದಿದೆ ಎಂದು ಮೂಲಗಳು ಹೇಳಿವೆ.

ಆಹಾರ ಮತ್ತು ಇತರ ಅಗತ್ಯ ವಸ್ತುಗಳನ್ನು ಹೊತ್ತ ಮತ್ತೊಂದು ವಿಮಾನವನ್ನು ರಷ್ಯಾಕ್ಕೆ ಬುಧವಾರ ಕಳುಹಿಸಲಾಗಿದೆ. ಈ ವಿಮಾನವು ಎಲ್ಲ ಪ್ರಯಾಣಿಕರನ್ನು ಜೂನ್ 8ರಂದು ಸ್ಯಾನ್ ಫ್ರಾನ್ಸಿಸ್ಕೊಕ್ಕೆ ಕರೆದೊಯ್ಯಲಿದೆ ಎಂದು ಏರ್ ಇಂಡಿಯಾ ಪ್ರಕಟಣೆ ತಿಳಿಸಿದೆ.

'ರಷ್ಯಾದ ಪಟ್ಟಣವೊಂದರಲ್ಲಿ ಏರ್ ಇಂಡಿಯಾ ವಿಮಾನ ತುರ್ತು ಭೂಸ್ಪರ್ಶ ಮಾಡಿರುವ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ. ಈ ವಿಮಾನದಲ್ಲಿ ಎಷ್ಟು ಜನ ಅಮೆರಿಕ ಪ್ರಜೆಗಳಿದ್ದಾರೆ ಎಂಬ ಬಗ್ಗೆ ಈಗ ಹೇಳಲು ಸಾಧ್ಯ ಇಲ್ಲ' ಎಂದು ಅಮೆರಿಕ ವಿದೇಶಾಂಗ ಇಲಾಖೆ ವಕ್ತಾರ ವೇದಾಂತ ಪಟೇಲ್ ಹೇಳಿದ್ದಾರೆ.

ಮಾಗದಾನ್ ಪಟ್ಟಣವು ರಷ್ಯಾದ ಈಶಾನ್ಯದಲ್ಲಿರುವ ಓಖೋತ್‌ಸ್ಕ್ ಸಮುದ್ರ ತೀರದಲ್ಲಿದೆ. ವಾಯುಮಾರ್ಗದ ಮೂಲಕ ಈ ಪಟ್ಟಣ ತಲುಪಲು ಏಳೂವರೆ ಗಂಟೆ ಬೇಕಾಗುತ್ತದೆ ಎಂದು ಮೂಲಗಳು ಹೇಳಿವೆ.



ಸ್ಯಾನ್ ಫ್ರಾನ್ಸಿಸ್ಕೊಗೆ ಹೊರಟಿದ್ದ ಏರ್ ಇಂಡಿಯಾ ವಿಮಾನ ತಾಂತ್ರಿಕ ದೋಷದಿಂದಾಗಿ ರಷ್ಯಾದ ಮಾಗದಾನ್ ಪಟ್ಟಣದಲ್ಲಿ ತುರ್ತು ಭೂಸ್ಪರ್ಶ ಮಾಡಿದ್ದು, ಪ್ರಯಾಣಿಕರಿಗಾಗಿ ಬುಧವಾರ ತಾತ್ಕಾಲಿಕ ವಸತಿ ವ್ಯವಸ್ಥೆ ಮಾಡಲಾಗಿತ್ತು –ಪಿಟಿಐ ಚಿತ್ರ

5 ವರ್ಷದಲ್ಲಿ ವಿಮಾನ ನಿಲ್ದಾಣಗಳ ಸಂಖ್ಯೆ 200 ದಾಟಲಿದೆ: ಸಿಂಧಿಯಾ

ನವದೆಹಲಿ (ಪಿಟಿಐ): 'ಮುಂದಿನ ಐದು ವರ್ಷಗಳಲ್ಲಿ ದೇಶದಲ್ಲಿ ವಿಮಾನ ನಿಲ್ದಾಣಗಳ (ಹೆಲಿಪ್ಯಾಡ್, ವಾಟರ್ ಏರೊಡ್ರಮ್ ಒಳಗೊಂಡು) ಸಂಖ್ಯೆ 200 ದಾಟಲಿದ್ದು, ಭಾರತೀಯರ ಸುಖಕರ ಪ್ರಯಾಣಕ್ಕೆ ಅನುಕೂಲವಾಗುವಂತೆ ವಿಮಾನಯಾನ ಸಂಸ್ಥೆಗಳು ಹೆಚ್ಚುವರಿಯಾಗಿ 1,400ಕ್ಕೂ ಹೆಚ್ಚು ಹೊಸ ವಿಮಾನಗಳನ್ನು ಖರೀದಿಸಲಿವೆ' ಎಂದು ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಕೇಂದ್ರ ಸರ್ಕಾರದ ಒಂಬತ್ತು ವರ್ಷಗಳ ಅವಧಿಯಲ್ಲಿ ದೇಶದ ವಿಮಾನಯಾನ ಕ್ಷೇತ್ರದಲ್ಲಿ ಆಗಿರುವ ಸಾಧನೆಗಳ ಬಗ್ಗೆ ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

'2014ರ ವರೆಗೆ ದೇಶದಲ್ಲಿ 74 ವಿಮಾನ ನಿಲ್ದಾಣಗಳಿದ್ದವು. ಈಗ ಅವುಗಳ ಸಂಖ್ಯೆ 148ಕ್ಕೇರಿದೆ. 2013–14ನೇ ಸಾಲಿನಡಿ 6 ಕೋಟಿ ಇದ್ದ ದೇಶೀಯ ಪ್ರಯಾಣಿಕರ ಸಂಖ್ಯೆಯು ಈಗ 14.5 ಕೋಟಿಗೆ ಮುಟ್ಟಿದೆ. ಇದೇ ಅವಧಿಯಲ್ಲಿ ಅಂತರರಾಷ್ಟ್ರೀಯ ಪ್ರಯಾಣಿಕರ ಸಂಖ್ಯೆ 4.7 ಕೋಟಿಯಿಂದ 7 ಕೋಟಿಗೆ ಹೆಚ್ಚಳವಾಗಿದೆ. ಮುಂದಿನ ಐದು ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ ₹ 1 ಲಕ್ಷ ಕೋಟಿ ಬಂಡವಾಳ ಹೂಡಿಕೆಯಾಗುವ ಅಂದಾಜಿಸಿದೆ ಎಂದು ವಿವರಿಸಿದರು.

ವಾಯು ಸರಕು ಸಾಗಣೆಯು(ಏರ್ ಕಾರ್ಗೋ) ಗಮನಾರ್ಹ ಸಾಧನೆಯಾಗಿದೆ. ದೇಶೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ 2.2 ದಶಲಕ್ಷ ಟನ್‌ನಿಂದ 3.6 ದಶಲಕ್ಷ ಟನ್‌ನಷ್ಟು ಸರಕು ಸಾಗಣೆ ಹೆಚ್ಚಳವಾಗಿದೆ. ಮೋದಿ ಕೈಗೊಂಡ ಸುಧಾರಣಾ ಕ್ರಮಗಳಿಂದ ಭಾರತವು, ವಿಮಾನಯಾನ ಕ್ಷೇತ್ರದಲ್ಲಿ ವಿಶ್ವದ ಮೂರನೇ ಅತಿದೊಡ್ಡ ರಾಷ್ಟ್ರವಾಗಿ ಹೊರಹೊಮ್ಮಿದೆ ಎಂದರು.

ಉಕ್ರೇನ್: ನೀಪರ್ ನದಿ ತೀರ ಪ್ರದೇಶಗಳ 1,800 ಮನೆಗಳು ಜಲಾವೃತ

ಅಣೆಕಟ್ಟು ಧ್ವಂಸ: ಸಾವಿರಾರು ಮಂದಿ ಸ್ಥಳಾಂತರ

ಕೆರ್ಸಾನ್ (ಉಕ್ರೇನ್) (ಎಪಿ): ದಕ್ಷಿಣ ಉಕ್ರೇನ್‌ನ ಕೆರ್ಸಾನ್ ಬಳಿ ಇರುವ ಅಣೆಕಟ್ಟು ಧ್ವಂಸವಾದ ಪರಿಣಾಮ ಬುಧವಾರವೂ ಪ್ರವಾಹ ಸ್ಥಿತಿ ಮುಂದುವರಿದಿದೆ. ಕಾರ್ಯಾಚರಣೆ ನಡೆಸಿ ಅಣೆಕಟ್ಟು ಸುತ್ತಲಿನ ಪ್ರದೇಶಗಳ ಜನರನ್ನು ಸ್ಥಳಾಂತರಗೊಳಿಸಲು ಒತ್ತಾಯಿಸಲಾಗಿದೆ.

ವಿಶ್ವದ ಅತಿದೊಡ್ಡ ಅಣೆಕಟ್ಟೆಗಳಲ್ಲಿ ಒಂದಾದ ಕಖೋವ್ಕಾ ಜಲಾಶಯದ ಜಲವಿದ್ಯುತ್ ಉತ್ಪಾದನಾ ಕೇಂದ್ರ ಹಾಗೂ ಅಣೆಕಟ್ಟು ಮಂಗಳವಾರ ದಾಳಿಯಲ್ಲಿ ಹಾನಿಗೀಡಾಗಿದ್ದವು.

'ಅಣೆಕಟ್ಟೆಯಿಂದ ಹೊರಬರುತ್ತಿರುವ ನೀರಿನ ಮಟ್ಟವು ಮುಂದಿನ 20 ಗಂಟೆಗಳಲ್ಲಿ ಮತ್ತೊಂದು ಮೀಟರ್ ನಷ್ಟು (3 ಅಡಿ) ಹೆಚ್ಚಳವಾಗುವ ಸಾಧ್ಯತೆ ಇದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರವಾಹ ಪೀಡಿತ ಪ್ರದೇಶದಲ್ಲಿ ಪರದಾಡುತ್ತಿದ್ದ ಜನರನ್ನು ಮಿಲಿಟರಿ ಟ್ರಕ್, ಬಸ್ ಹಾಗೂ ರೈಲುಗಳ ಮೂಲಕ ಬೇರೆಡೆ ಸಾಗಿಸಲಾಗಿದೆ.

ಈ ಕುರಿತು ವಿಡಿಯೊ ಪ್ರಕಟಣೆ ನೀಡಿರುವ ಕೆರ್ಸಾನ್ ಪ್ರದೇಶದ ಮಿಲಿಟರಿ ಆಡಳಿತ ಮುಖ್ಯಸ್ಥ ಒಲೆಕ್ಸಾಂಡರ್ ಪ್ರೊಕುದಿನ್ ಅವರು, 'ಪ್ರವಾಹದ ತೀವ್ರತೆ ಕಡಿಮೆಯಾಗಿದೆ. ನೀಪರ್ ನದಿ ತೀರದ ಪ್ರದೇಶಗಳ 1,800 ಮನೆಗಳು ಜಲಾವೃತವಾಗಿದ್ದು, 1,500 ಜನರನ್ನು ಸ್ಥಳಾಂತರಿಸಲಾಗಿದೆ' ಎಂದು ತಿಳಿಸಿದ್ದಾರೆ.

ಜಲವಿದ್ಯುತ್ ಉತ್ಪಾದನಾ ಕೇಂದ್ರ ಹಾಗೂ ಅಣೆಕಟ್ಟೆ ಪ್ರಸ್ತುತ ರಷ್ಯಾ ನಿಯಂತ್ರಣದಲ್ಲಿವೆ. ನದಿಯ ಪೂರ್ವಭಾಗದಲ್ಲಿರುವ ನೊವಾ ಕಾಖೋವ್‌ಸ್ಕಾ ಪ್ರದೇಶ ಪ್ರದೇಶದ ಬೀದಿಗಳೆಲ್ಲ ಜಲಾವೃತವಾಗಿವೆ.

'ಪ್ರವಾಹ ಪೀಡಿತ ಸ್ಥಳಗಳಿಂದ 900 ಮಂದಿಯನ್ನು ಸ್ಥಳಾಂತರಿಸಲಾಗಿದೆ. 17 ಮಂದಿಯನ್ನು ರಕ್ಷಣೆ ಮಾಡಲಾಗಿದೆ' ಎಂದು ರಷ್ಯಾ ನಿಯಂತ್ರಿತ ಕೆರ್ಸಾನ್ ಪ್ರಾಂತ್ಯದ ಅಧಿಕಾರಿಗಳು ಹೇಳಿದ್ದಾರೆ.

'ರಷ್ಯಾ ಪಡೆಗಳೇ ಈ ಅಣೆಕಟ್ಟನ್ನು ಸ್ಫೋಟಿಸಿವೆ' ಎಂದು ಉಕ್ರೇನ್ ಮಂಗಳವಾರ ಆರೋಪಿಸಿತ್ತು. ಆದರೆ ಈ ಆರೋಪವನ್ನು ರಷ್ಯಾ ಅಲ್ಲಗಳೆದಿತ್ತು.



ಕಖೋವ್ಕಾ ಅಣೆಕಟ್ಟು ಕುಸಿತದ ಪರಿಣಾಮ ಡ್ನಿಪರ್ ನದಿ ತೀರದ ಪ್ರದೇಶಗಳು ಮುಳುಗಡೆಯಾಗಿರುವುದು –ಎಪಿ/ಪಿಟಿಐ ಚಿತ್ರ

ವಿಶ್ವಸಂಸ್ಥೆಯಿಂದ ಅಗತ್ಯ ನೆರವು

ಕೀವ್ (ಎಪಿ): ಘಟನೆ ಕುರಿತು ಮಂಗಳವಾರ ಪ್ರತಿಕ್ರಿಯಿಸಿರುವ ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಆ್ಯಂಟನಿಯೋ ಗುಟೆರಸ್ ಅವರು, 'ಪ್ರವಾಹದಿಂದಾಗಿ ಕನಿಷ್ಠ 16,000 ಮಂದಿ ತಮ್ಮ ಮನೆಗಳನ್ನು ಕಳೆದುಕೊಂಡಿದ್ದಾರೆ' ಎಂದು ಹೇಳಿದ್ದಾರೆ.

'ಪ್ರವಾಹ ಸಂತ್ರಸ್ತರಿಗೆ ಅಗತ್ಯವಿರುವ ಎಲ್ಲ ನೆರವನ್ನು ಒದಗಿಸುವ ಕಾರ್ಯ ಪ್ರಗತಿಯಲ್ಲಿದೆ' ಎಂದು ವಿಶ್ವಸಂಸ್ಥೆಯ ಮಾನವೀಯ ನೆರವು ಸಂಯೋಜಕರು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಜೋಯಿತಾಗೆ 'ಡಚ್ ನೊಬೆಲ್' ಪ್ರಶಸ್ತಿ

ಲಂಡನ್ (ಪಿಟಿಐ): ಇಬ್ಬರು ವಿಜ್ಞಾನಿಗಳ ಜತೆಗೆ ಭಾರತೀಯ ಮೂಲದ ವಿಜ್ಞಾನಿ ಪ್ರೊ.ಜೋಯಿತಾ ಗುಪ್ತಾ ಅವರು ಪ್ರತಿಷ್ಠಿತ ಸ್ಪಿನೊಜ ಪ್ರಶಸ್ತಿಗೆ ಭಾಜನರಾಗಿದ್ದಾರೆ. 'ಡಚ್ ನೊಬೆಲ್' ಎಂದೇ ಖ್ಯಾತಿ ಪಡೆದಿರುವ ಈ ಪ್ರಶಸ್ತಿಗೆ ಭಾಜನರಾದ ಇಬ್ಬರು ಪ್ರೊಫೆಸರ್‌ಗಳಲ್ಲಿ ಜೋಯಿತಾ ಕೂಡ ಒಬ್ಬರು. ಪ್ರಶಸ್ತಿಯ ಮೊತ್ತವಾಗಿ ಜೋಯಿತಾ ಅವರಿಗೆ ₹13.26 ಕೋಟಿ ಸಿಗಲಿದೆ. ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ ಮತ್ತು ಜ್ಞಾನ ಹಂಚಿಕೆಗಾಗಿ ಪ್ರಶಸ್ತಿ ಮೊತ್ತವನ್ನು ವಿನಿಯೋಗಿಸಲಿದ್ದಾರೆ.

ನೆದರ್ಲೆಂಡ್ ಆ್ಯಮ್‌ಸ್ಟರ್‌ಡಾಂನ ವಿಶ್ವವಿದ್ಯಾಲಯದಲ್ಲಿ ಇವರು ದಕ್ಷಿಣ ಜಾಗತಿಕ ಸುಸ್ಥಿರ, ಪರಿಸರ ಮತ್ತು ಅಭಿವೃದ್ಧಿ ವಿಭಾಗದ ಪ್ರೊಫೆಸರ್ ಆಗಿದ್ದಾರೆ. ಗುಪ್ತಾ ಅವರ 'ಕೇವಲ ಸುಸ್ಥಿರ ವಿಶ್ವಕ್ಕಾಗಿ' ವಿಷಯಕ್ಕೆ ಸಂಬಂಧಿಸಿದ ಅಧ್ಯಯನ ಕಾರ್ಯಗಳಿಗೆ ಈ ಪ್ರಶಸ್ತಿ ಸಂದಿದೆ. ಅ.4ರಂದು ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ಡಚ್ ಸಂಶೋಧನಾ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಡಿಯಾಜಿಯೊ ಸಿಇಒ ಇವಾನ್ ನಿಧನ

ಲಂಡನ್ (ರಾಯಿಟರ್ಸ್): 'ಜಾನಿವಾಕರ್' ವಿಸ್ಕಿ ಸೇರಿದಂತೆ ಹಲವು ಬ್ರ್ಯಾಂಡ್‌ಗಳ ಮದ್ಯ ತಯಾರಿಕೆಯ ವಿಶ್ವದ ಅತಿದೊಡ್ಡ ಕಂಪನಿ ಡಿಯಾಜಿಯೊದ ಸಿಇಒ, ಭಾರತ ಸಂಜಾತ ಇವಾನ್ ಮ್ಯಾನುಯೆಲ್ ಮೆನೆಜಸ್ (64) ಬುಧವಾರ ನಿಧನರಾಗಿದ್ದಾರೆ.



ಇವಾನ್

ಅನಾರೋಗ್ಯದಿಂದ ಕೆಲ ದಿನಗಳ ಹಿಂದೆ ಆಸ್ಪತ್ರೆಗೆ ದಾಖಲಾಗಿದ್ದರು. ನಿಯೋಜಿತ ಸಿಇಒ ಆಗಿ ಡೆಬ್ರಾ ಕ್ರ್ಯೂ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ಡಿಯಾಜಿಯೊ ಸೋಮವಾರ ಪ್ರಕಟಿಸಿತ್ತು.

ಶ್ರೀಲಂಕಾದಲ್ಲಿ ರಕ್ಷಣಾ ವಿಚಾರ ಸಂಕಿರಣ

ಕೊಲಂಬೊ (ಪಿಟಿಐ): ರಕ್ಷಣಾ ವಲಯದಲ್ಲಿ ಎರಡೂ ರಾಷ್ಟ್ರಗಳ ನಡುವಿನ ಪರಸ್ಪರ ಸಹಕಾರವನ್ನು ವೃದ್ಧಿಸಿಕೊಳ್ಳಲು ಭಾರತೀಯ ಹೈಕಮಿಷನ್ ಇದೇ ಮೊದಲಿಗೆ 'ಭಾರತ-ಶ್ರೀಲಂಕಾ ರಕ್ಷಣಾ ವಿಚಾರ ಸಂಕಿರಣ' ಏರ್ಪಡಿಸಿದೆ.

ಪೋಪ್ ಫ್ರಾನ್ಸಿಸ್‌ಗೆ ಮತ್ತೊಮ್ಮೆ ಶಸ್ತ್ರಚಿಕಿತ್ಸೆ

ರೋಮ್(ಎಪಿ): ಕ್ರೈಸ್ತ ಧರ್ಮಗುರು ಪೋಪ್ ಫ್ರಾನ್ಸಿಸ್ ಅವರು ಬುಧವಾರ ಹರ್ನಿಯಾ ಶಸ್ತ್ರಚಿಕಿತ್ಸೆಗೆ ಒಳಪಟ್ಟಿದ್ದಾರೆ. ತೀವ್ರತರವಾದ ನೋವಿನಿಂದ ಬಳಲುತ್ತಿದ್ದ ಅವರನ್ನು, ಇಲ್ಲಿನ ಗೆಮೆಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿದೆ.

2021ರಲ್ಲಿಯೂ ದೊಡ್ಡ ಕರುಳಿನ ಉರಿಯೂತದ ಸಮಸ್ಯೆಗೆ ಶಸ್ತ್ರಚಿಕಿತ್ಸೆಗೆ ಒಳಪಟ್ಟಿದ್ದರು. ಆಗ ವೈದ್ಯರು 33 ಸೆಂಟಿಮೀಟರ್‌ನಷ್ಟು (13 ಇಂಚು) ದೊಡ್ಡ ಕರುಳನ್ನು ತೆಗೆದುಹಾಕಿದ್ದರು. 86ರ ಹರೆಯದ ಅವರಿಗೆ ಹಳೆಯ ಗಾಯದ ಮೇಲೆ ಹರ್ನಿಯಾ ಸಮಸ್ಯೆ ಮರುಕಳಿಸಿದ್ದರಿಂದ ಮತ್ತೆ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ ಎಂದು ವ್ಯಾಟಿಕನ್ ಚರ್ಚ್ ಹೇಳಿದೆ.

ಮಣಿಪುರ: ಕುಕಿ ಜನರಿಂದ ಆಂಬುಲೆನ್ಸ್‌ಗೆ ಬೆಂಕಿ • ಮಗನನ್ನು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದ ತಾಯಿ

ಬಾಲಕ ಸೇರಿ ಮೂವರ ಸಜೀವ ದಹನ

ಕೋಲ್ಕತ್ತ (ಪಿಟಿಐ/ ರಾಯಿಟರ್ಸ್): ಮಣಿಪುರದ ಹಿಂಸಾಚಾರದಲ್ಲಿ ಗಾಯಗೊಂಡಿದ್ದ ಎಂಟು ವರ್ಷದ ಬಾಲಕ, ಆತನ ತಾಯಿ ಮತ್ತು ಸಂಬಂಧಿಯೊಬ್ಬರು ಆಂಬುಲೆನ್ಸ್‌ನಲ್ಲಿ ಹೋಗುತ್ತಿದ್ದ ವೇಳೆ, ಅದನ್ನು ಅಡ್ಡಗಟ್ಟಿದ ಕುಕಿ ಜನರ ಗುಂಪೊಂದು ವಾಹನಕ್ಕೆ ಬೆಂಕಿ ಹಚ್ಚಿದೆ. ಇದರ ಪರಿಣಾಮ ಬಾಲಕ ಸೇರಿ ಮೂವರೂ ಸಜೀವ ದಹನವಾಗಿದ್ದಾರೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಪಶ್ಚಿಮ ಇಂಫಾಲ್ ಜಿಲ್ಲೆಯ ಐರೊಸೆಂಬಾ ಎಂಬಲ್ಲಿ ಭಾನುವಾರ ಸಂಜೆ 6.30ರ ವೇಳೆಯಲ್ಲಿ ಈ ಘಟನೆ ನಡೆದಿದೆ. ದುಷ್ಕರ್ಮಿಗಳ ದಾಳಿಯ ವೇಳೆ ತಲೆಗೆ ಗುಂಡೇಟು ತಗುಲಿದ್ದ ಮಗನನ್ನು ಇಂಫಾಲ್ ಆಸ್ಪತ್ರೆಗೆ ತಾಯಿ ಕರೆದೊಯ್ಯುತ್ತಿದ್ದಾಗ ಆಂಬುಲೆನ್ಸ್ ಮೇಲೆ ಈ ದಾಳಿ ನಡೆದಿದೆ ಎಂದು ಅವರು ಹೇಳಿದ್ದಾರೆ.

ಮೃತರನ್ನು ಟಾನ್ಸಿಂಗ್ ಹ್ಯಾಂಗ್ಸಿಂಗ್ (8), ಅವರ ತಾಯಿ ಮೀನಾ ಹ್ಯಾಂಗ್ಸಿಂಗ್ (45) ಹಾಗೂ ಲಿಡಿಯಾ ಲೌರೆಂಬಮ್ (37) ಎಂದು ಗುರುತಿಸಲಾಗಿದೆ.

ಅಸ್ಸಾಂನ ಹಿರಿಯ ರೈಫಲ್ಸ್ ಅಧಿಕಾರಿಯೊಬ್ಬರು ಈ ಘಟನೆಯನ್ನು ದೃಢಪಡಿಸಿದ್ದಾರೆ. ಅಲ್ಲದೆ ಈ ಘಟನೆ ಸಂಭವಿಸಿದ ಪ್ರದೇಶ, ಶಿಬಿರ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿದೆ ಎಂದು ಅವರು ವಿವರಿಸಿದ್ದಾರೆ.

ಶಿಬಿರದಲ್ಲಿದ್ದ ತಾಯಿ, ಮಗ: ಮೂಲಗಳ ಪ್ರಕಾರ, ಕಾಂಗ್‌ಚುಪ್‌ನಲ್ಲಿರುವ ಅಸ್ಸಾಂ ರೈಫಲ್ಸ್ ಶಿಬಿರದಲ್ಲಿ ಮೈತೇಯಿ ಸಮುದಾಯದ ತಾಯಿ ಮತ್ತು ಮಗ ಆಶ್ರಯಪಡೆದಿದ್ದರು. ಜೂನ್ 4ರ ಸಂಜೆ ಈ ಪ್ರದೇಶದಲ್ಲಿ ಗುಂಡಿನ ಚಕಮಕಿ ನಡೆದಾಗ, ಶಿಬಿರದಲ್ಲಿದ್ದ ಬಾಲಕನ ತಲೆಗೆ ಗುಂಡೇಟು ಬಿದ್ದಿತ್ತು.

ಅಲ್ಲಿದ್ದ ಹಿರಿಯ ಅಧಿಕಾರಿಯೊಬ್ಬರು ಇಂಫಾಲ್‌ನ ಪೊಲೀಸರ ಜತೆ ಮಾತನಾಡಿ, ಆಂಬುಲೆನ್ಸ್ ವ್ಯವಸ್ಥೆ ಮಾಡಿದ್ದರು. ತಾಯಿಯು ಬಹುಸಂಖ್ಯಾತ ಮೈತೇಯಿ ಸಮುದಾಯಕ್ಕೆ ಸೇರಿದವರಾಗಿದ್ದರಿಂದ ಅವರ ಮಗನನ್ನು ರಸ್ತೆಯ ಮೂಲಕ ಇಂಫಾಲ್‌ನಲ್ಲಿರುವ ಪ್ರಾದೇಶಿಕ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಕರೆದೊಯ್ಯಲು ನಿರ್ಧರಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಆರಂಭದ ಕೆಲವು ಕಿ.ಮೀಗಳವರೆಗೆ ಅಸ್ಸಾಂ ರೈಫಲ್ಸ್‌ನವರು ಆಂಬುಲೆನ್ಸ್‌ಗೆ ಬೆಂಗಾವಲು ನೀಡಿದ್ದರು. ಬಳಿಕ ಸ್ಥಳೀಯ ಪೊಲೀಸರು ಈ ಕಾರ್ಯದಲ್ಲಿ ನಿರತರಾಗಿದ್ದರು.

‘ಐರೊಸೆಂಬಾ ಎಂಬಲ್ಲಿ ಸಂಜೆ 6.30ರ ವೇಳೆಗೆ ಆಂಬುಲೆನ್ಸ್ ಅನ್ನು ಕುಕಿ ಸಮುದಾಯದ ಜನರ ಗುಂಪು ಅಡ್ಡಗಟ್ಟಿತು. ಗಾಯಗೊಂಡಿರುವ ಮಗನನ್ನು ಚಿಕಿತ್ಸೆಗೆ ಕರೆದೊಯ್ಯುತ್ತಿರುವುದಾಗಿ ತಾಯಿ ಪರಿ ಪರಿಯಾಗಿ ಬೇಡಿಕೊಂಡರೂ ಲೆಕ್ಕಿಸದ ಗುಂಪು ಆಂಬುಲೆನ್ಸ್‌ಗೆ ಬೆಂಕಿ ಹಚ್ಚಿತು. ಬಾಲಕನ ತಂದೆ ಕುಕಿ ಸಮುದಾಯದ ಜೋಶುವಾ ಹ್ಯಾಂಗ್ಸಿಂಗ್ ಆ ಸಂದರ್ಭದಲ್ಲಿ ಜೊತೆಯಲ್ಲಿ ಇರಲಿಲ್ಲ’ ಎಂದು ಮೂಲಗಳು ತಿಳಿಸಿವೆ.

‘ಮೃತರ ದೇಹಗಳನ್ನು ನಾನಿನ್ನೂ ಸ್ವೀಕರಿಸಿಲ್ಲ. ದೇಹಗಳು ಕರಕಲಾಗಿದ್ದು, ಮೂಳೆಗಳಷ್ಟೇ ಉಳಿದಿವೆ ಎಂದು ತಿಳಿದು ಬಂದಿದೆ’ ಎಂದು ಜೋಶುವಾ ಹ್ಯಾಂಗ್ಸಿಂಗ್ ಪ್ರತಿಕ್ರಿಯಿಸಿದ್ದಾರೆ.

ಶಸ್ತ್ರಾಸ್ತ್ರಗಳ ವಶ: ಗಲಭೆ ಪೀಡಿತ ಮಣಿಪುರದಲ್ಲಿ 57 ಶಸ್ತ್ರಾಸ್ತ್ರಗಳು, 318 ಮದ್ದುಗುಂಡುಗಳು ಮತ್ತು 5 ಬಾಂಬ್‌ಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಒಟ್ಟು ವಶಪಡಿಸಿಕೊಂಡ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳ ಸಂಖ್ಯೆ ಕ್ರಮವಾಗಿ 868 ಮತ್ತು 11,518ಕ್ಕೆ ತಲುಪಿದೆ ಎಂದು ಮಣಿಪುರ ಸರ್ಕಾರದ ಭದ್ರತಾ ಸಲಹೆಗಾರ ಕುಲದೀಪ್ ಸಿಂಗ್ ಬುಧವಾರ ತಿಳಿಸಿದ್ದಾರೆ.



ಹಿಂಸಾಚಾರ ಖಂಡಿಸಿ ಮಣಿಪುರದ ಕುಕಿ ಸಮುದಾಯದವರು ಗೃಹ ಸಚಿವ ಅಮಿತ್ ಶಾ ಅವರ ನವದೆಹಲಿ ನಿವಾಸದ ಎದುರು ಬುಧವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಅಂಕಿ ಅಂಶಗಳು

100 ಇಲ್ಲಿಯವರೆಗೆ ಮೃತಪಟ್ಟವರು	**250** ಕ್ಕೂ ಹೆಚ್ಚು ಗಾಯಗೊಂಡವರು	**43,000** ಸ್ಥಳಾಂತರ ಗೊಂಡಿರುವವರು
34,000 ನಿಯೋಜಿಸಲಾಗಿರುವ ಭದ್ರತಾ ಪಡೆಯ ಸಿಬ್ಬಂದಿ	**4,000** ಕಳವಾಗಿರುವ ಶಸ್ತ್ರಾಸ್ತ್ರಗಳು	**868** ಹಿಂಪಡೆದಿರುವ ಶಸ್ತ್ರಾಸ್ತ್ರಗಳು

ಕಾರ್ಯಾಚರಣೆ ಚುರುಕುಗೊಳಿಸಿದ ಭದ್ರತಾ ಪಡೆ

ಗುವಾಹಟಿ (ರಾಯಿಟರ್ಸ್): ಬಾಲಕ, ತಾಯಿ ಸೇರಿ ಮೂವರ ಸಜೀವ ದಹನ ಪ್ರಕರಣದ ಬಳಿಕ, ಮಣಿಪುರದಲ್ಲಿ ಹಿಂಸಾಚಾರ ತಡೆಗಟ್ಟಲು ಭಾರತೀಯ ಭದ್ರತಾ ಪಡೆ ಕಾರ್ಯಾಚರಣೆ ಚುರುಕುಗೊಳಿಸಿದೆ.

ಮಣಿಪುರದ ಬೆಟ್ಟ ಮತ್ತು ಕಣಿವೆ ಪ್ರದೇಶಗಳಲ್ಲಿ ಬುಧವಾರ ಭಾರತೀಯ ಸೇನೆ ಮತ್ತು ಇತರ ಭದ್ರತಾ ಪಡೆಗಳು ಜಂಟಿ ಕಾರ್ಯಾಚರಣೆ ಆರಂಭಿಸಿವೆ. ಸೂಕ್ಷ್ಮ ಪ್ರದೇಶಗಳಲ್ಲಿ ಪ್ರಾಬಲ್ಯ ಸಾಧಿಸುವುದು ಮತ್ತು ತನ್ನಿಂದ ಕಸಿದುಕೊಂಡಿರುವ ಶಸ್ತ್ರಾಸ್ತ್ರಗಳನ್ನು ಮರು ಪಡೆಯುವುದು ಕಾರ್ಯಾಚರಣೆಯ ಉದ್ದೇಶ ಎಂದು ಸೇನೆ ತಿಳಿಸಿದೆ.

‘ಶಸ್ತ್ರಾಸ್ತ್ರಗಳನ್ನು ಹೊಂದಿರುವ ಸ್ಥಳೀಯರು ಶಾಂತಿ ಮತ್ತು ಸೌಹಾರ್ದ ಸ್ಥಾಪನೆಗಾಗಿ ಅವುಗಳನ್ನು ಭದ್ರತಾ ಪಡೆಗಳಿಗೆ ಒಪ್ಪಿಸಿ’ ಎಂದು ಸೇನೆಯು ಟ್ವೀಟ್ ಮೂಲಕ ಆಗ್ರಹಿಸಿದೆ.

ಪ್ರಧಾನಿ ಏಕೆ ಮೌನವಹಿಸಿದ್ದಾರೆ: ಕಾಂಗ್ರೆಸ್ ಪ್ರಶ್ನೆ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಇನ್ನೂ ಏಕೆ ಮೌನ ವಹಿಸಿದ್ದಾರೆ. ಅವರು ರಾಜ್ಯಕ್ಕೆ ಭೇಟಿ ನೀಡಿ ಸಾಮರಸ್ಯಕ್ಕಾಗಿ ಏಕೆ ಮನವಿ ಮಾಡುತ್ತಿಲ್ಲ ಎಂದು ಕಾಂಗ್ರೆಸ್ ಬುಧವಾರ ಪ್ರಶ್ನಿಸಿದೆ.

ಸ್ವತಂತ್ರ ಭಾರತದಲ್ಲಿ ಮಣಿಪುರದ ಹಿಂಸಾಚಾರವು ಅತ್ಯಂತ ದೊಡ್ಡ ಕಾನೂನು ಮತ್ತು ಸುವ್ಯವಸ್ಥೆಯ ವೈಫಲ್ಯಗಳಲ್ಲಿ ಒಂದಾಗಿದೆ. ಚೀನಾದಂತಹ ದೇಶದಿಂದ ಸುತ್ತುವರೆದಿರುವ ಗಡಿ ರಾಜ್ಯದಲ್ಲಿ ಪರಿಸ್ಥಿತಿ ಅಪಾಯಕಾರಿಯಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಮಣಿಪುರಕ್ಕೆ ಭೇಟಿ ನೀಡುವಂತೆ ಸರ್ವಪಕ್ಷ ನಿಯೋಗವನ್ನು ಪ್ರಧಾನಿ ಏಕೆ ಪ್ರೋತ್ಸಾಹಿಸುವುದಿಲ್ಲ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟ್ವೀಟ್ ಮಾಡಿ ಪ್ರಶ್ನಿಸಿದ್ದಾರೆ.

‘ತಮ್ಮ ರಾಜಕೀಯ ಭವಿಷ್ಯದ ಬಗ್ಗೆ ಡಿವಿಎಸ್‌ಗೆ ಆತಂಕ ಬೇಡ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ ಅವರು ಮಾಧ್ಯಮಗಳ ವರದಿಗಳ ಕಾರಣಕ್ಕೆ ತಮ್ಮ ರಾಜಕೀಯ ಭವಿಷ್ಯದ ಬಗ್ಗೆ ಆತಂಕಪಡುವ ಅಗತ್ಯವಿಲ್ಲ’ ಎಂದು ಕೇಂದ್ರ ಕಲ್ಲಿದ್ದಲು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಗೌಡರು ಹಿರಿಯ ರಾಜಕಾರಣಿ. ಪಕ್ಷದಲ್ಲಿ ಹಾಗೂ ಬಿಜೆಪಿ ಆಡಳಿತದಲ್ಲಿ ಹಲವು ಹುದ್ದೆಗಳನ್ನು ಅಲಂಕರಿಸಿದ್ದಾರೆ. ಇಂತಹ ಹಿರಿಯ ನಾಯಕರು ತಮ್ಮ ರಾಜಕೀಯ ಭವಿಷ್ಯದ ಕುರಿತು ಮಾಧ್ಯಮಗಳ ವರದಿಯಿಂದ ಆತಂಕಗೊಳ್ಳುವ ಅಗತ್ಯವಿಲ್ಲ’ ಎಂದರು.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ತಮ್ಮನ್ನು ಒಳಗೊಂಡಂತೆ 13 ಬಿಜೆಪಿ ಹಾಲಿ ಸಂಸದರಿಗೆ ಟಿಕೆಟ್ ನಿರಾಕರಿಸಿರುವ ಕುರಿತು ಮಾಧ್ಯಮ ವರದಿಗಳ ಬಗ್ಗೆ ಪಕ್ಷವು ಸ್ಪಷ್ಟಪಡಿಸಬೇಕು ಎಂದು ಸದಾನಂದ ಗೌಡ ಅವರು ಹೇಳಿಕೆ ನೀಡಿದ್ದರು.

ಇದಕ್ಕೆ ಪ್ರತಿಕ್ರಿಯಿಸಿರುವ ಜೋಶಿ, ‘ಮುಖ್ಯವಾಹಿನಿಯ ಮಾಧ್ಯಮವಾಗಿರಲಿ ಅಥವಾ ಸಾಮಾಜಿಕ ಮಾಧ್ಯಮವಾಗಿರಲಿ, ಅವರು ತಮಗೆ ಬೇಕಾದುದ್ದನ್ನು ಬರೆಯಲು ಸ್ವತಂತ್ರರು. ಇಂತಹ ಸುದ್ದಿಗಳಿಗೆ ಗೌಡ ಅವರಂಥ ಹಿರಿಯ ನಾಯಕರು ಆತಂಕ ಪಡಬೇಕಿಲ್ಲ. ಪಕ್ಷ ಸದಾ ಗೌಡರ ಜೊತೆಗಿದೆ’ ಎಂದರು.

‘ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆಗೆ ಯಾರಿಗೆ ಟಿಕೆಟ್ ನೀಡಬೇಕೆಂಬ ಬಗ್ಗೆ ಪಕ್ಷವು ಇನ್ನೂ ತೀರ್ಮಾನ ಕೈಗೊಂಡಿಲ್ಲ. ಚುನಾವಣೆ ಇನ್ನೂ ಒಂದು ವರ್ಷ ಬಾಕಿ ಇದ್ದು, ಅಭ್ಯರ್ಥಿಗಳನ್ನು ನಿರ್ಧರಿಸಲು ಇನ್ನೂ ಸಮಯವಿದೆ. ಪಕ್ಷದ ವರಿಷ್ಠರು ಅಭ್ಯರ್ಥಿಗಳನ್ನು ನಿರ್ಧರಿಸುತ್ತಾರೆಯೇ ಹೊರತು ಮಾಧ್ಯಮಗಳಲ್ಲ’ ಎಂದೂ ಪ್ರಲ್ಹಾದ ಜೋಶಿ ಹೇಳಿದರು.

ಪಟ್ನಾ: 23ಕ್ಕೆ ಪ್ರತಿಪಕ್ಷಗಳ ಸಭೆ

ಪಟ್ನಾ(ಪಿಟಿಐ): 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಒಗ್ಗೂಡುವುದಕ್ಕೆ ಸಂಬಂಧಿಸಿದಂತೆ ಬಿಹಾರದ ಪಟ್ನಾದಲ್ಲಿ ಜೂನ್ 23ರಂದು ಪ್ರತಿಪಕ್ಷಗಳ ಸಭೆ ನಡೆಯಲಿದೆ.

‘ಮುಖ್ಯಮಂತ್ರಿ ನಿತೀಶ್‌ಕುಮಾರ್ ಈ ಸಭೆಯನ್ನು ಆಯೋಜಿಸಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಭೆಯಲ್ಲಿ ಭಾಗವಹಿಸಲು ಒಪ್ಪಿಗೆ ನೀಡಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

ಈ ಮೊದಲು ಜೂನ್ 12ಕ್ಕೆ ಸಭೆ ನಿಗದಿಯಾಗಿತ್ತು. ಕಾಂಗ್ರೆಸ್, ಡಿಎಂಕೆ ಸೇರಿದಂತೆ ಹಲವು ಪಕ್ಷಗಳ ಮನವಿ ಮೇರೆಗೆ ಸಭೆಯ ದಿನಾಂಕವನ್ನು ಮರು ನಿಗದಿಪಡಿಸಲಾಗಿದೆ.

ಕೊಲ್ಹಾಪುರದಲ್ಲಿ ಕಲ್ಲು ತೂರಾಟ, ಲಾಠಿ ಪ್ರಹಾರ

‘ಸ್ಟೇಟಸ್’ನಲ್ಲಿ ಟಿಪ್ಪು ಸುಲ್ತಾನ್, ಔರಂಗಜೇಬ್ ಚಿತ್ರ ಹಾಗೂ ಆಕ್ಷೇಪಾರ್ಹ ಆಡಿಯೊ ಹಾಕಿದ್ದ ಆರೋಪ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಕೆಲವರು ಮೊಘಲರ ದೊರೆ ಔರಂಗಜೇಬ್ ಹಾಗೂ ಟಿಪ್ಪು ಸುಲ್ತಾನ್ ಚಿತ್ರ ಹಾಗೂ ಆಕ್ಷೇಪಾರ್ಹ ಆಡಿಯೊವನ್ನು ತಮ್ಮ ಸಾಮಾಜಿಕ ಮಾಧ್ಯಮದ ‘ಸ್ಟೇಟಸ್’ನಲ್ಲಿ ಹಾಕಿದ್ದರು ಎನ್ನಲಾದ ವಿಚಾರವಾಗಿ ಕೊಲ್ಹಾಪುರದಲ್ಲಿ ಬುಧವಾರ ಪ್ರತಿಭಟನೆ, ಕಲ್ಲು ತೂರಾಟ ನಡೆದಿದ್ದು, ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿತ್ತು. ಉದ್ರಿಕ್ತರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ಮಾಡಿದ್ದಾರೆ.

ನಗರದಲ್ಲಿ ಜೂನ್ 19ರ ವರೆಗೆ ಪ್ರತಿಬಂಧಕಾಜ್ಞೆಯನ್ನು ಜಾರಿಗೊಳಿಸಲಾಗಿದ್ದು, ಭದ್ರತೆಗಾಗಿ ರಾಜ್ಯ ಮೀಸಲು ಪೊಲೀಸ್ ಪಡೆ (ಎಸ್‌ಆರ್‌ಪಿಎಫ್)ಯ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ವಿವರ: ಮಂಗಳವಾರ ಕೆಲವರು ಟಿಪ್ಪು ಸುಲ್ತಾನ್ ಚಿತ್ರ ಹಾಗೂ ಆಕ್ಷೇಪಾರ್ಹ ಆಡಿಯೊವನ್ನು ತಮ್ಮ ಸಾಮಾಜಿಕ ಮಾಧ್ಯಮದ ಸ್ಟೇಟಸ್‌ನಲ್ಲಿ ಪೋಸ್ಟ್ ಮಾಡಿದ್ದರು ಎನ್ನಲಾಗಿದೆ. ಕಳೆದ ದಿನಗಳಿಂದ ಇನ್ನೂ ಕೆಲವರು ಔರಂಗಜೇಬ್ ಚಿತ್ರವನ್ನು ತಮ್ಮ ಸ್ಟೇಟಸ್‌ನಲ್ಲಿ ಹಾಕಿದ್ದರು ಎನ್ನಲಾಗಿದೆ. ಇದನ್ನು ಆಕ್ಷೇಪಿಸಿ ಬಂದ್‌ಗೆ ಕರೆ ನೀಡಿದ್ದ ಕೆಲ ಸಂಘಟನೆಗಳು, ನಗರದ ಶಿವಾಜಿ ಚೌಕದಲ್ಲಿ ಜಮಾಯಿಸಿ ಪ್ರತಿಭಟಿಸಿದರು.



ಸಾಮಾಜಿಕ ಮಾಧ್ಯಮದಲ್ಲಿ ಟಿಪ್ಪು ಸುಲ್ತಾನ್ ಚಿತ್ರ ಹಾಗೂ ಆಕ್ಷೇಪಾರ್ಹ ಹಾಡನ್ನು ಹಾಕಲಾಗಿತ್ತು ಎಂದು ಆರೋಪಿಸಿ ಕೊಲ್ಹಾಪುರದಲ್ಲಿ ಜನರು ಬುಧವಾರ ಪ್ರತಿಭಟಿಸಿದರು —ಪಿಟಿಐ ಚಿತ್ರ

ಕಾನೂನನ್ನು ಕೈಗೆತ್ತಿಕೊಳ್ಳಬಾರದು. ಕೊಲ್ಹಾಪುರ ಜಿಲ್ಲಾಡಳಿತದೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಅಗತ್ಯ ಸೂಚನೆಗಳನ್ನು ನೀಡಲಾಗಿದೆ
ಏಕನಾಥ ಶಿಂದೆ
ಮಹಾರಾಷ್ಟ್ರ ಮುಖ್ಯಮಂತ್ರಿ

ಟಿಪ್ಪು ಸುಲ್ತಾನ್ ಚಿತ್ರ ಹಾಗೂ ಆಕ್ಷೇಪಾರ್ಹ ಹಾಡನ್ನು ತಮ್ಮ ಸಾಮಾಜಿಕ ಮಾಧ್ಯಮದ ಸ್ಟೇಟಸ್‌ನಲ್ಲಿ ಹಾಕಿದ್ದವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ
ದೀಪಕ್ ಕೇಸರಕರ್
ಕೊಲ್ಹಾಪುರ ಜಿಲ್ಲಾ ಉಸ್ತುವಾರಿ ಸಚಿವ

ಇದು ಛತ್ರಪತಿ ಶಿವಾಜಿ ಮಹಾರಾಜರ ಮಹಾರಾಷ್ಟ್ರ. ಇಲ್ಲಿ ಔರಂಗಜೇಬ್‌ನ ವೈಭವೀಕರಣವನ್ನು ಸಹಿಸಲು ಸಾಧ್ಯವಿಲ್ಲ
ಸಂಜಯ್ ರಾವುತ್
ಶಿವಸೇನಾ (ಯುಬಿಟಿ) ನಾಯಕ

‘ಪ್ರತಿಭಟನೆಯನ್ನು ಅಂತ್ಯಗೊಳಿಸಿ, ಪ್ರತಿಭಟನಕಾರರು ಸ್ಥಳದಿಂದ ಹೊರಡುತ್ತಿದ್ದಾಗ ಕೆಲ ದುಷ್ಕರ್ಮಿಗಳು ಕಲ್ಲು ತೂರಾಟ ಆರಂಭಿಸಿದರು. ಉದ್ರಿಕ್ತರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ಮಾಡಲಾಯಿತು’ ಎಂದು ಎಸ್ಪಿ ಮಹೇಂದ್ರ ಪಂಡಿತ ಹೇಳಿದ್ದಾರೆ.

‘ಅಭಿವೃದ್ಧಿಗೆ ಕೊಲ್ಹಾಪುರ ಹೆಸರುವಾಸಿಯಾಗಿದೆ. ಈ ಖ್ಯಾತಿಗೆ ಧಕ್ಕೆ ತರುವ ಕೆಲಸವನ್ನು ಯಾರೂ ಮಾಡಬಾರದು’ ಎಂದು ಜಿಲ್ಲಾಧಿಕಾರಿ ರಾಹುಲ್ ರೇಖಾವಾರ್ ಹೇಳಿದ್ದಾರೆ.

‘ಸಣ್ಣ ಘಟನೆಗಳಿಗೂ ಧಾರ್ಮಿಕ ಬಣ್ಣ’

ಔರಂಗಾಬಾದ್ (ಪಿಟಿಐ): ಮಹಾರಾಷ್ಟ್ರದಲ್ಲಿ ಕೆಲ ಸಣ್ಣ ಘಟನೆಗಳಿಗೂ ಧಾರ್ಮಿಕ ಬಣ್ಣ ಹಚ್ಚುವ ಪ್ರಯತ್ನಗಳು ನಡೆಯುತ್ತಿದ್ದು, ಆಡಳಿತಾರೂಢ ಪಕ್ಷಗಳು ಇದಕ್ಕೆ ಪ್ರೋತ್ಸಾಹ ನೀಡುತ್ತಿವೆ ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಬುಧವಾರ ಹೇಳಿದ್ದಾರೆ.

ಅಹ್ಮದ್‌ನಗರದಲ್ಲಿ ನಡೆದ ಮೆರವಣಿಗೆಯಲ್ಲಿ ಕೆಲ ಯುವಕರು ಮೊಘಲರ ದೊರೆ ಔರಂಗಜೇಬ್ ಭಾವಚಿತ್ರಗಳನ್ನು ಪ್ರದರ್ಶಿಸುತ್ತಿದ್ದರು. ಸಾಮಾಜಿಕ ಮಾಧ್ಯಮದ ಸ್ಟೇಟಸ್‌ನಲ್ಲಿ ಟಿಪ್ಪು ಸುಲ್ತಾನ್ ಚಿತ್ರ ಹಾಗೂ ಆಕ್ಷೇಪಾರ್ಹ ಹಾಡು ಹಾಕಿದ್ದ ಆರೋಪದ ಹಿನ್ನೆಲೆಯಲ್ಲಿ ಕೊಲ್ಹಾಪುರದಲ್ಲಿ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿರುವ ಕಾರಣ ಪವಾರ್ ಈ ಹೇಳಿಕೆ ನೀಡಿದ್ದಾರೆ.

ಮಹಾರಾಷ್ಟ್ರದಲ್ಲಿ ಮೊಘಲರ ದೊರೆ ಔರಂಗಜೇಬ್‌ನ ವೈಭವೀಕರಣ ಸಹಿಸುವುದಿಲ್ಲ ಎಂದು ಉಪಮುಖ್ಯಮಂತ್ರಿಯೂ ಆಗಿರುವ ಗೃಹ ಸಚಿವ ದೇವೇಂದ್ರ ಫಡಣವೀಸ್ ಬುಧವಾರ ಹೇಳಿದ್ದಾರೆ.

ಲಖನೌ ನ್ಯಾಯಾಲಯದ ಆವರಣದಲ್ಲಿ ಗುಂಡಿನ ದಾಳಿ

ಪಾತಕಿ ಮುಖ್ತಾರ್ ಸಹಾಯಕನ ಹತ್ಯೆ

ಲಖನೌ (ಪಿಟಿಐ): ಪಾತಕಿ ಮುಖ್ತಾರ್ ಅನ್ಸಾರಿ ಅವರ ಸಹಾಯಕ ಸಂಜೀವ್ ಮಹೇಶ್ವರಿ ಅಲಿಯಾಸ್ ಜೀವಾ ಎಂಬುವರನ್ನು ಲಖನೌ ನ್ಯಾಯಾಲಯದ ಆವರಣದಲ್ಲಿ ಬುಧವಾರ ಗುಂಡಿಕ್ಕಿ ಹತ್ಯೆ ಮಾಡಲಾಗಿದೆ.



ಸಂಜೀವ್ ಮಹೇಶ್ವರಿ

ಶಸ್ತ್ರ ಸಜ್ಜಿತನಾಗಿ ಬಂದಿದ್ದ ದಾಳಿಕೋರ, ವಕೀಲರ ಉಡುಗೆ ತೊಟ್ಟಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಹತ್ತಾರು ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿದ್ದ ಜೀವಾನನ್ನು ಕೊಲೆ ಪ್ರಕರಣವೊಂದರ ವಿಚಾರಣೆಗಾಗಿ ಹಾಜರುಪಡಿಸಲು ನ್ಯಾಯಾಲಯಕ್ಕೆ ಕರೆತರಲಾಗುತ್ತಿತ್ತು. ಈ ವೇಳೆ ವಕೀಲರ ವೇಷದಲ್ಲಿದ್ದ ದುಷ್ಕರ್ಮಿ ಗುಂಡಿನ ದಾಳಿ ನಡೆಸಿದ್ದಾನೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಈ ದಾಳಿಯಲ್ಲಿ ಜೀವಾ ಸ್ಥಳದಲ್ಲಿಯೇ ಮೃತಪಟ್ಟರೆ, ಇಬ್ಬರು ಪೊಲೀಸರಿಗೆ ಮತ್ತು ಮಗುವೊಂದಕ್ಕೆ ಗುಂಡು ತಾಗಿ ಗಾಯಗಳಾಗಿವೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಮಗುವಿನ ಸ್ಥಿತಿ ಗಂಭೀರವಾಗಿದೆ.

ಜೀವಾ, ಉತ್ತರ ಪ್ರದೇಶದ ಮುಜಾಫರ್‌ನಗರ ಜಿಲ್ಲೆಯ ನಿವಾಸಿ. ಬಿಜೆಪಿ ಶಾಸಕ ಕೃಷ್ಣಾನಂದ ರೈ ಮತ್ತು ಬಿಜೆಪಿಯ ಮಾಜಿ ಸಚಿವ ಬ್ರಹ್ಮದತ್ ದ್ವಿವೇದಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ 2006ರಲ್ಲಿ ಪೊಲೀಸರು ಆತನನ್ನು ಬಂಧಿಸಿದ್ದರು. ದ್ವಿವೇದಿ ಹತ್ಯೆ ಪ್ರಕರಣದಲ್ಲಿ ಜೀವಾಗೆ ಜೀವಾವಧಿ ಶಿಕ್ಷೆಯಾಗಿತ್ತು.

ಬುಧವಾರದ ದಾಳಿಯಲ್ಲಿ ಎಷ್ಟು ದುಷ್ಕರ್ಮಿಗಳು ಭಾಗಿಯಾಗಿದ್ದರು ಎಂಬುದು ತಕ್ಷಣಕ್ಕೆ ಸ್ಪಷ್ಟವಾಗಿಲ್ಲ. ವಕೀಲರು ಒಬ್ಬ ದುಷ್ಕರ್ಮಿಯನ್ನು ಹಿಡಿದು ಥಳಿಸಿ, ಪೊಲೀಸರಿಗೆ ಒಪ್ಪಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಘಟನೆಯ ಬಳಿಕ ಆಕ್ರೋಶಗೊಂಡ ವಕೀಲರು, ಪೊಲೀಸರ ವಿರುದ್ಧ ಘೋಷಣೆಗಳನ್ನು ಕೂಗಿದರು. ಈ ವೇಳೆ ಪೊಲೀಸರು ಮತ್ತು ವಕೀಲರ ನಡುವೆ ವಾಗ್ವಾದ ನಡೆಯಿತು.

ಜಂಗಲ್ ರಾಜ್- ಎಸ್‌ಪಿ ಆರೋಪ: ದಾಳಿ ಕುರಿತು ಪ್ರತಿಕ್ರಿಯಿಸಿರುವ ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್, ‘ರಾಜ್ಯದಲ್ಲಿ ಜಂಗಲ್ ರಾಜ್ ಚಾಲ್ತಿಯಲ್ಲಿದೆ. ಬಿಗಿ ಭದ್ರತೆ ಇರಬೇಕಾದ ಸ್ಥಳದಲ್ಲಿಯೇ ಈ ಘಟನೆ ನಡೆದಿದೆ. ಇದು ಉತ್ತರ ಪ್ರದೇಶದಲ್ಲಿ ಕಾನೂನು ಸುವ್ಯವಸ್ಥೆ ಪೂರ್ಣವಾಗಿ ಹದಗೆಟ್ಟಿರುವುದನ್ನು ತೋರಿಸುತ್ತದೆ’ ಎಂದು ಅವರು ದೂರಿದರು.

ಕೃಷಿ ಕಾಯ್ದೆಗಳು ವಾಪಸ್?

ಒಂದನೇ ಪುಟದಿಂದ...

ಕೇಂದ್ರ ಸರ್ಕಾರ ಕಾರ್ಪೊರೇಟ್ ಕೃಷಿಯನ್ನು ಪರಿಚಯಿಸಿದ್ದರಿಂದ ಶೇ 85ಕ್ಕೂ ಹೆಚ್ಚಿನ ಪ್ರಮಾಣದಲ್ಲಿರುವ ಸಣ್ಣ ಮತ್ತು ಅತಿಸಣ್ಣ ರೈತರಿಗೆ ತೊಂದರೆಯಾಗಿದೆ ಎಂದೂ ರೈತ ಮುಖಂಡರು ಆತಂಕ ವ್ಯಕ್ತಪಡಿಸಿದರು.

‘ನಮ್ಮ ಅಹವಾಲು ಆಲಿಸಿದ ಸಿದ್ದರಾಮಯ್ಯನವರು ‘ಮೂರು ಕಾಯ್ದೆಗಳನ್ನು ವಾಪಸ್ ಪಡೆಯುವ ಕುರಿತು ಪರಿಶೀಲನೆ ಮಾಡುತ್ತೇನೆ. ಕಾಯ್ದೆ ವಾಪಸ್ ಹಾಗೂ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಿರುವ ನೀತಿ, ನಿಯಮಾವಳಿ ಕುರಿತು ವಿವರವಾಗಿ ಚರ್ಚಿಸಲು ಶೀಘ್ರ ಪ್ರತ್ಯೇಕ ಸಭೆ ನಡೆಸುವುದಾಗಿ ಭರವಸೆ ನೀಡಿದರು’ ಎಂದು ರೈತ ನಾಯಕರು ತಿಳಿಸಿದರು. ರೈತ ಮುಖಂಡರಾದ ಬಡಗಲಪುರ ನಾಗೇಂದ್ರ, ಚಾಮರಸ ಮಾಲಿ ಪಾಟೀಲ, ಜಿ.ಸಿ.ಬಯ್ಯಾರೆಡ್ಡಿ, ಎಚ್.ಆರ್.ಬಸವರಾಜಪ್ಪ ಸೇರಿದಂತೆ ಹಲವಾರು ಮುಖಂಡರು ನಿಯೋಗದಲ್ಲಿದ್ದರು.

ನಿಪ್ಪಾಣಿಯಲ್ಲೂ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ನಿಪ್ಪಾಣಿ: ಮಹಾರಾಷ್ಟ್ರದ ಕೊಲ್ಹಾಪುರ ನಗರದಲ್ಲಿ ದೊಂಬಿಗೆ ಕಾರಣವಾದ ಸ್ಟೇಟಸ್ ಇಟ್ಟುಕೊಂಡ ಕಾರಣಕ್ಕೆ, ನಿಪ್ಪಾಣಿ ನಗರದ ಯುವಕನ ಮೇಲೆ ಪೊಲೀಸರು ಬುಧವಾರ ರಾತ್ರಿ ದೂರು ದಾಖಲಿಸಿದ್ದಾರೆ.

ನಿಪ್ಪಾಣಿ ನಗರ ಹಾಗೂ ಗಡಿ ಭಾಗದ ಹಳ್ಳಿಗಳಲ್ಲಿ ಬಿಗಿ ಭದ್ರತೆ ಏರ್ಪಡಿಸಲಾಗಿದೆ.

ವಿವಾದಾತ್ಮಕ ಸ್ಟೇಟಸ್ ಬಳಸದಂತೆ ಮುಂಜಾಗ್ರತಾ ಕ್ರಮವಾಗಿ ಆದೇಶ ಹೊರಡಿಸಲಾಗಿದೆ. ಆದರೂ ಯುವಕ ಬಳಸಿದ್ದರಿಂದ ತಕ್ಷಣಕ್ಕೆ ಕ್ರಮ ವಹಿಸಲಾಗಿದೆ. ಇನ್ನುಮುಂದೆಯೂ ಯಾರಾದರೂ ಈ ತರಹದ ವಿವಾದಾತ್ಮಕ ಸ್ಟೇಟಸ್ ಬಳಸಿದರೆ ಕ್ರಮ ಕೈಗೊಳ್ಳಲಾಗುವುದು ಎಂದೂ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ ಪಾಟೀಲ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ದಲಿತ ವ್ಯಕ್ತಿಯ ಹೆಬ್ಬೆರಳು ಕತ್ತರಿಸಿದ ನಾಲ್ವರ ಸೆರೆ

ಪಟ್ನಾ (ಪಿಟಿಐ): ಗುಜರಾತ್‌ನ ಪಟ್ನಾ ಜಿಲ್ಲೆಯಲ್ಲಿ ಸಂಭವಿಸಿದ ಘರ್ಷಣೆ ವೇಳೆ ದಲಿತ ವ್ಯಕ್ತಿಯ ಹೆಬ್ಬೆರಳನ್ನು ಕತ್ತರಿಸಿದ ನಾಲ್ವರು ಆರೋಪಿಗಳನ್ನು ಬುಧವಾರ ಪೊಲೀಸರು ಬಂಧಿಸಿದ್ದಾರೆ.

ಕಿರಿತ್ ವಂಕರ್ ಹಾಗೂ ಆತನ ಸಹೋದರ ಧೀರಜ್ ವಂಕರ್ ಎಂಬುವರ ಮೇಲೆ ಮೇಲ್ವರ್ಗಕ್ಕೆ ಸೇರಿದ ಸಿದ್ಧರಾಜಸಿಂಹ ರಜಪೂತ ಸೇರಿದಂತೆ ಇತರ ಆರು ಮಂದಿ ಕತ್ತಿಗಳ ಸಮೇತ ದಾಳಿ ನಡೆಸಿದ್ದಾರೆ. ಈ ವೇಳೆ ಕಿರಿತ್ ಅವರ ಹೆಬ್ಬೆರಳನ್ನು ಕತ್ತರಿಸಿದ್ದಾರೆ ಎಂದು ಸ್ಥಳೀಯ ಕಕೋಶಿ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳು ಕ್ರಿಕೆಟ್ ಆಡುತ್ತಿದ್ದರು. ಆ ವೇಳೆ ಸಂತ್ರಸ್ತ ಕಿರಿತ್ ಅವರ ಎಂಟು ವರ್ಷದ ಪುತ್ರ ಚೆಂಡನ್ನು ತೆಗೆದುಕೊಂಡಿದ್ದರಿಂದ ಆಟಕ್ಕೆ ಅಡ್ಡಿಯಾಗಿತ್ತು. ಆಗ ಸಂಭವಿಸಿದ ಘರ್ಷಣೆ ಹಿನ್ನೆಲೆಯಲ್ಲಿ ಕಿರಿತ್ ಕುಟುಂಬದವರು ದೂರು ದಾಖಲಿಸಿದ್ದರು. ಇದಕ್ಕೆ ಪ್ರತಿಯಾಗಿ ಆರೋಪಿಗಳು ಪ್ರತಿದೂರು ದಾಖಲಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಾರತದ ವಿದ್ಯಾರ್ಥಿಗಳಿಗೆ ಹೆಚ್ಚಿನ ವೀಸಾ: ಅಮೆರಿಕ

ನವದೆಹಲಿ (ಪಿಟಿಐ): ‘ಕಳೆದ ವರ್ಷ ಅಮೆರಿಕ ವಿತರಿಸಿದ ಪ್ರತಿ 5 ವಿದ್ಯಾರ್ಥಿ ವೀಸಾಗಳಲ್ಲಿ ಒಂದು ವೀಸಾವನ್ನು ಭಾರತಕ್ಕೆ ನೀಡಲಾಗಿದೆ. ಇದು ಭಾರತದ ಜನಸಂಖ್ಯೆಗೆ ಅನುಗುಣವಾಗಿ ನೀಡಬೇಕಾಗಿದ್ದ ಸಂಖ್ಯೆಗಿಂತಲೂ ಬಹಳ ಹೆಚ್ಚು’ ಎಂದು ಅಮೆರಿಕ ರಾಯಭಾರಿ ಎರಿಕ್ ಗಾರ್ಸೆಟ್ಟಿ ಬುಧವಾರ ಹೇಳಿದ್ದಾರೆ.

ಅಮೆರಿಕದ ರಾಯಭಾರ ಕಚೇರಿಯು ಬುಧವಾರ ನವದೆಹಲಿಯಲ್ಲಿ ಆಯೋಜಿಸಿದ್ದ ಏಳನೇ ವಾರ್ಷಿಕ ವಿದ್ಯಾರ್ಥಿ ವೀಸಾ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ವಿಶ್ವದ ಇತರ ದೇಶಗಳಿಗೆ ಹೋಲಿಸಿದರೆ ಭಾರತದಿಂದ ಅಮೆರಿಕಕ್ಕೆ ವ್ಯಾಸಂಗಕ್ಕೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು. ಜುಲೈ ಮತ್ತು ಆಗಸ್ಟ್‌ನಲ್ಲಿ ಹತ್ತು ಸಾವಿರ ವಿದ್ಯಾರ್ಥಿ ವೀಸಾಗಳನ್ನು ಬಿಡುಗಡೆ ಮಾಡುತ್ತೇವೆ’ ಎಂದು ಅವರು ತಿಳಿಸಿದರು.

ರಿಜಿಸ್ಟ್ರಿಯಿಂದ ವರದಿ ಕೇಳಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಯಾವುದೇ ಗುರುತಿನ ಚೀಟಿ ಹಾಗೂ ಅರ್ಜಿ ಸಲ್ಲಿಸದೆಯೇ ₹2 ಸಾವಿರ ಮುಖಬೆಲೆಯ ನೋಟುಗಳ ವಿನಿಮಯಕ್ಕೆ ಅವಕಾಶ ನೀಡಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ತುರ್ತು ವಿಚಾರಣಾ ಪಟ್ಟಿಗೆ ಸೇರಿಸುವ ಕುರಿತು ವರದಿ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ತನ್ನ ರಿಜಿಸ್ಟ್ರಿಗೆ ಬುಧವಾರ ಸೂಚಿಸಿದೆ.

ಅರ್ಜಿದಾರರಲ್ಲೊಬ್ಬರಾದ ವಕೀಲ ಅಶ್ವಿನಿ ಉಪಾಧ್ಯಾಯ ಅವರು ಅರ್ಜಿಯ ತುರ್ತು ವಿಚಾರಣೆ ನಡೆಸುವಂತೆ ಕೋರಿದರು. ಆಗ, ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಮತ್ತು ರಾಜೇಶ್ ಬಿಂದಲ್ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿತು.

ಇದಕ್ಕೂ ಮುನ್ನ ವಾದ ಮಂಡಿಸಿದ್ದ ಉಪಾಧ್ಯಾಯ, ‘ಇದು ಮಹತ್ವದ ವಿಷಯ. ನಕ್ಸಲರು, ಉಗ್ರರು ಹಾಗೂ ಪ್ರತ್ಯೇಕತಾವಾದಿಗಳು ಈ ನೋಟುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದಾರೆ. ಈಗಾಗಲೇ ₹80 ಸಾವಿರ ಕೋಟಿ ಮೌಲ್ಯದ ನೋಟುಗಳ ವಿನಿಮಯವಾಗಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಹೀಗಾಗಿ ಅರ್ಜಿಯ ತುರ್ತು ವಿಚಾರಣೆ ನಡೆಸಬೇಕು’ ಎಂದು ಮನವಿ ಮಾಡಿದರು.

ವಿದ್ಯಾರ್ಥಿನಿ ಮೇಲೆ ಅತ್ಯಾಚಾರ, ಕೊಲೆ

ಮುಂಬೈ (ಪಿಟಿಐ): ದಕ್ಷಿಣ ಮುಂಬೈನ ವಸತಿನಿಲಯವೊಂದರಲ್ಲಿ ಕಾಲೇಜು ವಿದ್ಯಾರ್ಥಿನಿಯೊಬ್ಬರ ಮೇಲೆ ಅತ್ಯಾಚಾರ ಎಸಗಿ, ಕೊಲೆ ಮಾಡಲಾಗಿದ್ದು, ಶಂಕಿತ ಆರೋಪಿ ಭದ್ರತಾ ಸಿಬ್ಬಂದಿಯ ಶವವು ವಸತಿನಿಲಯದ ಸಮೀಪದ ರೈಲ್ವೆ ಹಳಿಗಳ ಮೇಲೆ ಪತ್ತೆಯಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ವಿದ್ಯಾರ್ಥಿನಿ ನಾಪತ್ತೆಯಾದ ಕುರಿತು ಮಂಗಳವಾರ ಸಂಜೆ 5 ಗಂಟೆಯ ವೇಳೆಗೆ ಪೊಲೀಸರಿಗೆ ಮಾಹಿತಿ ನೀಡಲಾಗಿದೆ. ವಿದ್ಯಾರ್ಥಿನಿ ಇದ್ದ ವಸತಿನಿಲಯದ 4ನೇ ಮಹಡಿಯ ಕೊಠಡಿಗೆ ಹೊರಗಿನಿಂದ ಬೀಗಹಾಕಲಾಗಿದ್ದು, ಅನುಮಾನ ಗೊಂಡು ಬೀಗ ಮುರಿದು ಒಳಗೆ ಹೋದಾಗ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿರುವ ಸಂಗತಿಯು ಬಹಿರಂಗಗೊಂಡಿದೆ.

ಅಪಘಾತ ಸ್ಥಳದ ಚಿತ್ರಗಳನ್ನು ಮೊಬೈಲ್‌ಗಳಲ್ಲಿ ಸೆರೆಹಿಡಿದ ಸಾರ್ವಜನಿಕರು

ದುರಂತದ 5 ದಿನಗಳ ಬಳಿಕವೂ ಸ್ಥಳಕ್ಕೆ ಜನರ ಭೇಟಿ

ಬಹನಾಗಾ ಬಜಾರ್ (ಪಿಟಿಐ): ಒಡಿಶಾದ ತ್ರಿವಳಿ ರೈಲು ದುರಂತ ಸಂಭವಿಸಿ ಐದು ದಿನಗಳ ಬಳಿಕವೂ ಅಪಘಾತ ಸ್ಥಳಕ್ಕೆ ಭೇಟಿ ಕೊಡುತ್ತಿರುವ ಜನರ ಸಂಖ್ಯೆ ಕಡಿಮೆಯಾಗಿಲ್ಲ.

ಜನರು ಅಪಘಾತ ಸ್ಥಳದ ಚಿತ್ರಗಳನ್ನು ತಮ್ಮ ಮೊಬೈಲ್‌ಗಳಲ್ಲಿ ಸೆರೆಹಿಡಿಯುತ್ತಿದ್ದಾರೆ. ರೈಲು ಸಿಬ್ಬಂದಿಯು ದುರಂತ ನಡೆದ ಸ್ಥಳವನ್ನು ಹಸಿರು ಬಟ್ಟೆಗಳಿಂದ ಮುಚ್ಚಿದ್ದರೂ ಅಲ್ಲಲ್ಲಿ ಹಳಿಗಳ ಬದಿಗಳಲ್ಲಿ ಚದುರಿ ಬಿದ್ದಿರುವ ಬೋಗಿಗಳ ಅವಶೇಷ ಕಾಣಬಹುದಾಗಿದೆ.

‘ಅಪಘಾತ ಸ್ಥಳ ನೋಡಲು ನಾನು ಭುವನೇಶ್ವರದಿಂದ ಬಂದಿರುವೆ. ಅಪಘಾತದ ಚಿತ್ರಣ ನೋಡಿ ಭಾವನೆಗಳನ್ನು ವ್ಯಕ್ತಪಡಿಸಲು ನನ್ನಿಂದ ಪದಗಳೇ ಹೊರಡುತ್ತಿಲ್ಲ’ ಎಂದು ಪತ್ನಿ ರೂಪಾ ಜತೆಗೆ ಬಂದಿದ್ದ ಅಶೋಕ್ ಬೆಹೆರಾ ಹೇಳಿದರು.

ಈ ಮಧ್ಯೆ ಅಪಘಾತದಲ್ಲಿ ನಾಪತ್ತೆಯಾದವರ ಸಂಬಂಧಿಕರು ಬಾಲೇಶ್ವರ, ಭುವನೇಶ್ವರ ಮತ್ತು ಕಟಕ್‌ನಲ್ಲಿರುವ ಆಸ್ಪತ್ರೆಗಳು ಮತ್ತು ಶವಾಗಾರಗಳಿಗೆ ಎಡತಾಕುವ ಮುನ್ನ ಅಪಘಾತ ಸ್ಥಳಕ್ಕೂ ಭೇಟಿ ನೀಡುತ್ತಿದ್ದಾರೆ.

ತ್ರಿವಳಿ ರೈಲು ಅಪಘಾತದ ಬಳಿಕ, ಶಾಲಿಮಾರ್–ಚೆನ್ನೈ ಕೋರೊಮಂಡಲ್ ಎಕ್ಸ್‌ಪ್ರೆಸ್ ರೈಲು ಬುಧವಾರ ಪಶ್ಚಿಮ ಬಂಗಾಳದ ಶಾಲಿಮಾರ್ ನಿಲ್ದಾಣದಿಂದ ಚೆನ್ನೈಗೆ ನಿಗದಿತ ಸಮಯಕ್ಕಿಂತ ಐದು ನಿಮಿಷ ತಡವಾಗಿ ಸಂಚಾರ ಆರಂಭಿಸಿತು.

ಕಾಂಗ್ರೆಸ್ ಒತ್ತಾಯ: ಒಡಿಶಾದ ಬಾಲೇಶ್ವರದಲ್ಲಿನ ದುರಂತಕ್ಕೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವೇ ಹೊಣೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಬೇಕು ಎಂದು ಕಾಂಗ್ರೆಸ್ ವಕ್ತಾರ ಅಜಯ್ ಕುಮಾರ್ ಒತ್ತಾಯಿಸಿದ್ದಾರೆ.

ಒಡಿಶಾ: ಗೂಡ್ಸ್ ರೈಲು ಹರಿದು ಆರು ಸಾವು

ಭುವನೇಶ್ವರ (ಪಿಟಿಐ): ಒಡಿಶಾದ ಜಾಜ್‌ಪುರ ರಸ್ತೆಯ ರೈಲು ನಿಲ್ದಾಣದಲ್ಲಿ ಸರಕು ಸಾಗಣೆ (ಗೂಡ್ಸ್) ರೈಲು ಹರಿದು ಕನಿಷ್ಠ ಆರು ಕಾರ್ಮಿಕರು ಮೃತಪಟ್ಟು, ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತೀವ್ರ ಮಳೆಯ ಕಾರಣದಿಂದ ಕಾರ್ಮಿಕರು ಸರಕು ಸಾಗಣೆ ರೈಲಿನ ಅಡಿಯಲ್ಲಿ ಆಶ್ರಯ ಪಡೆದಿದ್ದರು. ಈ ವೇಳೆ ರೈಲು ಮುಂದಕ್ಕೆ ಸಾಗಿದ ಪರಿಣಾಮ ದುರ್ಘಟನೆ ಸಂಭವಿಸಿದೆ.

‘ಏಕಾಏಕಿ ಗುಡುಗು ಸಿಡಿಲು ಆರಂಭವಾಗಿತ್ತು. ರೈಲು ಹಳಿಗಳ ದುರಸ್ತಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಅಲ್ಲಿಯೇ ನಿಂತಿದ್ದ ಸರಕು ಸಾಗಣೆ ರೈಲಿನ ಅಡಿಯಲ್ಲಿ ಆಶ್ರಯ ಪಡೆದಿದ್ದರು. ಎಂಜಿನ್ ಅಳವಡಿಸಿಲ್ಲದ ರೈಲು ಮುಂದಕ್ಕೆ ಸಾಗಿದೆ. ಅವಘಡದಲ್ಲಿ ಆರು ಮಂದಿ ಮೃತಪಟ್ಟು, ಇಬ್ಬರು ಗಾಯಗೊಂಡಿದ್ದಾರೆ’ ಎಂದು ರೈಲ್ವೆ ವಕ್ತಾರರು ತಿಳಿಸಿದ್ದಾರೆ.

ಡಬ್ಲ್ಯುಟಿಸಿ ಫೈನಲ್: ಆಸ್ಟ್ರೇಲಿಯಾ ತಂಡಕ್ಕೆ ಮೊದಲ ದಿನದ ಗೌರವ; ಸ್ಮಿತ್ ಸುಂದರ ಬ್ಯಾಟಿಂಗ್

ಟ್ರಾವಿಸ್ ಹೆಡ್ ಶತಕ ಸೊಬಗು

ಲಂಡನ್ (ಪಿಟಿಐ): ಚೆಂಡು ಎತ್ತರಕ್ಕೆ ಪುಟಿಯುತ್ತಿದ್ದ ಪಿಚ್‌ನಲ್ಲಿ ಆರಂಭಿಕ ಯಶಸ್ಸು ಸಾಧಿಸಿದ ಭಾರತದ ಬೌಲರ್‌ಗಳ ಓಟಕ್ಕೆ ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್ ಮತ್ತು ಸ್ಟೀವನ್ ಸ್ಮಿತ್ ತಡೆಯೊಡ್ಡಿದರು.

ದ ಓವಲ್ ಕ್ರೀಡಾಂಗಣದಲ್ಲಿ ಬುಧವಾರ ಆರಂಭವಾದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯದ ಮೊದಲ ದಿನದ ಗೌರವ ಆಸ್ಟ್ರೇಲಿಯಾ ಪಾಲಾಯಿತು.

ಶತಕ ಬಾರಿಸಿದ ಹೆಡ್ (ಬ್ಯಾಟಿಂಗ್ 146, 156ಎ, 4X22, 6X1) ಮತ್ತು ತಾಳ್ಮೆಯ ಬ್ಯಾಟಿಂಗ್ ಮಾಡಿದ ಸ್ಮಿತ್ (ಬ್ಯಾಟಿಂಗ್ 95, 227ಎ, 4X14) ಅವರ ದ್ವಿಶತಕದ (251 ರನ್) ಜೊತೆಯಾಟದ ಬಲದಿಂದ ಆಸ್ಟ್ರೇಲಿಯಾ ತಂಡವು 85ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 327 ರನ್ ಗಳಿಸಿತು.

ಟಾಸ್ ಗೆದ್ದ ಭಾರತದ ನಾಯಕ ರೋಹಿತ್ ಶರ್ಮಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಸುಳಿಗಾಳಿ ಹಾಗೂ ಗಟ್ಟಿ ಪಿಚ್ ಮೇಲೆ ಎದೆ ಮಟ್ಟಕ್ಕೆ ಪುಟಿಯುತ್ತಿದ್ದ ಎಸೆತಗಳನ್ನು ಎದುರಿಸಲು ಆಸ್ಟ್ರೇಲಿಯಾದ ಆರಂಭಿಕ ಬ್ಯಾಟರ್‌ಗಳು ಪರದಾಡಿದರು.

ನಾಲ್ವರು ವೇಗಿಗಳು ಹಾಗೂ ಒಬ್ಬ ಸ್ಪಿನ್ನರ್ ಜೊತೆಗೆ ಕಣಕ್ಕಿಳಿದ ಭಾರತಕ್ಕೆ ಇನಿಂಗ್ಸ್‌ನ 4ನೇ ಓವರ್‌ನಲ್ಲಿಯೇ ಯಶಸ್ಸು ಲಭಿಸಿತು. ಮೊಹಮ್ಮದ್ ಸಿರಾಜ್ ಎಸೆತವನ್ನು ಆಡುವ ಪ್ರಯತ್ನದಲ್ಲಿ ಉಸ್ಮಾನ್ ಖ್ವಾಜಾ, ವಿಕೆಟ್‌ಕೀಪರ್ ಶ್ರೀಕರ್ ಭರತ್‌ಗೆ ಕ್ಯಾಚಿತ್ತರು. ಡೇವಿಡ್ ವಾರ್ನರ್ ಜೊತೆಗೂಡಿದ ಮಾರ್ನಸ್ ಲಾಬುಷೇನ್ ಇನಿಂಗ್ಸ್‌ಗೆ ಬಲ ತುಂಬುವ ಪ್ರಯತ್ನ ಮಾಡಿದರು. ಇಬ್ಬರೂ ಎರಡನೇ ವಿಕೆಟ್ ಜೊತೆಯಾಟದಲ್ಲಿ 69 ರನ್ ಸೇರಿಸುವಲ್ಲಿ ಯಶಸ್ವಿಯಾದರು.

ಆದರೆ ಶಾರ್ಟ್ ಪಿಚ್ ಎಸೆತಗಳು ಮತ್ತು ಸ್ವಿಂಗ್ ಎಸೆತಗಳನ್ನು ಎಚ್ಚರಿಕೆಯಿಂದ ಎದುರಿಸುವುದು ಸುಲಭವಾಗಿರಲಿಲ್ಲ. ಊಟದ ವಿರಾಮಕ್ಕೂ ಕೆಲವೇ ನಿಮಿಷಗಳ ಮುನ್ನ ವಾರ್ನರ್ (43 ರನ್) ಲಯ ತಪ್ಪಿದರು. ಶಾರ್ದೂಲ್ ಠಾಕೂರ್ ಎಸೆತವನ್ನು ಹೊಡೆಯುವ ಯತ್ನದಲ್ಲಿ ವಿಕೆಟ್‌ಕೀಪರ್ ಭರತ್‌ಗೆ ಕ್ಯಾಚ್ ಕೊಟ್ಟರು.

ಇದಾಗಿ ಮೂರು ಓವರ್‌ಗಳ ನಂತರ ಲಾಬುಷೇನ್ ಅವರ ವಿಕೆಟ್ ಎಗರಿಸಿದ ಮೊಹಮ್ಮದ್ ಶಮಿ ಸಂಭ್ರಮಿಸಿದರು. ಇದರ ನಂತರ ಭಾರತದ ಆಟಗಾರರಿಗೆ ಸಡಗರಪಡುವ ಅವಕಾಶವನ್ನು ಸ್ಮಿತ್ ಮತ್ತು ಹೆಡ್ ನೀಡಲಿಲ್ಲ.

ಹೆಡ್ ಅವರು ಸ್ಮಿತ್‌ಗಿಂತ ವೇಗವಾಗಿ ರನ್ ಗಳಿಸಿದರು. 60 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ನಂತರ ಆಟದ ವೇಗವನ್ನು ಮತ್ತಷ್ಟು ಹೆಚ್ಚಿಸಿಕೊಂಡರು. ತಾವೆದುರಿಸಿದ 106ನೇ ಎಸೆತದಲ್ಲಿ ಶತಕದ ಗಡಿ ಮುಟ್ಟಿದರು. 29 ವರ್ಷದ ಹೆಡ್ ಅವರಿಗೆ ಟೆಸ್ಟ್‌ನಲ್ಲಿ ಇದು ಆರನೇ ಶತಕ. ಇದಕ್ಕೂ ಕೇವಲ ಎಸೆತಗಳ ಮುನ್ನ ಸ್ಮಿತ್ ಅರ್ಧಶತಕ ಪೂರೈಸಿದ್ದರು. ಅವರು ಅದಕ್ಕಾಗಿ 144 ಎಸೆತಗಳನ್ನು ಎದುರಿಸಿದರು. ಆದರೆ ಇವರಿಬ್ಬರ ಶಿಸ್ತುಬದ್ಧ ಜೊತೆಯಾಟದ ಮುಂದೆ ಬೌಲರ್‌ಗಳ ಆಟ ನಡೆಯಲಿಲ್ಲ.



ಅಜೇಯ ಶತಕ ಗಳಿಸಿದ ಆಸ್ಟ್ರೇಲಿಯಾ ತಂಡದ ಟ್ರಾವಿಸ್ ಹೆಡ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಮುಖ್ಯಾಂಶಗಳು
- ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ
- ಟೆಸ್ಟ್ ಕ್ರಿಕೆಟ್‌ನಲ್ಲಿ ಆರನೇ ಶತಕ ಗಳಿಸಿದ ಹೆಡ್

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 3ಕ್ಕೆ327 (85 ಓವರ್‌ಗಳಲ್ಲಿ)
ವಾರ್ನರ್ ಸಿ ಭರತ್ ಬಿ ಠಾಕೂರ್ 43 (60ಎ, 4X8)
ಉಸ್ಮಾನ್ ಸಿ ಭರತ್ ಬಿ ಸಿರಾಜ್ 0 (10ಎ)
ಮಾರ್ನಸ್ ಬಿ ಶಮಿ 26 (62ಎ, 4X3)
ಸ್ಮಿತ್ ಬ್ಯಾಟಿಂಗ್ 95 (227ಎ, 4X14)
ಹೆಡ್ ಬ್ಯಾಟಿಂಗ್ 146 (156ಎ, 4X22, 6X1)
ಇತರೆ: 17 (ಬೈ 1, ಲೆಗ್‌ಬೈ 5, ವೈಡ್ 6, ನೋಬಾಲ್ 5)
ವಿಕೆಟ್ ಪತನ: 1–2 (ಉಸ್ಮಾನ್ ಖ್ವಾಜಾ; 3.4), 2–71 (ಡೇವಿಡ್ ವಾರ್ನರ್; 21.4), 3–76 (ಮಾರ್ನಸ್ ಲಾಬುಷೇನ್; 24.1)
ಬೌಲಿಂಗ್: ಮೊಹಮ್ಮದ್ ಶಮಿ 20–3–77–1, ಮೊಹಮ್ಮದ್ ಸಿರಾಜ್ 19–4–67–1, ಉಮೇಶ್ ಯಾದವ್ 14–4–54–0, ಶಾರ್ದೂಲ್ ಠಾಕೂರ್ 18–2–75–1, ರವೀಂದ್ರ ಜಡೇಜ 14–0–48–0

ಒಡಿಶಾ ರೈಲು ದುರಂತದಲ್ಲಿ ಮಡಿದವರಿಗೆ ಆಟಗಾರರಿಂದ ಶ್ರದ್ಧಾಂಜಲಿ

ಒಡಿಶಾದಲ್ಲಿ ಈಚೆಗೆ ಸಂಭವಿಸಿದ ರೈಲು ಅಪಘಾತದಲ್ಲಿ ಮಡಿದ ಪ್ರಯಾಣಿಕರಿಗೆ ಭಾರತ ಮತ್ತು ಆಸ್ಟ್ರೇಲಿಯಾ ತಂಡದ ಆಟಗಾರರು ಗೌರವ ಸಲ್ಲಿಸಿದರು.

ಫೈನಲ್ ಪಂದ್ಯ ಆರಂಭಕ್ಕೂ ಮುನ್ನ ಉಭಯ ತಂಡಗಳ ಆಟಗಾರರು ಒಂದು ನಿಮಿಷ ಮೌನಾಚರಣೆ ಮಾಡಿದರು. ತಮ್ಮ ತೋಳುಗಳಿಗೆ ಕಪ್ಪುಪಟ್ಟಿ ಕಟ್ಟಿಕೊಂಡು ಆಡುವ ಮೂಲಕ ಶ್ರದ್ಧಾಂಜಲಿ ಅರ್ಪಿಸಿದರು.

ಈ ದುರ್ಘಟನೆಯಲ್ಲಿ 288 ಪ್ರಯಾಣಿಕರು ಸಾವನ್ನಪ್ಪಿದ್ದರು.

ಅಶ್ವಿನ್ ಏಕೆ ಇಲ್ಲ?

ಅನುಭವಿ ಆಫ್‌ಸ್ಪಿನ್– ಆಲ್‌ರೌಂಡರ್ ರವಿಚಂದ್ರನ್ ಅಶ್ವಿನ್ ಅವರನ್ನು ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಅಂತಿಮ ಹನ್ನೊಂದರ ಬಳಗದಿಂದ ಕೈಬಿಟ್ಟಿದ್ದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ಗ್ರಾಸವಾಗಿದೆ.

ವಿದೇಶಿ ಪಿಚ್‌ಗಳಲ್ಲಿ ಯಶಸ್ವಿ ಸ್ಪಿನ್ನರ್ ಎನಿಸಿಕೊಂಡಿರುವ ಅಶ್ವಿನ್ ಅವರನ್ನು ಕೈಬಿಟ್ಟಿರುವುದು ಲೋಪ ಎಂದು ಕೆಲವು ಮಾಜಿ ಕ್ರಿಕೆಟಿಗರೂ ಅಭಿಪ್ರಾಯಪಟ್ಟಿದ್ದಾರೆ. ಈ ಹಿಂದೆ 7 ಅಥವಾ ಎಂಟನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿ ಅರ್ಧಶತಕ ಹಾಗೂ ಶತಕ ಸಿಡಿಸಿರುವ ಶ್ರೇಯವೂ ಅಶ್ವಿನ್ ಅವರಿಗೆ ಇದೆ. ಅದರಲ್ಲೂ ಆಸ್ಟ್ರೇಲಿಯಾ ಎದುರಿನ ಟೆಸ್ಟ್‌ಗಳಲ್ಲಿ ಅವರು ಯಶಸ್ವಿ ಬೌಲರ್ ಆಗಿದ್ದಾರೆ.

ತಂಡದಲ್ಲಿ ಏಕೈಕ್ ಸ್ಪಿನ್ನರ್ ಆಗಿ ರವೀಂದ್ರ ಜಡೇಜ ಅವಕಾಶ ಪಡೆದಿದ್ದಾರೆ. ಮಧ್ಯಮವೇಗಿಯೂ ಆಗಿರುವ ಆಲ್‌ರೌಂಡರ್ ಶಾರ್ದೂಲ್ ಠಾಕೂರ್ ಅವರನ್ನು ಆಯ್ಕೆ ಮಾಡಲಾಗಿದೆ.

ಚೇತನ್, ನಿಕಿನ್ ಅಬ್ಬರದ ಶತಕ; ಕರ್ನಾಟಕಕ್ಕೆ ಜಯ

ವಿಂಡೋಕ್, ನಮೀಬಿಯಾ: ಯುವಪ್ರತಿಭೆಗಳಾದ ನಿಕಿನ್ ಜೋಸ್ ಮತ್ತು ಎಲ್.ಆರ್. ಚೇತನ್ ಅವರ ಅಬ್ಬರದ ಶತಕಗಳಿಂದ ಕರ್ನಾಟಕ ತಂಡವು ನಮೀಬಿಯಾ ವಿರುದ್ಧದ ಏಕದಿನ ಪಂದ್ಯದಲ್ಲಿ ಭರ್ಜರಿ ಜಯ ಸಾಧಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಕರ್ನಾಟಕ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಮೀಬಿಯಾ ತಂಡವು 45.1 ಓವರ್‌ಗಳಲ್ಲಿ 226 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಕರ್ನಾಟಕ ತಂಡದ ನಾಯಕ ಆರ್. ಸಮರ್ಥ್ ಮೂರು ರನ್ ಗಳಿಸಿ ಔಟಾದರು.

ಆದರೆ, ಚೇತನ್ (ಔಟಾಗದೆ 120, 105ಎ, 4X16, 6X2) ಹಾಗೂ ನಿಕಿನ್ (ಅಜೇಯ 101, 91ಎ, 4X6, 6X4) ಅವರ ಅಬ್ಬರದ ಶತಕದಿಂದಾಗಿ ತಂಡವು 33.4 ಓವರ್‌ಗಳಲ್ಲಿ ಗುರಿ ಸಾಧಿಸಿತು. 9 ವಿಕೆಟ್‌ಗಳಿಂದ ಗೆದ್ದಿತು. ಐದು ಪಂದ್ಯಗಳ ಸರಣಿಯಲ್ಲಿ 2–1ರ ಮುನ್ನಡೆ ಸಾಧಿಸಿತು. ಚೇತನ್ ಮತ್ತು ನಿಕಿನ್ ಮುರಿಯದ ಎರಡನೇ ವಿಕೆಟ್ ಜೊತೆಯಾಟದಲ್ಲಿ 203 ರನ್ ಸೇರಿಸಿದರು.


ನಿಕಿನ್ ಜೋಸ್

ಸಂಕ್ಷಿಪ್ತ ಸ್ಕೋರು: ನಮೀಬಿಯಾ: 45.1 ಓವರ್‌ಗಳಲ್ಲಿ 226 (ಝೇನ್ ಗ್ರೀನ್ 65, ಗೆರಾರ್ಡ್ ರೆನ್ಸ್‌ಬರ್ಗ್ 24, ಬರ್ನಾಡ್ ಶೋಲ್ಜ್ 59, ವೈಶಾಖ ವಿಜಯಕುಮಾರ್ 49ಕ್ಕೆ2, ಶುಭಾಂಗ್ ಹೆಗಡೆ 44ಕ್ಕೆ3, ರಿಷಿ ಬೋಪಣ್ಣ 32ಕ್ಕೆ1, ನಿಕಿನ್ ಜೋಸ್ 19ಕ್ಕೆ1) ಕರ್ನಾಟಕ: 33.4 ಓವರ್‌ಗಳಲ್ಲಿ 1 ವಿಕೆಟ್‌ಗೆ 227 (ಎಲ್.ಆರ್. ಚೇತನ್ ಅಜೇಯ 120, ನಿಕಿನ್ ಜೋಸ್ ಅಜೇಯ 101) ಫಲಿತಾಂಶ: ಕರ್ನಾಟಕ ತಂಡಕ್ಕೆ 9 ವಿಕೆಟ್‌ಗಳ ಜಯ. ಸರಣಿಯಲ್ಲಿ 2–1ರಿಂದ ಮುನ್ನಡೆ

ಸಾತ್ವಿಕ್–ಚಿರಾಗ್‌ಗೆ ನಿರಾಸೆ

ಸಿಂಗಪುರ: ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಸಿಂಗಪುರ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಸೋತಿತು.

ಬುಧವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಜಪಾನ್‌ನ ಅಕಿರ ಕೊಗಾ– ತೈಚಿ ಸಯಿಟೊ ಜೋಡಿ 21–18, 14–21, 21–18 ರಲ್ಲಿ ಭಾರತದ ಜೋಡಿಗೆ ಆಘಾತ ನೀಡಿತು.

ಐದನೇ ಶ್ರೇಯಾಂಕದ ಹೊಂದಿದ್ದ ಸಾತ್ವಿಕ್-ಚಿರಾಗ್ ಅವರು ಮೊದಲ ಗೇಮ್ ಸೋತರೂ, ಎರಡನೇ ಗೇಮ್ 21–14 ರಲ್ಲಿ ಗೆದ್ದು ಸಮಬಲ ಸಾಧಿಸಿದರು. ಮೂರನೇ ಗೇಮ್‌ನಲ್ಲಿ ಜಪಾನ್ ಜೋಡಿಯ ಕೈಮೇಲಾಯಿತು.

ಮಹಿಳೆಯರ ಡಬಲ್ಸ್‌ನಲ್ಲಿ ಟ್ರೀಸಾ ಜೋಳಿ– ಗಾಯತ್ರಿ ಗೋಪಿಚಂದ್ ಜೋಡಿಯೂ ಹೊರಬಿದ್ದಿತು. ಹಾಂಗ್‌ಕಾಂಗ್‌ನ ಯುವಾಂಗ್ ಎನ್‌ಗ ತಿಂಗ್– ಯುವಾಂಗ್ ಪ್ಯುಯಿ ಲಾಮ್ 21–14, 18–21, 21–19 ರಿಂದ ಭಾರತದ ಜೋಡಿಯನ್ನು ಮಣಿಸಿತು.

ಮೊದಲ ಗೇಮ್ ಸೋತರೂ ಮರುಹೋರಾಟ ನಡೆಸಿದ ಟ್ರೀಸಾ–ಗಾಯತ್ರಿ ಎರಡನೇ ಗೇಮ್ ಗೆದ್ದು ಪಂದ್ಯವನ್ನು ಸಮಸ್ಥಿತಿಗೆ ತಂದರು. ಮಾತ್ರವಲ್ಲ, ನಿರ್ಣಾಯಕ ಗೇಮ್‌ನಲ್ಲಿ 15–13 ರಲ್ಲಿ ಮುನ್ನಡೆ ಸಾಧಿಸಿದರು. ಈ ವೇಳೆ ಆಕರ್ಷಕ ಹೊಡೆತಗಳ ಮೂಲಕ ಪಂದ್ಯದ ಮೇಲೆ ಹಿಡಿತ ಸಾಧಿಸಿದ ಹಾಂಗ್‌ಕಾಂಗ್‌ನ ಜೋಡಿ ಗೆಲುವಿನ ದಡ ಸೇರಿತು.

ಏಷ್ಯಾ ಯುವ ಅಥ್ಲೆಟಿಕ್ಸ್: ರಾಜ್ಯದ ಶಿವಾಜಿಗೆ ಬೆಳ್ಳಿ

ಲಕ್ಷಿತಾ, ರಿಲೇ ತಂಡಕ್ಕೆ ಚಿನ್ನ

ಯೆಚಿಯಾನ್ (ದಕ್ಷಿಣ ಕೊರಿಯಾ), (ಪಿಟಿಐ): ಭಾರತ ಲಕ್ಷಿತಾ ವಿನೋದ್ ಸಂಡೀಲಾ, ಏಷ್ಯಾ 20 ವರ್ಷದೊಳಗಿನವರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ 1,500 ಮೀ. ಓಟದಲ್ಲಿ ವೈಯಕ್ತಿಕ ಶ್ರೇಷ್ಠ ಸಾಧನೆಯೊಡನೆ ಚಿನ್ನದ ಪದಕ ಗೆದ್ದುಕೊಂಡರು. ಕೊನೆಯ ದಿನವಾದ ಬುಧವಾರ ಮಹಿಳೆಯರ 4x400 ಮೀ. ರಿಲೇ ತಂಡವೂ ಚಿನ್ನದ ಸಾಧನೆ ಮಾಡಿತು.

ಲಕ್ಷಿತಾ 4ನಿ.26.48 ಸೆಕೆಂಡುಗಳಲ್ಲಿ ಗುರಿತಲುಪಿ ತಮ್ಮ ಹಿಂದಿನ ಉತ್ತಮ ಸಾಧನೆಯನ್ನು (4:26.48) ಎರಡು ಸೆಕೆಂಡುಗಳಿಂದ ಉತ್ತಮ ಪಡಿಸಿಕೊಂಡರು. ಭಾರತಕ್ಕೆ ಈ ಕೂಟದಲ್ಲಿ ಇದು ಐದನೇ ಚಿನ್ನವಾಗಿದೆ.

ದಿನದ ಕೊನೆಯಲ್ಲಿ, ರೆಜೊವೊನಾ ಮಲ್ಲಿಕ್ ಹೀನಾ ಅವರ ಉತ್ತಮ ಓಟದ ಬಲದಿಂದ ಮಹಿಳೆಯರ ರಿಲೇ (4x400 ಮೀ.) ತಂಡ 3ನಿ.40.49 ಸೆ.ಗಳ ಅವಧಿಯೊಡನೆ ಅಗ್ರಸ್ಥಾನ ಪಡೆಯಿತು. ಕಜಕಸ್ತಾನ ತಂಡ ಎರಡನೇ (3:46.19) ಮತ್ತು ಕೊರಿಯಾ ತಂಡ ಮೂರನೇ ಸ್ಥಾನ (3:47.46) ಪಡೆದವು. ಹೀನಾ ಅವರು ಬೆಂಗಳೂರಿನಲ್ಲಿ ತರಬೇತಿ ಪಡೆಯುತ್ತಿದ್ದಾರೆ.



ಶಿವಾಜಿ ಪರಶುರ ಮಾದಪ್ಪಗೌಡ್ರ

ಪುರುಷರ ವಿಭಾಗದ 4x400 ಮೀ. ರಿಲೇ ಓಟದಲ್ಲಿ ಭಾರತದ ಓಟಗಾರರು 3ನಿ.08.78 ಸೆ.ಗಳನ್ನು ತೆಗೆದುಕೊಂಡು ಬೆಳ್ಳಿಯ ಪದಕಕ್ಕೆ ಕೊರಳೊಡ್ಡಿದರು.

ಭಾರತ ಈ ಕೂಟದಲ್ಲಿ ಆರು ಚಿನ್ನ, ಏಳು ಬೆಳ್ಳಿ, ಆರು ಕಂಚಿನ ಪದಕಗಳನ್ನು ಗೆದ್ದು ಪದಕಪಟ್ಟಿಯಲ್ಲಿ ಮೂರನೇ ಸ್ಥಾನ ಪಡೆಯಿತು. ಜಪಾನ್ (14 ಚಿನ್ನ, 4 ಬೆಳ್ಳಿ, 5 ಕಂಚು) ಮೊದಲ ಸ್ಥಾನ ಪಡೆದರೆ, ಚೀನಾ (11 ಚಿನ್ನ, 5 ಬೆಳ್ಳಿ, 3 ಕಂಚು) ಎರಡನೇ ಸ್ಥಾನ ಪಡೆಯಿತು.

ಬೆಂಗಳೂರಿನ ವಿದ್ಯಾನಗರ ಕ್ರೀಡಾಶಾಲೆಯ ಶಿವಾಜಿ ಪರಶುರ ಮಾದಪ್ಪಗೌಡ್ರ ಅವರು ಪುರುಷರ 5,000 ಮೀ. ಓಟದಲ್ಲಿ ಬೆಳ್ಳಿಯ ಪದಕ ಗೆದ್ದುಕೊಂಡರು. ಅವರು ಈ ದೂರವನ್ನು ಓಟವನ್ನು 14 ನಿ.49.05 ಸೆ.ಗಳಲ್ಲಿ ಪೂರೈಸಿದರು.

ಹಳಿಯಾಳ ತಾಲ್ಲೂಕು ಬೆಳವಟಗಿ ಶಿವಾಜಿ ಅವರು ಕಳೆದ ವರ್ಷ ಏಷ್ಯ ಜೂನಿಯರ್ ಕ್ರಾಸ್ ಕಂಟ್ರಿ ಓಟದಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದರು.

ಪುರುಷರ 1,500 ಮೀ. ಓಟವನ್ನು ಮೆಹದಿ ಹಸನ್ 3ನಿ.56.01 ಸೆ. ಅವಧಿಯೊಳಗೆ ಪೂರೈಸಿ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ನಾಲ್ಕು ದಿನಗಳ ಈ ಕೂಟದಲ್ಲಿ 19 ಮಹಿಳಾ ಅಥ್ಲೀಟುಗಳು ಒಳಗೊಂಡಂತೆ 45 ಸದಸ್ಯರ ಭಾರತ ತಂಡ ಭಾಗವಹಿಸಿತ್ತು.

ರಾಷ್ಟ್ರೀಯ ರ‍್ಯಾಂಕಿಂಗ್ ಟಿಟಿ: ತೇಶುಭ್‌ಗೆ ಬೆಳ್ಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಯುವ ಪ್ರತಿಭೆ ತೇಶುಭ್ ದಿನೇಶ್ ಅವರು ತೆಲಂಗಾಣದ ಮೊಯಿನಾಬಾದ್‌ನಲ್ಲಿ ನಡೆದ ರಾಷ್ಟ್ರೀಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಬಾಲಕರ 15 ವರ್ಷದೊಳಗಿನವರ ವಿಭಾಗದಲ್ಲಿ ಬೆಳ್ಳಿ ಗೆದ್ದರು.


ತೇಶುಭ್

ಫೈನಲ್‌ನಲ್ಲಿ ತೇಶುಭ್ ಅವರು 9–11, 7–11, 9–11 ರಲ್ಲಿ ಪಿಎಸ್‌ಪಿಬಿಯ ಸಾತ್ವಿಕ್ ಆರ್ಯ ಎದುರು ಸೋತರು.

ಕರ್ನಾಟಕದ ಆಟಗಾರ ಕ್ವಾರ್ಟರ್ ಫೈನಲ್‌ನಲ್ಲಿ 11-5, 11-8, 6-11 , 12-14 , 11-7 ರಲ್ಲಿ ಕೋಲ್ಕತ್ತದ ಸೌರವ್ ಬರ್ಮನ್ ಅವರನ್ನು ಮಣಿಸಿದ್ದರೆ, ಸೆಮಿಫೈನಲ್‌ನಲ್ಲಿ 11-7, 7-11 , 15-13 , 11-7 ರಲ್ಲಿ ರೂಪಮ್ ಸರ್ದಾರ್ ವಿರುದ್ಧ ಗೆದ್ದಿದ್ದರು.

ಸೆಮಿಫೈನಲ್‌ಗೆ ಅಲ್ಕರಾಜ್, ಇಗಾ

ಫ್ರೆಂಚ್ ಓಪನ್ ಟೆನಿಸ್: ಬ್ರೆಜಿಲ್‌ನ ಹದಾದ್ ಮಯಾ ಐತಿಹಾಸಿಕ ಸಾಧನೆ


ಪ್ಯಾರಿಸ್ (ರಾಯಿಟರ್ಸ್/ ಎಎಫ್‌ಪಿ): ವಿಶ್ವದ ಅಗ್ರ ರ‍್ಯಾಂಕ್‌ನ ಆಟಗಾರ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್, ಗ್ರೀಸ್‌ನ ಸ್ಟೆಫಾನೊಸ್ ಸಿಟ್ಸಿಪಾಸ್ ಅವರನ್ನು ನೇರ ಸೆಟ್‌ಗಳಿಂದ ಮಣಿಸಿ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದರು.

ಫಿಲಿಪ್ ಶಾಟ್ರಿಯೆರ್ ಕೋರ್ಟ್‌ನಲ್ಲಿ ಮಂಗಳವಾರ ರಾತ್ರಿ ನಡೆದ ಕ್ವಾರ್ಟರ್ ಫೈನಲ್ ಪಂದ್ಯವನ್ನು ಅಲ್ಕರಾಜ್ 6–2, 6–1, 7–6 ರಿಂದ ಗೆದ್ದುಕೊಂಡರು. 2 ಗಂಟೆ 12 ನಿಮಿಷಗಳಲ್ಲಿ ಅವರು ಗೆಲುವನ್ನು ಪೂರ್ಣಗೊಳಿಸಿದರು.

ಶುಕ್ರವಾರ ನಡೆಯಲಿರುವ ನಾಲ್ಕರಘಟ್ಟದ ಪಂದ್ಯದಲ್ಲಿ 20 ವರ್ಷದ ಅಲ್ಕರಾಜ್ ಅವರು ಮೂರನೇ ಶ್ರೇಯಾಂಕದ ಆಟಗಾರ ಸರ್ಬಿಯದ ನೊವಾಕ್ ಜೊಕೊವಿಚ್ ವಿರುದ್ಧ ಪೈಪೋಟಿ ನಡೆಸಲಿದ್ದು, ಟೆನಿಸ್ ಪ್ರೇಮಿಗಳ ಕುತೂಹಲ ಗರಿಗೆದರಿದೆ.

‘ಸೆಮಿಫೈನಲ್‌ನಲ್ಲಿ ನಾವಿಬ್ಬರು ಎದುರಾಗಬೇಕು ಎಂದು ಪ್ರತಿಯೊಬ್ಬರೂ ಬಯಸಿದ್ದರು. ನಮ್ಮಿಬ್ಬರಿಗೆ ಮತ್ತು ವೀಕ್ಷಕರಿಗೆ ನಿಜವಾಗಿಯೂ ಇದು ಉತ್ತಮ ಪಂದ್ಯವಾಗಲಿದೆ. ಜೊಕೊವಿಚ್ ಅವರು ವಿಶ್ವದ ಶ್ರೇಷ್ಠ ಆಟಗಾರರಲ್ಲೊಬ್ಬರು’ ಎಂದು ಅಲ್ಕರಾಜ್ ಪ್ರತಿಕ್ರಿಯಿಸಿದ್ದಾರೆ.

ಕ್ವಾರ್ಟರ್ ಫೈನಲ್‌ನಲ್ಲಿ ಅಲ್ಕರಾಜ್ ಅವರ ತೋಳ್ಬಲ ಮತ್ತು ಹೊಡೆತಗಳಲ್ಲಿನ ನಿಖರತೆಗೆ 24 ವರ್ಷದ ಸಿಟ್ಸಿಪಾಸ್ ಸಾಟಿಯಾಗಲಿಲ್ಲ. ಮೇಲಿಂದ ಮೇಲೆ ಡ್ರಾಪ್ ಶಾಟ್‌ಗಳ ಮೂಲಕ ಎದುರಾಳಿಯನ್ನು ಇಕ್ಕಟ್ಟಿನಲ್ಲಿ ಸಿಲುಕಿಸಿದರು. ಮೊದಲ ಎರಡು ಸೆಟ್‌ಗಳಲ್ಲಿ ಎದುರಾಳಿಗೆ ಮೂರು ಗೇಮ್‌ಗಳನ್ನು ಮಾತ್ರ ಬಿಟ್ಟುಕೊಟ್ಟರು.



ಗೆಲುವಿನ ಸಂಭ್ರಮದಲ್ಲಿ ಬ್ರೆಜಿಲ್‌ನ ಹದಾದ್ ಮಯಾ (ಎಡ) ಅಲ್ಕರಾಜ್ ಆಟದ ವೈಖರಿ –ಎಎಫ್‌ಪಿ ಚಿತ್ರಗಳು

ಮೂರನೇ ಸೆಟ್‌ನಲ್ಲಿ 5–1 ರಲ್ಲಿ ಮುನ್ನಡೆ ಪಡೆದ ಸ್ಪೇನ್ ಆಟಗಾರ, ಪಂದ್ಯಕ್ಕೆ ಬೇಗ ತೆರೆ ಎಳೆಯುವರು ಎಂದು ನಿರೀಕ್ಷಿಸಲಾಗಿತ್ತು. ಆದರೆ ಸತತ ನಾಲ್ಕು ಗೇಮ್ ಗೆದ್ದುಕೊಂಡ ಸಿಟ್ಸಿಪಾಸ್ 5–5 ಮತ್ತು 6–6 ರಲ್ಲಿ ಸಮಬಲ ಸಾಧಿಸಿದರು. ಟೈಬ್ರೇಕರ್‌ನಲ್ಲಿ ಸೆಟ್ ಗೆದ್ದ ಅಲ್ಕರಾಜ್ ಅಂತಿಮ ನಾಲ್ಕರಲ್ಲಿ ಸ್ಥಾನ ಪಡೆದರು.

ಬುಧವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ 6-4, 3-6, 6-3, 6-4 ರಿಂದ ಅರ್ಜೆಂಟೀನಾದ ಥಾಮಸ್ ಮಾರ್ಟಿನ್ ಅವರನ್ನು ಪರಾಭವಗೊಳಿಸಿದರು.

ನಾಲ್ಕರಘಟ್ಟಕ್ಕೆ ಇಗಾ: ಮಹಿಳೆಯರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಪೋಲೆಂಡ್‌ನ ಇಗಾ ಶ್ವಾಂಟೆಕ್ 6–4, 6–2 ರಲ್ಲಿ ಆರನೇ ಶ್ರೇಯಾಂಕದ ಆಟಗಾರ್ತಿ ಅಮೆರಿಕದ ಕೊಕೊ ಗಾಫ್ ಅವರನ್ನು ಮಣಿಸಿದರು.

ಜಬೇರ್‌ಗೆ ಆಘಾತ ನೀಡಿದ ಹದಾದ್: ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಬ್ರೆಜಿಲ್‌ನ ಬ್ಯಾತ್ರಿಜ್ ಹದಾದ್ ಮಯಾ ಅವರು 3-6, 7-6, 6-1 ರಲ್ಲಿ ಏಳನೇ ಶ್ರೇಯಾಂಕದ ಆಟಗಾರ್ತಿ ಟ್ಯುನೀಷಿಯಾದ ಆನ್ಸ್ ಜಬೇರ್‌ಗೆ ಆಘಾತ ನೀಡಿ ಸೆಮಿಗೆ ಲಗ್ಗೆಯಿಟ್ಟರು.

ಬ್ರೆಜಿಲ್ ಆಟಗಾರ್ತಿಯೊಬ್ಬರು ಗ್ರ್ಯಾನ್‌ಸ್ಲಾಮ್ ಟೂರ್ನಿಯ ನಾಲ್ಕರಘಟ್ಟ ಪ್ರವೇಶಿಸಿದ್ದು, 55 ವರ್ಷಗಳಲ್ಲಿ ಇದೇ ಮೊದಲು. ಮರಿಯಾ ಬುಯೆನೊ 1968 ರಲ್ಲಿ ಅಮೆರಿಕ ಓಪನ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದ್ದರು. ಅದಕ್ಕೂ ಮುನ್ನ ಫ್ರೆಂಚ್ ಓಪನ್‌ನಲ್ಲಿ ಅವರು 1966 ರಲ್ಲಿ ನಾಲ್ಕರಘಟ್ಟದಲ್ಲಿ ಸ್ಥಾನ ಪಡೆದಿದ್ದರು.

ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಆಫ್ರಿಕಾದ ಮೊದಲ ಮಹಿಳೆ ಎನಿಸಿಕೊಳ್ಳಬೇಕೆಂಬ ಜಬೇರ್ ಅವರ ಕನಸು ಈ ಬಾರಿಯೂ ಕೈಗೂಡಲಿಲ್ಲ.

ಅಫ್ಘಾನಿಸ್ತಾನ ವಿರುದ್ಧ ಲಂಕಾಕ್ಕೆ ಸರಣಿ ಜಯ

ಹಂಬನ್ತೋಟ (ಶ್ರೀಲಂಕಾ), (ಎಎಫ್‌ಪಿ):ದುಷ್ಮಂತ ಚಮೀರ ಅವರ ಬೌಲಿಂಗ್ ದಾಳಿ ಮತ್ತು ಆರಂಭ ಆಟಗಾರರ ಬಿರುಸಿನ ಅರ್ಧಶತಕಗಳ ನೆರವಿನಿಂದ ಶ್ರೀಲಂಕಾ ತಂಡ ಮೂರನೇ ಏಕದಿನ ಪಂದ್ಯದಲ್ಲಿ ಬುಧವಾರ ಅಫ್ಘಾನಿಸ್ತಾನ ತಂಡವನ್ನು 9 ವಿಕೆಟ್‌ಗಳಿಂದ ಸೋಲಿಸಿತು. ಸರಣಿ 2–1 ರಿಂದ ಆತಿಥೇಯರ ಪಾಲಾಯಿತು.

ಸಂಕ್ಷಿಪ್ತ ಸ್ಕೋರು: ಅಫ್ಘಾನಿಸ್ತಾನ: 22.2 ಓವರುಗಳಲ್ಲಿ 116 (ಮೊಹಮ್ಮದ್ ನಬಿ 23, ಇಬ್ರಾಹಿಂ ಜರ್ದಾನ್ 22, ದುಷ್ಮಂತ ಚಮೀರ 63ಕ್ಕೆ4, ವಣೀಂದು ಹಸರಂಗ 7ಕ್ಕೆ3, ಲಹಿರು ಕುಮಾರ 29ಕ್ಕೆ2); ಶ್ರೀಲಂಕಾ: 16 ಓವರುಗಳಲ್ಲಿ 1 ವಿಕೆಟ್‌ಗೆ 120 (ದಿಮುತ್ ಕರುಣಾರತ್ನೆ ಔಟಾಗದೇ 56, ಪಥುನ್ ನಿಸ್ಸಾಂಕ 51).

ನೆಟ್‌ಬಾಲ್ ತಂಡ: ಗಗನಾ ಉಪನಾಯಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಗಗನಾ ಕೆ.ಎಸ್. ಹಾಗೂ ಬಿ.ಆರ್. ಸುರಭಿ ಅವರು ಏಷ್ಯನ್ ಯೂತ್ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಆಡಲಿರುವ ಭಾರತ ಮಹಿಳಾ ತಂಡಕ್ಕೆ ಆಯ್ಕೆಯಾಗಿದ್ದಾರೆ. ಗಗನಾ ತಂಡದ ಉಪನಾಯಕಿಯೂ ಆಗಿದ್ದಾರೆ.

ಕರ್ನಾಟಕ ಅಮೆಚೂರ್ ನೆಟ್‌ಬಾಲ್ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಸಿ. ಗಿರೀಶ ಅವರು ಈ ತಂಡಕ್ಕೆ ತರಬೇತುದಾರರಾಗಿ ನೇಮಕವಾಗಿದ್ದಾರೆ. ಗಗನಾ ಅವರು ಬೆಂಗಳೂರಿನ ಶೇಷಾದ್ರಿಪುರಂ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಬಿಬಿಎ ವಿದ್ಯಾರ್ಥಿನಿಯಾಗಿದ್ದಾರೆ. ಸುರಭಿ ಅವರು ಬಿಎಂಎಸ್ ಮಹಿಳಾ ಕಾಲೇಜಿನ ಬಿ.ಕಾಂ ವಿದ್ಯಾರ್ಥಿನಿಯಾಗಿದ್ದಾರೆ.

ದಕ್ಷಿಣ ಕೊರಿಯಾದ ಜಿಯಾಂಜುನಲ್ಲಿ ಇದೇ 10ರಿಂದ 17ರವರೆಗೆ ಟೂರ್ನಿ ನಡೆಯಲಿದೆ ಎಂದು ರಾಜ್ಯ ನೆಟ್‌ಬಾಲ್ ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ತಂಡ: ಪಲಕ್ (ನಾಯಕಿ), ಗಗನಾ ಕೆ.ಎಸ್. (ಉಪನಾಯಕಿ), ಅಮೃತಾ ಪಿ ಪ್ರಸಾದ್, ಬಿ.ಆರ್. ಸುರಭಿ, ಸುನೈನಾ, ಸೋನಮ್ ಶರ್ಮಾ, ಗೀತಾಂಜಲಿ ಬಗ್ಗಾ, ಖುಷಿ, ಮನೀಷಾ, ಮಹಿ, ದಿವ್ಯಾ ಸಿಂಗ್. ಕೋಚ್: ಸಿ. ಗಿರೀಶ, ಸಹಾಯಕ ಕೋಚ್: ಸೋನಮ್, ಮ್ಯಾನೇಜರ್: ಯಶಸ್ವಿ ಕೌಶಿಕ್, ಕಾಂಟಿಂಜೆಂಟ್ ಇನ್‌ಚಾರ್ಜ್: ನಿಶಾಂತ್ ಸಿಂಗ್.


ಗಗನಾ, ಗಿರೀಶ ಮತ್ತು ಸುರಭಿ


ಮಾಜಿ ವಿಕೆಟ್ ಕೀಪರ್ ಫಾರೂಕ್ ಇಂಜಿನಿಯರ್ ಕಳಕಳಿ

ಟೆಸ್ಟ್ ಕ್ರಿಕೆಟ್‌ಗೆ ಅಪಾಯವಾಗದಿರಲಿ

ಲಂಡನ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಶ್ರೀಮಂತಿಕೆಯನ್ನು ನೋಡಿ ಇಡೀ ಜಗತ್ತೇ ಅಸೂಯೆ ಪಡುತ್ತಿದೆ. ಆದರೆ ಇದರಿಂದಾಗಿ ಟೆಸ್ಟ್ ಕ್ರಿಕೆಟ್‌ಗೆ ಅಪಾಯವಾಗಬಾರದು ಎಂದು ಭಾರತ ತಂಡದ ಮಾಜಿ ವಿಕೆಟ್‌ಕೀಪರ್ ಫಾರೂಕ್ ಇಂಜಿನಿಯರ್ ಹೇಳಿದರು.

ಆರ್ಥಿಕವಾಗಿ ಬಲಾಢ್ಯವಾಗಿರುವ ಭಾರತ, ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ತಂಡಗಳು ಟೆಸ್ಟ್ ಕ್ರಿಕೆಟ್‌ಗೆ ಬದ್ಧವಾಗಿವೆ. ಆದರೆ ಸಣ್ಣ ರಾಷ್ಟ್ರಗಳ ಆಟಗಾರರು ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ನಡೆಯುವ ಫ್ರ್ಯಾಂಚೈಸಿ ಕ್ರಿಕೆಟ್‌ನತ್ತ ಆಕರ್ಷಿತರಾಗುತ್ತಿದ್ದಾರೆ. ಇದು ಆ ದೇಶಗಳಲ್ಲಿ ಟೆಸ್ಟ್ ಕ್ರಿಕೆಟ್ ಕುಂಠಿತವಾಗಲು ಕಾರಣವಾಗುತ್ತಿದೆ ಎಂಬ ಆತಂಕ ಅವರದ್ದು.

‘ಟೆಸ್ಟ್ ಕ್ರಿಕೆಟ್ ಅಸ್ತಿತ್ವಕ್ಕೆ ಯಾವುದೇ ರೀತಿಯಿಂದಲೂ ಅಪಾಯವಾಗಬಾರದು. ಟಿ20 ಲೀಗ್‌ಗಳ ಮೂಲಕ ಕ್ರಿಕೆಟ್ ಎಲ್ಲೆಡೆಯೂ ಬೆಳೆಯುತ್ತಿರುವುದು ಉತ್ತಮ ಸಂಗತಿ. ಆದರೆ ಟಿ20 ಮಾದರಿಗಾಗಿ ಟೆಸ್ಟ್ ಕ್ರಿಕೆಟ್ ನೇಪಥ್ಯಕ್ಕೆ ಸರಿಯುವಂತಾಗಬಾರದು’ ಎಂದು ಇಂಜಿನಿಯರ್ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಅಭಿಪ್ರಾಯಪಟ್ಟಿದ್ದಾರೆ.


ಫಾರೂಕ್ ಇಂಜಿನಿಯರ್

‘ಈ ನಿಟ್ಟಿನಲ್ಲಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪ್ರಮುಖವಾಗಿದೆ. ಸೀಮಿತ ಓವರ್‌ಗಳ ಪಂದ್ಯಗಳಂತೆಯೇ ಟೆಸ್ಟ್ ಕ್ರಿಕೆಟ್ ಕೂಡ ರೋಚಕವಾಗಿರುತ್ತದೆ ಎಂಬುದು ಡಬ್ಲ್ಯುಟಿಸಿ ಮೂಲಕ ಗೊತ್ತಾಗುತ್ತಿದೆ’ ಎಂದು 85 ವರ್ಷದ ಇಂಜಿನಿಯರ್ ಹೇಳಿದ್ದಾರೆ.

ಸದ್ಯ ಮ್ಯಾಂಚೆಸ್ಟರ್ ನಿವಾಸಿಯಗಿರುವ ಅವರು ಲಂಡನ್‌ನಲ್ಲಿ ನಡೆಯುತ್ತಿರುವ ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಡಬ್ಲ್ಯುಟಿಸಿ ಫೈನಲ್ ವೀಕ್ಷಿಸಲು ಬಂದಿದ್ದಾರೆ.

‘ಟೆಸ್ಟ್ ಮತ್ತು ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಭಾರತವು ಮುಂಚೂಣಿಯಲ್ಲಿದೆ. ಐಪಿಎಲ್ ಮೂಲಕ ಆರ್ಥಿಕವಾಗಿ ಬಹಳಷ್ಟು ಬಲಾಢ್ಯವಾಗಿರುವುದು ಹೆಮ್ಮೆಯ ವಿಷಯ‘ ಎಂದರು.

‘ಕ್ರಿಕೆಟ್ ನನಗೆ ರಕ್ತಗತವಾಗಿದೆ. ಎಲ್ಲ ಸಮಯದಲ್ಲಿಯೂ ಕ್ರಿಕೆಟ್ ನೋಡುವುದೇ ನನ್ನ ಕೆಲಸ. ಕ್ರಿಕೆಟ್ ಭಾರತೀಯ ಆಟ, ಆದರೆ ಬ್ರಿಟಿಷರು ಕಂಡುಹಿಡಿದಿದ್ದು ಆಕಸ್ಮಿಕವಷ್ಟೇ. ನಾವು ಆಡುವಾಗ ಐದು ದಿನಗಳ ಪಂದ್ಯಕ್ಕೆ ₹ 50 ಸಂಭಾವನೆ ಪಡೆಯುತ್ತಿದ್ದೆವು. ನನಗಿನ್ನೂ ನೆನಪಿದೆ. ಅದೊಂದು ಪಂದ್ಯದಲ್ಲಿ ನಾಲ್ಕನೇ ದಿನದಾಟದಲ್ಲಿ ಅರ್ಧ ಗಂಟೆ ಬಾಕಿಯುಳಿದಿತ್ತು. ಆ ಸಂದರ್ಭದಲ್ಲಿ ನಾನು ಸುನಿಲ್ ಗಾವಸ್ಕರ್ ಬ್ಯಾಟಿಂಗ್ ಮಾಡುತ್ತಿದ್ದೆವು. ನಮಗೆ ಕೇವಲ 15–20 ರನ್‌ಗಳು ಮಾತ್ರ ಗೆಲುವಿಗೆ ಬೇಕಾಗಿದ್ದವು. ಆದರೆ ಇವತ್ತೇ ಪಂದ್ಯ ಮುಗಿಸಬೇಡಿ. ಐದನೇ ದಿನದ ಸಂಭಾವನೆ ಸಿಗುವುದಿಲ್ಲ. ನಾಳೆಯವರೆಗೂ ಆಟ ಮುಂದುವರಿಸಲು ನೋಡಿ ಎಂದು ಡ್ರೆಸ್ಸಿಂಗ್ ಕೋಣೆಯಿಂದ ಸಂದೇಶಗಳು ಬಂದಿದ್ದವು. ಆದರೆ ನಾವು ದುಡ್ಡಿಗಾಗಿ ಅಲ್ಲ, ಘನತೆಗಾಗಿ ಆಡುತ್ತಿದ್ದೆವು’ ಎಂದು ಇಂಜಿನಿಯರ್ ನೆನಪಿಸಿಕೊಂಡರು.

ಸಂಕ್ಷಿಪ್ತ ಸುದ್ದಿ

ಆದಿತ್ಯ ಮಣಿ ಆಲ್‌ರೌಂಡ್ ಆಟ

ಬೆಂಗಳೂರು: ಶತಕ ಗಳಿಸಿದ ಆಲ್‌ರೌಂಡರ್ ಆದಿತ್ಯ ಮಣಿ ಆಟದ ಬಲದಿಂದ ಹೆರಾನ್ಸ್ ಕ್ರಿಕೆಟ್ ಕ್ಲಬ್ ತಂಡವು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಎಂ.ಎ.ಟಿ. ಆಚಾರ್ಯ ಶೀಲ್ಡ್ ಡಿವಿಷನ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ದ ಬೆಂಗಳೂರು ಕ್ರಿಕೆಟರ್ಸ್ ವಿರುದ್ಧ ಇನಿಂಗ್ಸ್ ಮತ್ತು 8 ರನ್‌ಗಳಿಂದ ಗೆದ್ದಿತು.


ಆದಿತ್ಯ ಮಣಿ

ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ದ ಬೆಂಗಳೂರು ಕ್ರಿಕೆಟರ್ಸ್ 180 ರನ್ ಗಳಿಸಿತು. ಅದಕ್ಕುತ್ತರವಾಗಿ ಹೆರಾನ್ಸ್ 275 ರನ್ ಗಳಿಸಿತು. ಆದಿತ್ಯ (ಅಜೇಯ 110; 108ಎ, 4X14, 6X4) ಗಮನ ಸೆಳೆದರು. ಎರಡನೇ ಇನಿಂಗ್ಸ್‌ನಲ್ಲಿ ಬೆಂಗಳೂರು ತಂಡವು 19.4 ಓವರ್‌ಗಳಲ್ಲಿ 87 ರನ್ ಗಳಿಸಿ ಆಲೌಟ್ ಆಯಿತು. ಆದಿತ್ಯ ಎರಡೂ ಇನಿಂಗ್ಸ್ ಸೇರಿ ಐದು ವಿಕೆಟ್ ಗಳಿಸಿದರು. ಹೆರಾನ್ಸ್‌ನ ಎಸ್.ಎಸ್. ಸುಮಂತ್ ಒಟ್ಟು ಹತ್ತು ವಿಕೆಟ್ ಗಳಿಸಿದರು.

ನಿವೃತ್ತಿ ತ್ಯಜಿಸಿದ ಮೊಯೀನ್

ಲಂಡನ್ (ಎಎಫ್‌ಪಿ): ಆಲ್‌ರೌಂಡರ್ ಮೊಯೀನ್ ಅಲಿ ಅವರು ಟೆಸ್ಟ್ ನಿವೃತ್ತಿಯಿಂದ ಹೊರಬಂದಿದ್ದು, ಆ್ಯಷಸ್ ಸರಣಿಯ ಮೊದಲ ಎರಡು ಪಂದ್ಯಗಳಿಗೆ ಇಂಗ್ಲೆಂಡ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಇಂಗ್ಲೆಂಡ್ ತಂಡದ ಮೊದಲ ಆಯ್ಕೆಯ ಸ್ಪಿನ್ನರ್ ಆಗಿದ್ದ ಜಾಕ್ ಲೀಚ್ ಬೆನ್ನು ನೋವಿನಿಂದ ಬಳಲುತ್ತಿರುವ ಕಾರಣ ಅವರ ಸ್ಥಾನದಲ್ಲಿ ಮೊಯೀನ್ ಅವಕಾಶ ಪಡೆದಿದ್ದಾರೆ.

ತವರು ಎಜ್‌ಬಾಸ್ಟನ್‌ನಲ್ಲಿ ಜೂನ್ 16ರಂದು ಮೊದಲ ಟೆಸ್ಟ್ ಆರಂಭವಾಗಲಿದೆ. ಜೂನ್ 18ರಂದು 36ನೇ ವರ್ಷಕ್ಕೆ ಕಾಲಿಡಲಿರುವ ಮೊಯಿನ್ ಅವರು ತಂಡಕ್ಕೆ ಮರಳಲು ಇಂಗ್ಲೆಂಡ್ ಕ್ರಿಕೆಟ್ ಆಡಳಿತದ ಆಹ್ವಾನ ಒಪ್ಪಿಕೊಂಡರು. 2021ರ ಭಾರತ ಪ್ರವಾಸದ ವೇಳೆ ಅವರು ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು.

ಕಳೆದ ಡಿಸೆಂಬರ್‌ನಲ್ಲಿ ಕರಾಚಿಯಲ್ಲಿ ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದ 18 ವರ್ಷದ ರೆಹಾನ್ ಅಹ್ಮದ್ ಮತ್ತು ಸರ್ರೆಯ ವಿಲ್ ಜಾಕ್ಸ್ ಅವರು ಸ್ಪಿನ್ನರ್‌ಗಳಾಗಿದ್ದರೂ, ಮೊಯಿನ್ ಅವರಷ್ಟು ಅನುಭವಿ ಮತ್ತು ಪ್ರಭಾವಶಾಲಿಗಳಲ್ಲ.

ಉಪಯುಕ್ತ ಬ್ಯಾಟ್ಸ್‌ಮನ್ ಜೊತೆಗೆ ಆಫ್ ಸ್ಪಿನ್ನರ್ ಆಗಿರುವ ಮೊಯೀನ್ 64 ಟೆಸ್ಟ್ ಪಂದ್ಯಗಳನ್ನು ಆಡಿ 195 ವಿಕೆಟ್ ಪಡೆದಿದ್ದಾರೆ. 2,914 ರನ್ ಗಳಿಸಿದ್ದಾರೆ.

ಆದರೆ ಆಸ್ಟ್ರೇಲಿಯಾ ವಿರುದ್ಧ ಅವರ ದಾಖಲೆ ಗಮನಸೆಳೆಯುವ ರೀತಿಯಲ್ಲಿಲ್ಲ. ಆ್ಯಷಸ್‌ನಲ್ಲಿ ಬೌಲಿಂಗ್ ಸರಾಸರಿ 64.65 ಇದೆ.

ಚೆಸ್ ಲೀಗ್: ಗಂಗಾ ತಂಡಕ್ಕೆ ಆನಂದ್

ಬೆಂಗಳೂರು (ಪಿಟಿಐ): ಐದು ಬಾರಿಯ ವಿಶ್ವ ಚೆಸ್ ಚಾಂಪಿಯನ್ ವಿಶ್ವನಾಥನ್ ಆನಂದ್ ಅವರು ಚೊಚ್ಚಲ ಗ್ಲೋಬಲ್ ಚೆಸ್ ಲೀಗ್‌ನಲ್ಲಿ ಐಕಾನ್ ಆಟಗಾರರಾಗಿ ‘ಗಂಗಾ ಗ್ರ್ಯಾಂಡ್‌ಮಾಸ್ಟರ್ಸ್’ ತಂಡವನ್ನು ಸೇರಿಕೊಂಡಿದ್ದಾರೆ.


ಆನಂದ್

ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಎಸ್‌ಜಿ ಆಲ್‌ಪೈನ್ ವಾರಿಯರ್ಸ್ ತಂಡದ ಐಕಾನ್ ಆಟಗಾರ ಆಗಿದ್ದಾರೆ.

ಲೀಗ್‌ನಲ್ಲಿ ಪಾಲ್ಗೊಳ್ಳಲಿರುವ ಆರು ತಂಡಗಳಿಗೆ ಆಟಗಾರರ ಆಯ್ಕೆ ಪ್ರಕ್ರಿಯೆ ಬುಧವಾರ ಮುಂಬೈನಲ್ಲಿ ನಡೆಯಿತು.

ಭಾರತಕ್ಕೆ ಬೆಳ್ಳಿ

ಜೂಲ್, ಜರ್ಮನಿ (ಪಿಟಿಐ): ಭಾರತ ಪುರುಷರ ತಂಡ ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್ ಶೂಟಿಂಗ್‌ನ 25 ಮೀ. ರ‍್ಯಾಪಿಡ್ ಫೈರ್ ಪಿಸ್ತೂಲ್‌ನಲ್ಲಿ ಬೆಳ್ಳಿ ಜಯಿಸಿತು.

ಸಮೀರ್, ರಾಜಕುಮಾರ್ ಸಿಂಗ್ ಸಂಧು ಮತ್ತು ಜತಿನ್ ಅವರನ್ನೊಳಗೊಂಡ ಭಾರತ ತಂಡ ಒಟ್ಟು 1,722 ಪಾಯಿಂಟ್ಸ್ ಕಲೆಹಾಕಿತು. 1,728 ಪಾಯಿಂಟ್ಸ್ ಸಂಗ್ರಹಿಸಿದ ಕೊರಿಯಾ ಚಿನ್ನ ಗೆದ್ದಿತು.

ಬಾಕ್ಸಿಂಗ್ ಸಂಸ್ಥೆ ಮಾನ್ಯತೆ ರದ್ದಿಗೆ ಶಿಫಾರಸು

ಪ್ಯಾರಿಸ್ (ರಾಯಿಟರ್ಸ್): ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆಯ ಮಾನ್ಯತೆಯನ್ನು ಹಿಂಪಡೆಯಲು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ (ಐಒಸಿ) ಕಾರ್ಯನಿರ್ವಾಹಕ ಮಂಡಳಿಯು ಬುಧವಾರ ಶಿಫಾರಸು ಮಾಡಿದೆ. ಆದರೆ ಬಾಕ್ಸಿಂಗ್, 2028ರ ಲಾಸ್ ಏಂಜಲಿಸ್ ಒಲಿಂಪಿಕ್ಸ್‌ನ ಭಾಗವಾಗಿರಲಿದೆ ಎಂದೂ ಖಚಿತಪಡಿಸಿದೆ.

ಕೆಲವು ಸುಧಾರಣೆಗಳನ್ನು ತರುವಂತೆ ಐಒಸಿಯು ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆಗೆ (ಐಬಿಎ) ಸೂಚಿಸಿತ್ತು. ಆದರೆ ಅದರಲ್ಲಿ ವಿಫಲವಾದ ಕಾರಣ ಕಾರ್ಯನಿರ್ವಾಹಕ ಮಂಡಳಿ ಈ ಕ್ರಮಕ್ಕೆ ಶಿಫಾರಸು ಮಾಡಿದೆ.

ಆಡಳಿತ, ಹಣಕಾಸು, ನೀತಿ ಸಂಹಿತೆ ವಿಷಯಗಳಿಗೆ ಸಂಬಂಧಿಸಿ ಐಒಸಿಯು 2019ರಲ್ಲಿ ಐಬಿಎಯನ್ನು ಅಮಾನತಿನಲ್ಲಿಟ್ಟಿತ್ತು. 2021ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಆ ಸಂಸ್ಥೆಯನ್ನು ಹೊರಗಿಟ್ಟು ಬಾಕ್ಸಿಂಗ್ ಸ್ಪರ್ಧೆಗಳನ್ನು ನಡೆಸಿತ್ತು.

ಕನ್ನಡ ಸಿನಿ ಸಮ್ಮಾನ

prajavani.net/cinesamman



'ಸಿನಿ ಸಮ್ಮಾನ' ಕಾರ್ಯಕ್ರಮದಲ್ಲಿ ಭಾಗಿಯಾಗ ನಟಿ ಶ್ರುತಿ ಹರಿಹರನ್

ಆಗ ಕಲೆಯ ಕೈಗೆ ಕನಕವೃಷ್ಟಿ! ಈಗ ಕಲಾವಿದರಿಗೆ ಪ್ರಶಸ್ತಿ–ಸಮ್ಮಾನವೃಷ್ಟಿ!

ಪ್ರವಾಹದ ಬಿಕ್ಕಟ್ಟಿನಿಂದ

ಪ್ರಶಸ್ತಿಯ ಪುಲಕದವರೆಗೆ...

ರಘುನಾಥ ಚ.ಹ.

'ಕನ್ನಡ ಕಲಾವಿದರ ಜನಪ್ರಿಯತೆ ಎಷ್ಟು?'

ಅರವತ್ತರ ದಶಕದಲ್ಲಿ ಪದೇ ಪದೇ ಪ್ರಸ್ತಾಪವಾಗುತ್ತಿದ್ದ ಈ ಪ್ರಶ್ನೆಗೆ ಉತ್ತರ ಕೊಡುವ ಒಂದು ವಿಶಿಷ್ಟ ಬರಹ ಆಗಸ್ಟ್ 27, 1961ರ 'ಪ್ರಜಾವಾಣಿ'ಯಲ್ಲಿದೆ. ಆ ಬರಹ ಆರಂಭವಾಗುವುದೇ – 'ಕನ್ನಡ ಕಲಾವಿದರ ಜನಪ್ರಿಯತೆ ಎಷ್ಟು?' ಎನ್ನುವ ಜಿಜ್ಞಾಸೆಯೊಂದಿಗೆ. ಈ ಪ್ರಶ್ನೆಯ ನಂತರದ ಸಾಲುಗಳು: 'ಈ ದೊಡ್ಡ ಪ್ರಶ್ನೆಯನ್ನು ವ್ಯಂಗ್ಯದ ಮಾತುಗಳಿಂದ ಅಣಕಿಸುತ್ತಿದ್ದವರಿಗೆ ನಮ್ಮ ಕಲಾವಿದರು ಉತ್ತರ ನೀಡಿದ್ದಾರೆ. ನಮ್ಮೂರಲ್ಲಿ ಕನ್ನಡ ಚಲನಚಿತ್ರ ರಂಗಭೂಮಿಯ ನಟ ನಟಿಯರಿಗೆ ಇತರ ಭಾಷೆಯವರಿಗಿರುವಷ್ಟೇ ಜನಪ್ರಿಯತೆ ಇದೆಯೆಂಬುದನ್ನು ಸಾರಿ ತೋರಿದ್ದಾರೆ. ಟೀಕಿಸಿದ್ದವರ ಬಾಯಿ ಮುಚ್ಚಿಸಿದ್ದಾರೆ.'

ಕಲಾವಿದರ ಜನಪ್ರಿಯತೆಗೆ ಸಂಬಂಧಿಸಿದ 'ಪ್ರಜಾವಾಣಿ'ಯ ಬರಹ, 'ಪ್ರವಾಸ ಸಂತ್ರಸ್ತರಿಗಾಗಿ ನೆರವಿನ ನಿಧಿ' ಸಂಗ್ರಹಕ್ಕಾಗಿ ಒಗ್ಗೂಡಿದ್ದ ಕಲಾವಿದರಿಗೆ ದೊರೆತ ಅಭೂತಪೂರ್ವ ಜನಸ್ಪಂದನಕ್ಕೆ ಸಂಬಂಧಿಸಿದ್ದು. ಪುಟಭರ್ತಿ ಪ್ರಕಟಗೊಂಡ ಚಿತ್ರ–ಲೇಖನದ ಕೊನೆಯ ಭಾಗ ಹೀಗಿದೆ: 'ನಮ್ಮ ಕಲಾವಿದರು ಪೊಲೀಸರ ರಕ್ಷಣೆ ಇಲ್ಲದೆ ಜನರ ನಡುವೆ ಬೆರೆತು, ಅವರೊಡನೆ ಸರಸವಾಗಿ ಮಾತನಾಡಿ, ಕಲಾವಿದರು–ಜನತೆಯ ನಡುವಣ ಸಂಪರ್ಕ ಹೇಗಿರಬೇಕು ಎಂಬುವುದಕ್ಕೆ ಮೇಲ್ಪಂಕ್ತಿ ಹಾಕಿ ಕೊಟ್ಟಿದ್ದಾರೆ. ಜನತೆ ಇದ್ದರೆ ಕಲಾವಿದರು, ಕಲೆ, ಈ ಮಾತು ಸತ್ಯ. ಜನ ಸಂಕಷ್ಟದಲ್ಲಿದ್ದಾಗ ಕಲಾವಿದರನ್ನು ಅವಲಂಬಿಸಬಹುದೆಂಬುದನ್ನು ತೋರಿಸಿದ್ದಾರೆ.'



'ಸಿನಿ ಸಮ್ಮಾನ'ದ ವೇದಿಕೆಯಲ್ಲಿ ಹೆಜ್ಜೆ ಹಾಕಿದ ನಟಿ ಸಾನ್ವಿ ಶ್ರೀವಾತ್ಸವ್


ಕಲೆ–ಕಲಾವಿದ ಮತ್ತು ಸಹೃದಯರ ನಡುವಣ ಸಂಬಂಧದ ವ್ಯಾಖ್ಯಾನದಂತಿರುವ ವರದಿಯ ತಲೆಬರಹವೂ ಅಷ್ಟೇ ಆಕರ್ಷಕ, ಅರ್ಥಪೂರ್ಣ: 'ಕಲೆಯ ಕೈಗೆ ಕನಕವೃಷ್ಟಿ.'

ಪ್ರವಾಹ ಸಂತ್ರಸ್ತರಿಗಾಗಿ ಕಲಾವಿದರು ನಿಧಿ ಸಂಗ್ರಹಿಸಿದ ಘಟನೆ, ಆಧುನಿಕ ಕರ್ನಾಟಕದ ಚರಿತ್ರೆಯಲ್ಲಿ ಒಂದು ವಿಶಿಷ್ಟವಾದ ಪುಟ. ಕನ್ನಡ ಚಿತ್ರರಂಗ ಮತ್ತು 'ಪ್ರಜಾವಾಣಿ' ನಡುವಣ ನಂಟಿಗೆ ಉದಾಹರಣೆಯಂತಿರುವ ಈ ಘಟನೆ, ಚಿತ್ರೋದ್ಯಮ ಪಡೆದುಕೊಂಡ ಹೊಸ ತಿರುವಿಗೆ ನಾಂದಿಯಾದುದು ಈಗ ಇತಿಹಾಸ.

1961ರಲ್ಲಿ 'ಪ್ರವಾಹ ಸಂತ್ರಸ್ತರಿಗಾಗಿ ನೆರವಿನ ನಿಧಿ' ಸಂಗ್ರಹಕ್ಕಾಗಿ ಕನ್ನಡ ಚಲನಚಿತ್ರ ಕಲಾವಿದರನ್ನು ಒಗ್ಗೂಡಿಸಿದ್ದ 'ಪ್ರಜಾವಾಣಿ', ಆರು ದಶಕಗಳ ನಂತರ 'ಪ್ರಜಾವಾಣಿ ಸಿನಿ ಸಮ್ಮಾನ'ದ ಮೂಲಕ ಮತ್ತೊಮ್ಮೆ ಚಿತ್ರರಂಗದ ಕಲಾವಿದರು ಒಂದೆಡೆ ಸೇರಲು ಬಹು ದೊಡ್ಡ ವೇದಿಕೆಯನ್ನು ರೂಪಿಸಿದ್ದಕ್ಕೆ ಕೂಡ ಸಾಂಸ್ಕೃತಿಕ ಮಹತ್ವವಿದೆ. ಈ ಆರು ದಶಕಗಳ ಅವಧಿಯುದ್ದಕ್ಕೂ ಸಿನಿಮಾರಂಗದ ಆಗುಹೋಗುಗಳಿಗೆ 'ಪ್ರಜಾವಾಣಿ' ತನ್ನದೇ ರೀತಿಯಲ್ಲಿ ಸ್ಪಂದಿಸಿರುವುದನ್ನು ಗಮನಿಸಬಹುದು.

ಜನರ ನಡುವೆ ಕಲಾವಿದರ ನಡಿಗೆ

'ಪ್ರಜಾವಾಣಿ' ಒತ್ತಾಸೆಯಿಂದಾಗಿ 'ಪ್ರವಾಹ ಸಂತ್ರಸ್ತರ ಪರಿಹಾರ ನಿಧಿ' ಸಂಗ್ರಹಕ್ಕಾಗಿ ಕಲಾವಿದರು ಬೀದಿಗಿಳಿದ ಚಾರಿತ್ರಿಕ ಘಟನೆಗೆ 'ನೆರವಿನ ನಿಧಿ'ಯಾಚೆಗೂ ಎರಡು ಆಯಾಮಗಳಿವೆ. ಮೊದಲನೆಯದು, ಕರ್ನಾಟಕದ ಪ್ರೇಕ್ಷಕರು ಹಾಗೂ ಕಲಾವಿದರ ನಡುವಣ ಅಂತರವನ್ನು ಕಡಿಮೆಗೊಳಿಸಿದ್ದು. ಎರಡನೆಯದು, ಮದ್ರಾಸ್ ಕೇಂದ್ರಿತವಾಗಿದ್ದ ಕನ್ನಡ ಚಿತ್ರರಂಗ ನಿಧಾನವಾಗಿ ತವರಿನತ್ತ ಚಲಿಸಲು ಪ್ರೇರಣೆ ನೀಡಿದ್ದು.



ಹರಿಪ್ರಿಯಾ ಹಾಗೂ ವಸಿಷ್ಠ ಸಿಂಹ ಜೋಡಿಯು ವಿವಾಹದ ನಂತರ ಮೊದಲ ಬಾರಿ ವೇದಿಕೆ ಮೇಲೆ ಪ್ರದರ್ಶನ ನೀಡಿದರು. 'ಸಿನಿ ಸಮ್ಮಾನ'ದ ವಿಶೇಷಗಳಲ್ಲಿ ಇದೂ ಒಂದು.

ಕನ್ನಡ ಸೇರಿದಂತೆ ದಕ್ಷಿಣ ಭಾರತದ ಎಲ್ಲ ಭಾಷೆಗಳ ಚಿತ್ರಗಳಿಗೂ ಆರಂಭದಲ್ಲಿ ಮದ್ರಾಸ್ ನೆಲೆಯಾಗಿತ್ತು. ತೆಲುಗು ಚಿತ್ರರಂಗ ಬಹು ಬೇಗ ತನ್ನ ನೆಲೆಯನ್ನು ಮದ್ರಾಸ್‌ನಿಂದ ಆಂಧ್ರಪ್ರದೇಶಕ್ಕೆ ಬದಲಿಸಿಕೊಂಡಿತು. ಆದರೆ, ಕನ್ನಡ ಚಿತ್ರರಂಗ ತವರಿನತ್ತ ಮುಖಮಾಡಲು 1961ರವರೆಗೂ ಕಾಯಬೇಕಾಯಿತು. ಅವರೆಗೂ ಕನ್ನಡ ಚಿತ್ರರಂಗದ ನಿಜವಾದ ಶಕ್ತಿ ಎಷ್ಟು? ಎನ್ನುವ ಪ್ರಶ್ನೆಗೆ ಸ್ಪಷ್ಟ ಉತ್ತರಗಳು ದೊರೆತಿರಲಿಲ್ಲ. ಚೆನ್ನೈನಲ್ಲಿ ನೆಲೆಸಿದ್ದ ಕನ್ನಡದ ಕಲಾವಿದರು ಮತ್ತು ತವರಿನ ಪ್ರೇಕ್ಷಕರ ನಡುವೆ ಭಾವನಾತ್ಮಕ ನಂಟೂ ಇರಲಿಲ್ಲ. ಈ ನಂಟು ಸಾಧ್ಯವಾಗಲಿಕ್ಕೆ ಮಹಾಪೂರದ ಸಂದರ್ಭ ಕಾರಣವಾಯಿತು. ಸಂತ್ರಸ್ತರ ಪರಿಹಾರ ನಿಧಿ ಸಂಗ್ರಹದ ನೆಪದಲ್ಲಿ ಕಲಾವಿದರು ಜನರ ಬಳಿಗೆ ಹೋದರು. ನೆಚ್ಚಿನ ಕಲಾವಿದರನ್ನು ಜನರು ಸಮೀಪದಿಂದ ನೋಡಿ ಸಂಭ್ರಮಿಸಿದರು. ಈ 'ಸಮೀಪದರ್ಶನ' ಮುಂದಿನ ದಿನಗಳಲ್ಲಿ ಕನ್ನಡ ಕಲಾವಿದರು ಗಂಟುಮೂಟೆ ಕಟ್ಟಿಕೊಂಡು ಕರ್ನಾಟಕದತ್ತ ಬರಲು ಹಾಗೂ ಬೆಂಗಳೂರು–ಮೈಸೂರು ಚಿತ್ರನಗರಿಗಳಾಗಿ ರೂಪುಗೊಳ್ಳಲು ಕಾರಣವಾಯಿತು.

ಕನ್ನಡದ ಕಲಾವಿದರು ಮದ್ರಾಸ್‌ನಿಂದ ಕನ್ನಡನಾಡಿಗೆ ಬಂದದ್ದೇನೋ ಸರಿ. ಆದರೆ, ಆ ಅವಧಿಯಲ್ಲಿ ಕನ್ನಡ ಚಿತ್ರಗಳ ಸ್ಥಿತಿಗತಿ ಉತ್ತಮವಾಗಿಯೇನೂ ಇರಲಿಲ್ಲ. ತಮಿಳು–ತೆಲುಗಿನ ಡಬ್ಬಿಂಗ್ ಸಿನಿಮಾಗಳ ಎದುರು ಕನ್ನಡ ಸಿನಿಮಾಗಳು ಸ್ಪರ್ಧಿಸಬೇಕಾಗಿತ್ತು. ಆ ಸ್ಪರ್ಧೆಯಲ್ಲಿ ಕನ್ನಡ ಸಿನಿಮಾಗಳಿಗೆ ಚಿತ್ರಮಂದಿರಗಳು ದೊರೆಯುವುದು ದುಸ್ತರವಾಗಿತ್ತು. ಅಂಥ ಸಂದಿಗ್ಧದ ಸಂದರ್ಭದಲ್ಲಿ ಕನ್ನಡ ಚಳವಳಿಗಾರರು ಮತ್ತು ಬರಹಗಾರರ ಮಾರ್ಗದರ್ಶನದಲ್ಲಿ ರೂಪುಗೊಂಡಿದ್ದು ಡಬ್ಬಿಂಗ್ ವಿರೋಧಿ ಚಳವಳಿ. ಆ ಹೋರಾಟಕ್ಕೆ ಪೂರಕವಾಗಿ 'ಪ್ರಜಾವಾಣಿ'ಯಲ್ಲಿ ನಡೆದ ಚರ್ಚೆ, ಚಳವಳಿಗೊಂದು ತಾತ್ವಿಕ ನೆಲೆಗಟ್ಟನ್ನು ಒದಗಿಸಿತು. ಬದಲಾದ ಸಂದರ್ಭದಲ್ಲಿ, ಕಳೆದೊಂದು ದಶಕದ ಅವಧಿಯಲ್ಲಿ ಕನ್ನಡ ಸಿನಿಮಾರಂಗ ಡಬ್ಬಿಂಗ್‌ಗೆ ಮತ್ತೆ ತೆರೆದುಕೊಳ್ಳಬೇಕೆನ್ನುವ ಚರ್ಚೆಗಳಿಗೂ 'ಪ್ರಜಾವಾಣಿ' ವೇದಿಕೆಯಾದುದು ಗಮನಾರ್ಹ.

ಪುಟ 7 ನೋಡಿ..

ಸಿನಿಪ್ರೇಮಿಗಳ ಕಲ್ಪವೃಕ್ಷ

ಸಿನಿಮಾ ನಿರ್ಮಾತೃಗಳ ಪಾಲಿಗೆ 'ಪ್ರಜಾವಾಣಿ' ಕಥಾಕಣಜವೂ ಹೌದು. 'ಪ್ರಜಾವಾಣಿ' ಹಾಗೂ ಅದರ ಬಳಗದ 'ಸುಧಾ', 'ಮಯೂರ ನಿಯತಕಾಲಿಕಗಳಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡ ಕಾದಂಬರಿಗಳು, ಕಥೆಗಳು ಸಿನಿಮಾ ನಿರ್ಮಾತೃಗಳ ಗಮನಸೆಳೆದು ಚಿತ್ರಗಳಾಗಿ ರೂಪುಗೊಂಡಿವೆ. ಪತ್ರಿಕೆಯಲ್ಲಿ ಪ್ರಕಟಗೊಂಡ ಸುದ್ದಿ–ಬರಹಗಳು ಸಿನಿಮಾಕಥೆಗಳಿಗೆ ಪ್ರೇರಣೆ ಒದಗಿಸಿವೆ. 'ಸಾಪ್ತಾಹಿಕ ಪುರವಣಿ'ಯಲ್ಲಿ ಪ್ರಕಟಗೊಂಡ ಡಾ. ಆಶಾ ಬೆನಕಪ್ಪನವರ ಬರಹವೊಂದು ಮಂಸೋರೆ ಅವರ 'ಹರಿವು' ಚಿತ್ರಕ್ಕೆ ಕಥೆ ಒದಗಿಸಿದ್ದು ಇತ್ತೀಚಿನ ಉದಾಹರಣೆ.

ಚಲನಚಿತ್ರ ಇತಿಹಾಸ ಸಂಪುಟಗಳ ರಚನೆಯಲ್ಲಿ 'ಪ್ರಜಾವಾಣಿ'ಯಲ್ಲಿ ಕಾರ್ಯ ನಿರ್ವಹಿಸಿದ ಪತ್ರಕರ್ತರ ಪಾತ್ರ ಗಣನೀಯವಾದುದು. 'ಪ್ರಜಾವಾಣಿ' ಬರಹಗಳ ಆಕರವಿಲ್ಲದೆ ಕನ್ನಡ ಚಲನಚಿತ್ರೋದ್ಯಮದ ಬಗೆಗಿನ ಯಾವ ಅಧ್ಯಯನವೂ ಪೂರ್ಣಗೊಳ್ಳದು.

ಆರು ದಶಕಗಳ ಅವಧಿಯಲ್ಲಿ ಬೆಳ್ಳಿತೊರೆಯಲ್ಲಿ ಸಾಕಷ್ಟು ನೀರು ಹರಿದುಹೋಗಿದೆ. 'ಕನ್ನಡ ಕಲಾವಿದರ ಜನಪ್ರಿಯತೆ ಎಷ್ಟು?' ಎನ್ನುವ ಪ್ರಶ್ನೆಯೇ ಈಗ ಅಪ್ರಸ್ತುತವಾಗಿದೆ. 'ಕಲೆಯ ಕೈಗೆ ಕನಕವೃಷ್ಟಿ' ಮಾತೀಗ, ಕಲಾವಿದರ ಕೈಗೆ ಕನಕವೃಷ್ಟಿ ಎನ್ನುವ ಅರ್ಥ ಪಡೆದುಕೊಂಡಿದೆ. ಕನಕವೃಷ್ಟಿ ಮಾತ್ರವಲ್ಲ, ಇದು ಪ್ರಶಸ್ತಿವೃಷ್ಟಿಯ ಕಾಲವೂ ಹೌದು. 'ಪ್ರಜಾವಾಣಿ'ಯ ಅಮೃತಮಹೋತ್ಸವ ಸಂದರ್ಭದಲ್ಲಿ ಆರಂಭಗೊಂಡಿರುವ 'ಸಿನಿ ಸಮ್ಮಾನ' ಪತ್ರಿಕೆ ಹಾಗೂ ಚಿತ್ರೋದ್ಯಮದ ನಂಟಿಗೆ ಹೊಸತೊಂದು ಸೃಜನಶೀಲ ಗಂಟು!

ಮನ ಸೆಳೆದ ಮಲಬಾರ್ ಗೋಲ್ಡ್

> ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ಗೆ ಹೋಗುವುದೆಂದರೆ ಒಂದು ಎಕ್ಸೈಟ್‌ಮೆಂಟ್. ಕಲಾತ್ಮಕ ಸಂಗ್ರಹವನ್ನು ನೋಡುವುದೇ ಚಂದ
>
> **ಹಿತಾ ಚಂದ್ರಶೇಖರ್**, ನಟಿ





ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಪ್ರಾದೇಶಿಕ ಮುಖ್ಯಸ್ಥ ಮನ್ಸೂರ್ ಮತ್ತು ನಟಿ ಪೂಜಾಗಾಂಧಿ ಅವರು ಗಾನವಿ ಲಕ್ಷ್ಮಣ್ ಅವರಿಗೆ ಅತ್ಯುತ್ತಮ ನಟಿ ಪ್ರಶಸ್ತಿ ವಿತರಿಸಿದರು



ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಪ್ರಾದೇಶಿಕ ಮುಖ್ಯಸ್ಥ ರಿಬಿನ್ ತೌಫಿಕ್ ಮತ್ತು ನಟಿ ರಾಗಿಣಿ ದ್ವಿವೇದಿ ಅವರು ಅಜನೀಶ್ ಲೋಕನಾಥ್ ಅವರಿಗೆ ಅತ್ಯುತ್ತಮ ಸಂಗೀತ ನಿರ್ದೇಶನ ಪ್ರಶಸ್ತಿಯನ್ನು ವಿತರಿಸಿದರು



ಮಲಬಾರ್ ಝೋನ್‌ನಲ್ಲಿ ನಟಿ ಸಿರಿ ರವಿಕುಮಾರ್ ಮಾತು



ಮಲಬಾರ್ ಝೋನ್‌ನಲ್ಲಿ ನಟ ಪ್ರಜ್ವಲ್ ದೇವರಾಜ್ ಮಾತು

ಚಿನ್ನಾಭರಣ ಮತ್ತು ಡೈಮಂಡ್ಸ್ ಸಂಗ್ರಹ ಮತ್ತು ಮಾರಾಟದಲ್ಲಿ ಹೆಸರುವಾಸಿಯಾಗಿರುವ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಕಾರ್ಯಕ್ರಮದಲ್ಲಿ ಆಕರ್ಷಣೆಯ ಕೇಂದ್ರವಾಯಿತು.

ಸಮಾರಂಭಕ್ಕೆ ಬಂದ ಎಲ್ಲ ಗಣ್ಯರು ರೆಡ್ ಕಾರ್ಪೆಟ್ ಬಳಿ ಇಟ್ಟಿದ್ದ ಚಿನ್ನ, ಡೈಮಂಡ್ಸ್ ಆಭರಣಗಳನ್ನು ವೀಕ್ಷಿಸಿ, ಮೆಚ್ಚುಗೆಯ ಮಾತುಗಳನ್ನು ಆಡಿದರು.

ಮೂರು ದಶಕಗಳ ಹಿಂದೆ ಕೇರಳದ ಕೋಯಿಕ್ಕೋಡ್‌ನಲ್ಲಿ ಎಂ.ಪಿ. ಅಹಮ್ಮದ್ ಆರಂಭಿಸಿದ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್, ಕ್ರಮೇಣ ಬೆಳೆದ ಪರಿ ಬೆರಗು ಹುಟ್ಟಿಸುಂಥದ್ದು. ಇಂದು ಭಾರತವಲ್ಲದೇ ಅಮೆರಿಕ, ಯುಎಇ, ಸಿಂಗಾಪುರ, ಕುವೈಟ್, ಬಹರೇನ್, ಒಮಾನ್, ಕತಾರ್, ಸೌದಿ ಅರೇಬಿಯಾ, ಮಲೇಷ್ಯಾ ಹೀಗೆ ನಾನಾ ದೇಶಗಳಲ್ಲಿ 310ಕ್ಕೂ ಅಧಿಕ ಶೋರೂಂಗಳನ್ನು ಹೊಂದಿದೆ. ಡೈಮಂಡ್, ಚಿನ್ನ ಮತ್ತು ಬೆಳ್ಳಿ ಗ್ರಾಹಕರು ಮೊದಲ ಆದ್ಯತೆಯನ್ನು ಮಲಬಾರ್‌ಗೆ ನೀಡಿರುವುದೇ ಈ ಬೆಳವಣಿಗೆಗೆ ಕಾರಣವಾಗಿದೆ.

2005ರಲ್ಲಿ ₹ 500 ಕೋಟಿ ವಹಿವಾಟು ಹೊಂದಿದ್ದ ಮಲಬಾರ್ ಕಂಪನಿ, ಏಳು ವರ್ಷಗಳ ಬಳಿಕ 2012ರಲ್ಲಿ ₹ 12,000 ಕೋಟಿಗೆ ತಲುಪಿತ್ತು. ಆನಂತರ ಒಂದೇ ವರ್ಷದಲ್ಲಿ ₹ 22,000 ಕೋಟಿಗೆ ಏರಿತ್ತು. ಇಲ್ಲಿನ ಗುಣಮಟ್ಟ, ಕಲಾತ್ಮಕ ವಿನ್ಯಾಸ ಗ್ರಾಹಕರನ್ನು ಸೆಳೆದಿದೆ.

ಕರ್ನಾಟಕದಲ್ಲಿ 31 ಶೋರೂಂಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳಲ್ಲಿ 14 ಶೋರೂಂಗಳು ಬೆಂಗಳೂರಿನಲ್ಲೇ ಇವೆ. ಅದರ ಜತೆಗೆ ಕೋರಮಂಗಲದಲ್ಲಿ ಇನ್ನೊಂದು ಶೋರೂಂ ಸದ್ಯದಲ್ಲಿಯೇ ಪ್ರಾರಂಭವಾಗಲಿದೆ. ಅದಕ್ಕೆ ಬೇಕಾದ ಎಲ್ಲ ಸಿದ್ಧತೆಗಳು ಮುಗಿದಿವೆ. ಇದು ರಾಜ್ಯದಲ್ಲಿ 32ನೇ, ಬೆಂಗಳೂರಿನಲ್ಲಿ 15ನೇ ಶೋರೂಂ ಆಗಲಿದೆ.

ಅಭಿಮಾನ ವ್ಯಕ್ತಪಡಿಸಿದ ಪ್ರಾದೇಶಿಕ ಮುಖ್ಯಸ್ಥರು: ಕನ್ನಡಿಗರ ಮೆಚ್ಚಿನ ವಿಶ್ವಾಸಾರ್ಹ ಪತ್ರಿಕೆ 'ಪ್ರಜಾವಾಣಿ' ಜತೆಗೆ ಕಾರ್ಯಕ್ರಮ ಆಯೋಜಿಸಲು ಸಿಕ್ಕಿದ ಅವಕಾಶದ ಬಗ್ಗೆ ಮಲಬಾರ್ ಗೋಲ್ಡ್‌ನ ಪ್ರಾದೇಶಿಕ ಮುಖ್ಯಸ್ಥರು ಹೆಮ್ಮೆಪಟ್ಟರು.

'ಆಭರಣ ಕ್ಷೇತ್ರದಲ್ಲಿ ಮಲಬಾರ್ ಗೋಲ್ಡ್ ತನ್ನದೇ ಆದ ಛಾಪು ಮೂಡಿಸಿದೆ. ಅದೇ ರೀತಿ ಕನ್ನಡ ಪತ್ರಿಕೋದ್ಯಮದಲ್ಲಿ ಪ್ರಜಾವಾಣಿ ತನ್ನ ಬದ್ಧತೆ, ನಿಷ್ಪಕ್ಷಪಾತ ವರದಿಗಳ ಮೂಲಕ ವಿಶಿಷ್ಟ ಸ್ಥಾನ ಹೊಂದಿದೆ. ಅದೇ ಕಾರಣಕ್ಕೆ ಮನೆಮಾತಾಗಿದೆ. 'ಪ್ರಜಾವಾಣಿ'ಯ ಅಮೃತ ಮಹೋತ್ಸವದ ಪ್ರಯುಕ್ತ ಹಮ್ಮಿಕೊಂಡಿದ್ದ ಪ್ರಜಾವಾಣಿ ಸಿನಿ ಸಮ್ಮಾನ ಕಾರ್ಯಕ್ರಮದ ಪ್ರಾಯೋಜಕರಾಗಲು ಅವಕಾಶ ನೀಡಿರುವುದು ಹೆಮ್ಮೆಯ ವಿಚಾರ' ಎಂದು ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಪ್ರಾದೇಶಿಕ ಮುಖ್ಯಸ್ಥ ಶರ್ಫುದ್ದೀನ್ ಹರ್ಷ ವ್ಯಕ್ತಪಡಿಸಿದರು.

'ಘನತೆಯ ಪತ್ರಿಕೋದ್ಯಮದ ಜತೆಗೆ ಕಲೆ, ಸಾಹಿತ್ಯಕ್ಕೆ ಪ್ರೋತ್ಸಾಹ ನೀಡುತ್ತಾ ಬಂದಿರುವ 'ಪ್ರಜಾವಾಣಿ' ಸಿನಿಮಾ ರಂಗದ ಸಾಧಕರನ್ನು ಗುರುತಿಸಿ ಪ್ರೋತ್ಸಾಹಿಸಲು 'ಪ್ರಜಾವಾಣಿ ಸಿನಿ ಸಮ್ಮಾನ' ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಖುಷಿಯ ಕೆಲಸ. ಇದಕ್ಕೆ ಮಲಬಾರ್ ಗೋಲ್ಡ್ ಪ್ರಾಯೋಜಕರಾಗಿರುವುದು ಇನ್ನೂ ಹೆಚ್ಚು ಸಂತೋಷವನ್ನು ನೀಡಿದೆ' ಎಂದು ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಪ್ರಾದೇಶಿಕ ಮುಖ್ಯಸ್ಥ ಮನ್ಸೂರ್ ಅಭಿಪ್ರಾಯ ಹಂಚಿಕೊಂಡರು.

'ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ತನ್ನ ವ್ಯವಹಾರದ ಜತೆಗೆ ಜನಸ್ನೇಹಿ, ಗ್ರಾಹಕಸ್ನೇಹಿ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಮುಂದೆಯೂ ಪ್ರಜಾವಾಣಿ ನಡೆಸುವ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದೆ' ಎಂದು ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಪ್ರಾದೇಶಿಕ ಮುಖ್ಯಸ್ಥ ರಿಬಿನ್ ತೌಫಿಕ್ ತಿಳಿಸಿದರು.





ಮಲಬಾರ್ ಝೋನ್‌ನಲ್ಲಿ ನಟಿ ಗಿರಿಜಾ ಲೋಕೇಶ್ ಹಾಗೂ ನಟಿ ಅಂಕಿತಾ ಅಮರ್

ಅಭಿನಯದಲ್ಲೂ ಅನಂತ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ 'ಜೀವಮಾನದ ಸಾಧನೆ' ಪುರಸ್ಕಾರ ಸ್ವೀಕರಿಸಿದ ಸಂದರ್ಭ



ಜೀವಮಾನದ ಸಾಧನೆ ಪುರಸ್ಕಾರ ಸ್ವೀಕರಿಸುವ ಮುನ್ನಾ ಕ್ಷಣ

ಕೊನೆಯಿಲ್ಲದ ಪ್ರತಿಭೆಗೆ ಪುರಸ್ಕಾರದ ಪ್ರಭೆ

ಕೊನೆಯಿಲ್ಲದ್ದು 'ಅನಂತ'. ಕೊನೆಯಿಲ್ಲದ ಪ್ರತಿಭೆ ಅನಂತ ನಾಗ್. ಗೋಧಿ ಬಣ್ಣ ಸಾಧಾರಣ ಮೈಕಟ್ಟಿನ ಈ ನಟ ಕನ್ನಡ ಪ್ರೇಕ್ಷಕನ ಮನಸಿನಿಂದ ಎಂದೂ ಕಾಣೆಯಾಗೋದಿಲ್ಲ. ಮುದ್ದುಮುಖದ ಅನಂತ, ಬುದ್ಧಿವಂತ ಅನಂತ್, ನಮ್ಮನ್ನು ರಂಜಿಸಲು ಶುರುಮಾಡಿ ಐವತ್ತು ವರ್ಷಗಳೇ ಕಳೆದಿವೆ. ಬಯಲುದಾರಿಯ ಹೆಲಿಕಾಪ್ಟರಿನೊಳಗೆ, 'ನಾರದ ವಿಜಯ'ದ ತಂಬೂರಿ ಜೊತೆಗೆ, 'ಗಣೇಶನ ಮದುವೆ'ಯ ವಠಾರದಲ್ಲಿ, 'ಬೆಳದಿಂಗಳ ಬಾಲೆ'ಯ ಕನಸಿನೊಳಗೆ, 'ಮುಂಗಾರುಮಳೆ'ಯ ಕಣ್ಣೀರಿನಲ್ಲಿ ನಾವವರ ಜೊತೆ ಒದ್ದೆಯಾಗಿದ್ದೇವೆ.

ಡಾನ್ಸು, ಫೈಟು ಮಾಡದೆಯೂ ಹೆಣ್ಣುಮಕ್ಕಳ ಹೃದಯ ಗೆಲ್ಲಬಹುದು ಅಂತ ತೋರಿಸಿಕೊಟ್ಟ ಹೀರೋ ಅನಂತ ನಾಗ್. ಭಾವುಕ ನಟನೆಗೆ ಅವರೇ ಸರಿ ಎಂದು ನಾವು ನಿರ್ಧರಿಸುವಷ್ಟರಲ್ಲಿ ಹೊಟ್ಟೆ ಹುಣ್ಣಾಗಿಸುವಷ್ಟು ನಗಿಸುವ ಇನ್ನೊಬ್ಬನೂ ಅವರೊಳಗಿದ್ದಾನೆಂದು ಅರಿತು ಬೆರಗಾದೆವು.

ಅನಂತ ನಾಗ್ ಅವರ ಸಿರಿಕಂಠಕ್ಕಂತೂ ಬೇರೆಯದೇ ಅಭಿಮಾನಿ ಬಳಗವಿದೆ. 'ಕೆಜಿಎಫ್'ನಂಥ ಜಗತ್ತಿನ ಸೃಷ್ಟಿಯಲ್ಲಿ ಅವರ ಧ್ವನಿಯ ಕೊಡುಗೆ ಎಷ್ಟು ಮಹತ್ವದ್ದು ಅಂತ ಎಲ್ಲರಿಗೂ ತಿಳಿದಿದೆ. ರಂಗಭೂಮಿಯ ಹಿನ್ನೆಲೆಯಿಂದ ಬಂದದ್ದು, ಮನೆಮಾತು ಕೊಂಕಣಿಯಾಗಿದ್ದು ಮತ್ತು ಮುಂಬಯಿ ಒಡನಾಟ ಇವೆಲ್ಲವೂ ಸೇರಿ ಅವರ ಕನ್ನಡ ಮಾತಿಗೊಂದು ಹೊಸದಾದ ಸೊಗಡು ಬಂದಿದೆ. ಅನಂತ ನಾಗ್ ಕನ್ನಡವನ್ನು ಕೇಳುವುದೇ ಒಂದು ಸೊಗಸು.

ಅತ್ಯುತ್ತಮ ಅಭಿನಯದ ಜೊತೆಗೆ ಸಾಹಿತ್ಯದ ಓದು, ರಾಜಕೀಯ ಪ್ರಜ್ಞೆ, ಖಚಿತ ನಿಲುವು ಇವೆಲ್ಲವನ್ನೂ ಹೊಂದಿರುವ ಅವರದು ಮಾಗಿದ ಮನಸ್ಸು. ಮಹಾನ್ ನಿರ್ದೇಶಕ ಶ್ಯಾಮ್ ಬೆನಗಲ್ ಅವರ ಆರು ಸಿನಿಮಾಗಳಲ್ಲಿ ನಟಿಸಿದ್ದಾರೆ ಅನ್ನುವುದೇ ಅನಂತ ನಾಗ್ ಎಂಥ ಕಲಾವಿದನೆಂಬುದನ್ನು ಸಾರುತ್ತದೆ. ರಂಗಭೂಮಿ, ಗಂಭೀರ ಸಿನಿಮಾ, ಕಮರ್ಷಿಯಲ್ ಸಿನಿಮಾ, ಕಾಮಿಡಿ ಪಾತ್ರ, ಎಲ್ಲಕ್ಕೂ ಒಂದೇ ರೀತಿಯ ಶ್ರದ್ಧೆಯನ್ನು ಧಾರೆಯೆರೆದ ಅಪ್ಪಟ ಕಲಾವಿದ ಅವರು. ಅನಂತ್ ನಾಗ್ ಸಿನಿಮಾ ಅಂದರೆ ಯೋಚನೆ ಮಾಡದೆ ಚಿತ್ರಮಂದಿರದೊಳಗೆ ಹೋಗಿ ಕೂರಬಹುದು. ಕತೆ ಯಾವುದೇ ಇರಲಿ, ನಿರ್ದೇಶಕರು ಯಾರೇ ಇರಲಿ, ಅನಂತ್ ನಾಗ್ ನಮ್ಮನ್ನು ರಂಜಿಸದೇ ಇರುವುದಿಲ್ಲ ಎಂಬ ವಿಶ್ವಾಸ ಪ್ರೇಕ್ಷಕನದು.

ಇಂಥ ಅದ್ವಿತೀಯ ನಟನಿಗೆ ಈಗ ಎಪ್ಪತ್ತೈದು ವರ್ಷ ತುಂಬಿದೆ. ಇದೇ ವೇಳೆ 'ಪ್ರಜಾವಾಣಿ'ಯೂ ಎಪ್ಪತ್ತೈದು ವರ್ಷಗಳ ಹೊಸ್ತಿಲಿನಲ್ಲಿರುವುದು ವಿಶೇಷ. ನಮ್ಮ ಚೊಚ್ಚಲ 'ಸಿನಿ ಸಮ್ಮಾನ'ದಲ್ಲಿ ಅನಂತ ನಾಗ್ ಅವರಂಥ ಅಮೋಘ ಪ್ರತಿಭೆಯನ್ನು ಸನ್ಮಾನಿಸಿದ್ದು ನಮಗೆ ಹೆಮ್ಮೆ. ಐವತ್ತು ವರ್ಷ ಮುಗಿಸಿರುವ ಅನಂತ್ ಅವರ ಚಿತ್ರಯಾನ ಅನಂತವಾಗಿರಲಿ. ❖



'ಪ್ರಜಾವಾಣಿ ಸಿನಿ ಸಮ್ಮಾನ'ದಲ್ಲಿ ಜೀವಮಾನದ ಸಾಧನೆಗಾಗಿ ಪುರಸ್ಕಾರಕ್ಕೆ ಪಾತ್ರರಾದವರು ಅನಂತ ನಾಗ್. ಕಳೆದ ಎರಡು ದಶಕಗಳಲ್ಲಿ ಅವರಿಂದ ವಿಭಿನ್ನ ಪಾತ್ರಗಳನ್ನು ಮಾಡಿಸಿದ ನಿರ್ದೇಶಕ **ಯೋಗರಾಜ್ ಭಟ್.** ಅವರ ಕಣ್ಣಲ್ಲಿ ಅನಂತ ನಾಗ್ ಪರಿಚಯ ಹೀಗಿದೆ...

ಅನಂತ ನಾಗ್ ಯಾವತ್ತೂ ಮಾಡುವುದು ಒಂದೇ ಪ್ರಯೋಗ– ಅವರು ನಟಿಸುವುದಿಲ್ಲ, ಬದಲಿಗೆ ಪಾತ್ರವಾಗಿ ವರ್ತಿಸುತ್ತಾರೆ. ತನ್ಮೂಲಕ ಆ ಪಾತ್ರವೇ ಅನಂತ ನಾಗ್ ಆಗಿಬಿಡುತ್ತಾರೆ. ಹೀಗೆ ಮಾಡುವುದು ಸುಲಭವಲ್ಲ. ನಟನೆ ಮಾಡುವಾಗ ಅತಿ ಸಹಜವಾಗಿ ಕಾಣಿಸಿಕೊಳ್ಳುವುದಕ್ಕೆ ವಿಪರೀತ ತಲೆ ಇರಬೇಕು ಮತ್ತು ತಲೆ ತುಂಬಿಕೊಂಡಿರಬೇಕು. ಜೀವನ ಗೊತ್ತಿರಬೇಕು. ಜೊತೆಗೆ ಪ್ರೇಕ್ಷಕ ಕಣ್ಣು ಕೀಳದಂತೆ ನೋಡುವಂಥ ಗಾಢ ಲಕ್ಷಣ ಮೈ ಹಾಗೂ ಮುಖಕ್ಕೆ ಇರಬೇಕು, ನಟರಿಗೆ. ಇದೆಲ್ಲ ಮಿತಿ ಮೀರಿ ಇರುವ ಮಹನೀಯ ನಟ ಅನಂತ ನಾಗ್. ಆದ್ದರಿಂದ ಅವರ ನಟನೆಯಲ್ಲಿ ಪ್ರಯೋಗಕ್ಕಿಂತ ಹೆಚ್ಚಾಗಿ ಬೇರೆ ಮಟ್ಟದ 'ಪಬ್ಲಿಕ್ ಕನೆಕ್ಷನ್' ಇರುತ್ತದೆ. ನೋಡುಗನು ಅವರನ್ನು ಪಾತ್ರವಾಗಿ ಸ್ವೀಕರಿಸಲೇಬೇಕು ಎನ್ನುವಂತಹ 'ಕನ್ವಿಕ್ಷನ್' ಸಾಧ್ಯವಾಗುವುದೇ ಈ ರೀತಿಯ 'ಪಬ್ಲಿಕ್ ಕನೆಕ್ಷನ್'ನಿಂದ.

ಅನಂತ್ ಸರ್ ಹಾಸ್ಯ ನಟನೆಯ ಹಿಂದೆ ಕೂಡ ತುಂಬಾ ಗಹನವಾದ ಜ್ಞಾನವಿದೆ. ಅದಕ್ಕೆ ಆಯಸ್ಕಾಂತೀಯ ಗುಣವೂ ಇರುತ್ತದೆ. ಅವರು ತುಂಟತನದಲ್ಲಿ ಏನೋ ಒಂದು ದೊಡ್ಡಮಟ್ಟದ ಆಕರ್ಷಣೆಯನ್ನು ನೋಡುಗರಲ್ಲಿ ಉಕ್ಕಿಸುತ್ತಾರೆ. ಅತಿಯಾಗಿ ಯಾವುದನ್ನೂ ಯಾವತ್ತೂ ಮಾಡದ ನಟ ಸ್ವಲ್ಪ ತುಂಟ ನಗು ನಕ್ಕರೂ ಅದು ತುಂಬಾ ಇಷ್ಟವಾಗುತ್ತದೆ. ಅವರನ್ನು ಬಹಳಷ್ಟು ದೃಶ್ಯಗಳಲ್ಲಿ ಗಂಭೀರವಾಗಿ ಕಂಡವರಿಗೆ, ಹಾಸ್ಯ ಹೊಮ್ಮಿಸಿದಾಗ ಅದು ವಿಶೇಷ ರಸಾನುಭವ ನೀಡುತ್ತದೆ. ಹಾಸ್ಯಕ್ಕೆ ಟೈಮಿಂಗ್ ಅತಿ ಮುಖ್ಯ. ಅನಂತ್ ಸರ್‌ಗೆ ಅವರದ್ದೇ ಆದ ಆಳವಾದ ಟೈಮಿಂಗ್ ಇರುವುದರಿಂದ ಅವರ ಹಾಸ್ಯಾಭಿನಯ ಎಂಥವರಿಗೂ ಕಚಗುಳಿ ಇಡುತ್ತದೆ. ಅಭಿನಯದಲ್ಲಿನ ಪ್ರತಿಕ್ರಿಯಾತ್ಮಕ 'ಶಾಟ್'ಗಳಲ್ಲಿ ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ ಗೊತ್ತಾಗುತ್ತದೆ.


ಅನಂತ್ ಅವರ ನಿಲುವು, ಘಂಟೆ ಧ್ವನಿ, ಸ್ಫುರದ್ರೂಪ ಮತ್ತು ಜ್ಞಾನದ ಕಿಂಚಿತ್ ಝಲಕ್ ಅನ್ನು ನಾನು ಹತ್ತಿರದಿಂದ ನೋಡಿ ಬಲ್ಲೆ. ಹೀಗಾಗಿ ಅವರಿಗೆ ಪಾತ್ರ ಸೃಷ್ಟಿ ಮಾಡುವಾಗ ಅವರಿಗೆಂದೇ ವಿಶೇಷ ಫೋಕಸ್ ಇಟ್ಟುಕೊಳ್ಳುತ್ತೇನೆ. ಅಕಸ್ಮಾತ್ ಸ್ಕ್ರಿಪ್ಟ್‌ನಲ್ಲಿ ಅವರಿಗೆ ಹೊಂದದೆ ಇರುವ ಅಂಶ ಇದ್ದರೆ ಅದನ್ನು ತೆರೆ ಮೇಲೆ ತರುವ ಪ್ರಯತ್ನಕ್ಕೆ ಕೈಹಾಕುವುದೇ ಇಲ್ಲ. ಅವರ ನೆನಪಾದರೆ ಸಾಕು, ಅವರಿಗೆ ಸೂಕ್ತವಾದ ಪಾತ್ರಗಳು ನನ್ನಲ್ಲಿ ರೊಚ್ಚಿಗೆದ್ದು ಹುಟ್ಟಿಕೊಳ್ಳುತ್ತವೆ. ಇದರಿಂದಾಗಿಯೇ ನನ್ನ ಸಿನಿಮಾಗಳಲ್ಲಿ ಅವರನ್ನು ವಿಶೇಷ ಫೋಕಸ್‌ನಲ್ಲಿ ಸದಾ ಇಡಲು ಸಾಧ್ಯವಾಗಿರುವುದು.

ಅವರ ಅಧ್ಯಯನ, ಅನುಭವ ಮತ್ತು ಬದುಕಿನ ರೀತಿ ನೋಡಿದಾಗ ಒಬ್ಬ ನಟನಿಗೆ ಅಭಿನಯದ ಹೊರತಾಗಿ ಇಷ್ಟೆಲ್ಲ ಜೀವನ ವೇದಾಂತ ಗೊತ್ತಿರಲು ಸಾಧ್ಯವೇ ಎನಿಸುತ್ತದೆ. ಅನಂತ್ ಸರ್ ಒಟ್ಟಾರೆ ವ್ಯಕ್ತಿತ್ವ ಮತ್ತು ವೇದಾಂತ ವಿವರಿಸಲಸದಳ.


ಇತ್ತೀಚೆಗೆ ಅವರು ಸಿನಿಮಾಗಳಲ್ಲಿ ನಟಿಸುತ್ತಿಲ್ಲ ಎಂದು ಕೆಲವರು ಹೇಳುತ್ತಿದ್ದಾರೆ. ವಸ್ತುಸ್ಥಿತಿ ಹಾಗೇನೂ ಇಲ್ಲ. ತುಂಬಾ ಸಿನಿಮಾಗಳು ಅವರ ಲೈನ್–ಅಪ್‌ನಲ್ಲಿ ಇವೆ. ಒಂದಂತೂ ಸ್ಪಷ್ಟ... ನೆಟ್ಟಗೆ ಹೂರಣ ಇರುವ ಪಾತ್ರ ಬರೆದುಕೊಂಡು ಹೋಗಿ ಕೊಟ್ಟರೆ ಓದಿ, ಒಳಗೆ ಸೇರಿಸುತ್ತಾರೆ. ಸತ್ವ ಇಲ್ಲದೆ ಏನೇ ಹೇಳಿದರೂ ಉಗಿದು ಓಡಿಸುತ್ತಾರೆ. ಇದು ಅವರ ಸ್ವಭಾವ. ❖

ಚಿತ್ರಪಟ.... ಚಿತ್ತಪಟ


ಗಂಭೀರ, ಹಾಸ್ಯ, ರೌದ್ರ ಎಂತಹುದೇ ರಸವಿರಲಿ, ಅನಂತ್ ಆ ಪಾತ್ರವೇ ತಾವಾದವರು. ಅವರ ಚಿತ್ರಪಯಣದ ಕೆಲವು ಮೆಲುಕುಹಾಕಬಲ್ಲ ಛಾಯಾಚಿತ್ರಗಳು ಅವನ್ನು ಪುಷ್ಟೀಕರಿಸುವಂತಿವೆ.



ಅನಂತ ನಾಗ್-ಶಂಕರ ನಾಗ್ ಸಹೋದರರು



ಹಂಸಗೀತೆ ಚಿತ್ರದಲ್ಲಿ ರೇಖಾರಾವ್-ಅನಂತ್



'ಮುರಳಿಗಾನ–ಅಮೃತಪಾನ' ಚಿತ್ರದಲ್ಲಿ ಎಂ.ಪಿ. ಪ್ರಕಾಶ್ ಜೊತೆಗೆ...



'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರದಲ್ಲಿ..




ಪತ್ನಿ ಗಾಯಿತ್ರಿ ಜೊತೆ ಅನಂತ ನಾಗ್



'ಕನ್ನೇಶ್ವರ ರಾಮ' ಚಿತ್ರದಲ್ಲಿ ಶಬಾನಾ ಅಜ್ಮಿ ಜತೆ...



ಹಸನ್ಮುಖಿ ಅನಂತ



ಮುಖ್ಯಮಂತ್ರಿಯಾಗಿದ್ದ ಗುಂಡೂರಾವ್ ಜತೆ -1982ರಲ್ಲಿ ಬೆಂಗಳೂರಿನ ಸುಚಿತ್ರಾ ಫಿಲ್ಮ್ ಸೊಸೈಟಿಯಲ್ಲಿ ನಡೆದ ಚಿತ್ರಭಾರತಿ ಸಿನಿಮೋತ್ಸವದಲ್ಲಿ.



'ಹಾಸ್ಯರತ್ನ ರಾಮಕೃಷ್ಣ' ಚಿತ್ರದಲ್ಲಿ ಹಾಸ್ಯ ಪಾತ್ರಧಾರಿ ಅನಂತ್



'ವರ್ಷದ ಅತ್ಯುತ್ತಮ ಚಿತ್ರ'
ಕಾಂತಾರ
ನಿರ್ದೇಶನ: ರಿಷಬ್ ಶೆಟ್ಟಿ
ನಿರ್ಮಾಣ: ಹೊಂಬಾಳೆ ಫಿಲ್ಮ್ಸ್

ಇಲ್ಲೂ 'ಕಾಂತಾರ'ದ್ದೇ ಚಮತ್ಕಾರ

2022ರ ಸೆಪ್ಟೆಂಬರ್ ಮೊದಲ ವಾರ. ಕರಾವಳಿಯ ದೈವದ ಸುತ್ತ ಹೆಣೆದಿರುವ ಸಿನಿಮಾದ ಕಥೆ ಹಾಗೂ ತನ್ನನ್ನು 'ಪ್ಯಾನ್ ಇಂಡಿಯಾ' ಎಂಬ ತಕ್ಕಡಿಯಲ್ಲಿ ಇಟ್ಟು ತೂಗುವುದಕ್ಕೆ ನಟ, ನಿರ್ದೇಶಕ ರಿಷಬ್ ಶೆಟ್ಟಿ ಹಿಂದೇಟು ಹಾಕಿದ್ದರು. ಆದರೆ 2022ರ ಸೆ.30ರ ನಂತರ ಆಗಿದ್ದು ಅನಿರೀಕ್ಷಿತವೇ. ಕರಾವಳಿಯ ಮಣ್ಣಿನ ಘಮಲು ಎಲ್ಲೆಡೆ ಹಬ್ಬಿತು. ಕನ್ನಡದಲ್ಲಷ್ಟೇ ತೆರೆಕಂಡ 'ಕಾಂತಾರ' ನಂತರ ಪ್ಯಾನ್ ಇಂಡಿಯಾ ಸ್ವರೂಪ ಪಡೆಯಿತು.

'ಒಂದು ದಂತಕಥೆ' ಚಿತ್ರದ ಅಡಿಬರಹದಂತೆಯೇ ಸಿನಿಮಾ ಚಂದನವನದ ದಂತಕಥೆಗಳ ಪಟ್ಟಿಗೆ ಸೇರ್ಪಡೆಯಾಯಿತು. ಅಡವಿಯೊಳಗೆ ಹೆಜ್ಜೆ ಹಾಕುತ್ತಾ, ಕೆರಾಡಿಯನ್ನೇ ತಮ್ಮ ಫಿಲ್ಮ್ ಸಿಟಿ ಮಾಡಿಕೊಂಡು ನಿರ್ದೇಶಕ ರಿಷಬ್ ಶೆಟ್ಟಿ 'ಕಾಂತಾರ' ಕಟ್ಟಿದರು. 'ಡಿವೈನ್ ಬ್ಲಾಕ್‌ಬಸ್ಟರ್' ಎಂಬ ಹೆಗ್ಗುರುತು ಪಡೆಯುವಂತೆ ಹೊಂಬಾಳೆ ಅದನ್ನು ಪಸರಿಸಿತು.

ಹೊಂಬಾಳೆಯಂತಹ ಬೃಹತ್ ನಿರ್ಮಾಣ ಸಂಸ್ಥೆಯಿಂದ ಕಡಿಮೆ ಬಜೆಟ್‌ನಲ್ಲಿ ತಯಾರಾದ ಸಿನಿಮಾ 'ಕಾಂತಾರ'. ಆದರೆ ಇದೇ ಸಿನಿಮಾ 'ಕೆ.ಜಿ.ಎಫ್' ದಾಖಲೆಯನ್ನೂ ಮುರಿದದ್ದು ಚಿತ್ರಕಥೆಯ ಸಾಮರ್ಥ್ಯವನ್ನು ಪ್ರದರ್ಶಿಸಿತು. ಮನುಷ್ಯ ಮತ್ತು ಪ್ರಕೃತಿಯ ನಡುವಿನ ಸಂಘರ್ಷದ ಕಥೆ ಹೊತ್ತ ಸಿನಿಮಾವನ್ನು ಬಿಡುಗಡೆಯಾಗದ 25 ದಿನಗಳಲ್ಲೇ ರಾಜ್ಯದ 77 ಲಕ್ಷಕ್ಕೂ ಅಧಿಕ ಜನರು ವೀಕ್ಷಿಸಿದರು.

'ರಿಕ್ಕಿ', 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು' ಸಿನಿಮಾಗಳಲ್ಲಿ ಮಣ್ಣಿನ ಘಮವನ್ನೇ ಕಥಾಹಂದರವಾಗಿಸಿದ್ದ ರಿಷಬ್ ಶೆಟ್ಟಿ ಅವರು 'ಕಾಂತಾರ' ಸಿನಿಮಾದಲ್ಲಿ ಕರಾವಳಿಯ ಸಂಸ್ಕೃತಿ, ಆಚರಣೆಯ ಆಳಕ್ಕಿಳಿದಿದ್ದರು. ಪ್ರಕೃತಿ ಹಾಗೂ ಮನುಷ್ಯನ ನಡುವಿನ ಸಂಬಂಧ, ಭೂತಾರಾಧನೆ, ಕಂಬಳ, ಹಳ್ಳಿಗಳಲ್ಲಿ ಅರಣ್ಯ ಇಲಾಖೆ ಹಾಗೂ ಜನರ ನಡುವಿನ ಸಂಘರ್ಷ, ಸಮಾಜದಲ್ಲಿರುವ ದುರಾಸೆ ಮತ್ತದರ ಪರಿಣಾಮ, ಅಸ್ಪೃಶ್ಯತೆಯನ್ನು ಸೂಕ್ಷ್ಮವಾಗಿ 'ಕಾಂತಾರ' ತೋರಿತ್ತು. ಹೀಗಾಗಿಯೇ ಜನರನ್ನು ಸೆಳೆಯುವಲ್ಲಿಯೂ ಯಶಸ್ವಿಯಾಗಿತ್ತು.

ತಾಂತ್ರಿಕವಾಗಿಯೂ ಸಿನಿಮಾ ಗೆದ್ದಿತ್ತು. ಅರವಿಂದ್ ಕಶ್ಯಪ್ ಅವರ ಛಾಯಾಚಿತ್ರಗ್ರಹಣ, ಅಜನೀಶ್ ಲೋಕನಾಥ್ ಅವರ ಸಂಗೀತ ಸಿನಿಮಾ ಗೆಲುವಿನಲ್ಲಿ ಪ್ರಮುಖ ಪಾತ್ರವಹಿದ್ದವು.

'ಪ್ರಜಾವಾಣಿ ಇಷ್ಟು ಅದ್ಧೂರಿಯಾಗಿ ಕನ್ನಡ ಸಿನಿ ಸಮ್ಮಾನ ಆಯೋಜಿಸಿರುವುದು ಖುಷಿ ತಂದಿದೆ. ಗಿರೀಶ್ ಕಾಸರವಳ್ಳಿ ಅವರಂಥ ಮೇರು ನಿರ್ದೇಶಕರಿಂದ ಈ ಪ್ರಶಸ್ತಿಯನ್ನು ಪಡೆದುಕೊಳ್ಳುತ್ತಿರುವುದು ಹೆಮ್ಮೆಯ ವಿಷಯ. 'ಕಾಂತಾರ' ಎನ್ನುವುದು ರಿಷಬ್ ಶೆಟ್ಟಿ ಅವರ ಮನಸ್ಸಿಗೆ ಬಹಳ ಹತ್ತಿರವಾದ ಸಿನಿಮಾ. ಈ ಸಿನಿಮಾ ಪಯಣವೇ ಒಂದು ದೈವಿಕ ಪಯಣವಾಗಿತ್ತು. ದೈವದ ಆಶೀರ್ವಾದದಿಂದ ಈ ಸಿನಿಮಾ ಆಗಿದೆ. ಕನ್ನಡದ ಜನರು ಈ ಸಿನಿಮಾ ಕೈಹಿಡಿದರು. ಕೇವಲ ಕನ್ನಡದಲ್ಲಷ್ಟೇ ಈ ಸಿನಿಮಾ ಮಾಡಲು ಹೊರಟಿದ್ದೆವು. ಜನರ ಪ್ರೀತಿ ಇದನ್ನು ಪ್ಯಾನ್ ಇಂಡಿಯಾ ಸಿನಿಮಾ ಮಾಡಿದೆ. 'ಕಾಂತಾರ'ದ ಪ್ರೀಕ್ವೆಲ್ ಸಿದ್ಧವಾಗುತ್ತಿದೆ. ಚಿತ್ರಕಥೆಯಲ್ಲಿ ರಿಷಬ್ ತೊಡಗಿಸಿಕೊಂಡಿದ್ದಾರೆ. ಅವರ ಮೇಲಿನ ಜವಾಬ್ದಾರಿಯೂ ಹೆಚ್ಚಿದೆ' ಎಂದು ರಿಷಬ್ ಶೆಟ್ಟಿ ಅವರ ಪರವಾಗಿ ಪ್ರಶಸ್ತಿ ಸ್ವೀಕರಿಸಿದ ಪ್ರಗತಿ ರಿಷಬ್ ಶೆಟ್ಟಿ ಹೇಳಿದರು.



ವರ್ಷದ ಅತ್ಯುತ್ತಮ ಚಿತ್ರ ಟ್ರೋಫಿಯನ್ನು ಪ್ರಗತಿ ರಿಷಬ್ ಶೆಟ್ಟಿ ಅವರಿಗೆ ಹಸ್ತಾಂತರಿಸಿದ ಗಿರೀಶ ಕಾಸರವಳ್ಳಿ

ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದವರು
- **ಪ್ರವೀಣ್ ಕೃಪಾಕರ್** (ಚಿತ್ರ:ತಲೆದಂಡ)
- **ಎ. ಹರ್ಷ** (ಚಿತ್ರ:ವೇದ)
- **ಕಿರಣ್‌ರಾಜ್ ಕೆ.** (ಚಿತ್ರ:777 ಚಾರ್ಲಿ)
- **ರಾಹುಲ್ ಪಿ.ಕೆ** (ಚಿತ್ರ:ಸಕುಟುಂಬ ಸಮೇತ)
- **ರಿಷಬ್ ಶೆಟ್ಟಿ** (ಚಿತ್ರ:ಕಾಂತಾರ)

ಸೋಪಾನಗಳ ದಾಟಿ ಯಶಸ್ಸಿನ ಉತ್ತುಂಗ ಮುಟ್ಟಿದ ರಿಷಬ್



ಅತ್ಯುತ್ತಮ ನಿರ್ದೇಶನ
ರಿಷಬ್ ಶೆಟ್ಟಿ
ಚಿತ್ರ: ಕಾಂತಾರ

ಅತ್ಯುತ್ತಮ ನಿರ್ದೇಶನ ಟ್ರೋಫಿಯನ್ನು ಪ್ರಗತಿ ರಿಷಬ್ ಶೆಟ್ಟಿ ಅವರಿಗೆ ಹಸ್ತಾಂತರಿಸಿದ ಟಿ.ಎನ್.ಸೀತಾರಾಂ



ಕೊಡಚಾದ್ರಿಯ ತಪ್ಪಲಿನ ಕೆರಾಡಿ ಎಂಬಲ್ಲಿ 1983ರ ಜುಲೈ 7ರಂದು ಬೆಳಿಗ್ಗೆ 7 ಗಂಟೆಗೆ ರತ್ನಾವತಿ ಬಿ.ಶೆಟ್ಟಿ ಹಾಗೂ ಭಾಸ್ಕರ್ ಶೆಟ್ಟಿ ಮಗನಾಗಿ ಹುಟ್ಟಿದ ಪ್ರಶಾಂತ್ ಶೆಟ್ಟಿ, ರಿಷಬ್ ಶೆಟ್ಟಿಯಾಗಿ ಬೆಳೆದ ಬಗೆ ಆಸಕ್ತಿಕರ.

ಸಿನಿಮಾ ಕನಸು ಕಟ್ಟಿಕೊಂಡು ಬೆಂಗಳೂರಿಗೆ ಕಾಲಿಟ್ಟು ಮಿನರಲ್ ವಾಟರ್ ಸರಬರಾಜು ಮಾಡುತ್ತಾ, ಕ್ಲ್ಯಾಪ್ ಬಾಯ್-ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿ, ಹೋಟೆಲ್ ಪ್ರಾರಂಭಿಸಿ ಸೋತು, ಕಿರುತೆರೆ ಕ್ಷೇತ್ರದಲ್ಲೂ ದುಡಿದು ಸಿನಿ ಜಗತ್ತಿನಲ್ಲಿ ಯಶಸ್ಸಿನ ಮೆಟ್ಟಿಲುಗಳನ್ನು ಹತ್ತುತ್ತಿರುವ ನಟ, ನಿರ್ದೇಶಕ ರಿಷಬ್ ಶೆಟ್ಟಿ.

'7' ಎಂಬ ಸಂಖ್ಯೆಯನ್ನು ನಂಬಿ, 'R'ನಿಂದ ಆರಂಭವಾಗುವ 'ರಿಷಬ್' ಎಂಬ ಮರುನಾಮಕರಣ ಮಾಡಿಕೊಂಡು ಸಿನಿ ಜಗತ್ತಿನಲ್ಲಿ ಗುರುತಿಸಿಕೊಂಡವರು ಇವರು. ರಕ್ಷಿತ್ ಶೆಟ್ಟಿ ನಟನೆಯ, ಅರವಿಂದ್ ಕೌಶಿಕ್ ನಿರ್ದೇಶನದ 'ತುಗ್ಲಕ್' ಸಿನಿಮಾದಿಂದ ತಮ್ಮ ಸಿನಿಪಯಣ ಆರಂಭಿಸಿ, 'ರಿಕ್ಕಿ' ಕಥೆ ಹೇಳಿದವರು ರಿಷಬ್. 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು' ಸಿನಿಮಾ ಮೂಲಕ ತಮ್ಮ ನಿರ್ದೇಶನದ ಸಾಮರ್ಥ್ಯವನ್ನು ತೋರಿದ ರಿಷಬ್, ಈ ಚಿತ್ರಕ್ಕಾಗಿ 'ಸ್ವರ್ಣ ಕಮಲ' ರಾಷ್ಟ್ರೀಯ ಪ್ರಶಸ್ತಿಗೂ ಭಾಜನರಾದವರು. 'ಕಿರಿಕ್ ಪಾರ್ಟಿ' ಮೂಲಕ ನಿರ್ದೇಶಕನಾಗಿ ದೊಡ್ಡ ಯಶಸ್ಸನ್ನು ಕಂಡರು. ಹಲವು ಪ್ರಶಸ್ತಿಗಳನ್ನು ಈ ಸಿನಿಮಾ ಬಾಚಿಕೊಂಡಿತು.

ಕೆರಾಡಿಯ ರಿಷಬ್ ವಿಶ್ವಸಂಸ್ಥೆಯ ಅಂಗಳಕ್ಕೂ ಹೆಜ್ಜೆ ಇಡುವಂತೆ ಮಾಡಿದ್ದು 'ಕಾಂತಾರ' ಸಿನಿಮಾ. 'ಈ ಕಥೆ ನನ್ನ ಸಿನಿಮಾ ಪಟ್ಟಿಯಲ್ಲೇ ಇರಲಿಲ್ಲ. ಆದರೆ ಆ ಒಂದು ಸುಪ್ತಶಕ್ತಿಯೇ ಇದನ್ನು ಆರಿಸುವಂತೆ ಮಾಡಿತು' ಎಂದಿದ್ದರು ರಿಷಬ್. ಅತಿ ಹೆಚ್ಚು ದೈಹಿಕ ಶ್ರಮದ ಅಗತ್ಯವಿದ್ದ ಪಾತ್ರದ ಜೊತೆಗೆ ನಿರ್ದೇಶನದ ಜವಾಬ್ದಾರಿಯನ್ನೂ ಹೊತ್ತು, ಇಡೀ ಸಿನಿಮಾವನ್ನು ವ್ರತದ ರೀತಿ ನಿಭಾಯಿಸಿದವರು ರಿಷಬ್. ಚಿತ್ರವು ದೇಶದ ಹಲವು ಚಿತ್ರಮಂದಿರಗಳಲ್ಲಿ ಶತದಿನೋತ್ಸವವನ್ನು ಆಚರಿಸಿಕೊಂಡಿತು. ಸದ್ಯ 'ಕಾಂತಾರ'ದ ಪ್ರೀಕ್ವೆಲ್(ಹಿಂದಿನ ಕಥೆ) ಹೆಣೆಯುತ್ತಿರುವ ರಿಷಬ್ ಮಂಗಳೂರು, ಚಿಕ್ಕಮಗಳೂರಿನಲ್ಲಿ ಬೀಡುಬಿಟ್ಟಿದ್ದಾರೆ.

'ರಿಷಬ್ ಪರವಾಗಿ ಈ ಪ್ರಶಸ್ತಿಯನ್ನು ನಾನು ಸ್ವೀಕರಿಸುತ್ತಿದ್ದೇನೆ. ಇದು ಹೆಮ್ಮೆಯ ಕ್ಷಣ. ರಿಷಬ್‌ಗೆ ಸಿನಿಮಾವೇ ಜೀವನ. ಸಿನಿಮಾ ಬಗ್ಗೆಯೇ ಸದಾ ಯೋಚನೆ ಮಾಡುವ ವ್ಯಕ್ತಿ ಅವರು. 'ಕಾಂತಾರ'ದ ಗೆಲುವು ಒಂದೆರಡು ದಿನಗಳ ಶ್ರಮವಲ್ಲ. 20 ವರ್ಷದ ಪರಿಶ್ರಮಕ್ಕೆ ಸಿಕ್ಕ ಗೆಲುವು ಅದು. 'ಕಾಂತಾರ'ಕ್ಕೆ ಸಿಕ್ಕ ಪ್ರಶಸ್ತಿಗಳೆಲ್ಲವನ್ನೂ ರಿಷಬ್ ಮೂವರಿಗೆ ಅರ್ಪಿಸಿದ್ದಾರೆ. ಇವತ್ತು ಅದನ್ನು ರಿಷಬ್ ಪರವಾಗಿ ನಾನು ಮಾಡುತ್ತಿದ್ದೇನೆ. ಮೊದಲಿಗೆ ಈ ಪ್ರಶಸ್ತಿಯನ್ನು ಅಪ್ಪು(ಪುನೀತ್ ರಾಜ್‌ಕುಮಾರ್) ಅವರಿಗೆ, ದೈವ, ದೈವ ನರ್ತಕರು ಹಾಗೂ ಅವರ ಕುಟುಂಬದವರಿಗೆ ಹಾಗೂ ಜನರ ಪ್ರೀತಿಗೆ ಅರ್ಪಿಸುತ್ತೇನೆ. ನಾವು ಯಾವತ್ತೂ ಈ ಪ್ರೀತಿಗೆ ಚಿರಋಣಿಯಾಗಿರುತ್ತೇವೆ' ಎನ್ನುತ್ತಾರೆ ಪ್ರಗತಿ ರಿಷಬ್ ಶೆಟ್ಟಿ.

ಅದ್ಧೂರಿಯಾದ ಕಾರ್ಯಕ್ರಮಕ್ಕೆ ಸಾಕ್ಷಿಯಾದೆ: ನಾರಾಯಣ್

ಅಮೃತ್‌ನೋನಿ ಡಿ ಪ್ಲಸ್, ಅಮೃತ್‌ನೋನಿ ಆರ್ಥೋಪ್ಲಸ್, ಅಮೃತ್‌ನೋನಿ ಪವರ್ ಪ್ಲಸ್ ಸೇರಿದಂತೆ ಒಟ್ಟು ಎಂಟು ಉತ್ಪನ್ನಗಳಿವೆ. ಕ್ಯಾನ್ಸರ್‌ಗೆ, ಧಮ್ಮು, ನೋವಿಗೆ, ಶ್ಯಾಂಪು, ಹೇರ್ ಆಯಿಲ್, ಪೈಲ್ಸ್ ಹೀಗೆ ಎಲ್ಲ ಸೇರಿ ಮುಂದಿನ ಒಂದು ವರ್ಷದಲ್ಲಿ 25-30 ಉತ್ಪನ್ನ ಬಿಡುಗಡೆ ಮಾಡಲು ಸಿದ್ಧತೆ ನಡೆದಿದೆ

ನಾರಾಯಣ್, ಸಿಇಒ, 'ಅಮೃತ್‌ನೋನಿ'



ಜನಮೆಚ್ಚಿದ ಚಿತ್ರ ವಿಭಾಗದಲ್ಲಿ ಪ್ರಶಸ್ತಿ ಪಡೆದುಕೊಂಡ 'ಕಾಂತಾರ' ಚಿತ್ರದ ಪರವಾಗಿ ಹೊಂಬಾಳೆ ಫಿಲ್ಮ್ಸ್‌ನ ನಿರ್ಮಾಪಕ ಚೆಲುವೇಗೌಡ ಪ್ರಶಸ್ತಿ ಸ್ವೀಕರಿಸಿದರು. ನಟ, ನಿರೂಪಕ ರಮೇಶ್ ಅರವಿಂದ್, ರಿಷಬ್ ಶೆಟ್ಟಿ ಪತ್ನಿ ಪ್ರಗತಿ ಶೆಟ್ಟಿ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಅಮೃತ್‌ನೋನಿ'ಯ ಎಂ.ಡಿ ಮಂಗಳಾಂಬಿಕೆ ಹಾಗೂ ಸಿಇಒ ನಾರಾಯಣ್ ಇದ್ದಾರೆ



ರೆಡ್‌ಕಾರ್ಪೆಟ್‌ನಲ್ಲಿ 'ಅಮೃತ್ ನೋನಿ' ಎಂ.ಡಿ ಮಂಗಳಾಂಬಿಕೆ ಹಾಗೂ ಸಿಇಒ ನಾರಾಯಣ್

'ಪ್ರಜಾವಾಣಿ'ಯು ಇದೇ ಮೊದಲ ಬಾರಿಗೆ ಇಂಥದೊಂದು ಕಾರ್ಯಕ್ರಮವನ್ನು ಆಯೋಜಿಸಿತ್ತು. ಇಡೀ ಕಾರ್ಯಕ್ರಮವು ಎಷ್ಟು ಅಚ್ಚುಕಟ್ಟಾಗಿತ್ತೆಂದರೆ, ಮೊದಲನೇ ಬಾರಿಗೆ ಇಂಥ ಕಾರ್ಯಕ್ರಮ ಆಯೋಜಿಸುತ್ತಿದೆ ಎಂದು ಗೊತ್ತಾಗದ ಹಾಗೆ ಇತ್ತು. ಸಿನಿರಂಗದ ಎಲ್ಲ ಅತಿಥಿಗಳೂ ಬಂದಿದ್ದರು. ಇಡೀ ಕಾರ್ಯಕ್ರಮ ಬಹಳ ಸೊಗಸಾಗಿತ್ತು. ಒಂದು ಅದ್ಧೂರಿಯಾದ ಕಾರ್ಯಕ್ರಮಕ್ಕೆ ಸಾಕ್ಷಿಯಾದೆ'....

ಹೀಗೆಂದವರರು 'ಅಮೃತ್‌ನೋನಿ' ಸಿಇಒ ನಾರಾಯಣ್.

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಕಾರ್ಯಕ್ರಮದಲ್ಲಿ ಭಾಗವಹಿಸಿದ ನಾರಾಯಣ್ ಅವರು, ಜನಮೆಚ್ಚಿದ ಸಿನಿಮಾ ವಿಭಾಗದಲ್ಲಿ ಪ್ರಶಸ್ತಿ ಬಾಚಿಕೊಂಡ 'ಕಾಂತಾರ' ಸಿನಿಮಾ ತಂಡಕ್ಕೆ ಪ್ರಶಸ್ತಿ ಪ್ರದಾನ ಮಾಡಿದರು. ಇದೇ ವೇಳೆ ತಮ್ಮ ಸಂಸ್ಥೆಯ ಹೆಜ್ಜೆಗಳನ್ನು ಮೆಲುಕು ಹಾಕಿದರು.

ಹಲವು ವರ್ಷಗಳು ಹಲವು ರೋಗಗಳಿಂದ ಬಳಲುತ್ತಿದ್ದ ಶಿವಮೊಗ್ಗದ ತೀರ್ಥಹಳ್ಳಿ ತಾಲ್ಲೂಕಿನ ಗುಡ್ಡೆಕೊಪ್ಪದ ಶ್ರೀನಿವಾಸಮೂರ್ತಿ ಅವರಿಗೆ ಯಾರೋ ಗೆಳೆಯರು ತಂದುಕೊಟ್ಟ ನೋನಿ ರಸವು ರಾಮಬಾಣವಾಗಿ ಪರಿಣಮಿಸಿತು. ಆಯುರ್ವೇದ ಪದ್ಧತಿಯೊಂದಿಗೆ ಶ್ರೀನಿವಾಸಮೂರ್ತಿ ಅವರ ಸಂಶೋಧನೆಯೂ ಸೇರಿಕೊಂಡು 'ಅಮೃತ್‌ನೋನಿ' ಎನ್ನುವ ಇಷ್ಟು ದೊಡ್ಡ ಸಂಸ್ಥೆಯು ಹುಟ್ಟಿಕೊಂಡಿತು.

ಶ್ರೀನಿವಾಸಮೂರ್ತಿ ಅವರು ವರ್ಷದಿಂದ ಹಾಸಿಗೆ ಹಿಡಿದಿದ್ದರು. ಯಾವ ಅಲೋಪಥಿ, ಆಯುರ್ವೇದದ ಔಷಧಗಳೂ ಕೆಲಸಕ್ಕೆ ಬಾರದಾದಾಗ, ಇವರ ಸ್ನೇಹಿತರು ನೋನಿ ಹಣ್ಣಿನ ರಸವನ್ನು ಕುಡಿಯುವಂತೆ ಸಲಹೆ ನೀಡಿದರು. ಆದರೆ, ನೋನಿ ಹಣ್ಣಿನ ರಸಕ್ಕೆ ₹2,500ಕ್ಕೂ ಅಧಿಕ ಬೆಲೆ ಇತ್ತು. ಇದು ಶ್ರೀನಿವಾಸಮೂರ್ತಿ ಅವರಿಗೆ ಆರ್ಥಿಕ ಹೊರೆಯಾಗಿತ್ತು. ಇದಕ್ಕಾಗಿ ಅವರು ನೋನಿ ಹಣ್ಣಿನ ರಸ ಪಡೆಯುವುದರ ಕುರಿತು ಸಂಶೋಧನೆ ಆರಂಭಿಸಿದರು.

ಕೊಪ್ಪ ಆಯುರ್ವೇದ ಕಾಲೇಜಿನ ಪ್ರಾಂಶುಪಾಲರಾದ ಡಾ.ಸಂಜಯ್ ಅವರ ಸಹಕಾರದಿಂದ ನೋನಿ ರಸ ತೆಗೆಯುವುದನ್ನು ಕಲಿತುಕೊಂಡ ಶ್ರೀನಿವಾಸಮೂರ್ತಿ ಅವರು ವಾರದಲ್ಲೇ ಗುಣಮುಖರೂ ಆದರು. ನಂತರ ಮನೆಯಲ್ಲಿಯೇ ನೋನಿ ಪ್ರಯೋಗಕ್ಕೆ ತಮ್ಮನ್ನು ಒಡ್ಡಿಕೊಂಡರು.

ಇದು ಎಲ್ಲೆಡೆ ಪ್ರಚಾರ ಪಡೆದುಕೊಂಡಿತು. ನೋನಿ ರಸವನ್ನು ಕೇಳಿಕೊಂಡು ಮೂರ್ತಿಯವರ ಬಳಿಗೆ ಬೇರೆ ರೋಗಿಗಳೂ ಬರತೊಡಗಿದರು. ಮೊದಲು ಅವರೇ ತಂದ ಬಾಟಲಿಗಳಿಗೆ ನೋನಿ ರಸವನ್ನು ತುಂಬಿಕೊಡುತ್ತಿದ್ದ ಮೂರ್ತಿಯವರು ಬೇಡಿಕೆ ಇದೆ ಎಂದು ಗೊತ್ತಾದಾಗ ತಮ್ಮ ಹೊಲದಲ್ಲೇ ನೋನಿ ಬೆಳೆಯಲು ತೊಡಗಿದರು. ಪತ್ನಿ ಅಂಬುಜಾಕ್ಷಿ ಸಣ್ಣ ಗುಡಿ ಕೈಗಾರಿಕೆಯನ್ನೇ ಸ್ಥಾಪಿಸಲು ಮನಸ್ಸು ಮಾಡಿದರು. ಮನೆಯಲ್ಲೇ ಫ್ಯಾಕ್ಟರಿ. ಹಾಗೆ ಹುಟ್ಟಿದ್ದು 'ಅಮೃತ್‌ನೋನಿ'. ಅದನ್ನು ಮಾರುಕಟ್ಟೆಗೆ ಒದಗಿಸಲು ರೂಪಿಸಿದ ಕಂಪೆನಿ ValYou Products.

ಇಬ್ಬರೂ ಸೇರಿ ತೋಟದಲ್ಲೇ ಸಂಸ್ಕರಣಾ ಘಟಕ ಹಾಕಿ, ಪ್ರಯೋಗಾಲಯವನ್ನು ಸ್ಥಾಪಿಸಿದರು. ನೋನಿ ಸೋಪ್, ಅಮೃತ್ ಕೇಶ ತೈಲ, ಅಮೃತ್ ನೋವಿನೆಣ್ಣೆ – ಹೀಗೆ ಹಲವು ಉತ್ಪನ್ನಗಳನ್ನು ಹೊರತಂದರು. ಹೀಗೆ ಸಂಸ್ಥೆ ಹುಟ್ಟಿಕೊಂಡಿತು.

ಗುಣಮಟ್ಟದ ಉತ್ಪನ್ನ: ಜನರ ವಿಶ್ವಾಸ

'ಗುಣಮಟ್ಟದ ಉತ್ಪನ್ನ ನೀಡುವುದು ನಮ್ಮ ಉದ್ದೇಶ. ನಾವು ಮಾರುಕಟ್ಟೆಗೆ ಬಂದು ಈಗ 14 ವರ್ಷವಾಯಿತು. ಇಲ್ಲಿಯವರೆಗೂ ಗ್ರಾಹಕರ ವಿಶ್ವಾಸವನ್ನು ಉಳಿಸಿಕೊಂಡು ಬಂದಿದ್ದೇವೆ. ನಮ್ಮ ಉತ್ಪನ್ನದ ಗುಣಮಟ್ಟ ಮತ್ತು ಗ್ರಾಹಕರಿಗೆ ನಾವು ನೀಡುತ್ತಿರುವ ಸೇವೆಯೇ ಇದಕ್ಕೆ ಕಾರಣ' ಎನ್ನುತ್ತಾರೆ ಅಮೃತ್‌ನೋನಿ ಸಿಇಒ ನಾರಾಯಣ್.

'ಮಾರುಕಟ್ಟೆಯಲ್ಲಿ ನಮ್ಮ ಸಂಸ್ಥೆಯ ಎಂಟು ಉತ್ಪನ್ನಗಳು ಮಾತ್ರ ಇವೆ. ಮಾರುಕಟ್ಟೆಗೆ ಬಂದು 14 ವರ್ಷವಾದರೂ ಎಂಟೇ ಉತ್ಪನ್ನ ಎಂದುಕೊಳ್ಳಬಹುದು. ನಮ್ಮ ಸಂಸ್ಥೆ ಮಾರುಕಟ್ಟೆಗೆ ಉತ್ಪನ್ನವನ್ನು ಬಿಡುಗಡೆ ಮಾಡುವುದಕ್ಕೆ ಆತುರ ತೋರುವುದಿಲ್ಲ. ಪ್ರತಿ ಉತ್ಪನ್ನವನ್ನು ಹಲವು ವಿಧಗಳಲ್ಲಿ ಸಂಶೋಧನೆಗೆ ಒಳಪಡಿಸುತ್ತೇವೆ. ಅಂದರೆ, ಪ್ರೀ ಕ್ಲಿನಿಕಲ್, ಕ್ಲಿನಿಕಲ್ ಪರೀಕ್ಷೆ ಹೀಗೆ' ಎಂದರು.

'ಭಾರತದ ಐದು ರಾಜ್ಯಗಳಲ್ಲಿ ನಮ್ಮ ಮಾರುಕಟ್ಟೆ ಇದೆ. ಆಯುರ್ವೇದದಲ್ಲಿ ಎಂ.ಡಿ ಓದಿದ 35 ಡಾಕ್ಟರ್ ನಮ್ಮ ಜೊತೆ ಇದ್ದಾರೆ. ಜೊತೆಗೆ, ಒಟ್ಟು 250 ಕಸ್ಟಮರ್ ಕೇರ್ ಕೇಂದ್ರಗಳಿವೆ. ಈ ಕೇಂದ್ರಗಳ ಮೂಲಕ ರೋಗಿಗಳೊಂದಿಗೆ ಉತ್ತಮ ಬಾಂಧವ್ಯ ಇಟ್ಟುಕೊಳ್ಳಲಾಗುತ್ತದೆ. ನಮ್ಮ ಉತ್ಪನ್ನವನ್ನು ಹೇಗೆ ಬಳಸಬೇಕು, ಜೀವನಶೈಲಿ ಹೇಗಿರಬೇಕು ಎಂಬಂಥ ಮಾಹಿತಿಗಳನ್ನು ನೀಡಲಾಗುತ್ತದೆ' ಎಂದರು.

'ನಮ್ಮದೇ 160 ಎಕರೆ ಪ್ರದೇಶದಲ್ಲಿ ನಾವೇ ನೋನಿ ಹಣ್ಣಿನ ಗಿಡಗಳನ್ನು ಬೆಳೆಸುತ್ತೇವೆ. ನಮ್ಮ ಉತ್ಪನ್ನಗಳಿಗೆ ಬಳಸುವ ಗಿಡಮೂಲಿಕೆಗಳನ್ನೂ ನಾವೇ ಬೆಳೆದುಕೊಳ್ಳುತ್ತೇವೆ. ಸಾವಯವ ಗೊಬ್ಬರ ಮೂಲಕವೇ ಕೃಷಿ ಮಾಡಲಾಗುತ್ತದೆ. ಈ ಕಾರಣದಿಂದಲೂ ನಮ್ಮ ಉತ್ಪನ್ನ ಗುಣಮಟ್ಟ ಕಾಯ್ದುಗೊಂಡಿದೆ' ಎಂದರು.

ಅಮೃತ್‌ನೋನಿ ಕುರಿತಾದ ರಸಪ್ರಶ್ನೆ ಸ್ಪರ್ಧೆಯಲ್ಲಿ ನಟಿ ಪೂಜಾ ಗಾಂಧಿ ವಿಜೇತರಾದರು. ಇದೇ ವೇಳೆ ಪೂಜಾ ಗಾಂಧಿ ಅಮೃತ್‌ನೋನಿ ಬಗ್ಗೆ ಮೆಚ್ಚುಗೆಯ ಮಾತನಾಡಿದರು.

15 ವರ್ಷಗಳ ನಂಟು

'ಪ್ರಜಾವಾಣಿ' ಜೊತೆ ನನಗೆ 15 ವರ್ಷಗಳ ನಂಟಿದೆ. ಏಕೆಂದರೆ ನಾನು ಜಾಹೀರಾತು ಕ್ಷೇತ್ರದಿಂದ ಬಂದವನು. ನಮ್ಮ ಕರ್ನಾಟಕದ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿರುವ ಏಕೈಕ ಪತ್ರಿಕೆ 'ಪ್ರಜಾವಾಣಿ'. ಪತ್ರಿಕೆ 75 ವರ್ಷಗಳನ್ನು ಪೂರೈಸಿರುವುದು ಹೆಮ್ಮೆಯ ವಿಚಾರ ಎನ್ನುತ್ತಾರೆ 'ಅಮೃತ್ ನೋನಿ' ಸಿಇಒ ನಾರಾಯಣ್. 'ಪ್ರಜಾವಾಣಿ ನೂರು ವರ್ಷಗಳನ್ನು ಪೂರೈಸಿ ಮುನ್ನಡೆಯಲಿ. ಕನ್ನಡ ಸಿನಿ ಸಮ್ಮಾನ ಎನ್ನುವ ಕಾರ್ಯಕ್ರಮವೂ ಇದೇ ರೀತಿ ಅದ್ಧೂರಿಯಾಗಿ ನಡೆಯಲಿ ಎನ್ನುವುದು ಹಾರೈಕೆ' ಎಂದರು 'ಅಮೃತ್ ನೋನಿ' ಎಂ.ಡಿ ಮಂಗಳಾಂಬಿಕೆ.

ವಿಜಯ್ ನೆನಪಿನ 'ಸಂಚಾರ'



ಸುಮನ್ ಕಿತ್ತೂರು ಅವರಿಂದ ಸಂಚಾರಿ ವಿಜಯ್ ಪರವಾಗಿ ಸಹೋದರ ಸಿದ್ದೇಶ್ ಸಮ್ಮಾನ ಸ್ವೀಕರಿಸಿದರು. ಸಂಚಾರಿ ತಂಡದ ರೂವಾರಿ ಎನ್. ಮಂಗಳಾ ಹಾಜರಿದ್ದರು

ಅತ್ಯುತ್ತಮ ನಟ
ಸಂಚಾರಿ ವಿಜಯ್
(ಚಿತ್ರ: ತಲೆದಂಡ)

ರಂಗಭೂಮಿ, ಕಿರುತೆರೆ, ಹಿರಿತೆರೆ ನಟರಾಗಿ ಗುರುತಿಸಿಕೊಂಡ ಸಂಚಾರಿ ವಿಜಯ್ 'ತಲೆದಂಡ' ಚಿತ್ರದ ಕುನ್ನೇಗೌಡನ ಪಾತ್ರಕ್ಕಾಗಿ 'ಪ್ರಜಾವಾಣಿ ಸಿನಿ ಸಮ್ಮಾನ'ದ ಅತ್ಯುತ್ತಮ ನಟ ಪ್ರಶಸ್ತಿ ಪಡೆದಿದ್ದಾರೆ. ಸಂಚಾರಿ ವಿಜಯ್ ಮುಖ್ಯಭೂಮಿಕೆಯಲ್ಲಿದ್ದ 'ತಲೆದಂಡ' ಸಿನಿಮಾಕ್ಕೆ 'ಅತ್ಯುತ್ತಮ ಪರಿಸರ ಕಾಳಜಿಯ ಸಿನಿಮಾ' ವಿಭಾಗದಲ್ಲಿ 68ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಲಭಿಸಿತ್ತು.

ಬುದ್ಧಿಮಾಂದ್ಯ ಹುಡುಗ ಕುನ್ನೇಗೌಡನಾಗಿ ಸಂಚಾರಿ ವಿಜಯ್ ಅಭಿನಯಿಸಿದ್ದರು. ಕಾಡು, ಗಿಡ, ಮರವೆಂದರೆ ಈತನಿಗೆ ಅಚ್ಚುಮೆಚ್ಚು. ಊರಿನಲ್ಲಿರುವ ಮರಗಳನ್ನು ಕಡಿದು ರಸ್ತೆ ಮಾಡಲು ಬಂದ ಸರ್ಕಾರಿ ಅಧಿಕಾರಿಗಳ ಮೇಲೆ ಹಲ್ಲೆ ಮಾಡಲು ಹೋಗುತ್ತಾನೆ. ಆತನನ್ನು ಪೊಲೀಸರು ಬಂಧಿಸುತ್ತಾರೆ. ಆದರೆ ಮಾನಸಿಕ ಅಸ್ವಸ್ಥನಾಗಿರುವುದರಿಂದ ಶಿಕ್ಷೆ ಕೊಡಲು ಆಗುವುದಿಲ್ಲ. ಚಿಕಿತ್ಸೆಯ ಅಗತ್ಯವಿದೆ ಎಂಬ ತೀರ್ಪು ಕೋರ್ಟ್‌ನಿಂದ ಬರುತ್ತದೆ. ಚಿಕಿತ್ಸೆಯ ನಂತರ ತನ್ನೂರಿಗೆ ಮರಳಿದ ಕುನ್ನೇಗೌಡನ ಬದುಕು ಬದಲಾಗುತ್ತದೆ. ಪ್ರಕೃತಿಯನ್ನು ರಕ್ಷಿಸಲೇಬೇಕು ಎಂದು ಪಣ ತೊಡುವ ಪಾತ್ರದಲ್ಲಿ ನಟಿಸಿದ ಸಂಚಾರಿ ವಿಜಯ್ ಪ್ರೇಕ್ಷಕರ ಕಣ್ಣಲ್ಲಿ ನೀರು ತರಿಸಿದ್ದರು.

ವಿಜಯ್ ಇಂದು ನಮ್ಮೊಂದಿಗಿಲ್ಲ. ಆದರೆ ಅವರು ನಟಿಸಿಹೋದ ಸಾಕಷ್ಟು ಪಾತ್ರಗಳು ಜೀವಂತವಾಗಿವೆ. ಚಿಕ್ಕಮಗಳೂರು ಜಿಲ್ಲೆಯ ಪಂಚನಹಳ್ಳಿಯ ಬಿ.ವಿಜಯ್ ಕುಮಾರ್‌ಗೆ 'ಸಂಚಾರಿ' ರಂಗತಂಡದಿಂದಾಗಿ 'ಸಂಚಾರಿ ವಿಜಯ್' ಎಂಬ ಹೆಸರು ಬಂದಿದ್ದು.

1983ರಲ್ಲಿ ಜನಿಸಿದ ವಿಜಯ್‌ಗೆ ಮನೆಯೇ ಮೊದಲ ಕಲಾ ಪಾಠಶಾಲೆ. ಇವರ ತಂದೆ ಬಸವರಾಜಯ್ಯನವರು ಚಿತ್ರ ಕಲಾವಿದರಾಗಿದ್ದರು. ಸಂಗೀತ ವಾದ್ಯಗಳನ್ನು ನುಡಿಸುತ್ತಿದ್ದರು. ತಾಯಿ ಗೌರಮ್ಮನವರು ಜಾನಪದ ಕಲಾವಿದರಾಗಿದ್ದರು. ಹೀಗಾಗಿ ವಿಜಯ್‌ಗೆ ಬಾಲ್ಯದಿಂದಲೇ ಕಲಾಸಕ್ತಿ ಬೆಳೆದಿತ್ತು.

ಬೆಂಗಳೂರಿನ ಬಿಎಂಎಸ್ ಶಿಕ್ಷಣ ಸಂಸ್ಥೆಯಲ್ಲಿ ಎಂಜಿನಿಯರಿಂಗ್ ಪದವಿ ಪೂರೈಸಿದ ವಿಜಯ್, ಕೆಲಸಕ್ಕೆ ವಿದಾಯ ಹೇಳಿ ಪೂರ್ಣಪ್ರಮಾಣದಲ್ಲಿ ರಂಗಭೂಮಿಯಲ್ಲಿ ತೊಡಗಿಸಿಕೊಂಡರು. ಹದಿಮೂರು ವರ್ಷಗಳಿಂದ ಸಂಚಾರಿ ಥಿಯೇಟರ್ ರಂಗತಂಡದ ಹಲವಾರು ನಾಟಕಗಳಲ್ಲಿ ಅಭಿನಯಿಸುವುದರ ಜೊತೆಗೆ ಕನ್ನಡದ ಹಲವಾರು ರಂಗತಂಡಗಳಲ್ಲಿ ನಟಿಸಿದರು. ರಂಗಭೂಮಿಯಲ್ಲಿ ನಟನೆ ಮಾತ್ರವಲ್ಲದೇ ಎರಡು ನಾಟಕಗಳನ್ನು ಸಹ ನಿರ್ದೇಶಿಸಿದರು.

2011ರಲ್ಲಿ ಚಿತ್ರರಂಗ ಪ್ರವೇಶ ಮಾಡಿದ ಅವರು ನಟಿಸಿದ ಮೊದಲ ಚಿತ್ರ 'ರಂಗಪ್ಪ ಹೋಗ್ಬಿಟ್ನಾ'. 'ದಾಸವಾಳ' ಚಿತ್ರದಲ್ಲಿ ಗುರುತಿಸಿಕೊಂಡರು. 'ನಾನು ಅವನಲ್ಲ ಅವಳು' ಸಿನಿಮಾ ವೃತ್ತಿ ಜೀವನಕ್ಕೆ ತಿರುವು ನೀಡಿದ ಚಿತ್ರ. ಈ ಚಿತ್ರದ ನಟನೆಗಾಗಿ 2014ರ ಸಾಲಿನ 62ನೇ ರಾಷ್ಟ್ರ ಚಲನಚಿತ್ರ ಪ್ರಶಸ್ತಿಯಲ್ಲಿ ಅತ್ಯುತ್ತಮ ನಟ ಪ್ರಶಸ್ತಿ ದೊರೆಯಿತು. ಈ ಚಿತ್ರದಲ್ಲಿ ತೃತೀಯ ಲಿಂಗಿಯ ಪಾತ್ರ ನಿರ್ವಹಿಸಿದ್ದರು. ಇದೇ ಪಾತ್ರಕ್ಕೆ ಅತ್ಯುತ್ತಮ ನಟ ರಾಜ್ಯ ಪ್ರಶಸ್ತಿ, ಅತ್ಯುತ್ತಮ ನಟ ಫಿಲ್ಮ್‌ಫೇರ್ ಪ್ರಶಸ್ತಿಗಳು ಲಭಿಸಿದವು.

ತೆಲುಗು, ತಮಿಳು ಚಿತ್ರಗಳಲ್ಲಿಯೂ ನಟಿಸಿದ್ದ ಅವರು, ಕನ್ನಡದ ಅನೇಕ ಚಿತ್ರಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರು. ಹರಿವು, ಒಗ್ಗರಣೆ, ಕೃಷ್ಣ ತುಳಸಿ, ನಾತಿಚರಾಮಿ, ಆಕ್ಟ್-1978 ಮೊದಲಾದ ಚಿತ್ರಗಳಲ್ಲಿ ಕಾಣಿಸಿಕೊಂಡರು.

ಶಾಸ್ತ್ರೀಯ ಸಂಗೀತವನ್ನೂ ಅಭ್ಯಸಿಸಿರುವ ವಿಜಯ್, ಹಲವಾರು ನಾಟಕಗಳಲ್ಲಿ ಹಾಡಿದ್ದು, ರಿಯಾಲಿಟಿ ಶೋಗಳಲ್ಲಿಯೂ ಭಾಗವಹಿಸಿದ್ದರು. ಹಲವು ಧಾರಾವಾಹಿಗಳಲ್ಲಿ ಕೂಡ ನಟಿಸಿದ್ದರು.

ಸಂಚಾರಿ ವಿಜಯ್ ಅವರು ಬೆಂಗಳೂರಿನಲ್ಲಿ ಸ್ನೇಹಿತನ ಜೊತೆ ದ್ವಿಚಕ್ರವಾಹನದಲ್ಲಿ ಹೋಗುತ್ತಿದ್ದಾಗ ಅಪಘಾತವಾಗಿ ಕೋಮಾ ಸ್ಥಿತಿ ತಲುಪಿದ್ದರು. 2021ರ ಜೂನ್ 15ರಂದು ಸಾವಿಗೀಡಾದರು. ವಿಜಯ್ ನಿಧನದ ನಂತರ ಅವರ 'ಲಂಕೆ', 'ಮೇಲೊಬ್ಬ ಮಾಯಾವಿ', 'ಪುಕ್ಸಟ್ಟೆ ಲೈಫು', 'ತಲೆದಂಡ' ಸಿನಿಮಾಗಳು ತೆರೆಕಂಡಿವೆ.

'ಅಣ್ಣನನ್ನು ಕಳೆದುಕೊಂಡಿದ್ದು ಕುಟುಂಬಕ್ಕೆ, ಸಿನಿಮಾರಂಗಕ್ಕೆ ನಷ್ಟ. ಇನ್ನಷ್ಟು ಕಾಲ ಬದುಕಿರಬೇಕಿತ್ತು. ಬಹಳ ಕಷ್ಟಪಟ್ಟು ಮೇಲೆ ಬಂದಿದ್ದ' ಎಂದು ಪ್ರಶಸ್ತಿ ಸ್ವೀಕರಿಸಿದ ಅವರ ಸಹೋದರ ಸಿದ್ದೇಶ್ ಹೇಳಿದರು.

'ಸಂಭ್ರಮ, ಸಂಕಟ ಎರಡನ್ನೂ ಬಿಟ್ಟು ಹೋಗಿದ್ದಾನೆ. ಪ್ರಶಸ್ತಿ ಬಂದಿದೆ ಎಂಬ ಖುಷಿ ಒಂದೆಡೆಯಾದರೆ, ಸ್ವೀಕರಿಸಲು ಅವನಿಲ್ಲ ಎಂಬ ನೋವು ಇನ್ನೊಂದೆಡೆ. ವಿಜಯ್ ಇರಬೇಕಿತ್ತು. ಯಾಕೆಂದರೆ ಅವನು ಮಾಡಬೇಕಿದ್ದ ಕೆಲಸ ಸಾಕಷ್ಟಿತ್ತು. ಈಗಷ್ಟೇ ಪಯಣ ಪ್ರಾರಂಭವಾಗಿತ್ತು' ಎಂದು ವೇದಿಕೆ ಮೇಲಿದ್ದ ಸಂಚಾರಿ ತಂಡದ ರೂವಾರಿ ಎನ್. ಮಂಗಳಾ ಹೇಳಿದರು.

ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದವರು
- **ಸಂಚಾರಿ ವಿಜಯ್** (ಚಿತ್ರ: ತಲೆದಂಡ)
- **ರಕ್ಷಿತ್ ಶೆಟ್ಟಿ** (ಚಿತ್ರ:777 ಚಾರ್ಲಿ)
- **ಶರಣ್** (ಚಿತ್ರ: ಗುರು ಶಿಷ್ಯರು)
- **ಅಚ್ಯುತ್ ಕುಮಾರ್** (ಚಿತ್ರ:ಫೋರ್ ವಾಲ್ಸ್)
- **ಯಶ್** (ಚಿತ್ರ:ಕೆ.ಜಿ.ಎಫ್. ಚಾಪ್ಟರ್-2)

ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದವರು
- **ಹಿತಾ ಚಂದ್ರಶೇಖರ್** (ಚಿತ್ರ: ತುರ್ತು ನಿರ್ಗಮನ)
- **ಲಕ್ಷ್ಮಿ ಚಂದ್ರಶೇಖರ್** (ಚಿತ್ರ: 9 ಸುಳ್ಳು ಕಥೆಗಳು)
- **ಸಿರಿ ರವಿಕುಮಾರ್** (ಚಿತ್ರ: ಸಕುಟುಂಬ ಸಮೇತ)
- **ಗಾನವಿ ಲಕ್ಷ್ಮಣ್** (ಚಿತ್ರ: ವೇದ)
- **ಅದಿತಿ ಪ್ರಭುದೇವ** (ಚಿತ್ರ: Once upon a time in ಜಮಾಲಿಗುಡ್ಡ)

ಅತ್ಯುತ್ತಮ ನಟಿ
ಗಾನವಿ ಲಕ್ಷ್ಮಣ್
(ಚಿತ್ರ: ವೇದ)

'ಪುಷ್ಪ' ಅಂದ್ರೆ ಇವರೇ ನೋಡಿ



'ವೇದ' ಚಿತ್ರದಲ್ಲಿನ ನಟನೆಗಾಗಿ ನಟಿ ಗಾನವಿ ಲಕ್ಷ್ಮಣ್ ಅತ್ಯುತ್ತಮ ನಟಿ ಟ್ರೋಫಿ ಮುಡಿಗೇರಿಸಿಕೊಂಡರು. 'ಜಾನಕಿ'ಯಾಗಿ ಕನ್ನಡ ಪ್ರೇಕ್ಷಕರ ಮನ-ಮನೆಗಳಲ್ಲಿ ಗುರುತಿಸಿಕೊಂಡು ಮನೆ ಮಗಳಾದವರು.

ಕಿರುತೆರೆಯಿಂದ ಬೆಳ್ಳಿತೆರೆಗೆ ಕಾಲಿಟ್ಟು ಮಿಂಚುತ್ತಿರುವ ನಟಿಯರ ಪೈಕಿ ಗಾನವಿ ಕೂಡ ಒಬ್ಬರು. ಟಿ.ಎನ್.ಸೀತಾರಾಂ ನಿರ್ದೇಶನದ 'ಮಗಳು ಜಾನಕಿ' ಧಾರಾವಾಹಿ ಮೂಲಕ ಬಣ್ಣದ ಲೋಕದ ಪಯಣ ಆರಂಭಿಸಿದ ಇವರಿಗೆ ರಂಗಭೂಮಿಯ ನಂಟೂ ಇದೆ. ತಮ್ಮ ವೃತ್ತಿಜೀವನವನ್ನು ವಸತಿಶಾಲೆಯೊಂದರಲ್ಲಿ ನೃತ್ಯ ಶಿಕ್ಷಕಿಯಾಗಿ ಆರಂಭಿಸಿದ ಗಾನವಿ, ನಟ ರಿಷಬ್ ಶೆಟ್ಟಿ ನಟನೆಯ 'ಹೀರೋ' ಸಿನಿಮಾ ಮೂಲಕ ಬೆಳ್ಳಿತೆರೆಗೆ ಕಾಲಿಟ್ಟರು. ಇದು ಅವರ ಸಿನಿಪಯಣಕ್ಕೆ ಬಾಗಿಲಾಯಿತು. ಅವಕಾಶಗಳು ಇಲ್ಲಿಂದ ಹರಿದುಬಂದವು.

ಧಾರಾವಾಹಿಗೆ ಪ್ರವೇಶಿಸಿದಾಗ ಬಣ್ಣದ ಲೋಕಕ್ಕೆ ಹೊಸಬರಾಗಿದ್ದ ಗಾನವಿ, 'ಹೀರೋ' ಮೂಲಕ ನಟನೆಯನ್ನು ಮತ್ತಷ್ಟು ಶಾರ್ಪ್ ಮಾಡಿಕೊಂಡರು. ದೊಡ್ಡ ಕಥೆ, ಶಕ್ತಿಯುತವಾದ ಪಾತ್ರವೇ ಬೇಕು ಎನ್ನುವ ತುಡಿತದ ಅವರಿಗೆ 'ವೇದ'ದ ವೇದಿಕೆ ಒದಗಿಸಿತ್ತು. ನಟ ಶಿವರಾಜ್‌ಕುಮಾರ್ ಅವರ 125ನೇ ಸಿನಿಮಾ ಎಂಬ ಮೈಲುಗಲ್ಲು. ಅಲ್ಲಿ 'ಪುಷ್ಪ' ಎಂಬ ಪಾತ್ರದಲ್ಲಿ ಗಾನವಿ ಮಿಂಚಿದವರು. ಶಿವರಾಜ್‌ಕುಮಾರ್-ಗಾನವಿ ಜೋಡಿಯನ್ನು ಪ್ರೇಕ್ಷಕರು ಮೆಚ್ಚಿಕೊಂಡರು. ಚಂದನವನದಿಂದ ಟಾಲಿವುಡ್‌ಗೂ ಕಾಲಿಟ್ಟಿದ್ದಾರೆ ಗಾನವಿ. ಅವರ ತೆಲುಗಿನ ಮೊದಲ ಚಿತ್ರ, ಅಜಯ್ ಸಾಮ್ರಾಟ್ ನಿರ್ದೇಶನದ ಜಗಪತಿ ಬಾಬು, ಆಶಿಶ್ ಗಾಂಧಿ ಅವರು ನಟಿಸಿರುವ 'ರುದ್ರಾಂಗಿ' ಚಿತ್ರೀಕರಣ ಪೂರ್ಣಗೊಂಡಿದ್ದು, ಇನ್ನಷ್ಟೇ ಬಿಡುಗಡೆಯಾಗಬೇಕಿದೆ.

> ಈ ಪ್ರಶಸ್ತಿಯನ್ನು ತಂದೆ-ತಾಯಿಗೆ ಅರ್ಪಿಸುತ್ತೇನೆ. 'ಪ್ರಜಾವಾಣಿ' ಸಿನಿಮಾ ಉತ್ಸವ ಇದು. ನಿರ್ದೇಶಕ ಎ.ಹರ್ಷ ಅವರು ಈ ಅದ್ಭುತ ಪಾತ್ರವನ್ನು ಸೃಷ್ಟಿಸಿದರು. ಗೀತಾ ಶಿವರಾಜ್‌ಕುಮಾರ್ ಹಾಗೂ ಶಿವರಾಜ್‌ಕುಮಾರ್ ಅವರಿಗೆ ಧನ್ಯವಾದ.
>
> **ಗಾನವಿ ಲಕ್ಷ್ಮಣ್**



ಸಿನಿ ಸಮ್ಮಾನ ಸಮಾರಂಭ ವೀಕ್ಷಿಸುತ್ತಿರುವ ಗಣ್ಯರು ಹಾಗೂ ಪ್ರೇಕ್ಷಕರು



ಅರ್ಜುನ್ ಜನ್ಯ



ಸಂಯುಕ್ತ ಹೊರನಾಡು, ಸುಧಾ ಬೆಳವಾಡಿ

ಸೂರ್ಯ ಕಂತುವ ಹೊತ್ತಿಗೆ ತಾರೆಗಳ ತಾಳಮೇಳ. ಕನ್ನಡ ಚಿತ್ರರಂಗದ ಹೊಸ ಚಿಗುರು, ಹಳೆ ಬೇರಿನ ಸಮಾಗಮ. ಹಸ್ತಲಾಘವ ಮಾಡಿದ ಅನೇಕರ ಮುಖ ಮೊರದಗಲ. ಎಂದೋ ಕಂಡ ನೆನಪಿನ ಮರುಕಳಿಕೆ. ಸೆಲ್ಫಿ ಗೀಳಿನವರಿಗೂ ಸಾಥ್ ನೀಡಿತು ಸೂರಿನ ದೀಪ. **'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'**ದ ಮೊದಲ ಅಧ್ಯಾಯಕ್ಕೆ ನಗುವಿನ ರುಜು ಹಾಕಿ ಬಂದವರ ಸಂಖ್ಯೆ ಎಣಿಕೆಗೆ ಸಿಗದಷ್ಟಿತ್ತು. ನೋಡಿದವರ ಕಣ್ಣುಗಳಿಗೆ ಎದುರಾದದ್ದು– ನಗುವಿನ ವಿನಿಮಯ, ಸಂತಸ ಸಿನಿಮೀಯ. ಚಿತ್ರವತ್ತಾದ ಕ್ಷಣಗಳು ಇದೋ...



ಭಾ.ಮಾ.ಹರೀಶ್



ಎಂ.ಡಿ.ಪಲ್ಲವಿ



ಶೈನ್ ಶೆಟ್ಟಿ



ಹಿತಾ ಚಂದ್ರಶೇ...



ಶ್ರುತಿ ಹರಿಹರನ್

ಅಂಕಿತಾ ಅಮರ್



ಸೆಲ್ಫಿಗೆ ನಗು ಚೆಲ್ಲಿದ 'ತಲೆದಂಡ' ಚಿತ್ರತಂಡ



ನಿರ್ದೇಶಕರಾದ ಮಹೇಶ್ ಕುಮಾರ್ ಹಾಗೂ ಚೇತನ್ ಕುಮಾರ್



ಗಿರಿಜಾ ಲೋಕೇಶ್



ಪೂಜಾ ಗಾಂಧಿ, ಸುಮನ್ ಕಿತ್ತೂರ್, ಪ್ರಗತಿ ಶೆಟ್ಟಿ ಹಾಗೂ ಶ್ರುತಿ ಹರಿಹರನ್



ಸಿರಿ ರವಿಕುಮಾರ್



ಉಭಯ ಕುಶಲೋಪರಿಯಲ್ಲಿ ಸುಂದರ್ ರಾಜ್ ಹಾಗೂ ಅರ್ಚನಾ ಉಡುಪ

ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್, ರಂಜು ಪಿ., ಕಿಶೋರ ಕುಮಾರ್ ಬೋಳಾರ್



ಅತ್ಯುತ್ತಮ ಪೋಷಕ ನಟ
ಕಿಶೋರ್
(ಚಿತ್ರ: ಕಾಂತಾರ)

‘ಕಂಠಿ’ಯಿಂದ ‘ಕಾಂತಾರ’ದವರೆಗೆ...

ಕನ್ನಡ ಚಿತ್ರರಂಗದಲ್ಲಿ ‘ಹುಲಿ ಕಿಶೋರ್’ ಎಂದೇ ಜನಪ್ರಿಯರಾದ ಕಿಶೋರ್ ಕುಮಾರ್‌ಗೆ ‘ಕಾಂತಾರ’ ಚಿತ್ರದಲ್ಲಿನ ಅರಣ್ಯಾಧಿಕಾರಿ ಪಾತ್ರಕ್ಕಾಗಿ ‘ಪ್ರಜಾವಾಣಿ ಸಿನಿ ಸಮ್ಮಾನ’ದಲ್ಲಿ ‘ಅತ್ಯುತ್ತಮ ಪೋಷಕ ನಟ’ ಪ್ರಶಸ್ತಿ ಲಭಿಸಿದೆ.

‘ಕಾಂತಾರ’ ಚಿತ್ರದಲ್ಲಿ ಅರಣ್ಯ ಸಂರಕ್ಷಣಾಧಿಕಾರಿ ಮುರುಳಿಯಾಗಿ ಕಿಶೋರ್ ಅಭಿನಯಿಸಿದ್ದು, ಪ್ರೇಕ್ಷಕನ ಕಣ್ಣಿಗದು ಋಣಾತ್ಮಕ ಪಾತ್ರ. ಕಥೆಯಲ್ಲಿ ಅರಣ್ಯ ಸಂರಕ್ಷಿಸುವ ಅಧಿಕಾರಿಯಾಗಿ ಕಾನೂನು ಪಾಲನೆಯಲ್ಲಿ ತೊಡಗಿಸಿಕೊಂಡರೂ, ಕಾಡಿನಲ್ಲಿ ವಾಸವಿರುವ ಬುಡಕಟ್ಟು ಜನರನ್ನು ಎದುರು ಹಾಕಿಕೊಂಡು ನೋಡುಗನ ಪಾಲಿಗೆ ವೈರಿಯಂತೆ ಕಾಣುತ್ತಾರೆ. ಭೂತದಕೋಲಕ್ಕೆ ಅಡ್ಡಿಪಡಿಸುವ ಮೂಲಕ ನಾಯಕ ಶಿವನನ್ನು ಎದುರು ಹಾಕಿಕೊಳ್ಳುವ ಮುರುಳಿ, ಚಿತ್ರದುದ್ದಕ್ಕೂ ನಾಯಕನ ಎದುರು ಪ್ರತಿನಾಐಕನಂತೆ ಕಾಣುತ್ತಾರೆ. ದೇವರನ್ನೇ ನಂಬದ ಅಧಿಕಾರಿ ಚಿತ್ರದ ಕೊನೆಯಲ್ಲಿ ದೈವಕ್ಕೆ ಶರಣಾಗುವುದನ್ನು ಪ್ರೇಕ್ಷಕರು ಮೆಚ್ಚಿಕೊಂಡರು.

ಬೆಂಗಳೂರು ನ್ಯಾಷನಲ್ ಕಾಲೇಜು ವಿದ್ಯಾರ್ಥಿಯಾಗಿದ್ದ ಕಿಶೋರ್ ಕುಮಾರ್ 2004ರಲ್ಲಿ ‘ಕಂಠಿ’ ಚಿತ್ರದ ಮೂಲಕ ಸಿನಿಮಾ ಜಗತ್ತು ಪ್ರವೇಶಿಸಿದರು. ರಂಗಭೂಮಿಯಲ್ಲಿಯೂ ಆಸಕ್ತಿ ಹೊಂದಿದ್ದ ಇವರು ‘ಸಾಮ್ರಾಟ ಅಶೋಕ’ ಮತ್ತು ‘ತೆರೆಗಳು’ ನಾಟಕದಲ್ಲಿ ಅಭಿನಯಿಸಿ ಗಮನ ಸೆಳೆದವರು. ಬೆಂಗಳೂರಿನ ಕಾಲೇಜೊಂದರಲ್ಲಿ ಅಧ್ಯಾಪಕರಾಗಿ ಎರಡು ವರ್ಷ ಸೇವೆ ಸಲ್ಲಿಸಿ, ಬಳಿಕ ಫ್ಯಾಷನ್ ಡಿಸೈನರ್ ಆಗಿಯೂ ಒಂದಷ್ಟು ದಿನ ಕೆಲಸ ಮಾಡಿದರು.

ತೆಲುಗು, ತಮಿಳು ಹಾಗೂ ಮಲೆಯಾಳಂನಲ್ಲಿ 80ಕ್ಕೂ ಅಧಿಕ ಚಿತ್ರಗಳಲ್ಲಿ ನಟಿಸಿದ್ದಾರೆ. ‘ದುನಿಯಾ’, ‘ಜಟ್ಟ’, ‘ಅಟ್ಟಹಾಸ’, ‘ಹುಲಿ’, ‘ಉಳಿದವರು ಕಂಡಂತೆ’, ತಮಿಳಿನ ‘ಪೊಲ್ಲಾದವನ್’, ‘ಹರಿದಾಸ’, ‘ತೂಂಗಾವನಂ’ ಮೊದಲಾದವು ಕಿಶೋರ್‌ಗೆ ಖ್ಯಾತಿ ತಂದುಕೊಟ್ಟ ಇತ್ತೀಚಿನ ಚಿತ್ರಗಳು.

‘ಪ್ರಶಸ್ತಿ ಪಡೆಯುತ್ತಿರುವುದಕ್ಕೆ ತುಂಬ ಹೆಮ್ಮೆಯಿದೆ. ಪತ್ರಿಕೋದ್ಯಮದ ಭಾಗವಾಗಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿದ ಪತ್ರಿಕೆ ಪ್ರಜಾವಾಣಿ. ಅದೇ ಮೌಲ್ಯಗಳನ್ನು ಸಿನಿಮಾಗೂ ಕೂಡ ತೆಗೆದುಕೊಂಡು ಬರುತ್ತದೆ ಎಂಬ ನಿರೀಕ್ಷೆಯಿದೆ’ ಎಂದು ಪ್ರಶಸ್ತಿ ಸ್ವೀಕರಿಸಿದ ಕಿಶೋರ್ ಹೇಳಿದರು.

ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದವರು
- **ದತ್ತಣ್ಣ** (ಚಿತ್ರ: ನಾನು ಅದು ಮತ್ತು ಸರೋಜ)
- **ಅಚ್ಯುತ್ ಕುಮಾರ್** (ಚಿತ್ರ: ಕಾಂತಾರ)
- **ಅನಂತನಾಗ್** (ಚಿತ್ರ: ಗಾಳಿಪಟ–2)
- **ಕಿಶೋರ್ ಕುಮಾರ್** (ಚಿತ್ರ: ಕಾಂತಾರ)
- **ಗೋಪಾಲಕೃಷ್ಣ ದೇಶಪಾಂಡೆ** (ಚಿತ್ರ: ಶುಭಮಂಗಳ)



ಅತ್ಯುತ್ತಮ ಪೋಷಕ ನಟಿ
ಉಮಾಶ್ರೀ
(ಚಿತ್ರ:ವೇದ)

ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದವರು
- **ಅರ್ಚನಾ ಜೋಯಿಸ್** (ಚಿತ್ರ: ಕೆ.ಜಿ.ಎಫ್ ಚಾಪ್ಟರ್–2)
- **ಈಶ್ವರಿ ರಾವ್** (ಚಿತ್ರ: ಕೆ.ಜಿ.ಎಫ್ ಚಾಪ್ಟರ್–2)
- **ಎನ್.ಮಂಗಳ** (ಚಿತ್ರ: ತಲೆದಂಡ)
- **ಉಮಾಶ್ರೀ** (ಚಿತ್ರ:ವೇದ)
- **ಸುಧಾ ಬೆಳವಾಡಿ** (ಚಿತ್ರ: ಸಾರಾ ವಜ್ರ)

‘ಅನುಭವ’ದ ‘ಗುಲಾಬಿ’ಗೆ ಒಲಿದ ಸಮ್ಮಾನ

ರಂಗಭೂಮಿ ಕಲಾವಿದೆ, ಚಿತ್ರನಟಿ, ಮಾಜಿ ಸಚಿವೆ ‘ಉಮಾಶ್ರೀ’ ಅವರಿಗೆ ‘ವೇದ’ ಚಿತ್ರದಲ್ಲಿನ ಅಭಿನಯಕ್ಕಾಗಿ ‘ಪ್ರಜಾವಾಣಿ ಸಿನಿ ಸಮ್ಮಾನ’ದ ‘ಅತ್ಯುತ್ತಮ ಪೋಷಕ ನಟಿ’ ಪ್ರಶಸ್ತಿ ಲಭಿಸಿದೆ.

ಶಿವರಾಜ್‌ಕುಮಾರ್ ನಟನೆಯ ‘ವೇದ’ ಚಿತ್ರದಲ್ಲಿ ಶಂಕರಿಯಾಗಿ ಉಮಾಶ್ರೀ ನಟಿಸಿದ್ದಾರೆ. ಚಿತ್ರದುದ್ದಕ್ಕೂ ನಾಯಕನ ಕುಟುಂಬದ ಮಾರ್ಗದರ್ಶಿ, ಹಿತೈಷಿಯಾಗಿರುವ ಪಾತ್ರವಿದು. ನಾಯಕನ ಜೊತೆ ಒಡನಾಟ ಹೊಂದಿರುವ ಈ ಪಾತ್ರ ‘ಪುಟ್ನಂಜ’ ಸಿನಿಮಾದಲ್ಲಿನ ಪುಟ್ನಂಜಿಯನ್ನು ಮತ್ತೊಮ್ಮೆ ನೆನಪಿಸುತ್ತದೆ. ಹಾಸ್ಯ, ಭಾವುಕತೆ ಹೊಂದಿರುವ ಪಾತ್ರಕ್ಕೆ ಉಮಾಶ್ರೀ ನ್ಯಾಯ ಸಲ್ಲಿಸಿದ್ದಾರೆ. ಅಲ್ಲಲ್ಲಿ ನಗಿಸಿ, ಸಾವಿಗೀಡಾಗುವ ಪಾತ್ರ ಅದು. ಕೊನೆ-ಪ್ರೇಕ್ಷಕರ ಕಣ್ಣಲ್ಲಿ ನೀರು ತರಿಸುವಂತಹ ಅಭಿನಯ ಮಾಡಿದ್ದಾರೆ.

ನಾಲ್ಕು ದಶಕಗಳಿಗೂ ಮಿಗಿಲಾಗಿ ಚಿತ್ರರಂಗದಲ್ಲಿ ಸಕ್ರಿಯವಾಗಿರುವ ಉಮಾಶ್ರೀ ಅವರು ಹುಟ್ಟಿದ್ದು ತುಮಕೂರು ಜಿಲ್ಲೆಯ ನೊಣವಿನಕೆರೆಯಲ್ಲಿ. ರಂಗಭೂಮಿಯಿಂದ ನಟನೆ ಪ್ರಾರಂಭಿಸಿದ ಅವರು, ಊಟಕ್ಕಾಗಿ ರಂಗಭೂಮಿಗೆ ಬಂದಿದ್ದಾಗಿ ಸಂದರ್ಶನವೊಂದರಲ್ಲಿ ಹೇಳಿದ್ದರು. ಕಡುಬಡತನದಲ್ಲಿ ಬೆಳೆದ ಇವರು ಬದುಕು ಕಟ್ಟಿಕೊಂಡಿದ್ದೇ ಒಂದು ಸ್ಫೂರ್ತಿದಾಯಕ ಕಥೆ.

1980ರಲ್ಲಿ ಗ್ರಾಮೀಣ ರಂಗಭೂಮಿಯಿಂದ ನಟನೆ ಪ್ರಾರಂಭಿಸಿದರು. ನಂತರ ಕೈಗಾರಿಕಾ ರಂಗಭೂಮಿಯತ್ತ ಪಯಣ ಬೆಳೆಸಿದ ಅವರು ಅನೇಕ ನಾಟಕೋತ್ಸವಗಳಲ್ಲಿ ಪ್ರಶಸ್ತಿ ಪಡೆದರು. ಪೌರಾಣಿಕ ನಾಟಕಗಳಿಂದ ಅವರ ನಟನೆ ಪ್ರಾರಂಭವಾಗಿದ್ದು. ದ್ರೌಪದಿ, ರುಕ್ಮಿಣಿಯಂತಹ ಸಾಕಷ್ಟು ಪಾತ್ರಗಳಲ್ಲಿ ಗುರುತಿಸಿಕೊಂಡ ಅವರು, ರಂಗಸಂಪದ ತಂಡದೊಂದಿಗೆ ಹವ್ಯಾಸಿ ನಾಟಕದತ್ತ ಹೊರಳಿದರು.

ವೃತ್ತಿ ರಂಗಭೂಮಿಯಲ್ಲಿ ಹಲವಾರು ಐತಿಹಾಸಿಕ, ಪೌರಾಣಿಕ ಪಾತ್ರಗಳನ್ನು ನಿರ್ವಹಿಸಿ, ಹವ್ಯಾಸಿ ರಂಗಭೂಮಿಯಲ್ಲಿ ಬಿ.ವಿ. ಕಾರಂತ್, ನಾಗಾಭರಣ, ಕೃಷ್ಣಸ್ವಾಮಿ ಅವರ ನಿರ್ದೇಶನದಲ್ಲಿ ಅನೇಕ ನಾಟಕಗಳಲ್ಲಿ ಅಭಿನಯಿಸಿದರು. ‘ಒಡಲಾಳ’ ನಾಟಕದ ‘ಸಾಕವ್ವ’ನ ಪಾತ್ರ ಬಹಳ ಜನಪ್ರಿಯವಾಗಿತ್ತು. ‘ಯಯಾತಿ’ಯಲ್ಲಿನ ‘ಶರ್ಮಿಷ್ಠೆ’ಯಾಗಿ ಅವರು ತೋರಿದ ನಟನೆಯ ಸತ್ವ ಈಗಲೂ ಹಸಿರಾಗಿದೆ.

ಇದೇ ವೇಳೆ ಅವರ ಸಿನಿ ಪಯಣ ಶುರುವಾಯಿತು. ‘ಅಮೃತ ಘಳಿಗೆ’ ಅವರು ಅಭಿನಯಿಸಿದ ಮೊದಲ ಸಿನಿಮಾ. ಚಿಕ್ಕ ಪಾತ್ರದಲ್ಲಿ ಕಾಣಿಸಿಕೊಂಡ ಉಮಾಶ್ರೀ, ‘ಬಂಗಾರದ ಜಿಂಕೆ’, ’ಪಟ್ಟಣಕ್ಕೆ ಬಂದ ಪತ್ನಿಯರು’ ಮೊದಲಾದ ಸಿನಿಮಾಗಳಲ್ಲಿ ನಟಿಸಿದರು. ತಿರುವು ನೀಡಿದ್ದು 1984ರಲ್ಲಿ ತೆರೆಗೆ ಬಂದ ‘ಅನುಭವ’ ಚಿತ್ರ. ಬೋಲ್ಡ್ ಪಾತ್ರದಲ್ಲಿ ಉಮಾಶ್ರೀ ಜನಪ್ರಿಯರಾದರು. ‘ಗೋಲ್ ಮಾಲ್ ರಾಧಾಕೃಷ್ಣ’ ಚಿತ್ರದಲ್ಲಿ ಪ್ರೇಕ್ಷಕರನ್ನು ನಕ್ಕು ನಗಿಸಿದರು.

‘ಪುಟ್ನಂಜ’ ಚಿತ್ರದ ‘ಪುಟ್ನಂಜಿ’ ಪಾತ್ರ ಮರೆಯಲಾಗದ್ದು. ‘ಕೋತಿಗಳು ಸಾರ್ ಕೋತಿಗಳು’ ಚಿತ್ರದಲ್ಲಿನ ಮುನಿಯಮ್ಮ ಪಾತ್ರವೂ ಕಾಡುತ್ತದೆ. ಹೀಗೆ ಉಮಾಶ್ರೀ ನಟಿಸಿದ ಅತ್ಯುತ್ತಮ ಪಾತ್ರಗಳ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಅನುಭವ, ಸ್ವಾಭಿಮಾನ...450ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದಾರೆ. ಈಗಿರುವ ಬಹುತೇಕ ಎಲ್ಲ ನಾಯಕರಿಗೂ ತಾಯಿಯಾಗಿ ಅಭಿನಯಿಸಿದ್ದಾರೆ. ‘ಸಂಗ್ಯಾಬಾಳ್ಯಾ’ ಚಿತ್ರದ ನಟನೆಗಾಗಿ ಪನೋರಮಾ ಪ್ರಶಸ್ತಿ ಲಭಿಸಿತು.

‘ಗುಲಾಬಿ ಟಾಕೀಸ್’ ಚಿತ್ರದಲ್ಲಿನ ಅಭಿನಯಕ್ಕಾಗಿ ರಾಷ್ಟ್ರ, ರಾಜ್ಯ ಪ್ರಶಸ್ತಿಗಳು ಸಂದವು. ಇವರಿಗೆ ಆರು ಬಾರಿ ರಾಜ್ಯ ಪ್ರಶಸ್ತಿ ಲಭಿಸಿದೆ. ಮಹಿಳೆಯರಲ್ಲಿ ಅತಿ ಹೆಚ್ಚು ಸಲ ರಾಜ್ಯ ಪ್ರಶಸ್ತಿ ಸಿಕ್ಕಿರುವುದು ಇವರಿಗೆ ಎನ್ನುವುದು ವಿಶೇಷ.

‘ಪ್ರಶಸ್ತಿ ಪಡೆಯುತ್ತಿರುವುದು ಒಂದು ಕಡೆ ಸಂತೋಷವಾಗುತ್ತಿದೆ. ಇನ್ನೊಂದೆಡೆ ಭಯ ಕೂಡ ಇದೆ. ನಾನು ಸಾಕಷ್ಟು ಪ್ರಶಸ್ತಿಗಳನ್ನು ಪಡೆದಿರುವೆ. ಆದರೆ ಇವತ್ತು ಅದ್ಯಾಕೊ ಭಯವಾಗುತ್ತಿದೆ. ‘ಪ್ರಜಾವಾಣಿ’ ಎಂದರೇನೇ ಆ ಘನತೆ, ಗೌರವ, ಹಿರಿತನವಿದೆ. ಬಹುಶಃ ಅದನ್ನು ನೋಡಿಯೇ ಭಯವಾಗುತ್ತಿರಬೇಕು. ಹವ್ಯಾಸಿ ರಂಗಭೂಮಿಗೆ ಸೇರಿದ ನಂತರ ಪತ್ರಿಕೆ ಓದು ಶುರುವಾಯಿತು. ಇವತ್ತಿಗೂ ನಮ್ಮ ಮನೆಯಲ್ಲಿ ಪ್ರಜಾವಾಣಿ ಪತ್ರಿಕೆ ಓದುತ್ತೇವೆ. ಪತ್ರಿಕೆಯ ಸಂಪಾದಕೀಯ ಸಾಕಷ್ಟು ವಿಚಾರಗಳನ್ನು ತಿಳಿಸಿಕೊಡುತ್ತದೆ. ಇಂತಹ ಪತ್ರಿಕೆಯ ಪ್ರಶಸ್ತಿ ಪಡೆಯುತ್ತಿರುವುದಕ್ಕೆ ಧನ್ಯತಾ ಭಾವವಿದೆ’ ಎಂದು ಉಮಾಶ್ರೀ ವೇದಿಕೆಯಲ್ಲಿ ಭಾವುಕರಾದರು.








ಅನು ಪ್ರಭಾಕರ್ ಮತ್ತು ರಘು ಮುಖರ್ಜಿ



ಸಿನಿ ಸಮ್ಮಾನದಲ್ಲಿ ಪುನೀತ್ ಸ್ಮರಣೆ





ಭಾವನಾ ರಾವ್ ನೃತ್ಯ ಪ್ರದರ್ಶನ



ಕೆ.ಎಂ.ಚೈತನ್ಯ, ಕೆ.ವೈ. ನಾರಾಯಣಸ್ವಾಮಿ



ಪ್ರಜ್ವಲ್ ದೇವರಾಜ್



ಪೂಜಾ ಗಾಂಧಿ



ರಾಗಿಣಿ ದ್ವಿವೇದಿ




ಗಾಯಕಿ ವಾರಿಜಾಶ್ರೀ ವೇಣುಗೋಪಾಲ್



ನಿರ್ದೇಶಕ ಮಂಸೋರೆ



ನಿರ್ದೇಶಕ ಶಶಾಂಕ್



ಹಿರಿಯ ನಟ ಶ್ರೀಧರ್



ಶಿವಧ್ವಜ್

ತಾಂತ್ರಿಕ ವಿಭಾಗದ ಸಮ್ಮಾನದ ಗರಿ ಮುಡಿಗೇರಿಸಿಕೊಂಡವರು...

ಅತ್ಯುತ್ತಮ ಸಂಕಲನ
ಪ್ರತೀಕ್ ಶೆಟ್ಟಿ ಹಾಗೂ ಪ್ರಕಾಶ್ ಕೆ.ಎಂ (ಚಿತ್ರ: ಕಾಂತಾರ)
ಹಾಗೂ
ಉಜ್ವಲ್ ಕುಲಕರ್ಣಿ (ಚಿತ್ರ: ಕೆ.ಜಿ.ಎಫ್. ಚಾಪ್ಟರ್–2)

‘ಕಾಂತಾರ’ ಒಂದು ಮೈಲುಗಲ್ಲು

‘ಕಾಂತಾರ’ ಸಿನಿಮಾವನ್ನು ಒಂದು ಮೈಲುಗಲ್ಲಿನಂತೆ ಮಾಡಿದ ನಟ, ನಿರ್ದೇಶಕ ರಿಷಬ್ ಶೆಟ್ಟಿ ಅವರಿಗೆ ಅಭಿನಂದನೆ. ನನ್ನನ್ನು ನಂಬಿ ಅವರು ಕಾಂತಾರ ಸಿನಿಮಾದ ಸಂಕಲನ ಕೆಲಸ ಒಪ್ಪಿಸಿದ್ದರು. ಆ ಕೆಲಸಕ್ಕೆ ಸಿಕ್ಕ ಗೌರವ ಈ ಪ್ರತಿಷ್ಠಿತ ಪ್ರಶಸ್ತಿ. ಇಡೀ ಚಿತ್ರತಂಡಕ್ಕೆ ಧನ್ಯವಾದ’ ಎಂದು ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು ಪ್ರತೀಕ್ ಶೆಟ್ಟಿ.

ಇದೇ ಸಂದರ್ಭ, ತಮ್ಮ ಕಾಲದ ಸಂಕಲನ ಪ್ರಕ್ರಿಯೆಯನ್ನು ಮೆಲುಕು ಹಾಕಿದರು ಪ್ರಶಸ್ತಿ ನೀಡಿದ ಹಿರಿಯ ಸಂಕಲನಕಾರ ಎಂ.ಎನ್. ಸ್ವಾಮಿ.

‘ನಾವು ಸಿನಿಮಾ ಸಂಕಲನ ವಿಷಯದಲ್ಲಿ ಎಷ್ಟು ಶ್ರಮ ಪಡುತ್ತಿದ್ದೆವೋ ಈಗಲೂ ಆ ಶ್ರಮ ಇದೆ. ಆದರೆ ಅದರ ರೂಪಗಳು ಬೇರೆಯಾಗಿವೆ. ನಾವು ಕಥೆಯಲ್ಲಿ ಕಟ್ ಮಾಡುತ್ತಿದ್ದೆವು. ಈಗ ಕೀಬೋರ್ಡ್‌ನಲ್ಲಿ ಕಟ್ ಮಾಡುತ್ತಿದ್ದಾರೆ. ಆದರೆ ನಾವು ಮಾಡುತ್ತಿದ್ದುದೇ ಕಷ್ಟ ಎನಿಸುತ್ತಿದೆ. ಈಗಿನ ಟ್ರೆಂಡ್‌ನಲ್ಲಿ ಸಂಕಲನದಲ್ಲಿ ಇನ್ನೂ ಅತ್ಯುತ್ತಮ ಕೆಲಸ ಮಾಡಬಹುದು. ಎಲ್ಲರೂ ಈ ನಿಟ್ಟಿನಲ್ಲಿಯೇ ಪ್ರಯತ್ನ ಪಡುತ್ತಿದ್ದಾರೆ. ಅದು ಬಹಳಷ್ಟು ಸಿನಿಮಾಗಳಲ್ಲಿ ಕಾಣುತ್ತಿದೆ’ ಎಂದು ಹೇಳಿದರು.

‘ಕೆಜಿಎಫ್’ ಸಿನಿಮಾ ಸಂಕಲನಕ್ಕೆ ಉಜ್ವಲ್ ಕುಲಕರ್ಣಿ ಅವರಿಗೆ ಪ್ರಶಸ್ತಿ ದೊರೆತಿದ್ದು, ಉಜ್ವಲ್ ಪರವಾಗಿ ಅವರ ತಂದೆ ಪ್ರಶಸ್ತಿ ಸ್ವೀಕರಿಸಿದರು. ಈ ಸಮಯ ತಮ್ಮ ಮಗನ ಪ್ರತಿಭೆಯ ಕುರಿತು ಭಾವುಕರಾಗಿ ಮಾತನಾಡಿದ ಅವರು, ‘18 ವಯಸ್ಸಿನಲ್ಲಿದ್ದಾಗಲೇ ಸಂಕಲನ ಕೆಲಸ ಆರಂಭ ಮಾಡಿದ್ದ. ಟ್ರೇಲರ್ ಒಂದನ್ನು ನೋಡಿ ಪ್ರಶಾಂತ್ ನೀಲ್ ಅವರು ಆಯ್ಕೆ ಮಾಡಿದರು. ಇದು ನನ್ನ ಮಗನ ಶ್ರಮಕ್ಕೆ ಸಿಕ್ಕ ಪ್ರತಿಫಲ. ಇದಕ್ಕೆ ಕಾರಣರಾದ ಪ್ರಶಾಂತ್ ನೀಲ್ ಅವರು ಅವನ ಪ್ರತಿ ಹೆಜ್ಜೆಗೂ ಮಾರ್ಗದರ್ಶನ ಮಾಡಿ ಶಿಲುಬೆಯನ್ನಾಗಿ ಮಾಡಿದ್ದಾರೆ’ ಎಂದರು.



‘ಕಾಂತಾರ’ ಚಿತ್ರಕ್ಕಾಗಿ ಅತ್ಯುತ್ತಮ ಸಂಕಲನ ಟ್ರೋಫಿ ಪಡೆದ ಪ್ರತೀಕ್ ಶೆಟ್ಟಿ. ಖ್ಯಾತ ಸಿನಿಮಾ ಸಂಕಲನಕಾರ ಎಂ.ಎನ್.ಸ್ವಾಮಿ ಹಾಗೂ ನಿರೂಪಕ ರಮೇಶ್ ಅರವಿಂದ್ ಇದ್ದಾರೆ.



ಕೆಜಿಎಫ್ ಸಿನಿಮಾಗೆ ‘ಅತ್ಯುತ್ತಮ ಸಂಕಲನ’ ಪ್ರಶಸ್ತಿಯನ್ನು ಉಜ್ವಲ್ ಕುಲಕರ್ಣಿ ಪರವಾಗಿ ಸ್ವೀಕರಿಸಿದ ಅವರ ತಂದೆ



‘777 ಚಾರ್ಲಿ’ ಚಿತ್ರಕ್ಕಾಗಿ ಅತ್ಯುತ್ತಮ ಚೊಚ್ಚಲ ನಿರ್ದೇಶನ ಹಾಗೂ ಅತ್ಯುತ್ತಮ ಚಿತ್ರಕಥೆ ಪ್ರಶಸ್ತಿ ಬಾಚಿಕೊಂಡ ನಿರ್ದೇಶಕ ಕಿರಣ್‌ರಾಜ್ ಕೆ.

ಅತ್ಯುತ್ತಮ ಚಿತ್ರಕಥೆ ನಾಮನಿರ್ದೇಶಿತರು

- ಪ್ರವೀಣ್ ಕೃಪಾಕರ್(ತಲೆದಂಡ)
- ಕಿರಣ್ ರಾಜ್ ಕೆ(777 ಚಾರ್ಲಿ)
- ಶ್ರೀಧರ್ ಶಿಕಾರಿಪುರ (ಧರಣಿ ಮಂಡಲ ಮಧ್ಯದೊಳಗೆ)
- ಹೇಮಂತ್ ಕುಮಾರ್ ಎಲ್.(ತುರ್ತು ನಿರ್ಗಮನ)
- ಎಸ್.ಎಸ್. ಸಜನ್ (ಫೋರ್ ವಾಲ್ಸ್)

ಅತ್ಯುತ್ತಮ ಚೊಚ್ಚಲ ನಿರ್ದೇಶನ ನಾಮನಿರ್ದೇಶನಗೊಂಡವರು

- ಪ್ರವೀಣ್ ಕೃಪಾಕರ್(ತಲೆದಂಡ)
- ಕಿರಣ್ ರಾಜ್ ಕೆ.(777 ಚಾರ್ಲಿ)
- ಶ್ರೀಧರ್ ಶಿಕಾರಿಪುರ (ಧರಣಿ ಮಂಡಲ ಮಧ್ಯದೊಳಗೆ)
- ಹೇಮಂತ್ ಕುಮಾರ್ ಎಲ್.(ತುರ್ತು ನಿರ್ಗಮನ)
- ಹರಿಕಥೆ ಅಲ್ಲ ಗಿರಿಕಥೆ(ಕರಣ್ ಅನಂತ್ ಹಾಗೂ ಅನಿರುದ್ಧ್ ಮಹೇಶ್)

ವಿಭಿನ್ನತೆಯೇ ಯಶಸ್ಸಿನ ಗುಟ್ಟು: ಕಿರಣ್‌ರಾಜ್

ತಮ್ಮ ಚೊಚ್ಚಲ ಸಿನಿಮಾದಲ್ಲೇ ಗೆದ್ದು ಪ್ಯಾನ್ ಇಂಡಿಯಾ ಮಟ್ಟದಲ್ಲಿ ಗುರುತಿಸಿಕೊಂಡವರು ನಿರ್ದೇಶಕ ಕಿರಣ್‌ರಾಜ್. ‘777 ಚಾರ್ಲಿ’ ಸಿನಿಮಾಗಾಗಿ ಅವರು ಮೀಸಲಿಟ್ಟಿದ್ದು ಬರೋಬ್ಬರಿ 5 ವರ್ಷ! ಚಿತ್ರದ ಕಥೆ ಹಾಗೂ ರಕ್ಷಿತ್ ಶೆಟ್ಟಿ ಅವರ ನಟನೆ ಸಿನಿಮಾವನ್ನು ಶತಕೋಟಿ ಬಾಚುವಂತೆ ಮಾಡಿತು. ‘777 ಚಾರ್ಲಿ ನನ್ನ ಚೊಚ್ಚಲ ಸಿನಿಮಾ. ಇದಕ್ಕೂ ಮುಂಚೆ ಎಂದೆಂದಿಗೂ, ರಿಕ್ಕಿ ಹಾಗೂ ಕಿರಿಕ್ ಪಾರ್ಟಿ ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದೆ. ನಿರ್ದೇಶನಕ್ಕಿಳಿಯಬೇಕು ಎಂದು ನಿರ್ಧರಿಸಿದಾಗ, ಯಾವ ರೀತಿಯ ಸಿನಿಮಾ ಮಾಡಬೇಕು ಎಂದು ತುಂಬಾ ಯೋಚನೆ ಮಾಡಿದ್ದೆ. 2016–17ರ ಆ ಸಮಯದಲ್ಲಿ ವರ್ಷಕ್ಕೆ 200ಕ್ಕಿಂತ ಹೆಚ್ಚು ಸಿನಿಮಾಗಳು ಬಿಡುಗಡೆಯಾಗುತ್ತಿದ್ದವು. ಆದರೆ ಜನರ ಮನಸ್ಸಿನಲ್ಲಿ ಉಳಿಯುವಂಥ ಅಥವಾ ಹಿಟ್-ಸೂಪರ್ ಹಿಟ್ ಆಗುವಂಥ ಸಿನಿಮಾಗಳು ಬೆರಳೆಣಿಕೆಯಷ್ಟು ಮಾತ್ರ ಇರುತ್ತಿದ್ದವು. ನಾನೊಬ್ಬ ಹೊಸ ನಿರ್ದೇಶಕ. ತಂಡವೂ ಹೊಸತು. ಗೆದ್ದ ಆ ಬೆರಳೆಣಿಕೆಯಷ್ಟು ಸಿನಿಮಾಗಳಲ್ಲಿ ನಾನೂ ಹೇಗೆ ಬರೋಕೆ ಸಾಧ್ಯ ಎಂದು ಯೋಚನೆ ಮಾಡುತ್ತಿದ್ದೆ. ಜನರು ನೋಡಿ ಪಳಗಿರುವಂಥ ಕಥೆ ಆಗದೇ ಇದ್ದರೆ, ಕಥೆಯಲ್ಲಿ ವಿಭಿನ್ನತೆ ಇದ್ದರೆ ನಿಜವಾಗಿಯೂ ಕುತೂಹಲ ಹುಟ್ಟುತ್ತದೆ ಎಂದು ಅನ್ನಿಸಿದಾಗ, ನನ್ನ ಜೀವನದಲ್ಲೇ ನಡೆದಂಥ ಹಲವಾರು ಘಟನೆಗಳನ್ನು ಕೂಡಿಸಿ ‘777 ಚಾರ್ಲಿ’ ಸಿನಿಮಾ ಮಾಡಿದೆ. ಮನುಷ್ಯ ಹಾಗೂ ಶ್ವಾನದ ಬಾಂಧವ್ಯ ಹೇಳುವಂಥ ಸಿನಿಮಾ ರೂಪಿಸಿದೆ. ಜನರು ಒಪ್ಪುತ್ತಾರೆನ್ನುವ ಭರವಸೆ ಇತ್ತು. ಅವರು ಒಪ್ಪಿ ಅಪ್ಪಿದ್ದಾರೆ. ಮುಂದಿನ ಸಿನಿಮಾ ಚಾರ್ಲಿಗಿಂತ ಭಿನ್ನ ಜಾನರ್ ಎಕ್ಸ್‌ಪ್ಲೋರ್ ಮಾಡುತ್ತಿದ್ದೇನೆ’ ಎನ್ನುತ್ತಾರೆ ಕಿರಣ್‌ರಾಜ್.

ಅತ್ಯುತ್ತಮ ಗೀತ ಸಾಹಿತ್ಯ
ಸಿಕೆ. ಕಲ್ಯಾಣ್ (ಹಾಡು: ಮೇಘರಾಜನ ರಾಗ, ಚಿತ್ರ: ಮಾನ್ಸೂನ್ ರಾಗ) ಹಾಗೂ ನಾಗೇಂದ್ರ ಪ್ರಸಾದ್ (ಹಾಡು: ಗಿಲ್ಲಕ್ಕೊ ಶಿವ, ಚಿತ್ರ: ವೇದ) (ಹಾಡು: ಜಗವೇ ನೀನು ಗೆಳತಿಯೇ, ಚಿತ್ರ: ಲವ್ 360)

ಹಾಡು ಹುಟ್ಟಿದ ಗಳಿಗೆ

‘ಮಾನ್ಸೂನ್ ರಾಗ ನಿರ್ದೇಶಕ, ನಿರ್ಮಾಪಕ, ಸಂಗೀತ ನಿರ್ದೇಶಕರು ತುಂಬಾ ಪ್ರೀತಿಯಿಂದ ಹಾಡು ಬರೆಯಲು ಹೇಳಿದರು. ಬೆಳಕು ಹರಿಯುವುದರಲ್ಲಿ ಹಾಡು ಬರೆದುಕೊಟ್ಟು ಬಂದೆ. ಆದರೆ ಈಗ ಅದು ನಿಮಗೆ ಇಷ್ಟ ಆಗುತ್ತೆ, ಈ ಸಂದರ್ಭಕ್ಕೆ ಕಾರಣ ಆಗುತ್ತೆ ಅಂತ ಗೊತ್ತಿರಲಿಲ್ಲ’... ಹೀಗೆ ಭಾವುಕರಾದವರು ಗೀತಸಾಹಿತಿ ಕೆ. ಕಲ್ಯಾಣ್.

ಇದೇ ಸಂದರ್ಭ, ‘ನಮ್ಮೂರ ಮಂದಾರ ಹೂವೆ’ ಸಿನಿಮಾದ ಹಾಡಿನ ಕುರಿತ ಸ್ವಾರಸ್ಯಕರ ಸಂಗತಿಯನ್ನು ಕಲ್ಯಾಣ್ ಹಂಚಿಕೊಂಡರು.

‘ವೆಸ್ಟರ್ನ್ ಹೋಟೆಲ್‌ನಲ್ಲಿ ಇಳಯರಾಜ ಅವರು ಕುಳಿತು ಹಾಡು ಕಂಪೋಸ್ ಮಾಡುತ್ತಿದ್ದರು. ಅವರ ಮುಂದೆ ಕುಳಿತು ನಾನು ಹಾಡು ಬರೆಯುತ್ತಿದ್ದೆ. ಈ ಹಿಂದೆ ನಾನು 44 ಚಿತ್ರಗಳಿಗೆ ಹಾಡು ಬರೆದಿದ್ದೆ, ಅವೆಲ್ಲವೂ ಫ್ಲಾಪ್ ಆಗಿದ್ದವು. ಅದು 45ನೇ ಸಿನಿಮಾ. ಇಳಯರಾಜ ಅವರು ತತ್ಸಮ ತದ್ಭವ- ಲಘು– ಗುರು ವ್ಯಾಕರಣದಲ್ಲಿ ಲೆಕ್ಕಾಚಾರ ಹಾಕೋದು ಜಾಸ್ತಿ. ಆದರೆ ಅವರ ನಿರೀಕ್ಷೆಯಂತೆ ಅರ್ಥ ಬರುವ ರೀತಿ ಹಾಡು ಬರೆಯುವುದು ತ್ರಾಸ. ಮಳೆಗೆ ಸಂಬಂಧ ಪಟ್ಟ ಹಾಡು ಬರೆಯಬೇಕಿತ್ತು. ಆದರೆ ಆವತ್ತು ಕೆಲಸ ಆಗಲಿಲ್ಲ. ಚಾಮುಂಡೇಶ್ವರಿ ಸ್ಟುಡಿಯೊದಲ್ಲಿ ರೆಕಾರ್ಡಿಂಗ್ ಇದ್ದಾಗ ಹೋಗಿದ್ದೆ. ಅಲ್ಲಿ ಅವರು ಹಾಡಿನ ಟ್ಯೂನ್ ಅನ್ನು ಹೇಳಿದರು. ಅದಕ್ಕೆ ತಕ್ಕಂತೆ ನಾನು, ‘ಅರೆರೆರೆ ತುಂತುರು ತಂತು ಋತು...’ ಎಂದು ಸುಮ್ಮನೆ ಹಾಡಿದೆ. ತಕ್ಷಣ ಅವರಿಗೆ ಆಶ್ಚರ್ಯ ಆಗಿ ತುಂಬಾ ಸಂತೋಷ ಪಟ್ಟರು. ಅವರು ಸಾಮಾನ್ಯವಾಗಿ ಶೇಕ್ ಹ್ಯಾಂಡ್ ಕೊಡಲ್ಲ. ಅವತ್ತು ನನಗೆ ಕೊಟ್ಟರು. ಆ ದಿನ ನನಗೆ ಮರೆಯಲಾರದ್ದು. ಹಾಡೆಂದರೆ ಸುಮ್ಮನೆ ಗೀಚುವುದಲ್ಲ. ಅದರಲ್ಲಿ ಅರ್ಥ ಇರಬೇಕು ಎಂದು ಜಾಗೃತನಾದೆ. ಇಳಯರಾಜ ಟ್ಯೂನ್‌ನಲ್ಲೇ ಸಾಹಿತ್ಯ ಇರುತ್ತದೆ. ಅದನ್ನು ಹೆಕ್ಕಬೇಕಷ್ಟೆ’ ಎಂದರು.

ಇದರ ನಂತರ, ಸಾಹಿತಿ ದೊಡ್ಡರಂಗೇಗೌಡರ ಅವರಿಂದ ‘ವೇದ’ ಸಿನಿಮಾಗೆ ಹಾಡಿನ ಸಾಹಿತ್ಯಕ್ಕೆ ನಾಗೇಂದ್ರ ಪ್ರಸಾದ್ ಅವರು ಪ್ರಶಸ್ತಿ ಸ್ವೀಕರಿಸಿದರು. ಈ ಸಂದರ್ಭದಲ್ಲಿ ‘ಪ್ರಜಾವಾಣಿ’ಯೊಂದಿಗಿನ ತಮ್ಮ ಒಡನಾಟವನ್ನು ಮೆಲುಕು ಹಾಕಿದರು.



‘ಅತ್ಯುತ್ತಮ ಗೀತ ಸಾಹಿತ್ಯ’ ಪ್ರಶಸ್ತಿ ಸ್ವೀಕರಿಸಿದ ಕೆ. ಕಲ್ಯಾಣ್ ಹಾಗೂ ವಿ. ನಾಗೇಂದ್ರ ಪ್ರಸಾದ್

ನಾಮನಿರ್ದೇಶಿತರು

- ಪ್ರಮೋದ್ ಮರವಂತೆ- ರಂಗಾದ ರಗಳೆ (ಒನ್ಸ್ ಅಪಾನ್ ಎ ಟೈಮ್ ಇನ್ ಜಮಾಲಿಗುಡ್ಡ)
- ಕೆ. ಕಲ್ಯಾಣ್- ಮೇಘರಾಜನ ರಾಗ (ಮಾನ್ಸೂನ್ ರಾಗ)
- ಗೌಸ್ ಪೀರ್- ಮಾತು ಮಾತಲ್ಲೆ (ಧರಣಿ ಮಂಡಲ ಮಧ್ಯದೊಳಗೆ)
- ಡಾ. ವಿ. ನಾಗೇಂದ್ರ ಪ್ರಸಾದ್- ಗಿಲ್ಲಕ್ಕೊ ಶಿವ (ವೇದ)
- ಶ್ರೀ ತಲಗೇರಿ- ಕಣ್ಮಣಿಯೆ ಕಣ್ಮಣಿಯೆ (ಫೋರ್ ವಾಲ್ಸ್)

ನನಗಾಗಿ ಒದಗಿಬಂದ ಅವಕಾಶ

ಅತ್ಯುತ್ತಮ ಸಂಗೀತ ನಿರ್ದೇಶಕ
ಅಜನೀಶ್ ಲೋಕನಾಥ್
(ಚಿತ್ರ: ಕಾಂತಾರ)

‘ಪ್ರಜಾವಾಣಿ’ ಎನ್ನುತ್ತಿದ್ದಂತೆ ಚಿಕ್ಕಂದಿನ ನೆನಪುಗಳು ಮರುಕಳಿಸಿದವು. ಬೆಳ್ಳಂಬೆಳಿಗ್ಗೆ ನಂದಿನಿ ಹಾಲಿನ ಜೊತೆ ಪ್ರಜಾವಾಣಿ ಪೇಪರ್ ತರುವುದು ನಮಗೆ ಆಗ ರೂಢಿಯಂತೆ ನಡೆದುಕೊಂಡು ಬಂದುಬಿಟ್ಟಿತ್ತು. ಈಗ ಪ್ರಜಾವಾಣಿಯ ಈ ಪ್ರಶಸ್ತಿ ಸ್ವೀಕರಿಸುತ್ತಿರುವುದು ತುಂಬಾ ಖುಷಿ ಎನಿಸುತ್ತಿದೆ. ‘ಉಳಿದವರು ಕಂಡಂತೆ’ ಸಿನಿಮಾ ಮಾಡಿದಾಗ, ನನ್ನ ಸಂಗೀತದ ಬಗ್ಗೆ ಯಾರಾದರೂ ಮಾತನಾಡುತ್ತಾರ ಎಂದು ಎದುರುನೋಡುತ್ತಿದ್ದೆ. ಆದರೆ ಯಾರೂ ಮಾತಾಡಿರಲಿಲ್ಲ. ಮಾತನಾಡುವಷ್ಟು ಮಟ್ಟಕ್ಕೆ ನನ್ನ ಸಂಗೀತ ನೀಡಬೇಕು ಎಂದು ಪ್ರಯತ್ನ ಮಾಡಿದೆ. ಇಂದು ದಿಗ್ಗಜರಿರುವಂಥ ಜ್ಯೂರಿಯಿಂದಲೇ ನನಗೆ ಪ್ರಶಸ್ತಿ ಸಿಕ್ಕಿದೆ. ಅದು ಖುಷಿ, ಹೆಮ್ಮೆ. ಸಿನಿಮಾ ಸಂಗೀತ ಜನರನ್ನು ತಲುಪಿದ್ದಕ್ಕೆ ಜಾನಪದ ಸಂಗೀತ ಕಾರಣ. ಜಾನಪದ ಹಾಗೂ ಶಾಸ್ತ್ರೀಯ ಸಂಗೀತ ಇವೆರಡನ್ನೂ ಬಳಸಬೇಕು ಎಂದ ಕಡೆಯೆಲ್ಲಾ ಬಳಸಲು ಸಾಧ್ಯವಿಲ್ಲ. ಆದರೆ ನನಗೆ ಆ ಅವಕಾಶ ಒದಗಿಬಂತು. ದಕ್ಷಿಣ ಕನ್ನಡ ಜಿಲ್ಲೆಯ ಜಾನಪದ ಕಲಾವಿದರಿಗೆ ಧನ್ಯವಾದ. ಹಾಡು ಬರೆದ ಪ್ರಮೋದ್ ಮರವಂತೆ ಅವರಿಗೆ ಧನ್ಯವಾದ.

–ಅಜನೀಶ್ ಲೋಕನಾಥ್



ಅತ್ಯುತ್ತಮ ಸಂಗೀತ ನಿರ್ದೇಶನ ಪ್ರಶಸ್ತಿಯನ್ನು ಪಡೆದ ಅಜನೀಶ್ ಲೋಕನಾಥ್. ನಟಿ ರಾಗಿಣಿ ದ್ವಿವೇದಿ ಇದ್ದಾರೆ.

ನಾಮನಿರ್ದೇಶಿತರು

- ಧೀರೇಂದ್ರ ದಾಸ್ (ತುರ್ತು ನಿರ್ಗಮನ)
- ಅರ್ಜುನ್ ಜನ್ಯ (ಗಾಳಿಪಟ–2)
- ಅಶ್ವಿನ್ ಪಿ ಕುಮಾರ್ (ಮೇಡ್ ಇನ್ ಬೆಂಗಳೂರು)
- ಅನೂಪ್ ಸೀಳಿನ್ (ಮಾನ್ಸೂನ್ ರಾಗ)



ಅತ್ಯುತ್ತಮ ಹಿನ್ನೆಲೆ ಗಾಯಕ
ಸಿದ್ ಶ್ರೀರಾಮ್
(ಹಾಡು: ಜಗವೇ ನೀನು ಗೆಳತಿಯೇ
ಚಿತ್ರ: ಲವ್ 360)

‘ಅತ್ಯುತ್ತಮ ಹಿನ್ನಲೆ ಗಾಯಕ’ ಪ್ರಶಸ್ತಿ ವಿಜೇತ ಸಿದ್ ಶ್ರೀರಾಮ್ ಪರವಾಗಿ ಪ್ರಶಸ್ತಿ ಸ್ವೀಕರಿಸಿದ ನಿರ್ದೇಶಕ ಶಶಾಂಕ್

ಶ್ರೀರಾಮ್‌ಗೆಂದೇ ಹುಟ್ಟಿದ ಹಾಡು

‘ಜಗವೇ ನೀನು ಗೆಳತಿಯೇ...’ ಇದು ಸಿದ್ ಶ್ರೀರಾಮ್‌ಗೆಂದೇ ಹುಟ್ಟಿದ ಹಾಡು. ಆ ಹಾಡು ಮಾಡಲು ಕುಳಿತಾಗ, ಅರ್ಜುನ್ ಜನ್ಯ ಅವರಿಗೆ ಟ್ಯೂನ್ ತುಂಬಾ ಯುನೀಕ್ ಆಗಿರಬೇಕೆಂದು ಹೇಳಿದೆ. ಟ್ಯೂನ್ ಯುನೀಕ್ ಆಗಿರಬೇಕೆಂದರೆ ಗಾಯಕನಿಗೆ ಕೂಡ ಭಿನ್ನ ಧ್ವನಿ ಇರಬೇಕು ಎಂದರು. ಆ ಸಮಯ ಅವರೇ ಸಿದ್ ಶ್ರೀರಾಮ್ ಹೆಸರು ಹೇಳಿದರು. ಶ್ರೀರಾಮ್ ಅವರ ಹೆಸರನ್ನು ತಲೆಯಲ್ಲಿಟ್ಟುಕೊಂಡೇ ಮ್ಯೂಸಿಕ್ ಕಂಪೋಸ್ ಮಾಡಿದರು. ಆಗಿನ್ನೂ ‘ಪುಷ್ಪ’ ಸಿನಿಮಾ ರಿಲೀಸ್ ಆಗಿರಲಿಲ್ಲ. ತೆಲುಗು ಸಿನಿಮಾವೊಂದರಲ್ಲಿ ತುಂಬಾ ಚೆನ್ನಾಗಿ ಹಾಡಿದ್ದನ್ನು ಕೇಳಿ ಅವರ ಬಳಿ ಹಾಡಿಸೋಣ ಎಂದುಕೊಂಡೆವು. ಅವರಿಗೆ ಸಾಮಾನ್ಯ ಟ್ಯೂನ್ ಹೊಂದುವುದಿಲ್ಲ. ಅವರದ್ದೇ ಆದ ಒಂದು ಶೈಲಿ ಇದೆ. ಅವರ ರೇಂಜ್‌ಗೆ ಟ್ಯೂನ್ ಕಂಪೋಸ್ ಮಾಡಬೇಕು ಎಂದು ಈ ಹಾಡು ರೂಪುಗೊಂಡಿತು. ಅವರಿಗೆ ಕನ್ನಡ ಗೊತ್ತಿಲ್ಲ. ಆದರೆ ಆಸಕ್ತಿಯಿಂದ ಕನ್ನಡ ಕಲಿತು ಅಚ್ಚುಕಟ್ಟಾಗಿ ಹಾಡಿದರು. ಸುಮಾರು 2 ಗಂಟೆ ಸತತವಾಗಿ ಹಾಡಿದರು ಎಂದರು ಸಿದ್ ಪರ ಪ್ರಶಸ್ತಿ ಸ್ವೀಕರಿಸಿದ ನಿರ್ದೇಶಕ ಶಶಾಂಕ್ ನೆನಪಿಸಿಕೊಂಡರು. ಈ ಹಾಡಿನ ಸಾಹಿತ್ಯ ಶಶಾಂಕ್ ಅವರದ್ದೇ.

ನಾಮನಿರ್ದೇಶಿತರು

- ಮುದಕಣ್ಣ ಮೊರಬ– ಗಿಚ್ಚಿಗಿಲಿಗಿಲಿ (ಓಲ್ಡ್ ಮಾಂಕ್)
- ಅರವಿಂದ್ ವೇಣುಗೋಪಾಲ್-ಮೇಘರಾಜನ ರಾಗ (ಮಾನ್ಸೂನ್ ರಾಗ)
- ಹರಿಚರಣ್- ಆ ಕನಸು (ಸಕುಟುಂಬ ಸಮೇತ)
- ಸಿದ್ ಶ್ರೀರಾಮ್ -ಜಗವೇ ನೀನು ಗೆಳತಿಯೇ (ಲವ್ 360)
- ಚಿಂತನ್ ವಿಕಾಸ್- ಬಿದ್ದಾಳಪ್ಪೊ (ಫ್ಯಾಮಿಲಿ ಪ್ಯಾಕ್)

‘ಪಾತ್ರ ಪ್ರವೇಶದಲ್ಲಿ ಗೆದ್ದ ಸಿನಿಮಾ’

‘ಅತ್ಯುತ್ತಮ ನೃತ್ಯ ನಿರ್ದೇಶನದಲ್ಲಿ ‘ಕಾಂತಾರ’ ಸಿನಿಮಾದ ರಾಜ್ ಬಿ.ಶೆಟ್ಟಿ ಅವರಿಗೆ ಪ್ರಶಸ್ತಿ ದೊರೆತಿದೆ. ಆದರೆ ಇದನ್ನು ಪೂರ್ಣ ನೃತ್ಯ ಎನ್ನುವುದಕ್ಕಿಂತ ಪಾತ್ರ ಪ್ರವೇಶ ಎನ್ನಬಹುದು. ಸಿನಿಮಾದಲ್ಲಿ ಪ್ರತಿ ಪಾತ್ರ ಪ್ರವೇಶವೂ ರೋಮಾಂಚನ ಹುಟ್ಟಿಸುತ್ತದೆ. ಕಾಂತಾರ ನೋಡಿದ ಮೇಲೆ ರಾಜ್ ಬಿ. ಶೆಟ್ಟಿ ಅವರ ಬೇರೆ ಬೇರೆ ಸಿನಿಮಾಗಳನ್ನು ನೋಡಲು ಶುರುಮಾಡಿದೆ. ಗರುಡಗಮನ ವೃಷಭ ವಾಹನ, ಒಂದು ಮೊಟ್ಟೆಯ ಕಥೆ ಹೀಗೆ ಹುಡುಕಿಕೊಂಡು ಸಿನಿಮಾಗಳನ್ನು ನೋಡಿದೆ’ ಎಂದರು ಲಕ್ಷ್ಮೀ ಗೋಪಾಲಸ್ವಾಮಿ.

ರಾಜ್ ಬಿ. ಶೆಟ್ಟಿ ಅವರ ಪರವಾಗಿ ಪ್ರಶಸ್ತಿ ಸ್ವೀಕರಿಸಿದ ರಿಷಬ್ ಶೆಟ್ಟಿ ಅವರ ಪತ್ನಿ ಪ್ರಗತಿ ಶೆಟ್ಟಿ, ‘ರಾಜಣ್ಣನಿಗೆ ಪ್ರಶಸ್ತಿ ತಲುಪಿಸುತ್ತೇನೆ. ಈ ಹಾಡನ್ನು ತುಂಬಾ ಪ್ರೀತಿಯಿಂದ ಕೊರಿಯೋಗ್ರಾಫ್ ಮಾಡಿದ್ದಾರೆ. ಅವರಿಗೆ ತುಂಬು ಧನ್ಯವಾದ. ಈ ಪ್ರೀತಿಗೆ ಯಾವತ್ತೂ ಋಣಿಯಾಗಿರುತ್ತೇವೆ’ ಎಂದರು.

ಅತ್ಯುತ್ತಮ ನೃತ್ಯ ನಿರ್ದೇಶನ
ರಾಜ್ ಬಿ.ಶೆಟ್ಟಿ
(ಹಾಡು:ವರಾಹ ರೂಪಂ,
ಚಿತ್ರ: ಕಾಂತಾರ)

ನಾಮನಿರ್ದೇಶಿತರು

- ಮೋಹನ್- ತೂಫಾನ್ (ಕೆ.ಜಿ.ಎಫ್. 2)
- ರಾಜ್ ಬಿ ಶೆಟ್ಟಿ-ವರಾಹ ರೂಪಂ (ಕಾಂತಾರ)
- ರವೀಂದ್ರನಾಥ್ ಸಿರಿವರ- ಐ ಐ ಐಹೊಳೆ (ಐಹೊಳೆ)
- ಎ. ಹರ್ಷ- ಗಿಚ್ಚಗಿಲಿಗಿಲಿ (ಓಲ್ಡ್ ಮಾಂಕ್)



ನಟಿ ಲಕ್ಷ್ಮೀ ಗೋಪಾಲಸ್ವಾಮಿ ಅವರಿಂದ ರಾಜ್ ಬಿ. ಶೆಟ್ಟಿ ಪರವಾಗಿ ಅತ್ಯುತ್ತಮ ನೃತ್ಯ ನಿರ್ದೇಶನ ಪ್ರಶಸ್ತಿ ಪಡೆದುಕೊಂಡ ಪ್ರಗತಿ ಶೆಟ್ಟಿ ಹಾಗೂ ಕಿಶೋರ್

ವೇದಿಕೆಯಲ್ಲಿ ಅರ್ಚನಾ– ಅದಿತಿ ಹಾಡಿನ ತಂಪು

‘ಅತ್ಯುತ್ತಮ ಹಿನ್ನೆಲೆ ಗಾಯಕಿ’ ಪ್ರಶಸ್ತಿಯನ್ನು ಹಾಡಿನ ಮೂಲಕವೇ ನೀಡಿದರು ಗಾಯಕಿ ಅರ್ಚನಾ ಉಡುಪ. ‘ತರವಲ್ಲ ತಗಿ ನಿನ್ನ ತಂಬೂರಿ ಸ್ವರ...’ ಹಾಡಿನ ಮೂಲಕ ಅಲ್ಲಿದ್ದವರನ್ನು ಗಾನಲೋಕಕ್ಕೆ ಕೊಂಡೊಯ್ದರು. ‘ವೇದ’ ಚಿತ್ರದ ಗಿಲ್ಲಕ್ಕೋ ಹಾಡಿಗೆ ಗಾಯಕಿ ಮಂಗ್ಲಿ ಪರವಾಗಿ ಪ್ರಶಸ್ತಿ ಸ್ವೀಕರಿಸಿದವರು ಅದಿತಿ ಸಾಗರ್. ಅವರು ಕೂಡ ಪ್ರಶಸ್ತಿ ದಕ್ಕಿಸಿಕೊಟ್ಟ ಅದೇ ಹಾಡಿಗೆ ದನಿಯಾದರು. ಅವರ ಮುಕ್ತ ಕಂಠದಿಂದ ಹೊರಹೊಮ್ಮಿದ ಗಿಲ್ಲಕ್ಕೋ ಹಾಡು ಮಿಂಚು ಸಂಚರಿಸುವಂತೆ ಮಾಡಿತು. ಅರ್ಚನಾ–ಅದಿತಿ ಹಾಡಿನ ಮೋಡಿ ಕೇಳುಗರ ಮನ ಸೆಳೆಯಿತು. ಬರೆದ ಪ್ರಮೋದ್ ಮರವಂತೆ ಅವರಿಗೆ ಧನ್ಯವಾದ ಸಂದಿತು.



ವೇದ ಸಿನಿಮಾದ ಗಿಲ್ಲಕ್ಕೋ ಶಿವ ಹಾಡಿಗೆ ಗಾಯಕಿ ಮಂಗ್ಲಿ ಪರ ‘ಅತ್ಯುತ್ತಮ ಹಿನ್ನೆಲೆ ಗಾಯಕಿ’ ಪ್ರಶಸ್ತಿ ಸ್ವೀಕರಿಸಿದ ಗಾಯಕಿ ಅದಿತಿ ಸಾಗರ್

ಅತ್ಯುತ್ತಮ ಹಿನ್ನೆಲೆ ಗಾಯಕಿ
ಮಂಗ್ಲಿ
(ಹಾಡು: ಗಿಲ್ಲಕ್ಕೊ ಶಿವ,
ಚಿತ್ರ:ವೇದ)

ನಾಮನಿರ್ದೇಶಿತರು

- ಸುಪ್ರಿಯಾ ರಾಮ್
  ಹಾಡು: ಅಪ್ಪಯ್ಯ
  ಚಿತ್ರ: ಫೋರ್ ವಾಲ್ಸ್
- ಆನ್ರಾ ಶೆಟ್ಟಿ
  ಹಾಡು: ಸಹಪಾಠಿ
  ಚಿತ್ರ: 777 ಚಾರ್ಲಿ
- ಮಂಗ್ಲಿ
  ಹಾಡು: ಗಿಲ್ಲಕ್ಕೊ
  ಚಿತ್ರ: ವೇದ
- ಸಿರಿ ರವಿಕುಮಾರ್
  ಹಾಡು: ಸಂಗಾತಿ
  ಚಿತ್ರ: ಸಕುಟುಂಬ ಸಮೇತ
- ವಾರಿಜಾಶ್ರೀ
  ಹಾಡು: ಜೋರುಜೋರಾಗಿ
  ಚಿತ್ರ: ತುರ್ತು ನಿರ್ಗಮನ



ಕಾರ್ಯಕ್ರಮದಲ್ಲಿ ಭಾವನಾ ರಾವ್ ನೃತ್ಯ ಪ್ರದರ್ಶನ

ದೃಶ್ಯವೊಂದನ್ನು ಮೊದಲು ತನ್ನ ಕಣ್ಣಲ್ಲಿ ಹಿಡಿದಿಟ್ಟುಕೊಂಡು; ಅನುಭವಿಸಿ, ಪ್ರೇಕ್ಷಕರ ಕಣ್ಣೊಳಗೆ ಹರಿಬಿಡುವ ಛಾಯಾಚಿತ್ರಗ್ರಾಹಕನ ಪರಿಶ್ರಮ ಇಡೀ ಸಿನಿಮಾದ ಗೆಲುವನ್ನು ನಿರ್ಧರಿಸುತ್ತದೆ. ಕಲಾನಿರ್ದೇಶಕನ ಕೈಚಳಕವನ್ನು ತೆರೆಗೆ ತರುವ ಜವಾಬ್ದಾರಿ ಹೊತ್ತ ಈತ ಇಡೀ ಚಿತ್ರದ ಬೆನ್ನೆಲುಬು. ಇಂತಹ ಜವಾಬ್ದಾರಿಗಳನ್ನು ಹೊತ್ತು ಸಾಗುತ್ತಿರುವವರೇ ಭುವನ್ ಗೌಡ. ‘ಉಗ್ರಂ’ ಸಿನಿಮಾ ಮೂಲಕ ಸ್ಯಾಂಡಲ್‌ವುಡ್‌ನಲ್ಲಿ ಗುರುತಿಸಿಕೊಂಡ ಭುವನ್ ಗೌಡ, ನಂತರ ವಿಶ್ವದಾದ್ಯಂತ ಸಂಚರಿಸಿದ್ದು ‘ಕೆ.ಜಿ.ಎಫ್’ ಸಿನಿಮಾ ಸರಣಿ ಮೂಲಕ. ‘ಕೆ.ಜಿ.ಎಫ್’ ಭುವನ್ ಸಿನಿಗ್ರಾಫ್ ಏರಿಸಿದ ಸಿನಿಮಾ. ಇಡೀ ಸಿನಿಮಾವನ್ನು ಕ್ಯಾಮೆರಾ ಕಣ್ಣಲ್ಲಿ ಕಟ್ಟಿಕೊಟ್ಟ ರೀತಿಗೆ ಪ್ರೇಕ್ಷಕರೇ ಮರುಳಾದರು. ನಿರ್ದೇಶಕ ಪ್ರಶಾಂತ್ ನೀಲ್ ಜೊತೆಗಿನ ಭುವನ್ ಅವರ ಒಡನಾಟ ಪ್ರಭಾಸ್ ನಟನೆಯ ‘ಸಲಾರ್’ನಲ್ಲೂ ಮುಂದುವರಿದಿದೆ. ಸದ್ಯ ಹೈದರಾಬಾದ್‌ನಲ್ಲಿ ಇದೇ ಸಿನಿಮಾದ ಕ್ಲೈಮ್ಯಾಕ್ಸ್ ಶೂಟಿಂಗ್‌ನಲ್ಲಿ ತೊಡಗಿಸಿಕೊಂಡಿದ್ದಾರೆ ಭುವನ್.

ಪ್ರಶಸ್ತಿಗೆ ನಾಮನಿರ್ದೇಶಿತರು

- ಭುವನ್ ಗೌಡ (ಚಿತ್ರ: ಕೆ.ಜಿ.ಎಫ್. ಚಾಪ್ಟರ್–2)
- ಅರವಿಂದ ಕಶ್ಯಪ್(ಚಿತ್ರ: ಕಾಂತಾರ)
- ಅರವಿಂದ ಕಶ್ಯಪ್(ಚಿತ್ರ: 777 ಚಾರ್ಲಿ)
- ಅಶೋಕ್ ಕಶ್ಯಪ್(ಚಿತ್ರ: ತಲೆದಂಡ)
- ಸಂತೋಷ್ ರೈ ಪಾತಾಜೆ(ಚಿತ್ರ: ಗಾಳಿಪಟ 2)



ಅತ್ಯುತ್ತಮ ಛಾಯಾಚಿತ್ರಗ್ರಹಣ
ಭುವನ್ ಗೌಡ
(ಚಿತ್ರ: ಕೆ.ಜಿ.ಎಫ್. ಚಾಪ್ಟರ್–2)

MALABAR GOLD & DIAMONDS Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ Powered By AMRITH NONI

ಸಮಾಜಮುಖಿ ಕೆಲಸ



ಜನ ಮೆಚ್ಚಿದ ನಟ ಟ್ರೋಫಿ ಗೆದ್ದ ಯಶ್ ಪರವಾಗಿ ಹೊಂಬಾಳೆ ನಿರ್ಮಾಣ ಸಂಸ್ಥೆಯ ಪ್ರತಿನಿಧಿಯಾಗಿ ಚೆಲುವೇಗೌಡರು ಟಿಟಿಕೆ ಪ್ರೆಸ್ಟೀಜ್ ಉಪಾಧ್ಯಕ್ಷ ದಿನೇಶ್ ಗರ್ಗ್ ಅವರಿಂದ ಪ್ರಶಸ್ತಿ ಪಡೆದ ಕ್ಷಣ. ನಟ ರಘು ಮುಖರ್ಜಿ ಹಾಗೂ ಅನು ಪ್ರಭಾಕರ್ ಅವರೂ ಇದ್ದರು.

ಸರ್ಕಾರದ ಆಡಳಿತ ವೈಖರಿಯನ್ನು ಪರಿಶೀಲಿಸಿ ಎಚ್ಚರಿಸುವ, ಜನರ ಆಶೋತ್ತರಗಳನ್ನು ಕಾಪಾಡುವ ಜೊತೆಗೆ ಕಲಾವಿದರನ್ನೂ ಪೋಷಿಸುವ ಸಮಾಜಮುಖಿ ಕೆಲಸವನ್ನು 'ಪ್ರಜಾವಾಣಿ' ಮಾಡುತ್ತಿರುವುದು ನಿಜಕ್ಕೂ ಅಭಿನಂದನೀಯ. ಈ ವರ್ಷ 'ಅಮೃತ ಮಹೋತ್ಸವ' ಆಚರಿಸುತ್ತಿರುವ 'ಪ್ರಜಾವಾಣಿ', ಸಿನಿಮಾ ರಂಗದ ಪ್ರತಿಭೆಗಳನ್ನು ಪುರಸ್ಕರಿಸುವ ಕಾರ್ಯ ಮಾಡಿರುವುದು ಮೆಚ್ಚುವಂಥದ್ದು. ಈ ನಿಟ್ಟಿನಲ್ಲಿ ಪತ್ರಿಕೋದ್ಯಮದಲ್ಲಿ ದಿಟ್ಟ ಹೆಜ್ಜೆ ಇಟ್ಟ 'ಪ್ರಜಾವಾಣಿ' ಸಿನಿಮಾ ನಟ, ನಿರ್ದೇಶಕ, ನಿರ್ಮಾಪಕ, ಪೋಷಕ ಹಾಗೂ ಪ್ರೇಕ್ಷಕವರ್ಗಕ್ಕೆ ಮಾದರಿಯಾಗಿ ನಿಂತಿದೆ.

ಈ ಸಿನಿ ಸಮ್ಮಾನದ ವಿಶೇಷತೆ ಎಂದರೆ ಹಲವು ಚೊಚ್ಚಲ ಪ್ರಯತ್ನಗಳು ಪ್ರಶಸ್ತಿಗಳಿಗೆ ಭಾಜನವಾಗಿರುವುದು. ರಿಷಬ್ ಶೆಟ್ಟಿ ನಿರ್ದೇಶನ, ನಟನೆಯ 'ಕಾಂತಾರ' ಅಭೂತಪೂರ್ವ ಯಶಸ್ಸು ಕಂಡಿದ್ದು, ಕಿರಣ್‌ರಾಜ್ ಅವರ '777 ಚಾರ್ಲಿ' ಪ್ರಶಸ್ತಿಗಳನ್ನು ಬಾಚಿಕೊಂಡದ್ದು ಚಿತ್ರರಂಗದಲ್ಲಿ 'ಮೊದಲ ಪ್ರಯತ್ನ'ದ ಯಶಸ್ಸಿನ ಮೈಲಿಗಲ್ಲು ಎನ್ನಬಹುದು. ಈ ಚಿತ್ರಗಳು ನಿಜಕ್ಕೂ ಇಷ್ಟವಾದವು.

ಸಮೃದ್ಧ ಪರಂಪರೆ ಇರುವ ಕನ್ನಡ ಸಿನಿಮಾರಂಗದ ಪ್ರತಿಭಾವಂತರನ್ನು ಗುರುತಿಸಿ ಸನ್ಮಾನಿಸಿ ಪ್ರೋತ್ಸಾಹಿಸುವ ಕಾರ್ಯಕ್ಕೆ ಬೆಂಬಲ ನೀಡುವುದಕ್ಕೆ ಟಿಟಿಕೆ ಪ್ರೆಸ್ಟೀಜ್ ಸಂಸ್ಥೆಗೆ ಹೆಮ್ಮೆ ಅನಿಸುತ್ತಿದೆ. ಕರ್ನಾಟಕದ ಎಲ್ಲ ಜನರೂ ಸಿನಿಮಾ ಜೊತೆ ಭಾವನಾತ್ಮಕ ಸಂಬಂಧ ಇಟ್ಟುಕೊಂಡಿದ್ದಾರೆ. ಇದೇ ಜನರು ಟಿಟಿಕೆ ಗೃಹಬಳಕೆ ಉತ್ಪನ್ನದ ಜೊತೆಗೂ ಅವಿನಾಭಾವ ಸಂಬಂಧವನ್ನೇ ಇಟ್ಟುಕೊಂಡಿದ್ದಾರೆ. ಕಳೆದ ಆರು ದಶಕಗಳಿಂದ ಟಿಟಿಕೆ ಪ್ರೆಸ್ಟೀಜ್ ವಿವಿಧ ಶ್ರೇಣಿಯ ಉತ್ಕೃಷ್ಟ ಉತ್ಪನ್ನಗಳನ್ನು ಗ್ರಾಹಕರಿಗೆ ನೀಡುತ್ತಾ ಬಂದಿದೆ.

ಸಿನಿ ಸಮ್ಮಾನದಂಥ ಸ್ಮರಣೀಯ ಕಾರ್ಯಕ್ರಮದಲ್ಲಿ ಸಿನಿರಂಗದ ಪ್ರತಿಭೆಗಳಿಗೆ 'ಪ್ರಜಾವಾಣಿ' ಸಂಸ್ಥೆ ಪ್ರಶಸ್ತಿ ನೀಡುವುದು ನಮಗೂ ಸಂತೋಷದ ವಿಚಾರವೇ. ಇಂತಹ ಉತ್ತಮ ಕೆಲಸವನ್ನು ಪ್ರಾಮಾಣಿಕವಾಗಿ, ಅಚ್ಚುಕಟ್ಟಾಗಿ ಮಾಡಿರುವ ಪತ್ರಿಕಾ ಸಂಸ್ಥೆಗೆ ಟಿಟಿಕೆ ಪ್ರೆಸ್ಟೀಜ್ ಸಂಸ್ಥೆ ಪ್ರಾಯೋಜಕತ್ವ ವಹಿಸಿರುವುದು ನಮ್ಮ ಸೌಭಾಗ್ಯ. ಮುಂದೆ ಇನ್ನಷ್ಟು ಮಹತ್ತರ ಕಾರ್ಯಗಳನ್ನು ಈ ಪತ್ರಿಕೆ ಮಾಡುತ್ತಾ ಬರಲಿ, ಸಮಾಜವನ್ನು ಇನ್ನಷ್ಟು ಬೆಳೆಸಲಿ. ಸಹೃದಯರಲ್ಲಿ ಸದಭಿರುಚಿ ಮೂಡಿಸಲಿ ಎಂಬುದೇ ನಮ್ಮ ಆಶಯ.

–ದಿನೇಶ್ ಗರ್ಗ್, ಟಿಟಿಕೆ ಕಂಪನಿಯ ಕಾರ್ಯನಿರ್ವಾಹಕ ಉಪಾಧ್ಯಕ್ಷ (ಸೇಲ್ಸ್ ಅಂಡ್ ಮಾರ್ಕೆಟಿಂಗ್)

ಜನಮೆಚ್ಚಿದ ವಿಭಾಗದ ಪ್ರಶಸ್ತಿ ಮುಡಿಗೇರಿಸಿಕೊಂಡವರು



ಜನಮೆಚ್ಚಿದ ನಟ
ಯಶ್
(ಚಿತ್ರ: ಕೆ.ಜಿ.ಎಫ್. ಚಾಪ್ಟರ್–2)

ನಾಮನಿರ್ದೇಶಿತರು
- ಸಂಚಾರಿ ವಿಜಯ್
- ರಕ್ಷಿತ್ ಶೆಟ್ಟಿ
- ಶರಣ್
- ಅಚ್ಯುತ್ ಕುಮಾರ್
- ಯಶ್



ಜನಮೆಚ್ಚಿದ ನಟಿ
ಅದಿತಿ ಪ್ರಭುದೇವ
(ಚಿತ್ರ: Once upon a time in ಜಮಾಲಿಗುಡ್ಡ)

ನಾಮನಿರ್ದೇಶಿತರು
- ಹಿತಾ ಚಂದ್ರಶೇಖರ್
- ಲಕ್ಷ್ಮೀ ಚಂದ್ರಶೇಖರ್
- ಸಿರಿ ರವಿಕುಮಾರ್
- ಗಾನವಿ ಲಕ್ಷ್ಮಣ್
- ಅದಿತಿ ಪ್ರಭುದೇವ



ಜನಮೆಚ್ಚಿದ ಸಿನಿಮಾ
ಕಾಂತಾರ

ನಾಮನಿರ್ದೇಶನಗೊಂಡಿದ್ದ ಸಿನಿಮಾಗಳು
- ಕಾಂತಾರ
- 777 ಚಾರ್ಲಿ
- ಗುರು ಶಿಷ್ಯರು
- ತಲೆದಂಡ
- ಧರಣಿ ಮಂಡಲ ಮಧ್ಯದೊಳಗೆ



ಜನಮೆಚ್ಚಿದ ಸಂಗೀತ
ಬಿ.ಅಜನೀಶ್ ಲೋಕನಾಥ್
(ಚಿತ್ರ: ಕಾಂತಾರ)

ನಾಮನಿರ್ದೇಶಿತರು
- ಬಿ.ಅಜನೀಶ್ ಲೋಕನಾಥ್ (ಚಿತ್ರ: ಕಾಂತಾರ)
- ಧೀರೇಂದ್ರ ದಾಸ್ (ಚಿತ್ರ: ತುರ್ತು ನಿರ್ಗಮನ)
- ಅರ್ಜುನ್ ಜನ್ಯ (ಚಿತ್ರ: ಗಾಳಿಪಟ 2)
- ಅಶ್ವಿನ್ ಪಿ. ಕುಮಾರ್ (ಚಿತ್ರ: ಮೇಡ್ ಇನ್ ಬೆಂಗಳೂರು)
- ಜೆ. ಅನೂಪ್ ಸೀಳಿನ್ (ಚಿತ್ರ: ಮಾನ್ಸೂನ್ ರಾಗ)

ಪ್ರವಾಹದ ಬಿಕ್ಕಟ್ಟಿನಿಂದ...

ಒಂದನೇ ಪುಟದಿಂದ...

ಸಿನಿಮಾ ಸಂಸ್ಕೃತಿಯ ಅಂತರ್ಜಲ


ಕನ್ನಡ ಸಾಹಿತ್ಯಕ್ಕೆ ಹೊಸನೀರು ಹರಿಯುವಲ್ಲಿ 'ಪ್ರಜಾವಾಣಿ' ಕಾಲುವೆ ಪಾತ್ರವನ್ನು ನಿರಂತರವಾಗಿ ನಿರ್ವಹಿಸಿದೆ. ಸಾಹಿತ್ಯ ಮಾತ್ರವಲ್ಲ, ವಿವಿಧ ಕಲಾಪ್ರಕಾರಗಳ ಬೆಳವಣಿಗೆಗೂ ಪತ್ರಿಕೆ ತನ್ನ ಆರಂಭದಿಂದಲೂ ಶ್ರಮಿಸುತ್ತಲೇ ಇದೆ. ಕನ್ನಡ ಸಿನಿಮಾ ಸಂಸ್ಕೃತಿಯ ಬೆಳವಣಿಗೆಯಲ್ಲಂತೂ 'ಪ್ರಜಾವಾಣಿ'ಯದು ಅಂತರ್ಜಲದ ಪಾತ್ರ.

ಮಾಧ್ಯಮಗಳ ಪಾಲಿಗೆ ಸಿನಿಮಾ ಎನ್ನುವುದು ಸಾಮಾನ್ಯವಾಗಿ ವ್ಯಾಪಾರಿ ಉತ್ಪನ್ನವೇ ಆಗಿರುತ್ತದೆ. ಮಾಧ್ಯಮಗಳಲ್ಲಿ ಪ್ರಕಟಗೊಳ್ಳುವ ಸಿನಿಮಾ ಸಂಗತಿಗಳು ತಾರಾ ವರ್ಚಸ್ಸಿನ ಮನರಂಜನಾತ್ಮಕ ಸಿನಿಮಾಗಳ ಸುತ್ತ ಗಿರಕಿ ಹೊಡೆಯುತ್ತಿರುತ್ತವೆ. ಪರ್ಯಾಯ ಸಿನಿಮಾ, ಹೊಸ ಪ್ರಯೋಗಗಳ ಬಗ್ಗೆ ಮುಖ್ಯವಾಹಿನಿ ಮಾಧ್ಯಮಗಳಿಗೆ ಅಷ್ಟೇನೂ ಉತ್ಸಾಹವಿಲ್ಲ. ಆದರೆ, ಚಿತ್ರರಂಗದೊಂದಿಗೆ 'ಪ್ರಜಾವಾಣಿ'ಯ ಒಡನಾಟ ಭಿನ್ನವಾದುದು. ಪತ್ರಿಕೆಯ ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಸಿನಿಮಾ ಹೊರತಾಗಿಲ್ಲ. ಚಲನಚಿತ್ರ ಮಾಧ್ಯಮವನ್ನು ಜನಪರವಾಗಿಸುವ ನಿಟ್ಟಿನಲ್ಲಿ 'ಪ್ರಜಾವಾಣಿ' ಕಾರ್ಯ ನಿರ್ವಹಿಸಿದೆ ಹಾಗೂ ದೃಶ್ಯ ಮಾಧ್ಯಮದ ವ್ಯಾಕರಣವನ್ನು ಅರ್ಥ ಮಾಡಿಕೊಳ್ಳುವ ಮೀಮಾಂಸೆಯೊಂದನ್ನು ಜನರಿಗೆ ದೊರಕಿಸಿಕೊಡಲು ತನ್ನ ಮಿತಿಯಲ್ಲಿಯೇ ಪ್ರಯತ್ನಿಸಿದೆ. ವ್ಯಾಪಾರಿ ಸಿನಿಮಾಗಳಂತೆಯೇ ಪರ್ಯಾಯ ಸಿನಿಮಾ ಪ್ರಯತ್ನಗಳನ್ನೂ ಪತ್ರಿಕೆ ಬೆಂಬಲಿಸಿದೆ.

ಕನ್ನಡ ಚಿತ್ರರಂಗ ಮದ್ರಾಸ್‌ನಲ್ಲಿದ್ದಾಗಿನಿಂದಲೂ ಚಿತ್ರರಂಗಕ್ಕೆ ಸಂಬಂಧಿಸಿದ ಸುದ್ದಿಗಳನ್ನು ಜನರಿಗೆ ತಲುಪಿಸುವ ಕೆಲಸವನ್ನು 'ಪ್ರಜಾವಾಣಿ' ಮಾಡುತ್ತಾಬಂದಿದೆ. ಚೆನ್ನೈನಿಂದಲೇ ವರದಿಗಾರರೊಬ್ಬರು ನೇರವಾಗಿ ಸುದ್ದಿಗಳನ್ನು ಕಳುಹಿಸಿಕೊಡುವ ವ್ಯವಸ್ಥೆಯನ್ನು ಆ ದಿನಗಳಲ್ಲೇ ಮಾಡಿಕೊಂಡಿದ್ದುದು, ಸಿನಿಮಾ ಸಂಸ್ಕೃತಿಯ ಮೇಲಿನ 'ಪ್ರಜಾವಾಣಿ'ಯ ಕಾಳಜಿಗೆ ನಿದರ್ಶನದಂತಿದೆ.

ರಂಜಕ ಹಾಗೂ ರೋಚಕ ಸುದ್ದಿಗಳನ್ನು ನೀಡುವಷ್ಟಕ್ಕೆ ಮಾತ್ರ 'ಪ್ರಜಾವಾಣಿ' ತನ್ನ ಸಿನಿನಂಟನ್ನು ಸೀಮಿತಗೊಳಿಸಿಕೊಂಡಿಲ್ಲ. ಪತ್ರಿಕೆಯಲ್ಲಿನ ಬರಹಗಳು ಸಿನಿಮಾ ವ್ಯಾಕರಣವನ್ನು ಚರ್ಚಿಸಿವೆ. ಸಿನಿಮಾ ಮಾಧ್ಯಮಕ್ಕೆ ಸಂಬಂಧಿಸಿದಂತೆ ಅಂಕಣಗಳು ಪ್ರಕಟಗೊಂಡಿವೆ. 'ಸಿನಿಮಾ ರಂಜನೆ' ಹಾಗೂ ದೀಪಾವಳಿ ಸಂಚಿಕೆಗಳಲ್ಲಿನ ವಿಶೇಷ ಸಂದರ್ಶನ–ವಿಶ್ಲೇಷಣೆಗಳು ಉದ್ಯಮಕ್ಕೂ ನೆರವಾಗಿವೆ, ಸಿನಿಮಾಪ್ರಿಯರ ಕುತೂಹಲವನ್ನು ತಣಿಸಿವೆ; ಸಿನಿಮಾ ವಿಮರ್ಶೆಗಳು ಓದುಗರಿಗೆ ರಸದೀವಿಗೆಯಾಗಿ ಪರಿಣಮಿಸಿರುವುದರ ಜೊತೆಗೆ ಸಿನಿಮಾ ನಿರ್ಮಾತೃಗಳು ತಮ್ಮ ರಚನೆಗಳನ್ನು ಮರು ಪರೀಕ್ಷಿಸಿಕೊಳ್ಳಲು ಒತ್ತಾಯಿಸಿವೆ. 'ಜನತೆ ಇದ್ದರೆ ಕಲಾವಿದರು, ಕಲೆ. ಜನ ಸಂಕಷ್ಟದಲ್ಲಿದ್ದಾಗ ಕಲಾವಿದರನ್ನು ಅವಲಂಬಿಸಬಹುದೆಂಬುದನ್ನು ತೋರಿಸಿದ್ದಾರೆ' ಎನ್ನುವ ಮಾತನ್ನು ಚಿತ್ರೋದ್ಯಮಕ್ಕೆ ನೆನಪಿಸುವ ಕೆಲಸವನ್ನು ಪತ್ರಿಕೆ ನಿರಂತರವಾಗಿ ಮಾಡುತ್ತಲೇ ಬಂದಿದೆ.

ಕನ್ನಡ ಮಾತ್ರವಲ್ಲ, ಪರಭಾಷೆಗಳಲ್ಲಿನ ಪ್ರಯೋಗಗಳ ಬಗ್ಗೆಯೂ 'ಪ್ರಜಾವಾಣಿ' ಸದಾ ಬಿಡುಗಣ್ಣು. ಅಂತರರಾಷ್ಟ್ರೀಯ ಚಿತ್ರೋತ್ಸವಗಳಿಗೆ ವರದಿಗಾರರನ್ನು ಕಳುಹಿಸಿ ವರದಿಗಳನ್ನು ಪ್ರಕಟಿಸುವ ಪರಿಪಾಠ 'ಸಿನಿಮಾ ಸಂಸ್ಕೃತಿ'ಯ ಬಗೆಗಿನ ಪತ್ರಿಕೆಯ ಪ್ರೀತಿಗೆ ಉದಾಹರಣೆ. ❖



ಸಿನಿ ಸಮ್ಮಾನ ಸಮಾರಂಭದಲ್ಲಿ ಸಾನ್ವಿ ನೃತ್ಯ ಭಂಗಿ



ಸ್ಟೈಲ್ ಪಾರ್ಟ್‌ನರ್
ಬಿ.ಎಸ್. ಚನ್ನಬಸಪ್ಪ ಆ್ಯಂಡ್ ಸನ್ಸ್ ಉಡುಗೆಯಲ್ಲಿ ಮಿಂಚಿದ ನಿರೂಪಕರಾದ ರಮೇಶ್ ಅರವಿಂದ್ ಹಾಗೂ ಅನುಶ್ರೀ



ಕಲಾವಿದರಿಗೆ ಪ್ರೇರಣೆ

ಕನ್ನಡ ಚಿತ್ರರಂಗದ ಪ್ರತಿಭಾವಂತರನ್ನು ಗುರುತಿಸಿ, ಗೌರವಿಸುವ ಕೆಲಸ ಶ್ಲಾಘನೀಯ. ಮುದ್ರಣ ಮಾಧ್ಯಮವೊಂದು ಈ ಕೆಲಸ ಮಾಡಿರುವುದು ಮಹತ್ವದ ಹೆಜ್ಜೆ. ಮುಂದೆ ಸಿನಿಮಾ ಮಾಡುವವರಿಗೆ ಇದು ಪ್ರೇರಣೆಯಾಗಲಿದೆ. ಪ್ರಶಸ್ತಿಗೆ ಉತ್ತಮ ಸಿನಿಮಾಗಳನ್ನು ನಾಮನಿರ್ದೇಶನ ಮಾಡಲಾಗಿತ್ತು. ಇಂತಹ ಪ್ರಶಸ್ತಿಗಳಿಂದ ಭವಿಷ್ಯದಲ್ಲಿ ಇನ್ನಷ್ಟು ಉತ್ತಮ ಚಿತ್ರಗಳು ಕನ್ನಡದಲ್ಲಿ ಬರುವ ನಿರೀಕ್ಷೆಯಿದೆ. ಶಿಕ್ಷಣ ಕ್ಷೇತ್ರದಲ್ಲಿರುವ ನಮ್ಮ ಸಂಸ್ಥೆ, ಈ ಪ್ರಶಸ್ತಿಗೆ ಪ್ರಾಯೋಜಕರಾಗಿರುವುದು ಸಂತಸವನ್ನುಂಟು ಮಾಡಿದೆ. ನಾಗರಿಕ ಸೇವಾ ಪರೀಕ್ಷೆ ಎದುರಿಸುವವರಿಗೆ ಸಂದರ್ಶನದಲ್ಲಿ ಅವರ ಆಸಕ್ತಿ ಬಗ್ಗೆಯೂ ಪ್ರಶ್ನಿಸುತ್ತಾರೆ. ಹೀಗಾಗಿ ಸಿನಿಮಾಗಳಲ್ಲಿ ಅಭಿನಯ, ಸಂಗೀತ, ನೃತ್ಯದಂತಹ ಚಟುವಟಿಕೆಗಳೂ ಮುಖ್ಯವಾಗುತ್ತವೆ. ನನ್ನ ನೆಚ್ಚಿನ ನಟ ಯಶ್. ಇತ್ತೀಚೆಗೆ ತೆರೆ ಕಂಡ ಸಿನಿಮಾಗಳಲ್ಲಿ 'ಕಾಂತಾರ' ಹೆಚ್ಚು ಇಷ್ಟವಾಯಿತು.

2014ರಿಂದ ಯುಪಿಎಸ್‌ಸಿ ವಿದ್ಯಾರ್ಥಿಗಳಿಗೆ ಮಾರ್ಗ ದರ್ಶನ ನೀಡುತ್ತಿರುವ ಕನ್ನಡಿಗರ ಸಂಸ್ಥೆ 'ಇನ್‌ಸೈಟ್ಸ್ ಐಎಎಸ್' ಬೆಂಗಳೂರಿನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿದ್ದು, ದೆಹಲಿ, ಶ್ರೀನಗರ, ಲಖನೌ ಹೈದರಾಬಾದ್, ಧಾರವಾಡ, ಮೈಸೂರು ಸೇರಿದಂತೆ ಭಾರತದಾದ್ಯಂತ ಶಾಖೆಗಳನ್ನು ಹೊಂದಿದೆ. ಅಭ್ಯರ್ಥಿಗಳಿಗೆ ಬೋಧನೆ ಮತ್ತು ಉತ್ತರ ಬರೆಯುವುದು ಸೇರಿದಂತೆ ಕೌಶಲವೃದ್ಧಿಯ ಬಗ್ಗೆ ಇನ್‌ಸೈಟ್ಸ್ ಐಎಎಸ್ ಕೇಂದ್ರದಲ್ಲಿ ಮಾರ್ಗದರ್ಶನ ನೀಡಲಾಗುತ್ತಿದ್ದು, ಒಟ್ಟಾರೆಯಾಗಿ 'ಇಂಟೆಗ್ರೇಟೆಡ್ ಕೋಚಿಂಗ್ ಮಾದರಿ'ಯಲ್ಲಿ ಅಭ್ಯರ್ಥಿಗಳನ್ನು ಪರೀಕ್ಷೆಗೆ ಸಜ್ಜುಗೊಳಿಸಲಾಗುತ್ತಿದೆ.

ವಿನಯ್ ಕುಮಾರ್ ಜಿ.ಬಿ., ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ



'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಕಾರ್ಯಕ್ರಮದಲ್ಲಿ ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ವಿನಯ್ ಕುಮಾರ್ ಜಿ.ಬಿ. ಅವರು ಪತ್ನಿಯೊಂದಿಗೆ ಭಾಗವಹಿಸಿದ್ದರು.

ಹೆಮ್ಮೆಯ ಪತ್ರಿಕೆ ಜೊತೆಗಿರುವುದೇ ಖುಷಿ



'ವೇದ' ಸಿನಿಮಾದ 'ಪಾತ್ರಕ್ಕೆ ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿಯನ್ನು ಪಡೆದ ನಟಿ ಉಮಾಶ್ರೀ ಜೊತೆಗೆ ಫ್ರೀಡಂ ಆಯಿಲ್ ಕಂಪನಿಯ ಮಾರ್ಕೆಟಿಂಗ್ ಹೆಡ್ ಚೇತನ್ ಪಿಂಪಲ್ ಕುಟೆ ಹಾಗೂ ಹಿರಿಯ ನಟಿ ಬಿ. ಜಯಶ್ರೀ.

'ಪ್ರಜಾವಾಣಿ'ಯು ನಮ್ಮ ಫ್ರೀಡಂ ಆಯಿಲ್ ಕಂಪನಿಯ ಮೀಡಿಯಾ ಸಹಭಾಗಿತ್ವದ ಮೊದಲ ಆಯ್ಕೆ. ಕರ್ನಾಟಕದ ಹೆಮ್ಮೆಯ ಈ ಪತ್ರಿಕೆಯೊಂದಿಗೆ ನಾವು ಸಹಭಾಗಿತ್ವ ಹೊಂದಿರುವುದೇ ಖುಷಿಯ ವಿಚಾರ.

ಫ್ರೀಡಂ ಆಯಿಲ್ ಕಂಪನಿಯ ಕರ್ನಾಟಕ ವಿಭಾಗದ ಮಾರುಕಟ್ಟೆಗೆ ಪತ್ರಿಕೆ ಸಹಭಾಗಿತ್ವ ಹೊಂದಿದೆ. ಆದಾಗ್ಯೂ ಕಂಪನಿಯ ಎಲ್ಲ ಅಭಿಯಾನಗಳಿಗೂ ಪತ್ರಿಕೆ ಪ್ರೋತ್ಸಾಹ ನೀಡಿದೆ. ನಮ್ಮ ಹಲವು ಕಾರ್ಯಕ್ರಮಗಳಿಗೆ ಪತ್ರಿಕೆ ಸಹಭಾಗಿತ್ವ ಹೊಂದಿರುವಂತೆಯೇ, ಪತ್ರಿಕೆಯ ಹಲವು ಕಾರ್ಯಕ್ರಮಗಳಿಗೆ ನಾವು ಸಹಭಾಗಿತ್ವ ಹೊಂದಿರುವುದು ಹೆಮ್ಮೆಯ ವಿಚಾರ.

ಪರಸ್ಪರ ಒಡಂಬಡಿಕೆಯ ಮುಂದುವರಿದ ಭಾಗವಾಗಿ, ನಾವೀಗ ಈ 'ಕನ್ನಡ ಸಿನಿ ಸಮ್ಮಾನ'ದಲ್ಲಿ ಪತ್ರಿಕೆಯ ಬೆನ್ನಿಗೆ ನಿಂತಿದ್ದೇವೆ. ಕಾರ್ಯಕ್ರಮವು ತುಂಬಾ ಅದ್ಧೂರಿಯಾಗಿ ನಡೆದು, ಯಶಸ್ವಿಯೂ ಆಗಿದೆ. 'ಪ್ರಜಾವಾಣಿ' ಹಾಗೂ ಕನ್ನಡ ಸಿನಿಮಾ ರಂಗದ ನಂಟಿನ ಮತ್ತೊಂದು ಮಜಲೇ ಈ ಸಿನಿ ಸಮ್ಮಾನ. ಇಂತಹ ಕಾರ್ಯಕ್ರಮದ ಭಾಗಿಯಾಗಲು ಫ್ರೀಡಂ ಆಯಿಲ್‌ಗೆ ಅವಕಾಶ ಸಿಕ್ಕಿದ್ದು ಕಂಪನಿಗೆ ಹೆಮ್ಮೆ.

ಕನ್ನಡ ನೆಲದ ಸಿನಿಮಾಗಳೆಲ್ಲವೂ ಇಲ್ಲಿನ ಸಂಸ್ಕೃತಿಯ ನೆಲೆಗಟ್ಟಿನಲ್ಲೇ ರೂಪುಗೊಳ್ಳುತ್ತವೆ. ಇದನ್ನು ಪರಿಗಣಿಸಿಯೇ ಸಮ್ಮಾನಕ್ಕೆ ಸಿನಿಮಾರಂಗದವರನ್ನು ಆಯ್ಕೆ ಮಾಡಿರುವುದು ಉತ್ತಮ ಸಂಗತಿ. ಸಿನಿಮಾರಂಗವನ್ನು ಗೌರವಿಸುತ್ತಿರುವ ಈ 'ಸಿನಿ ಸಮ್ಮಾನ'ದ ಭಾಗವಾಗಿರುವುದು ಅತ್ಯಂತ ಖುಷಿಯ ವಿಚಾರ.

ದೇಶದಲ್ಲಿ ಅತ್ಯಂತ ಹೆಚ್ಚು ಮಾರಾಟವಾಗುತ್ತಿರುವ ಸೂರ್ಯಕಾಂತಿ ಎಣ್ಣೆ 'ಫ್ರೀಡಂ ಹೆಲ್ದಿ ಆಯಿಲ್'. ಬಳಕೆದಾರರ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿ ನಾವು ನಮ್ಮ ಉತ್ಪನ್ನವನ್ನು ತಯಾರಿಸುತ್ತಿದ್ದೇವೆ. ನಮ್ಮ ಉತ್ಪನ್ನದ ಮುಖ್ಯ ಲಕ್ಷಣ ಕೆಟ್ಟ ಕೊಬ್ಬಿನಾಂಶವನ್ನು ಕಡಿಮೆ ಮಾಡಿ, ಒಳ್ಳೆಯ ಕೊಬ್ಬಿನಾಂಶವನ್ನು ಜಾಸ್ತಿ ಮಾಡಲು ಕಾರಣವಾಗುವುದು.

ಮಾಧ್ಯಮ ಸಹಭಾಗಿತ್ವ ಇದ್ದರೂ, ಇಲ್ಲದಿದ್ದರೂ ಪ್ರಜಾವಾಣಿಗೆ ನಮ್ಮ ಬೆಂಬಲ ಇದ್ದೇ ಇರುತ್ತದೆ. ಪತ್ರಿಕೆಯ ವಿಶ್ವಾಸಾರ್ಹತೆ ಇದಕ್ಕೆ ಕಾರಣ.

'ಕೆ.ಜಿ.ಎಫ್. ಚಾಪ್ಟರ್ 1 ಮತ್ತು 2'ರ ಅದ್ಭುತ ನಟನೆಯಿಂದಾಗಿಯೇ ಯಶ್, ಕನ್ನಡ ಚಿತ್ರರಂಗದ ನನ್ನ ನೆಚ್ಚಿನ ನಟರಾಗಿದ್ದಾರೆ. ನಮ್ಮ ಫ್ರೀಡಂ ಆಯಿಲ್ ಬ್ರ್ಯಾಂಡ್‌ನ ನೆಚ್ಚಿನ ನಟರೂ ಆಗಿದ್ದಾರೆ.

–ಚೇತನ್ ಪಿಂಪಾಲ್‌ಕುಟೆ, ಮಾರ್ಕೆಟಿಂಗ್ ಹೆಡ್ ಫ್ರೀಡಂ ಹೆಲ್ದಿ ಆಯಿಲ್

ಮೊದಲ ಪ್ರಯತ್ನದಲ್ಲೇ ಯಶಸ್ಸು



ನಟಿ ಪೂಜಾ ಗಾಂಧಿ ಅವರೊಂದಿಗೆ ಸದ್ಗುರು ಆಯುರ್ವೇದ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಪ್ರದೀಪ್ ಶೆಟ್ಟಿ ಹಾಗೂ ಅವರ ಪತ್ನಿ ಸ್ವಾತಿ ಪ್ರದೀಪ್ ಹಾಗೂ ಮಕ್ಕಳು

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಸಮಾರಂಭ ಅತ್ಯಂತ ಅದ್ಧೂರಿಯಾಗಿ, ಅಚ್ಚುಕಟ್ಟಾಗಿ ನೆರವೇರಿದ್ದನ್ನು ನಾನು ಗಮನಿಸಿದೆ. ಚಿತ್ರರಂಗಕ್ಕೆ, ಕಲಾವಿದರಿಗೆ ಹುರುಪು ತುಂಬುವಂತಹ ಈ ಸಮಾರಂಭ ಪ್ರತಿ ವರ್ಷ ನಡೆಯಲಿ ಎಂಬುದು ನಮ್ಮ ಆಶಯ.

ಮುಖ್ಯವಾಗಿ ಜ್ಯೂರಿಗಳನ್ನು ಅತ್ಯಂತ ಎಚ್ಚರಿಕೆಯಿಂದ ಸಿನಿ ಸಮ್ಮಾನಕ್ಕೆ ಆಯ್ಕೆ ಮಾಡಿದ ಸಂಸ್ಥೆಯ ನಡೆ ಪ್ರಶಂಸನೀಯ. ಜ್ಯೂರಿಗಳೂ ಅಷ್ಟೇ ಪರಿಣಾಮಕಾರಿಯಾಗಿ ಹಾಗೂ ಶ್ರೇಷ್ಠ ಎನ್ನುವಂತೆ ಶೋಧಿಸಿ ಅರ್ಹರಿಗೆ ಪ್ರಶಸ್ತಿ ನೀಡಿರುವುದು ಮೆಚ್ಚುವಂತಹದ್ದು. ನಾಮನಿರ್ದೇಶನಗೊಂಡವರೆಲ್ಲ ಸಾಧಕರೇ ಆದರೂ ಜ್ಯೂರಿಗಳಿಗೆ ಕಲಾವಿದರನ್ನು ಆಯ್ಕೆ ಮಾಡುವುದು ಕಷ್ಟವಾಗಿತ್ತೆಂದು ತೋರುತ್ತದೆ.

ತೆರೆಯಲ್ಲಿ ನೋಡುವಂತೆ ಕಲಾವಿದರ ಬದುಕು ತೆರೆಯ ಹಿಂದೆ ಇರುವುದಿಲ್ಲ. ಹೀಗಾಗಿ ಅವರ ಬೆನ್ನು ತಟ್ಟುವಂತಹ ಕೆಲಸ ಪ್ರತಿವರ್ಷ ನಡೆದರೆ ಅವರಿಗೂ ಒಂದು ಹುರುಪು ಇರುತ್ತದೆ. ನಾವು ಕೂಡ ಬೆಂಬಲ ನೀಡುತ್ತೇವೆ.

'ಪ್ರಜಾವಾಣಿ' ತನ್ನ 75 ನೇ ವರ್ಷದ ಅಮೃತ ಮಹೋತ್ಸವ ಪ್ರಯುಕ್ತ ಹಮ್ಮಿಕೊಂಡಿದ್ದ ಈ ಸಿನಿ ಸಮ್ಮಾನ ಮೊದಲ ಪ್ರಯತ್ನದಲ್ಲೇ ಅದ್ಧೂರಿಯಾಗಿ, ಅತ್ಯಂತ ಯಶಸ್ವಿಯಾಗಿ ನಡೆದಿದ್ದು ಅಭಿನಂದನೀಯ. ಇದೊಂದು ಮಾದರಿ ಪ್ರಶಸ್ತಿ ಪ್ರದಾನ ಸಮಾರಂಭ ಎನ್ನಬಹುದು.

ಪ್ರದೀಪ್ ಶೆಟ್ಟಿ, ವ್ಯವಸ್ಥಾಪಕ ನಿರ್ದೇಶಕರು, ಸದ್ಗುರು ಆಯುರ್ವೇದ ಸಂಸ್ಥೆ

ರಾಜ್ಯದಲ್ಲೇ ಪ್ರಥಮ ಪ್ರಯತ್ನ: ಬಿ.ಸಿ ಶಿವಕುಮಾರ್

ನಾವು ಚಿಕ್ಕಂದಿನಿಂದಲೂ ಓದಿಕೊಂಡು ಬಂದ ಪತ್ರಿಕೆ 'ಪ್ರಜಾವಾಣಿ'. ನಮ್ಮ ದಿನಚರಿ ಆರಂಭವಾಗುತ್ತಿದ್ದುದ್ದೇ ಪತ್ರಿಕೆ ಓದುವ ಮೂಲಕ. ಪತ್ರಿಕೆ ಮೇಲೆ ನಮ್ಮ ಕುಟುಂಬಕ್ಕೆ ಮೊದಲಿನಿಂದಲೂ ಅಪಾರವಾದ ಅಭಿಮಾನವಿದೆ. ನೈಜ, ವಸ್ತುನಿಷ್ಠ ವರದಿಗಾರಿಕೆಗೆ ಹೆಸರಾಗಿರುವ ಪತ್ರಿಕೆಯು ಸಿನಿಮಾ ಸಮ್ಮಾನವನ್ನು ಬಹಳ ಹಿಂದೆಯೇ ಶುರು ಮಾಡಬೇಕಿತ್ತು. ಅದು ಈಗ ಸಾಧ್ಯವಾಗಿದೆ. ಇದು ರಾಜ್ಯದಲ್ಲೇ ಪ್ರಥಮ ಪ್ರಯತ್ನ. ಚಿತ್ರರಂಗದ ನೈಜ ಪ್ರತಿಭೆಗಳಿಗೆ ಈ ಪ್ರಶಸ್ತಿ ನೀಡುತ್ತಿರುವುದು ಹೆಮ್ಮೆಯ ಸಂಗತಿ. ಇದು ಪ್ರತಿಷ್ಠಿತ ಪ್ರಶಸ್ತಿಯೇ ಸರಿ. 'ಪ್ರಜಾವಾಣಿ' ಆರಂಭಿಸಿರುವ ಈ ಪರಂಪರೆ ಮುಂದುವರಿಯಲಿ. ಮತ್ತಷ್ಟು ಎತ್ತರಕ್ಕೇರಲಿ ಎಂದು ನಾನು ಹಾರೈಸುತ್ತೇನೆ. ಪ್ರಶಸ್ತಿ ಪ್ರದಾನಕ್ಕಾಗಿ ನಡೆದ ಕಾರ್ಯಕ್ರಮದಲ್ಲಿ ಭಾಗಿಯಾದದ್ದು ನನಗೆ ಮತ್ತು ನಮ್ಮ ಕುಟುಂಬಕ್ಕೆ ತುಂಬ ಸಂತೋಷದ ಸಂಗತಿಯಾಗಿದೆ.

ಬಿ.ಸಿ ಶಿವಕುಮಾರ್, ಬಿ.ಎಸ್. ಚನ್ನಬಸಪ್ಪ ಆ್ಯಂಡ್ ಸನ್ಸ್ ಸಂಸ್ಥೆಯ ಮಾಲೀಕ



ಸಿನಿ ಸಮ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಿ.ಎಸ್.ಚನ್ನಬಸಪ್ಪ ಆ್ಯಂಡ್ ಸನ್ಸ್ ಮಾಲೀಕರಾದ ಬಿ.ಸಿ.ಶಿವಕುಮಾರ್ ಹಾಗೂ ಬಿ.ಸಿ.ಚಂದ್ರಶೇಖರ್. ಶಿವಕುಮಾರ್ ಅವರ ಪತ್ನಿ ದೀಪಾ ಶಿವಕುಮಾರ್ ಹಾಗೂ ಪುತ್ರ ಬಿ.ಎಸ್.ನೀಲ್ ಇದ್ದಾರೆ.

ಚಿತ್ರೋದ್ಯಮಕ್ಕೆ ದಿಕ್ಸೂಚಿಯಾಗಬಲ್ಲ ಸಿನಿಮಾಗಳು



ಸಾಮಾಜಿಕ ಪರಿಣಾಮ ಬೀರಿದ ಅತ್ಯುತ್ತಮ ಚಿತ್ರ: ತಲೆದಂಡ

ಸಾಮಾಜಿಕ ಪರಿಣಾಮ ಬೀರಿದ ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆದ 'ತಲೆದಂಡ' ಸಿನಿಮಾ ತಂಡ. ನಿರ್ದೇಶಕ ಯೋಗರಾಜ್ ಭಟ್, ಟಿಪಿಎಂಎಲ್ ನಿರ್ದೇಶಕಿ ಪಾರುಲ್ ಶಾ, ನಿರ್ದೇಶಕ ಪ್ರವೀಣ್ ಕೃಪಾಕರ್, ನಿರ್ಮಾಪಕಿ ಡಾ. ಹೇಮಾಮಾಲಿನಿ ಕೃಪಾಕರ್, ನಾಯಕಿ ಚೈತ್ರಾ ಆಚಾರ್, ನಟಿ ಎನ್. ಮಂಗಳ, ನಟ ರಮೇಶ್ ಪಂಡಿತ್ ಇದ್ದಾರೆ

ಸಾಮಾಜಿಕ ಮೌಲ್ಯವನ್ನು ಪ್ರತಿಬಿಂಬಿಸುವ ಸಿನಿಮಾಗಳು ಸಾರ್ವಕಾಲಿಕ ಪ್ರಸ್ತುತವಾಗುತ್ತವೆ. ರಾಜ್‌ಕುಮಾರ್ ಅಭಿನಯದ 'ಬಂಗಾರದ ಮನುಷ್ಯ' ಸಾರ್ವಕಾಲಿಕ ಮೌಲ್ಯವನ್ನು ಪ್ರತಿಪಾದಿಸುವ ಸಿನಿಮಾಗಳಲ್ಲಿ ಒಂದು. ಪ್ರೇಕ್ಷಕರನ್ನು ಒಂದು ಸಿನಿಮಾ ಪ್ರಭಾವಿಸಿ, ಸನ್ಮಾರ್ಗದ ದಿಕ್ಸೂಚಿ ಆಗಿರುವುದಕ್ಕೆ ಸಾಕಷ್ಟು ಉದಾಹರಣೆಗಳು ಸಿನಿಚರಿತ್ರೆಯಲ್ಲಿ ದಾಖಲಾಗಿವೆ.

ಕೆನರಾ ಬ್ಯಾಂಕ್ ಸಹಭಾಗಿತ್ವದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿ ಪ್ರದಾನ ಮಾಡಿದ ನಿರ್ದೇಶಕ ಯೋಗರಾಜ್ ಭಟ್, 'ಧಾರವಾಡ ಸೀಮೆಯಲ್ಲಿ 'ಪ್ರಜಾವಾಣಿಯಲ್ಲಿ ಬರೆದಿನಾನ ನೋಡ್ರಿ' ಅಂತಾರೆ. ಅಲ್ಲಿ ಬಂದ್ರೆ ಮಾತ್ರ ನಿಶ್ಚಿತ ಎನ್ನುವ ಭಾವನೆ ಇದೆ. ಇದು ಮನೆಯ ಪತ್ರಿಕೆ, ನನಗೆ ತುಂಬ ಆಪ್ತ. ಹಲವು ಕಲ್ಯಾಣ ದೃಷ್ಟಿಯಿಂದ ಇದು ಇಷ್ಟ. ಇಂದು ಮತ್ತು ನಾಳೆಯೂ ಇಷ್ಟವಾಗುತ್ತದೆ' ಎಂದರು. ಪ್ರಶಸ್ತಿ ಸ್ವೀಕರಿಸಿದ ನಿರ್ದೇಶಕ ಪ್ರವೀಣ್ ಕೃಪಾಕರ್, 'ತಲೆದಂಡ'ದ ತಂಡವೇ ಇಲ್ಲಿ ನೆರೆದಿದೆ ಎಂದರು. ನಿರ್ಮಾಪಕಿ ಡಾ. ಹೇಮಾಮಾಲಿನಿ ಕೃಪಾಕರ್, ಚಿತ್ರಕ್ಕೆ ಬೆನ್ನೆಲುಬಾಗಿ ನಿಂತಿದ್ದ ರಮೇಶ್ ಪಂಡಿತ್, ಪ್ರಮುಖಪಾತ್ರ ನಿರ್ವಹಿಸಿದ ಎನ್. ಮಂಗಳ, ನಾಯಕಿ ಚೈತ್ರಾ ಆಚಾರ್ ಅವರನ್ನು ವೇದಿಕೆಗೆ ಆಹ್ವಾನಿಸಿ ಎಲ್ಲರ ಜೊತೆ ಮತ್ತೊಮ್ಮೆ ಪ್ರಶಸ್ತಿಯನ್ನು ಸ್ವೀಕರಿಸಿದರು. ಸ್ಮರಣೀಯ ಪ್ರಶಸ್ತಿಯನ್ನು ಸಿನಿಮಾದ ಪ್ರಮುಖ ನಟ ಸಂಚಾರಿ ವಿಜಯ್ ಅವರಿಗೆ ಅರ್ಪಿಸಿದರು. 'ತಲೆದಂಡ' ಈ ವರ್ಷ 'ರಜತ ಕಮಲ' ರಾಷ್ಟ್ರೀಯ ಪ್ರಶಸ್ತಿಯನ್ನೂ ಪಡೆದಿದೆ. ಅದನ್ನೂ ಚಿತ್ರತಂಡ ಸಂಚಾರಿ ವಿಜಯ್ ಅವರಿಗೆ ಅರ್ಪಿಸುತ್ತದೆ ಎಂದರು.


ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದ ಸಿನಿಮಾಗಳು
- ತಲೆ ದಂಡ
- ಸಾರ ವಜ್ರ
- ಐಹೊಳೆ
- ದಾರಿಯಾವುದಯ್ಯ ವೈಕುಂಠಕೆ
- ಧರಣಿ ಮಂಡಲ ಮಧ್ಯದೊಳಗೆ

ಅತ್ಯುತ್ತಮ ಧ್ವನಿಗ್ರಹಣ ಹಾಗೂ ಶಬ್ದವಿನ್ಯಾಸ: ಕಾಂತಾರ

'ಸಿಂಗಾರ ಸಿರಿಯೇ' ಹಾಗೂ 'ವರಾಹ ರೂಪಂ' ಹಾಡಿನ ಮೂಲಕ ಸದ್ದು ಮಾಡಿದ 'ಕಾಂತಾರ' ಈ ವಿಭಾಗದಲ್ಲಿ ಪ್ರಶಸ್ತಿ ಬಾಚಿತು. ಪ್ರಶಸ್ತಿಯನ್ನು ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಮತ್ತು ಪ್ರಗತಿ ಶೆಟ್ಟಿ ಅವರಿಗೆ ಪ್ರದಾನ ಮಾಡಿದ ನಟ ಕಿಶೋರ್, 'ಪ್ರಜಾವಾಣಿ' ಪತ್ರಿಕೆಯನ್ನು ನಾನೂ ಮನೆ ಮನೆಗೆ ಹಾಕಿದ್ದೇನೆ. ನನಗೆ ಮೊದಲ ಸಂಬಳ ಕೊಟ್ಟ ಸಂಸ್ಥೆ ಇದು. 1996ರ ಅವಧಿಯಲ್ಲಿ ದಿನಕ್ಕೆ ₹100 ಸಿಗ್ತಾ ಇತ್ತು. ನಿಷ್ಪಕ್ಷಪಾತ 'ಪ್ರಜಾವಾಣಿ' ಪ್ರಜಾಪ್ರಭುತ್ವವನ್ನು ಸಂರಕ್ಷಿಸಲು ದೊಡ್ಡ ಕೊಡುಗೆಯನ್ನು ನೀಡಿದೆ. ಈ ಕಾರಣಕ್ಕೆ ಮಾಧ್ಯಮ ಪ್ರಜಾಪ್ರಭುತ್ವದ ಆಧಾರ ಸ್ತಂಭ ಎನ್ನುತ್ತೇವೆ. ಆ ರೀತಿಯ ನಂಬಿಕೆಯನ್ನು ಪತ್ರಿಕೆ ಉಳಿಸಿಕೊಂಡಿದೆ. ನನ್ನ ಪ್ರಕಾರ ನಂಬಿಕೆಯೇ ದೇವರು. ಆ ನಂಬಿಕೆ ಸಿನಿಮಾಕ್ಕೂ ಹರಿದು ಬಂದಿರುವುದು ಖುಷಿ ಸಂಗತಿ ಎಂದರು.

ಪ್ರಶಸ್ತಿ ಸ್ವೀಕರಿಸಿದ ಅಜನೀಶ್, ಧ್ವನಿಗ್ರಹಣಕ್ಕೆ ಎಂ.ಆರ್. ರಾಜಕೃಷ್ಣನ್ ತುಂಬ ಒಳ್ಳೆಯ ಕೆಲಸ ಮಾಡಿದರು. ಅವರು ಗಗ್ಗರ ಶಬ್ದ, ಭೂತಕೋಲದ ಮೇಕಪ್ ಮಾಡಿದ ಮೇಲೆ ಮಣಿ ಶಬ್ದವನ್ನು ಮತ್ತೆ ರೆಕಾರ್ಡ್ ಮಾಡಿದರು. ಈ ಸಂಬಂಧ ಚಿತ್ರೀಕರಣದ ಸ್ಥಳಕ್ಕೆ ಹೋಗಿ ಜನಪದ ಕಲಾವಿದರನ್ನು ಸಂದರ್ಶಿಸಿ ಶಬ್ದವನ್ನು ಸೆರೆಹಿಡಿದರು. ಅದನ್ನು ಮಿಕ್ಸಿಂಗ್ ಮಾಡಿ ಸಿನಿಮೀಯ ಮಾಡಿದೆವು. ಈ ಎಲ್ಲ ಕಾರಣದಿಂದ 'ಕಾಂತಾರ'ಕ್ಕೆ ಒಳ್ಳೆಯ ಆಡಿಯೋಗ್ರಫಿ ಕೊಡಲು ಸಾಧ್ಯವಾಯಿತು ಎಂದು ಸ್ಮರಿಸಿದರು.

ನಾಮನಿರ್ದೇಶನಗೊಂಡಿದ್ದ ಚಿತ್ರಗಳು
- ಕಾಂತಾರ
- ವೇದ
- ಸಕುಟುಂಬ ಸಮೇತ
- ತಲೆದಂಡ
- ತುರ್ತು ನಿರ್ಗಮನ



ಅತ್ಯುತ್ತಮ ಧ್ವನಿಗ್ರಹಣ ಹಾಗೂ ಶಬ್ದವಿನ್ಯಾಸ ವಿಭಾಗದಲ್ಲಿ 'ಕಾಂತಾರ' ಚಿತ್ರ ಪ್ರಶಸ್ತಿ ಮುಡಿಗೇರಿಸಿಕೊಂಡಿತು. ಚಿತ್ರದ ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಹಾಗೂ ವಸ್ತ್ರವಿನ್ಯಾಸಕಿ ಪ್ರಗತಿ ರಿಷಬ್ ಶೆಟ್ಟಿ ಅವರಿಗೆ ನಟ ಕಿಶೋರ್ ಪ್ರಶಸ್ತಿ ಹಸ್ತಾಂತರಿಸಿದರು.

ಅತ್ಯುತ್ತಮ ನಿರ್ಮಾಣ ವಿನ್ಯಾಸ: ಕಾಂತಾರ

ಈ ವಿಭಾಗದ ಪುರಸ್ಕಾರಕ್ಕೆ 777 ಚಾರ್ಲಿ, ಕೆ.ಜಿ.ಎಫ್. ಚಾಪ್ಟರ್–2, ಕಾಂತಾರ, ಸಕುಟುಂಬ ಸಮೇತ ಹಾಗೂ ಮಾನ್ಸೂನ್ ರಾಗ ಸಿನಿಮಾಗಳು ಪೈಪೋಟಿ ನಡೆಸಿದ್ದವು. ಅದರಲ್ಲಿ 'ಕಾಂತಾರ' ಪ್ರಶಸ್ತಿಯನ್ನು ತನ್ನ ಮುಡಿಗೇರಿಸಿತು.

ಪ್ರಶಸ್ತಿಯನ್ನು ನಟಿ 'ಸ್ಪರ್ಶ' ರೇಖಾ, ಸಿನಿಮಾ ನಿರ್ದೇಶಕ ರಿಷಬ್ ಶೆಟ್ಟಿ ಅವರ ಪತ್ನಿ ಪ್ರಗತಿ ಶೆಟ್ಟಿ ಅವರಿಗೆ ಪ್ರದಾನ ಮಾಡಿದರು. 'ಪುರಸ್ಕಾರವನ್ನು ಸ್ವೀಕರಿಸಿದ ಪ್ರಗತಿ ಈ ಪ್ರಶಸ್ತಿ ಸಿಕ್ಕಿದ್ದು ಖುಷಿ ಕೊಟ್ಟಿದೆ. ಸಾಮಾನ್ಯವಾಗಿ ನಿರ್ದೇಶಕರು, ನಟ–ನಟಿಯರನ್ನು ಗುರುತಿಸಿ ಸಿನಿಮಾ ಪುರಸ್ಕಾರಗಳನ್ನು ಕೊಡುತ್ತಾರೆ. ಯಾವುದೇ ಒಂದು ಸಿನಿಮಾವನ್ನು ಸುಂದರಗೊಳಿಸಲು ದೊಡ್ಡ ತಂಡವೇ ಹಗಲು ರಾತ್ರಿ ಶ್ರಮವಹಿಸಿ ಕೆಲಸ ಮಾಡುತ್ತದೆ. ಅಂತಹ ಶ್ರಮವನ್ನು ಗುರುತಿಸಿ ಹುರಿದುಂಬಿಸುತ್ತಿರುವ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಪ್ರಶಸ್ತಿ ತೆಗೆದುಕೊಳ್ಳಲು ತುಂಬ ಖುಷಿಯಾಗುತ್ತಿದೆ. ಹಿನ್ನೆಲೆಯ ತಂತ್ರಜ್ಞರನ್ನು ಗುರುತಿಸುವುದು ಮತ್ತಷ್ಟು ಒಳ್ಳೆಯ ಕೆಲಸ ಮಾಡಲು ಸ್ಫೂರ್ತಿಯಾಗುತ್ತದೆ' ಎಂದರು. ಈ ಸಿನಿಮಾಕ್ಕೆ ತಾವು ಕಾಸ್ಟ್ಯೂಮ್ ಡಿಸೈನ್ ಮಾಡಿದ್ದನ್ನು ಈ ಸಂದರ್ಭದಲ್ಲಿ ಸ್ಮರಿಸಿದರು.



ಅತ್ಯುತ್ತಮ ನಿರ್ಮಾಣ ವಿನ್ಯಾಸ ಪ್ರಶಸ್ತಿಯನ್ನು ನಟಿ 'ಸ್ಪರ್ಶ' ರೇಖಾ ಅವರು 'ಕಾಂತಾರ' ತಂಡದ ವಸ್ತ್ರ ವಿನ್ಯಾಸಕಿ ಪ್ರಗತಿ ಅವರಿಗೆ ಪ್ರದಾನ ಮಾಡಿದರು.

ಅತ್ಯುತ್ತಮ ವಿಎಫ್‌ಎಕ್ಸ್, ಪೋಸ್ಟ್ ಪ್ರೊಡಕ್ಷನ್ ಹಾಗೂ ಆ್ಯನಿಮೇಷನ್: 777 ಚಾರ್ಲಿ

ಕಿರಣ್‌ರಾಜ್ ನಿರ್ದೇಶನದ '777 ಚಾರ್ಲಿ' ಸಿನಿಮಾ ಅತ್ಯುತ್ತಮ ವಿಎಫ್‌ಎಕ್ಸ್, ಪೋಸ್ಟ್ ಪ್ರೊಡಕ್ಷನ್ ಹಾಗೂ ಆ್ಯನಿಮೇಷನ್ ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ತಂಡದ ಅಭಿಷೇಕ್–ರಾಹುಲ್ ಅವರಿಗೆ ಪ್ರಶಸ್ತಿಯನ್ನು ಹಸ್ತಾಂತರಿಸಿದ ನಟಿ–ಮುಖ್ಯ ತೀರ್ಪುಗಾರ್ತಿ ಶ್ರುತಿ ಹರಿಹರನ್, 'ಅವಾರ್ಡ್ ತೆಗೆದುಕೊಳ್ಳುತ್ತಿದ್ದವಳಿಗೆ ನೀಡಲು ಕರೆದಿದ್ದಾರೆ. ಇದನ್ನು ಸಣ್ಣ ಪ್ರಮೋಷನ್ ಎಂದುಕೊಳ್ಳಬಹುದು. ಸದ್ಯ ಯಾವ ಸಿನಿಮಾ ಕೂಡ ಇಲ್ಲ' ಎಂದು ನಸುನಗುತ್ತಲೇ ಪುರಸ್ಕೃತರಿಗೆ ಬೆನ್ನುತಟ್ಟಿದರು.

ಈ ವೇಳೆ ಸಿನಿಮಾ ಕಟ್ಟುವ ಸಂದರ್ಭವನ್ನು ಸ್ಮರಿಸಿದ ಅಭಿಷೇಕ್, ಪ್ರಶಸ್ತಿ ನೀಡಲು ವಿಎಫ್‌ಎಕ್ಸ್ ಈ ಕ್ಷೇತ್ರವನ್ನು ಆರಂಭಿಸಿದ್ದಕ್ಕೆ 'ಪ್ರಜಾವಾಣಿ'ಗೆ ಧನ್ಯವಾದ ಹೇಳಿದರು. 'ಕೋವಿಡ್ ಕಾಲ ಅದಾಗಿದ್ದರಿಂದ ನಮಗೆ ಕೆಲಸ ಮಾಡಲು ಹೆಚ್ಚು ಸಮಯ ಸಿಕ್ಕಿತು. ಸಿನಿಮಾದಲ್ಲಿ ಒಟ್ಟು 2,400 ವಿಎಫ್‌ಎಕ್ಸ್ ಶಾಟ್ಸ್ ಇವೆ. ಆದರೆ ಎಲ್ಲೂ ಪ್ರೇಕ್ಷಕನಿಗೆ ಅದು ಗುರುತಾಗದಂತೆ ತಾಂತ್ರಿಕವಾಗಿ ಹೆಣೆಯಲಾಗಿದೆ. ಈ ಕೆಲಸದಲ್ಲಿ ನಿರ್ದೇಶಕ ಕಿರಣ್‌ರಾಜ್ ಸೇರಿದಂತೆ ಅನೇಕರ ಪರಿಶ್ರಮ ಇದೆ. ಇದನ್ನು 'ಪಿನಾಕ' ಸ್ಟುಡಿಯೊದಲ್ಲಿ ಮಾಡಿದ್ದೇವೆ. ಈ ಪ್ರಶಸ್ತಿ ನಮ್ಮ ತಂಡಕ್ಕೆ ಸ್ಫೂರ್ತಿ' ಎಂದರು.



ಅತ್ಯುತ್ತಮ ವಿಎಫ್‌ಎಕ್ಸ್, ಪೋಸ್ಟ್ ಪ್ರೊಡಕ್ಷನ್ ಹಾಗೂ ಆ್ಯನಿಮೇಷನ್ ಪ್ರಶಸ್ತಿಯನ್ನು ನಟಿ ಶ್ರುತಿ ಹರಿಹರನ್ '777 ಚಾರ್ಲಿ' ತಂಡದ ತಂತ್ರಜ್ಞರಾದ ಅಭಿಷೇಕ್, ರಾಹುಲ್ ಅವರಿಗೆ ಪ್ರದಾನ ಮಾಡಿದರು. ನಿರ್ದೇಶಕ ಕಿರಣ್‌ರಾಜ್ ಇದ್ದರು.

ನಾಮನಿರ್ದೇಶನಗೊಂಡಿದ್ದ ಚಿತ್ರಗಳು
- ಜೇಮ್ಸ್
- ಕಾಂತಾರ
- 777 ಚಾರ್ಲಿ
- ತುರ್ತು ನಿರ್ಗಮನ
- ಮಠ

ಮಲಬಾರ್ ಗೋಲ್ಡ್‌ನ ಬ್ರ್ಯಾಂಡ್ ಅಂಬಾಸಿಡರ್ ಆಗಿದ್ದ 'ಅಪ್ಪು'



> ಮನರಂಜನಾ ಮಾಧ್ಯಮದ ಆಚೆಗೂ ಸಿನಿಮಾ ನಮ್ಮ ಜೀವನಶೈಲಿಯನ್ನು ಆವರಿಸಿಕೊಂಡಿದೆ. ಸಿನಿಮಾದ ಚರ್ಚೆ ಇಲ್ಲದ ದಿನವೇ ಇಲ್ಲ. ಬಗೆಬಗೆಯ ಹಿನ್ನೆಲೆಯ ಜನರನ್ನೂ ಒಳ್ಳೆಯ ಸಿನಿಮಾ ಒಗ್ಗೂಡಿಸಬಲ್ಲದು. ಅದೇ ಸಿನಿಮಾದ ಮೋಡಿ. ಹಿರಿಯರನ್ನು ಗೌರವಿಸುವ, ಹೊಸಬರನ್ನು ಗುರುತಿಸುವ, ಚಿತ್ರಕಥಾ ಕುಶಲಮತಿಗಳ ಬೆನ್ನುತಟ್ಟುವ, ಹೊಸ ರೀತಿಯಲ್ಲಿ ಕಥೆ ಹೇಳುವವರಿಗೆ ಶಹಬ್ಬಾಸ್ ಹೇಳುವ ಇಂತಹ ಸಿನಿ ಸಮ್ಮಾನಕ್ಕೆ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಸಾಥ್ ನೀಡಿರುವುದು ಸಂಭ್ರಮಾಚರಣೆಯೇ ಹೌದು.
>
> **ಎಂ.ಪಿ. ಅಹಮ್ಮದ್**
> ಅಧ್ಯಕ್ಷ, ಮಲಬಾರ್ ಗೋಲ್ಡ್ ಅಂಡ್ ಡೈಮಂಡ್

ನಟನಾಗಿ ಮಾತ್ರವಲ್ಲ ಹೃದಯ ವೈಶಾಲ್ಯದಿಂದ ಕನ್ನಡಿಗರ ಮನ, ಮನೆಗಳಲ್ಲಿ ಚಿರನೆನಪಾಗಿ ಉಳಿದಿರುವ ಪುನೀತ್ ರಾಜಕುಮಾರ್ ಅವರು ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಕರ್ನಾಟಕದ ಮೊದಲ ಬ್ರ್ಯಾಂಡ್ ಅಂಬಾಸಿಡರ್ ಆಗಿದ್ದರು. 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಕಾರ್ಯಕ್ರಮದಲ್ಲಿ ಅವರನ್ನು ವಿಭಿನ್ನವಾಗಿ ಸ್ಮರಿಸುವ ಕಾರ್ಯಕ್ರಮ ಹಮ್ಮಿಕೊಂಡಾಗ ಮಲಬಾರ್ ಸಮೂಹ ಸಂಸ್ಥೆಯು ಆ ಕಾರಣಕ್ಕಾಗಿಯೇ ಸಹಯೋಗವನ್ನು ನೀಡಿತು.

ಕರ್ನಾಟಕದ ಉದ್ದಗಲದಲ್ಲಿ ಸಂಸ್ಥೆ ತನ್ನ ಛಾಪು ಮೂಡಿಸಲು ಪುನೀತ್ ರಾಜಕುಮಾರ್ ಮತ್ತು ಮಲಬಾರ್ ಗೋಲ್ಡ್ ನಡುವೆ ಇರುವ ನಂಟು ಪ್ರಮುಖ ಕಾರಣವಾಗಿತ್ತು. ಪುನೀತ್ ಅವರು ರಾಯಭಾರಿಯಾಗಿ ನೀಡಿದ ಜಾಹೀರಾತು ಕನ್ನಡಿಗರನ್ನು ಮಲಬಾರ್ ಕಡೆಗೆ ಸೆಳೆದಿತ್ತು. ಈ ಎಲ್ಲ ಕಾರಣಗಳಿಂದಾಗಿ ಪುನೀತ್ ನೆನಪಿನ ಕಾರ್ಯಕ್ರಮ ಅಂದ ಕೂಡಲೇ ಮಲಬಾರ್ ಕೈ ಜೋಡಿಸಿತು. ಪುನೀತ್ ಅವರನ್ನು ಸ್ಮರಿಸಿತು.

ಮಲಬಾರ್ ಗೋಲ್ಡ್ ಪ್ರಾದೇಶಿಕ ಮುಖ್ಯಸ್ಥ ಸಫ್ರುದ್ದೀನ್ ಮಾತನಾಡಿ, 'ಕನ್ನಡದ ಪ್ರಸಿದ್ಧ ನಟ ಪುನೀತ್ ರಾಜಕುಮಾರ್ 2009ರಲ್ಲಿಯೇ ನಮ್ಮ ಬ್ರ್ಯಾಂಡ್ ಅಂಬಾಸಿಡರ್ ಆಗಿದ್ದರು. ಅವರ ಕುಟುಂಬದವರು ಮಲಬಾರ್ ಜೊತೆಗಿನ ಸಂಬಂಧವನ್ನು ಮುಂದುವರಿಸಿದ್ದಾರೆ.



ಪುನೀತ್ ಸ್ಮರಣೆ ಕಾರ್ಯಕ್ರಮದಲ್ಲಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಪ್ರಾದೇಶಿಕ ಮುಖ್ಯಸ್ಥ ಶಫ್ರುದ್ದೀನ್ ಮಾತನಾಡಿದರು



ಪ್ರಜಾವಾಣಿ ಸಿನಿ ಸಮ್ಮಾನ ಕಾರ್ಯಕ್ರಮದಲ್ಲಿ ನಮಗೆ ಅವಕಾಶ ಸಿಕ್ಕಿರುವುದಕ್ಕೆ ಆಭಾರಿ' ಎಂದು ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದ ಆರಂಭದಲ್ಲಿ 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಮಾತನಾಡಿ, 'ಯಾರು ನಿಧನರಾದ ಮೇಲೂ ಬದುಕುತ್ತಾರೋ ಅವರು ಚಿರಂಜೀವಿಗಳು. ಅಪ್ಪು ಅಂಥ ಚಿರಂಜೀವಿ. ಅವರನ್ನು ಅಮೃತ ಸಂಜಾತ ಎಂದು ಕರೆಯುತ್ತೇನೆ. 'ಭಕ್ತ ಪ್ರಹ್ಲಾದ'ನಿಂದ ಹಿಡಿದು ಪವರ್ ಸ್ಟಾರ್ ಆಗುವವರೆಗೆ ಅಪ್ಪು ಅವರ ಎಲ್ಲ ಬೆಳವಣಿಗೆಯನ್ನು ಪ್ರಜಾವಾಣಿ ದಾಖಲಿಸಿದೆ' ಎಂದು ನೆನಪು ಮಾಡಿಕೊಂಡರು.

ಪುನೀತ್ ನೀಡಿದ ನೆರವು, ಮಾಡಿದ ಸೇವೆ ಅವರು ಜೀವಂತ ಇರುವವರೆಗೆ ಯಾರಿಗೂ ಗೊತ್ತಾಗಲಿಲ್ಲ. ಬಲಗೈಯಲ್ಲಿ ನೀಡಿದ್ದು ಎಡಗೈಗೆ ಗೊತ್ತಾಗಬಾರದು ಎಂಬಂತೆ ಸಹಾಯ ಮಾಡುತ್ತಾ ಅವರು ಬಂದಿರುವುದು ಅದಕ್ಕೆ ಕಾರಣವಾಗಿತ್ತು ಎಂದು ಸ್ಮರಿಸಿದರು.

ಪುನೀತ್ ಅವರನ್ನು ನಾವು ಬೇಗ ಕಳೆದುಕೊಂಡೆವು. ಅವರ ನೆನಪು ಯಾವಾಗಲೂ ಇರುತ್ತದೆ ಎಂದು ಟಿಪಿಎಂಎಲ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸೀತಾರಾಮನ್ ಶಂಕರ್ ತಿಳಿಸಿದರು.

ಕಣ್ಣಾಲಿಯಲ್ಲಿ ನೀರು: ಪುನೀತ್ ಅವರ ಬಾಲ್ಯದಿಂದ ಕೊನೆವರೆಗಿನ ಬದುಕನ್ನು ಚಿತ್ರಗಳು ಕಟ್ಟಿಕೊಟ್ಟವು. ಚಲನಚಿತ್ರ ನಟ–ನಟಿಯರು ಸೇರಿದಂತೆ ಎಲ್ಲ ಪ್ರೇಕ್ಷಕರು ಈ ಫೋಟೊಗಳನ್ನು ಕಣ್ತುಂಬಿಕೊಂಡರು.

ಆಟೊ ಓಡಿಸಿ ಬದುಕುವ ಒಬ್ಬ ಅಭಿಮಾನಿ ಅಪ್ಪು ಹೆಸರಲ್ಲಿ ವೃದ್ಧಾಶ್ರಮ ತೆರೆದು 17 ಜನರಿಗೆ ಆಶ್ರಯ ನೀಡಿದ್ದಾರೆ. ಕೂಲಿ ಮಾಡಿ ಬದುಕುವ ಇನ್ನೊಬ್ಬ ಅಭಿಮಾನಿ ನಿತ್ಯ ಅಪ್ಪು ಅವರ ಪುತ್ಥಳಿಯನ್ನು ತೊಳೆದು ಪೂಜೆ ಮಾಡುತ್ತಾರೆ. ಕಿಡ್ನಿ ವೈಫಲ್ಯ ಅದ ಬಾಲಕಿಗೆ ಕಿಡ್ನಿ ಅಳವಡಿಸುವ ವೆಚ್ಚವನ್ನು ಪುನೀತ್ ಭರಿಸಿದ್ದರು. ಇವೆಲ್ಲವೂ ವೇದಿಕೆಯ ಪರದೆಯ ಮೇಲೆ ಬಂದಾಗ ನೋಡುಗರಿಗೆ ಅರಿವಿಲ್ಲದಂತೆ ಕಣ್ಣಾಲಿಗಳು ಒದ್ದೆಯಾದವು.

'ಪ್ರಜಾವಾಣಿ'ಯು ಮಲಬಾರ್ ಗೋಲ್ಡ್ ಪ್ರಾಯೋಜಕತ್ವದಲ್ಲಿ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮ ಅರ್ಥಪೂರ್ಣ ಎಂದು ಜನ ಮನಬಿಚ್ಚಿ ಮಾತನಾಡಿಕೊಂಡರು.



ಸಿನಿ ಸಮ್ಮಾನ ಸಮಾರಂಭದಲ್ಲಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಆಭರಣ ಧರಿಸಿ ಮಿಂಚಿದ ಅನುಶ್ರೀ



ಮಲಬಾರ್ ಝೋನ್‌ನಲ್ಲಿ ನಟಿ ಗಾನವಿ ಲಕ್ಷ್ಮಣ್ ಜೊತೆ ಮಾತುಕತೆ